
# ಜಾನಪದ ಭಾರತಿ

ಸಂ: ನಲ್ಲೂರು ಪ್ರಸಾದ್



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

# ಜಾನಪದ ಭಾರತಿ

ಅಖಿಲ ಭಾರತ ಪ್ರಥಮ ಜಾನಪದ ಸಮಾವೇಶದ
ಸ್ಮರಣ ಸಂಪುಟ

ಸಂಪಾದಕರು

**ನಲ್ಲೂರು ಪ್ರಸಾದ್**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨


**JANAPADA BHARATI** - A Collection of Folk articles from different writers Edited by Nallur Prasad R.K: Proffesor and H.O.D of Kannada, V.V. Pura Science College, K.R. Road, Bangalore-4; Published by Karnataka Janapada and Yakshagana Academy, Nrupatunga Road, Bangalore-560002

First Edition : 1998 Pages : 148 + xii + 24 Page Photos Price : Rs. 30-00

© Publisher

ಬೆಲೆ. ರೂ. ೩೦-೦೦

ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೬೬೧೩೧೨೩, ೬೬೧೮೭೫೨



ಸನ್ಮಾನ್ಯ ಶ್ರೀ ಜೆ. ಎಚ್. ಪಟೇಲ್
ಮುಖ್ಯ ಮಂತ್ರಿಗಳು



ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ

ಉಪಮುಖ್ಯಮಂತ್ರಿಗಳು ಹಾಗೂ ಗೌರವಾಧ್ಯಕ್ಷರು, ಸ್ವಾಗತ ಸಮಿತಿ




ಸನ್ಮಾನ್ಯ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್

ಕನ್ನಡ ಮತ್ತು ಸಂಸ್ಕೃತಿ ಸಚಿವರು



ಶ್ರೀ ಅ. ರಾ. ಚಂದ್ರಹಾಸ ಗುಪ್ತ

ಅ.ಭಾ.ಸೇ. ಕಾರ್ಯದರ್ಶಿಗಳು, ಕ.ಸ.ಇ.,



ಶ್ರೀ ವೈ. ಕೆ. ಮುದ್ದುಕೃಷ್ಣ
ನಿರ್ದೇಶಕರು, ಕ.ಸ.ಇ.,



ಡಾ|| ಎಚ್. ಜೆ. ಲಕ್ಕಪ್ಪ ಗೌಡ


ಅಧ್ಯಕ್ಷರು, ಕ.ಜಾ.ಯ.ಅ.



ಶ್ರೀ ಎಚ್. ಎಲ್. ನಾಗೇಗೌಡ
ಮಾಜಿ ಅಧ್ಯಕ್ಷರು, ಕ.ಜಾ.ಯ.ಅ.




ಡಾ॥ ಎಸ್. ಕೆ. ಕರೀಂಖಾನ್
ಮಾಜಿ ಅಧ್ಯಕ್ಷರು ಮತ್ತು ಜಾನಪದಶ್ರೀ ಪ್ರಶಸ್ತಿ ವಿಜೇತರು




ಡಾ॥ ಜೀ. ಶಂ. ಪರಮಶಿವಯ್ಯ

ಮಾಜಿ ಅಧ್ಯಕ್ಷರು ಮತ್ತು ಜಾನಪದ ರತ್ನ ಪ್ರಶಸ್ತಿ ವಿಜೇತರು



ಶ್ರೀ ಯಡ್ರಾಮನ ಹಳ್ಳಿ ದೊಡ್ಡ ಭರಮಪ್ಪ

ಜಾನಪದಶ್ರೀ ಪ್ರಶಸ್ತಿ ವಿಜೇತರು



ಶ್ರೀ ಕಂಸಾಳೆ ಮಹದೇವಯ್ಯ
ಜಾನಪದಶ್ರೀ ಪ್ರಶಸ್ತಿ ವಿಜೇತರು

## ಮುನ್ನುಡಿ

ಜಾನಪದ ವಿಶ್ವವ್ಯಾಪಿಯಾದುದು, ಅದಕ್ಕೆ ಎಂದೂ ಕೊನೆಯೆಂಬುದಿಲ್ಲ. ಹೊಸಹೊಸ ರೂಪ ಪಡೆದುಕೊಂಡು ಫೀನಿಕ್ಸ್‌ನ ಹಾಗೆ ಮರುಹುಟ್ಟು ಪಡೆಯುತ್ತಿರುತ್ತದೆ. ಇದಕ್ಕೆ ಮುಖ್ಯ ಕಾರಣ ಜನರ ಬದುಕು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತ ತನ್ನ ಜೀವಂತಿಕೆಯನ್ನು ತೋರುತ್ತಿರುವುದು. ಯಾವುದೋ ಒಂದು ಕಾಲದಲ್ಲಿ ಜಾನಪದವನ್ನು ಅಧ್ಯಯನ ಮಾಡುವುದು ಸ್ವಲ್ಪ ಮಟ್ಟಿಗಾದರೂ ವಿವಾದಗಳಿಗೆ ಆಸ್ಪದ ಮಾಡಿಕೊಡುತ್ತದೆ. ಆದ್ದರಿಂದ ಯಾವ ನೆಲದ ಜನಪದರ ಜಾನಪದವನ್ನು ನಾವು ಅಭ್ಯಾಸಮಾಡಲು ಬಯಸುತ್ತೇವೆಯೋ ಅಂಥ ಮಣ್ಣಿನ ಜಾಯಮಾನಕ್ಕೆ ಸರಿಹೊಂದಬಲ್ಲ ಅಧ್ಯಯನವಿಧಾನಗಳನ್ನು ವಿದ್ವಾಂಸ ರಾದವರು ರೂಪಿಸಬೇಕಾದುದು ಅತ್ಯವಶ್ಯ.

ಇಂಥ ಕಾರ್ಯ ಒಬ್ಬ ವ್ಯಕ್ತಿಯಿಂದ ಮೊದಲುಗೊಳ್ಳುತ್ತದಾದರೂ ಅದು ಅಷ್ಟಕ್ಕೇ ನಿಲ್ಲದೆ ಬಹುಜನ ವಿದ್ವಾಂಸರು ಒಂದೆಡೆ ಸಮಾವೇಶಗೊಂಡು ಪರಸ್ಪರ ತಮ್ಮ ವಿಚಾರಗಳನ್ನು ಚಿಂತನ ಮಂಥನಗೊಳಿಸುವುದರ ಮೂಲಕ ಜಾನಪದಕ್ಕೆ ಹೊಸ ಆಯಾಮವನ್ನು ತಂದುಕೊಡಬೇಕಾಗಿದೆ. ಇದು ಸರ್ವಸಮ್ಮತವಾದುದು ಎಂದು ಯಾರೂ ತಿಳಿಯಬಾರದು. ಹಾಗೆ ರೂಪಿಸಿದ ಅಧ್ಯಯನ ಕ್ರಮವು ಕೆಲವು ಅಂಶಗಳನ್ನು ಮೈಕೊಡವಿಕೊಂಡು, ಕೆಲವು ಹೊಸ ಅಂಶಗಳಿಂದ ಮೈದುಂಬಿಕೊಂಡು ಮುಂದೊಂದು ದಿನ ಪೂರ್ಣ ರೂಪ ಪಡೆಯಬಹುದು. ಆ ಸಲುವಾಗಿಯಾದರೂ ಯಾವ ಭಾಷೆಯ ಯಾವ ನೆಲದ ಜಾನಪದವನ್ನು ನಾವು ಪುನರ್ಮೌಲ್ಯೀಕರಣಕ್ಕೆ ಒಳಗು ಮಾಡಬೇಕಾಗಿದೆಯೋ ಅಂಥದನ್ನು ವಿದ್ವಾಂಸರು ಮಾತ್ರ ಮಾಡದೆ ಅದಕ್ಕೆ ಸಂಬಂಧಿಸಿದ ಹರಿದ ಬಟ್ಟೆಯ, ಹಸಿದ ಹೊಟ್ಟೆಯ ಹಳ್ಳಿಗಾಡಿನ ಜನರನ್ನು, ನಗರದ ನಾಗರೀಕರನ್ನು ಅದರೊಳಗೆ ಸೇರಿಸಿಕೊಂಡು ಆರೋಗ್ಯಪೂರ್ಣವಾದ ಚರ್ಚೆಗೆ ಎಡೆಮಾಡಿಕೊಡಬೇಕು. ಮುಖಾಮುಖಿಯಾಗುವುದರ ಮೂಲಕ ಪರಸ್ಪರರು ಸೇರಿ ಏನನ್ನಾದರೂ ಸಾಧಿಸಿ ತೋರಿಸಬಹುದು. ಆ ದಿಕ್ಕಿನಲ್ಲಿ 'ಜಾನಪದ ಸಮಾವೇಶ' ಅತ್ಯಂತ

ಜರೂರಿನದಾಗಿದೆ. ಇಂಥ ಸಮಾವೇಶಗಳು ಕೇವಲ ನಗರ ಪ್ರದೇಶದಲ್ಲಿ ನಡೆದರೆ ಸಾಲದು, ಗ್ರಾಮಾಂತರ ಪ್ರದೇಶಗಳಲ್ಲಿನ ಸೊಗಡು, ಸೊಬಗು ಅದರಲ್ಲಿ ಸೇರಬೇಕಾದರೆ ಹಳ್ಳಿಗಳಲ್ಲಿ ನಡೆಯಬೇಕಾದುದು ಅತ್ಯವಶ್ಯಕ. ಇದನ್ನು ವಿದ್ವಾಂಸರು, ಸಮಾವೇಶಗಳನ್ನು ರೂಪಿಸುವವರು, ಭಾಗವಹಿಸುವವರು ಗಮನದಲ್ಲಿರಿಸಿಕೊಳ್ಳಬೇಕು. ಹಾಗಾದಾಗ ಮಾತ್ರ 'ಜಾನಪದ ಸಮಾವೇಶ' ಅರ್ಥವಂತಿಕೆಯನ್ನು ಪಡೆದುಕೊಂಡೀತು. ಕರ್ನಾಟಕದ ಮಟ್ಟದಲ್ಲಿ ಇಂಥದ್ದೊಂದು ಸಮಾವೇಶವನ್ನು ಅಕಾಡೆಮಿ ಈಗಾಗಲೇ ನೆರವೇರಿಸಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ತನ್ನ ಹದಿನೇಳನೆಯ ವರ್ಷವನ್ನು ದಾಟುತ್ತಿರುವ ಮತ್ತು ಜಾನಪದ ಚಟುವಟಿಕೆಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ಹಾಗೂ ಬಹುಮುಖವಾಗಿ ನಡೆಯುತ್ತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನ ಗೌರವಗಳನ್ನು ಸೆಳೆದುಕೊಳ್ಳುತ್ತಿರುವ ವಿಶಿಷ್ಟ ಸಂದರ್ಭದಲ್ಲಿ 'ಅಖಿಲ ಭಾರತ ಜಾನಪದ ಸಮಾವೇಶ'ವನ್ನು ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ನಡೆಸಲಾಗುತ್ತಿದೆ. ೧೯೯೮ರ ಜೂನ್ ೧೨ ಮತ್ತು ೧೩ರಂದು ನಾಡಿನ ಇನ್ನೂರಕ್ಕೂ ಹೆಚ್ಚು ವಿದ್ವಾಂಸರು ಮತ್ತು ಆರುನೂರಕ್ಕೂ ಹೆಚ್ಚು ಜನಪದ ಕಲಾವಿದರು ಈ ಸಮಾವೇಶದಲ್ಲಿ ಭಾಗಿಗಳಾಗುತ್ತಿದ್ದಾರೆ. ಹೊರರಾಜ್ಯಗಳ ಜಾನಪದ ವಿದ್ವಾಂಸರು ಮತ್ತು ಕಲಾವಿದರು ಅಧಿಕ ಸಂಖ್ಯೆಯಲ್ಲಿ ಇಲ್ಲಿ ಪಾಲ್ಗೊಳ್ಳುತ್ತಿರುವುದು ಒಂದು ವಿಶೇಷ. ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಆಗುತ್ತಿರುವ ಮೌಲಿಕ ಸಾಧನೆಗಳ ಪರಿಚಯ ಭಾಷೆಯ ತೊಡಕಿನಿಂದಾಗಿ ಮತ್ತು ಪ್ರಚಾರ ಹಾಗೂ ಪ್ರಸಾರದ ಕೊರತೆಯಿಂದಾಗಿ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಆಗುತ್ತಿಲ್ಲ. ಹಾಗೆಯೇ ಭಾರತದ ಇತರ ರಾಜ್ಯಗಳಲ್ಲಿ ನಡೆಯುತ್ತಿರುವ ಈ ಬಗೆಯ ಶೋಧನೆ-ಸಾಧನೆಗಳ ಪರಿಚಯ ಸಾಧ್ಯವಾಗುತ್ತಿಲ್ಲ. ಈ ಸಂಪರ್ಕ ಸಾಹಿತ್ಯದಿಂದ ಆಗುತ್ತಿರುವ ಅನಾನುಕೂಲಗಳನ್ನು ಕೆಲಮಟ್ಟಿಗಾದರೂ ನಿವಾರಿಸಲು, ನಮ್ಮ ಕಲಾವಿದರು ಮತ್ತು ವಿದ್ವಾಂಸರು ಪರಸ್ಪರ ಕಲೆತು ತಮ್ಮ ಸಾಧನೆಗಳನ್ನು ಸಾಬೀತುಪಡಿಸಲು, ಸಮಸ್ಯೆಗಳನ್ನು ಸವಾಲುಗಳನ್ನು ಪರಸ್ಪರ ಚಿಂತಿಸಲು ಈ ಅಖಿಲ ಭಾರತ ವೇದಿಕೆ ಮೊತ್ತ ಮೊದಲು ಅನುವು ಮಾಡಿಕೊಡುತ್ತದೆ ಎಂದು ನಾನು ನಂಬಿದ್ದೇನೆ. ಈ ಪರಸ್ಪರ ಅರಿವು ಮುಂದಿನ ದಿನಗಳಲ್ಲಿ ಭಾರತದ ಜಾನಪದ ಭೂಮಿಕೆಯಲ್ಲಿ ಹೊಸ ಸಾಧ್ಯತೆಗಳ ಆವಿಷ್ಕಾರಕ್ಕೆ ಎಡೆಮಾಡಿಕೊಡುತ್ತದೆ ಎಂಬ ಆಶಯ ಸನಗಿದೆ.

ಈ ಮಹತ್ವಾಕಾಂಕ್ಷೆಯ ಸಮಾವೇಶದ ಸಂದರ್ಭದಲ್ಲಿ ಕರ್ನಾಟಕ ಜಾನಪದದ ಹಾಗೂ ಭಾರತೀಯ ಜಾನಪದದ ಬಹುಮುಖ್ಯ ಆಯಾಮಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ 'ಜಾನಪದ ಭಾರತಿ' ಎಂಬ ಈ ಸ್ಮರಣ ಸಂಪುಟವನ್ನು ಪ್ರಕಟಿಸಲಾಗುತ್ತಿದೆ. ಖ್ಯಾತ ಜಾನಪದ ವಿದ್ವಾಂಸರು ಈ ಸಂಪುಟಕ್ಕಾಗಿ ಮೌಲಿಕ ಲೇಖನಗಳನ್ನು ಒದಗಿಸಿದ್ದಾರೆ. ಅಕಾಡೆಮಿಯ ಸದಸ್ಯರೂ, ಕವಿಗಳೂ, ಉತ್ಸಾಹಶೀಲರೂ ಆದ ಮಿತ್ರ ಪ್ರೊ॥ ನಲ್ಲೂರು ಪ್ರಸಾದ್ ಅವರು ಈ ಸಂಪುಟವನ್ನು ತುಂಬ ಶ್ರದ್ಧೆ ಆಸಕ್ತಿಗಳಿಂದ ಸಂಪಾದಿಸಿಕೊಟ್ಟಿದ್ದಾರೆ. ಅಂದ ಚಂದದ ಮುದ್ರಣಕ್ಕೆ ಕರ್ನಾಟಕದಲ್ಲಿ ಹೆಸರಾದ ಶ್ರೀ ಅಶೋಕ್‌ಕುಮಾರ್ ಅವರು ತಮ್ಮ ಲಕ್ಷ್ಮಿಮುದ್ರಣಾಲಯದ ಮೂಲಕ ಅತ್ಯಂತ ಕಡಿಮೆ ಅವಧಿಯಲ್ಲಿ ಸುಂದರವಾಗಿ ಇದನ್ನು ಅಚ್ಚಿಸಿದ್ದಾರೆ. ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಈ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಇದನ್ನು ಮೈಸೂರಿನಲ್ಲಿ ನಡೆಸಲು ತಮ್ಮ ಸಹಜ ಜಾನಪದ ಆಸಕ್ತಿಯಿಂದ ಉತ್ಸಾಹದಿಂದ ಮುಂದೆ ಬಂದು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು, ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಅ. ರಾ. ಚಂದ್ರಹಾಸಗುಪ್ತ ಅವರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರು ತುಂಬ ಪ್ರೀತಿ ವಿಶ್ವಾಸ ಹಾಗೂ ಅಭಿಮಾನಗಳಿಂದ ಈ ಸಮಾವೇಶ ಜರುಗಲು ಎಲ್ಲ ವಿವಿಧ ಸಹಾಯ ಸಹಕಾರಗಳನ್ನು ಒದಗಿಸಿದ್ದಾರೆ. ರಾಷ್ಟ್ರದ ಎಲ್ಲೆಡೆಗಳಿಂದ ಜಾನಪದ ವಿದ್ವಾಂಸರು, ಜನಪದ ಕಲಾವಿದರು ಇದರಲ್ಲಿ ಭಾಗವಹಿಸಿ ಇದಕ್ಕೊಂದು ಸಾರ್ಥಕತೆಯನ್ನು ತಂದುಕೊಟ್ಟಿದ್ದಾರೆ. ಇಷ್ಟೆಲ್ಲ ಸಾಧಿಸಲು ನಮ್ಮ ಅಕಾಡೆಮಿಯ ಎಲ್ಲ ಸದಸ್ಯರು ಸಾಕಷ್ಟು ಪ್ರೀತಿ ಮತ್ತು ಆಸಕ್ತಿಯಿಂದ, ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ ಈ ಸಮಾವೇಶದ ಯಶಸ್ಸಿನ ಹಿಂದೆ ಮೈಸೂರು ಸ್ವಾಗತ ಸಮಿತಿಯವರ ಶ್ರಮವಿದೆ. ಇವರೆಲ್ಲರಿಗೂ ಅಕಾಡೆಮಿಯ ಪರವಾಗಿ ಕೃತಜ್ಞತೆಯ ನೂರು ನೂರು ನಮನಗಳು.

೧೦-೦೬-೯೮

ಡಾ॥ ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು, ಕರ್ನಾಟಕ ಜಾನಪದ
ಮತ್ತು ಯಕ್ಷಗಾನ ಅಕಾಡೆಮಿ



## ಸಂಪಾದಕೀಯ

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಶಾಸ್ತ್ರೀಯವಾದ ಒಂದು ಚೌಕಟ್ಟು ಪ್ರಾಪ್ತವಾದ ಮೇಲೆ ವಿಶ್ವವಿದ್ಯಾಲಯಗಳು, ಸಂಘ ಸಂಸ್ಥೆಗಳು, ವಿದೇಶಿ ಸಂಸ್ಥೆಗಳು ಇದರ ಬಗ್ಗೆ ಅಪಾರವಾದ ಕಾಳಜಿ ತೋರಲಾರಂಭಿಸಿದವು. ಮೊಟ್ಟಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯ ಜಾನಪದವನ್ನು ಅಧ್ಯಯನ ವಿಷಯವನ್ನಾಗಿ ಪಠ್ಯಕ್ರಮದಲ್ಲಿ ಅಳವಡಿಸಿದಾಗ ಸಾಂಪ್ರದಾಯಿಕ ಹಾಗೂ ವಸಾಹತು ಪ್ರಿಯ ಮನಸ್ಸುಗಳಿಗೆ ತಳಮಳ ಉಂಟಾಗಿ ಮೂದಲಿಕೆ ಮಾತುಗಳು ಕೇಳಿಬಂದವು. ಆದರೆ ಇಂಥ ಕಿರಿಕಿರಿ, ತಳಮಳ, ಮೂದಲಿಕೆ ಎಲ್ಲವನ್ನೂ ದಾಟಿ ಜಾನಪದ ಇಂದು ಹಲವು ಜ್ಞಾನಶಾಖೆಗಳ ಅಂತರ ಶಿಸ್ತಿನ ಅಧ್ಯಯನಕ್ಕೆ ಅಡಿಪಾಯವಾಗಿದೆ.

ಕರ್ನಾಟಕ ಸರಕಾರ ಜಾನಪದ ವಿಷಯಕ್ಕೆ ಪ್ರತ್ಯೇಕವಾದ ಅಕಾಡೆಮಿಯನ್ನು ಸ್ಥಾಪಿಸಿದ ಮೇಲಂತೂ ಜಾನಪದ ಚಟುವಟಿಕೆಗಳು ಕರ್ನಾಟಕದಾದ್ಯಂತ ಅಧಿಕೃತಗೊಳಿಸಲ್ಪಟ್ಟವು. ವಿದ್ವಾಂಸರು, ಕಲಾವಿದರು, ಸಂಶೋಧಕರು ಬದುಕಿನ ಎಲ್ಲ ಕ್ಷೇತ್ರಗಳಿಂದ ಮುಂದೆ ಬಂದು ಜಾನಪದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಇದರಿಂದ ಅವಕಾಶವಾಯಿತು. ವಿಶ್ವವಿದ್ಯಾನಿಲಯಗಳೆಂದರೆ ಅಲ್ಲಿನ ಅಧ್ಯಾಪಕ, ವಿದ್ಯಾರ್ಥಿ ವೃಂದಕ್ಕೆ ಮಾತ್ರ ಸೀಮಿತಗೊಳ್ಳುವುದರಿಂದ ಸ್ವಯಂನೆಲೆಯ ವಿದ್ವಾಂಸರಿಗೆ, ಕಲಾವಿದರಿಗೆ ಮುಕ್ತವಾಗಿ ವ್ಯವಹರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ವಿಶ್ವವಿದ್ಯಾಲಯಗಳಿಗೆ ಪ್ರಾದೇಶಿಕ ಪರಿಮಿತಿ ಇರುತ್ತದೆ. ಈ ಎಲ್ಲ ಪರಿಮಿತಿಗಳನ್ನು ದಾಟಿ ಜಾನಪದ ಅಕಾಡೆಮಿ ರಾಜ್ಯಮಟ್ಟದ ಅಧಿಕೃತ ಸಂಸ್ಥೆಯಾಗಿರುವುದರಿಂದ ಅಧ್ಯಯನ, ಸಂಶೋಧನೆ ಹಾಗೂ ಕಲೆಗಳ ಚಲನಶೀಲತೆಗೆ ಒಂದು ದೊಡ್ಡ ವೇದಿಕೆಯಾಗಿ ಪರಿಣಮಿಸಿದೆ.

ಇಂಥ ವೇದಿಕೆ ನಡೆಸುವ ಕಾರ್ಯಕ್ರಮಗಳೂ ಕೂಡ ರಾಜ್ಯಮಟ್ಟ, ಅಂತರ ರಾಜ್ಯ ಮಟ್ಟದವೇ ಆಗಿ ವಿದ್ವಾಂಸರಲ್ಲಿ ಕಲಾವಿದರಲ್ಲಿ ಇನ್ನೂ ಹೆಚ್ಚಿನ ಆತ್ಮವಿಶ್ವಾಸ ಹಾಗೂ ಚೈತನ್ಯವನ್ನು ತುಂಬುತ್ತವೆ. ಈ ದಿಕ್ಕಿನಲ್ಲಿ ಸಣ್ಣದಾಗಿ ಆರಂಭವಾದ ಜಾನಪದ ಸಮಾವೇಶ ಕಾರ್ಯಕ್ರಮ ಇಂದು ಅಖಿಲಭಾರತ ಮಟ್ಟದ ಸಮಾವೇಶವಾಗಿ ಪರಿವರ್ತಿತವಾಗಿದೆ. ಅಕ್ಕಪಕ್ಕದ ರಾಜ್ಯಗಳಲ್ಲಿ ನಡೆಯುತ್ತಿರುವ ಜಾನಪದ ಸಂಬಂಧಿ ಚಟುವಟಿಕೆಗಳನ್ನು ಅರಿಯಲು ಹಾಗೂ ತೌಲನಿಕವಾಗಿ ಅಭ್ಯಾಸಮಾಡಲು ಈ ಸಮಾವೇಶ ಕಾರ್ಯಕ್ರಮ ತುಂಬಾ ಸಹಕಾರಿಯಾಗಿದೆ. ಇಂಥ ಸಮಾವೇಶಗಳನ್ನು ಇದುವರೆಗೆ ನಡೆಸಿದವರು ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಿದ್ದರೆ ಈಗಿನ ಅಧ್ಯಕ್ಷರಾದ ಡಾ. ಲಕ್ಕಪ್ಪಗೌಡರು ಮತ್ತವರ ತಂಡ ಅದನ್ನು ಅಖಿಲಭಾರತ ಮಟ್ಟಕ್ಕೆ ಹಿಗ್ಗಿಸಿದ್ದಾರೆ. ತುಂಬ ಗಂಭೀರವಾದ ವಿಷಯಗಳ ಬಗ್ಗೆ ವಿದ್ವಾಂಸರಿಂದ ಚರ್ಚೆಗಳನ್ನು ಏರ್ಪಡಿಸಿ ಜಾನಪದ ಅಧ್ಯಯನ ಸಾಗಬೇಕಾದ ದಿಕ್ಕುಗಳನ್ನು ಗುರುತಿಸುತ್ತಿದ್ದಾರೆ; ಜಾನಪದ ಒಳಗೊಳ್ಳಬೇಕಾದ ವಿಷಯ ಕ್ಷೇತ್ರಗಳನ್ನು ಹಿಗ್ಗಿಸುತ್ತಿದ್ದಾರೆ; ಹೊಸ ಕಲಾವಿದರ ಕಲೆಗಳನ್ನು ವೇದಿಕೆ ಮೇಲೆ ಪರಿಚಯಿಸುತ್ತಿದ್ದಾರೆ.

ಇಂಥ ಅಪರೂಪದ ಹಾಗೂ ವಿಶಿಷ್ಟವಾದ ಜಾನಪದ ಸಮಾವೇಶದ ನೆನಪು ಅಚ್ಚಳಿಯದೆ ಉಳಿಯುವಂತೆ ಮಾಡಲು 'ಜಾನಪದ ಕರ್ನಾಟಕ' ಮತ್ತು 'ಜಾನಪದ ಭಾರತಿ' ಎಂಬ ಎರಡು ನೆನಪಿನ ಸಂಚಿಕೆಗಳನ್ನು ಸಿದ್ಧಪಡಿಸಲಾಗಿದೆ. ಇವು ಕೇವಲ ಸಂದರ್ಭೋಚಿತ ಸಂಚಿಕೆಗಳಾಗದೆ ಕರ್ನಾಟಕ ಜಾನಪದದ ವೈಶಿಷ್ಟ್ಯ ಹಾಗೂ ಆಳ ಅಗಲಗಳನ್ನು ಎತ್ತಿ ತೋರಿಸುವ ದಾಖಲೆಗಳಾಗುವಂತೆ ಆಸಕ್ತಿ ವಹಿಸಲಾಗಿದೆ.

'ಜಾನಪದ ಭಾರತಿ'ಯಲ್ಲಿ ಕರ್ನಾಟಕವಷ್ಟೇ ಅಲ್ಲದೆ ಸೋದರ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳ ಭಾಷೆಗಳ ಜಾನಪದ ಚಟುವಟಿಕೆಗಳನ್ನು ಅರಿಯುವಂಥ ಲೇಖನಗಳನ್ನು ಸಂಕಲಿಸಲಾಗಿದೆ. ಜಾಗತೀಕರಣ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹಿನ್ನೆಲೆಯಲ್ಲಿ 'ಸರಕು ಸಂಸ್ಕೃತಿ' ವಿಸ್ತೃತವಾಗುತ್ತಿರುವ ಸಂದರ್ಭದಲ್ಲಿ 'ನೆಲದ ಸಂಸ್ಕೃತಿ' ಅದಕ್ಕೆ ಒಡ್ಡುವ ಪ್ರತಿರೋಧದ ಆಯಾಮಗಳನ್ನು ಅರಿಯುವ ಪ್ರಯತ್ನವೂ ಇಲ್ಲಿದೆ. ಚಾರಿತ್ರಿಕವಾಗಿ ಜಾನಪದ ಅಧ್ಯಯನ ನಡೆದುಬಂದ ದಾರಿಯನ್ನು ಗುರುತಿಸಲಾಗಿದೆ. ಇದುವರೆಗೂ ಅಜ್ಞಾತ ಕ್ಷೇತ್ರವಾಗಿದ್ದ ಮುಸ್ಲಿಂ ಜಾನಪದವನ್ನು ಅಧ್ಯಯನ ಮಾಡುವ ಕಡೆ ಸಂಶೋಧಕರ ಗಮನವನ್ನು ಸೆಳೆಯಲಾಗಿದೆ. ಪರಿಸರ ಮತ್ತು ಜಾನಪದಕ್ಕಿರುವ ಅಂತರಸಂಬಂಧ ಬದುಕಿನ ಮೇಲೆ ಉಂಟುಮಾಡಿರುವ ಪ್ರಭಾವವನ್ನು ತಿಳಿಸುತ್ತಾ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸಲಾಗಿದೆ. ಅಂದರೆ ಹೊಸಹೊಸ ಚರ್ಚೆಗಳನ್ನು ಎತ್ತುವ ಹಾಗೂ ಹೊಸ ಸಂವಾದವನ್ನು ಹುಟ್ಟುಹಾಕುವ ಇಂಥ ಲೇಖನಗಳಿಂದ ಈ ಸಂಚಿಕೆ ಒಂದು ಅವಲೋಕನ ಗ್ರಂಥವಾಗಲೆಂಬ ಆಶಯ ನಮ್ಮದಾಗಿದೆ.

ಇಂಥ ನಮ್ಮ ಆಶಯಕ್ಕೆ ಊರುಗೋಲಾಗಿ ನಿಂತವರು ಈಗಾಗಲೇ ಜಾನಪದ ಹಾಗೂ ಸಂಸ್ಕೃತಿ ಕ್ಷೇತ್ರದಲ್ಲಿ ಹೆಸರು ಮಾಡಿದ ಹಿರಿ-ಕಿರಿಯ ವಿದ್ವಾಂಸರು. ಅವರು ಕೇಳಿದ ಕೂಡಲೇ ಲೇಖನಗಳನ್ನು ಒದಗಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೆ ಸಂಪಾದಕನಾಗಿ ನಾನು ತುಂಬ ಕೃತಜ್ಞನಾಗಿದ್ದೇನೆ. ಇಂಥ ಒಂದು ಗುರುತರ ಜವಾಬ್ದಾರಿಯನ್ನು ನನಗೆ ವಹಿಸಿ, ನನ್ನಲ್ಲಿದ್ದ ಜಡತೆಯನ್ನು ಹೋಗಲಾಡಿಸಿ ಕೆಲಸ ಮಾಡುವಂತೆ ಹುರುಪು ತುಂಬುವ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಲಕ್ಕಪ್ಪಗೌಡರಿಗೆ ನಾನು ತುಂಬ ಋಣಿಯಾಗಿದ್ದೇನೆ. ಇಂಥ ಸಂಚಿಕೆ ಸಿದ್ಧಪಡಿಸುತ್ತಿರುವ ಸಂದರ್ಭದಲ್ಲಿ ಸಲಹೆ-ಸೂಚನೆ ಕೊಡುತ್ತ, ವಿವಿಧ ರೀತಿಯ ಸಹಾಯ ಮಾಡುತ್ತ, ನನ್ನ ಕ್ರಿಯಾಶೀಲತೆ ಬತ್ತಿಹೋಗದಂತೆ ನೋಡಿಕೊಳ್ಳುತ್ತಿರುವ ಪ್ರೀತಿಯ ಎನ್. ಚಂದ್ರಪ್ಪ, ಜೆ. ಎನ್. ಶಾಮರಾವ್, ಬೈರಮಂಗಲ ರಾಮೇಗೌಡ, ಭಕ್ತರ ಹಳ್ಳಿ ಕಾಮರಾಜ್, ಡಾ॥ ಚಕ್ಕೆರೆ ಶಿವಶಂಕರ್, ಡಾ. ರಂಗಾರೆಡ್ಡಿ ಕೋಡಿರಾಂಪುರ, ಡಾ.ಜಿ. ಆರ್. ತಿಪ್ಪೇಸ್ವಾಮಿ- ಈ ಎಲ್ಲಾ ಗೆಳೆಯರನ್ನು ನೆನೆಯುವುದು ನನ್ನ ಕರ್ತವ್ಯ. ತುಂಬ ಅಂದವಾದ ಮುದ್ರಣವನ್ನು ಮಾಡಿ ಅಚ್ಚುಕಟ್ಟಾಗಿ ಈ ಸಂಚಿಕೆಯನ್ನು ವಿನ್ಯಾಸಗೊಳಿಸಿದ ಲಕ್ಷ್ಮಿಮುದ್ರಣಾಲಯದ ಶ್ರೀ ಅಶೋಕ್‌ಕುಮಾರ್ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞನಾಗಿದ್ದೇನೆ. ನನ್ನ ಜೊತೆಯಲ್ಲಿ ಈ ಸಮಾವೇಶಕ್ಕಾಗಿ ದುಡಿಯುತ್ತಿರುವ ಅಕಾಡೆಮಿಯ ಸದಸ್ಯರಿಗೆ, ಈ ಸಂಚಿಕೆಗೆ ಬಳಸಿಕೊಳ್ಳಲು ಕೆಲವು ಭಾವಚಿತ್ರಗಳನ್ನು ಒದಗಿಸಿದ ಸಿರಿಗಂಧ ಶ್ರೀನಿವಾಸಮೂರ್ತಿ ಅವರಿಗೆ, ರಿಜಿಸ್ಟ್ರಾರ್ ಹಾಗೂ ಸಿಬ್ಬಂದಿ ವರ್ಗದವರಿಗೆ ಈ ಸಂದರ್ಭದಲ್ಲಿ ಕೃತಜ್ಞತೆ ಅರ್ಪಿಸುತ್ತೇನೆ.

8.6.1998
ಬೆಂಗಳೂರು

**– ನಲ್ಲೂರು ಪ್ರಸಾದ್**

# ಪರಿವಿಡಿ


ಮುನ್ನುಡಿ

ಸಂಪಾದಕೀಯ

| | | | |
|---|---|---|---|
| ೧. | ಕರ್ನಾಟಕ ಜಾನಪದ | - ಡಾ. ಡಿ. ಕೆ. ರಾಜೇಂದ್ರ | ೧ |
| ೨. | ಜಾನಪದ ಮುನ್ನೋಟ | - ಡಾ. ದೇವೇಂದ್ರಕುಮಾರ ಹಕಾರಿ | ೧೩ |
| ೩. | ದಕ್ಷಿಣ ಭಾರತೀಯ ಜಾನಪದ | - ಡಾ. ಆರ್ಪೀಯಸ್ ಸುಂದರಂ | ೨೭ |
| ೪. | ಪರಿಸರ ಜಾನಪದ | - ಡಾ. ದೇಜಗೌ | ೪೧ |
| ೫. | ಗ್ಯಾಟ್ ಮತ್ತು ಜಾನಪದ | - ಡಾ. ಹಿ. ಶಿ. ರಾಮಚಂದ್ರೇಗೌಡ | ೫೧ |
| ೬. | ಮುಸ್ಲಿಂ ಜಾನಪದ | - ಡಾ. ರಹಮತ್ ತರೀಕೆರೆ | ೬೫ |
| ೭. | ಕನ್ನಡ ಜನಪದ ಗೀತೆಗಳು | - ಎಂ. ಭೈರೇಗೌಡ ಕೆ. ಪಿ. ದೊಡ್ಡಿ | ೭೬ |
| ೮. | ಕರ್ನಾಟಕದ ಜನಪದ ಆಟಗಳು | - ರಾಜೇಗೌಡ ಹೊಸಹಳ್ಳಿ | ೯೬ |
| ೯. | ಕರ್ನಾಟಕ ಜಾನಪದ : ಅಧ್ಯಯನದ ನೆಲೆಗಳು | - ಡಾ. ಜಿ. ಆರ್. ತಿಪ್ಪೇಸ್ವಾಮಿ | ೧೦೮ |
| ೧೦. | ಕರ್ನಾಟಕದ ಜನಪದ ಮಹಾಕಾವ್ಯಗಳು | - ಡಾ. ವಾಮನ ನಂದಾವರ | ೧೧೩ |
| ೧೧. | ಕರ್ನಾಟಕ ಮತ್ತು ಆಂಧ್ರ ಜಾನಪದ | - ಡಾ. ಜಿ. ಎಸ್. ಮೋಹನ್ | ೧೨೨ |

# ಕರ್ನಾಟಕ ಜಾನಪದ

ಡಾ. ಡಿ. ಕೆ. ರಾಜೇಂದ್ರ

'ಕರ್ನಾಟಕ ಜಾನಪದ' ವಿಷಯ ವ್ಯಾಪ್ತಿ ಬಹು ದೊಡ್ಡದು. ಅದನ್ನು ಒಂದು ಪುಟ್ಟ ಲೇಖನದಲ್ಲಿ ಸಂಗ್ರಹಿಸಿ ಹೇಳುವುದು ಸಾಹಸದ ಕೆಲಸವೇ ಸರಿ. ಆದರೂ ಪ್ರಯತ್ನ ನನ್ನದು, ಅದರ ಇತಿಮಿತಿಯನ್ನು ಗ್ರಹಿಸಿ ಓದುವ ಹೃದಯವಂತಿಕೆ ಓದುಗರದ್ದು.

ಕರ್ನಾಟಕ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತವಾದ ಪ್ರದೇಶ. ಮಲೆನಾಡು, ಕರಾವಳಿಯ ಬೆಟ್ಟಗುಡ್ಡ ಪ್ರದೇಶಗಳಿಂದ ತನ್ನ ಸೊಗಸನ್ನು ಹೆಚ್ಚಿಸಿಕೊಂಡಿರುವಂತೆಯೇ, ಬಯಲು ನಾಡಿನ ವೈವಿಧ್ಯದಿಂದಲೂ ಕರ್ನಾಟಕ ತನ್ನ ಸೊಬಗನ್ನು ಹಿರಿದಾಗಿಸಿಕೊಂಡಿದೆ. ಆರ್ಥಿಕಾಭಿವೃದ್ಧಿಗೆ, ಬದುಕಿನ ವೈವಿಧ್ಯಕ್ಕೆ ಹಾಗೂ ಸಾಂಸ್ಕೃತಿಕವಾದ ಶ್ರೀಮಂತಿಕೆಗೆ ಇವೆಲ್ಲವೂ ಪೂರಕವಾಗಿ, ಪ್ರೇರಕವಾಗಿ ಕರ್ನಾಟಕದ ಖ್ಯಾತಿಯನ್ನು ಬೆಳಗಲು ಕಾರಣವಾಗಿವೆ. ಬಗೆ ಬಗೆಯ ವೃತ್ತಿ, ಅವನ್ನನುಸರಿಸಿದ ಜನ, ಆ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಂಪ್ರದಾಯ, ಆಚರಣೆ, ನಂಬಿಕೆಗಳು ಹಾಗೂ ವಿಭಿನ್ನ ಸಂಸ್ಕೃತಿಯ ಸಂಪರ್ಕದಿಂದ, ಸಮಾಜದಲ್ಲಿ ಕಾಣಿಸಿಕೊಂಡ ವೈಶಿಷ್ಟ್ಯಗಳು ಸಮಗ್ರ ಕರ್ನಾಟಕದ ಶ್ರೀಮಂತ ಸಂಸ್ಕೃತಿಯ ನಿರ್ಮಾಣಕ್ಕೆ ನೀರೆರೆದಿವೆ.

ಯಾವುದೇ ಒಂದು ಪ್ರದೇಶದ ಸರ್ವತೋಮುಖವಾದ ಅಭಿವೃದ್ಧಿ ಕಾಣಿಸಿಕೊಳ್ಳುವುದು ಅಲ್ಲಿಯ ಭೌಗೋಳಿಕ ನೆಲೆಯಿಂದ ಹಾಗೂ ಅದನ್ನನುಸರಿಸಿ ಬದುಕುವ ಜನರ ರೀತಿ ನೀತಿಯಿಂದ. ಸಂಸ್ಕೃತಿ ವೈವಿಧ್ಯವನ್ನು ಪಡೆದು ದಟ್ಟೈಸಿ ಬೆಳೆಯುವುದು ಈ ಹಂತದಲ್ಲಿಯೇ. ಕರ್ನಾಟಕ ಜಾನಪದ ತನ್ನ ಹುಲುಸಾದ ಬೆಳಸನ್ನು ಕಂಡುಕೊಂಡಿರುವುದನ್ನು ಈ ಎಲ್ಲ ನೆಲೆಗಳಲ್ಲಿಯೂ ಗುರುತಿಸಬಹುದು.

ಜಾನಪದ ಪರಿಸರದ ಸೃಷ್ಟಿ. ಆ ಒಂದು ಪರಿಸರದ ಜನರ ಸರ್ವಸ್ವವನ್ನೂ ಗರ್ಭೀಕರಿಸಿಕೊಂಡದ್ದು. ಹುಟ್ಟಿನಿಂದ ಸಾವಿನವರೆಗಿನ ಹಾಗೂ ಅದರ ನಂತರದ ಆಚರಣೆಗಳನ್ನೂ ಜಾನಪದ ಮೈದುಂಬಿಕೊಂಡು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿರುತ್ತದೆ. ಆ ದೃಷ್ಟಿಯಿಂದ ಹೇಳುವುದಾದರೆ, ಜಾನಪದ ಒಳಗೊಳ್ಳದ ವಿಷಯವೇ ಇಲ್ಲ. ಬದುಕಿನ

ಒಂದೊಂದು ಸಂದರ್ಭದ ಘಟನೆಗಳೂ ಅಲ್ಲಿ ವಿಶೇಷ ಅರ್ಥವನ್ನೂ - ಸಂಬಂಧವನ್ನೂ ಪಡೆದಿರುತ್ತವೆ. ಈ ಹಿನ್ನೆಲೆಯಲ್ಲಿಯೇ ಒಂದು ನಿರ್ದಿಷ್ಟ ಜನಾಂಗದ ಹಾಗೂ ಪ್ರದೇಶದ ಸಂಸ್ಕೃತಿ ನಿರ್ಮಾಣಗೊಂಡಿರುತ್ತದೆ.

'ಕರ್ನಾಟಕ ಜಾನಪದ' - ವನ್ನು ಈ ದೃಷ್ಟಿಯಿಂದ ಪರಿಶೀಲಿಸುವುದಾದರೆ, ಅದರ ಬಾಹುಳ್ಯ ಬಹು ವಿಸ್ತೃತವಾದದ್ದು. ವಿಭಿನ್ನ ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿದ ಕರ್ನಾಟಕ ವಿವಿಧ ಬಗೆಯ ವೃತ್ತಿಯ, ಜಾತಿ ಮತಗಳ, ಸಂಪ್ರದಾಯ ಆಚರಣೆಗಳ, ಉಡುಗೆ-ತೊಡುಗೆ, ಊಟೋಪಚಾರಗಳ, ಹಾಗೂ ಸಾಹಿತ್ಯ ಮತ್ತು ಕಲಾ ಸಂಪ್ರದಾಯಗಳನ್ನು ಒಳಗೊಂಡು ಶ್ರೀಮಂತಗೊಂಡದ್ದು. ಪ್ರಾದೇಶಿಕವಾಗಿ ವಿಂಗಡಿಸಿಕೊಂಡು ಅದನ್ನು ಪರಿಶೀಲಿಸುವುದಾದರೂ ಆಯಾ ಭಾಗದ ವಿಶಿಷ್ಟ ಸ್ವರೂಪ ಎದ್ದು ಕಾಣುತ್ತದೆ. ಸುಮಾರು ಒಂದು ಲಕ್ಷದ ತೊಂಬತ್ತೆರಡು ಸಾವಿರ ಚದರ ಕಿಲೋಮೀಟರ್‌ಗಳಷ್ಟು ಹರಹುವುಳ್ಳ ಈ ಪ್ರದೇಶದಲ್ಲಿ ವಾಸಿಸುವ ಜನರ ಸಂಖ್ಯೆ ಸುಮಾರು ನಾಲ್ಕು ಕೋಟಿಗು ಮಿಗಿಲು ಎಂದು ಗುರುತಿಸಲಾಗಿದೆ. ಇಷ್ಟೊಂದು ವ್ಯಾಪಕವಾದ ಹಾಗೂ ಬಹುಸಂಖ್ಯೆಯ ಪ್ರದೇಶದ ಜಾನಪದ ನಿಸ್ಸಂಶಯವಾಗಿ ಅಭೂತ ಪೂರ್ವವಾದುದು ಎಂಬುದರಲ್ಲಿ ಎರಡು ಮಾತಿಲ್ಲ.

ಅಧ್ಯಯನಕ್ಕಾಗಿ ಪ್ರಾದೇಶಿಕ ವಿಭಜನೆಯ ದೃಷ್ಟಿಯಿಂದ ಪರಿಶೀಲಿಸುವುದಾದರೆ - ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ಕರಾವಳಿ ಪ್ರದೇಶ ಎಂದು ಹೆಚ್ಚು ವ್ಯಾಪಕವಾಗಿ ವಿಂಗಡಿಸಬಹುದಾಗಿದೆ. ಮತ್ತೆ ಅವುಗಳಲ್ಲಿಯ ಒಳ ವಿಭಜನೆ ಬೇರೆಯೇ ಆಗುತ್ತದೆ. ಈ ಒಂದೊಂದು ಭಾಗದ ಪ್ರಾದೇಶಿಕ ವೈಶಿಷ್ಟ್ಯ ಅದನ್ನನುಸರಿಸಿದ - ಜನರ ವೃತ್ತಿ ಭಾಷೆ, ಉಡುಗೆ - ತೊಡುಗೆ, ಊಟೋಪಚಾರಗಳು, ಆಚಾರ - ವಿಚಾರ, ನಂಬಿಕೆ - ನಡವಳಿಕೆಗಳು, ಜೀವನಕ್ರಮ, ಕಲೆ, ಸಂಪ್ರದಾಯಗಳು ವಿಭಿನ್ನ ರೀತಿಯಲ್ಲಿ ಕಂಡು ಬರುತ್ತವೆ. ಆ ಒಂದೊಂದರ ವೈಶಿಷ್ಟ್ಯ - ವೈವಿಧ್ಯಗಳು ಎದ್ದು ಕಾಣುತ್ತವೆ. ಆ ಮೂಲಕ ಸಾಂಸ್ಕೃತಿಕ ಶ್ರೀಮಂತಿಕೆಯನ್ನೂ ಬಿತ್ತರಿಸುತ್ತವೆ.

ಪ್ರಸ್ತುತ ಲೇಖನದಲ್ಲಿ ಮೇಲಿನ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ಒಟ್ಟು ಜಾನಪದವನ್ನು ಸ್ಥೂಲವಾಗಿ ಸಮೀಕ್ಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಹಾಗೆ ಮಾಡುವಾಗ ಜಾನಪದದ ಪ್ರಮುಖ ಪ್ರಕಾರಗಳತ್ತ ಹೆಚ್ಚು ಒತ್ತುಕೊಡಲಾಗಿದೆ. ಜಾನಪದದಲ್ಲಿ ಪ್ರಮುಖ - ಅಪ್ರಮುಖ ಎಂಬುದು ಇಲ್ಲ ಎಂಬುದರ ಅರಿವಿದ್ದರೂ, ಲೇಖನದ ಮಿತಿಯ ದೃಷ್ಟಿಯಿಂದ ಇಂತಹ ಒಂದು ನಿರ್ಬಂಧ ಅನಿವಾರ್ಯ.

ಕರ್ನಾಟಕ ಹಲವು ಬಗೆಯ ಜಾತಿ ಮತ ಧರ್ಮಗಳಿಂದ ಕೂಡಿದ್ದು, ಅವರಲ್ಲಿ ಬಹು ಮಂದಿ ನಾಡಿನಲ್ಲೂ, ಕೆಲಮಂದಿ ಕಾಡಿನಲ್ಲೂ ವಾಸಿಸುತ್ತಾರೆ. ಅವರೆಲ್ಲರ ಬದುಕಿನ ರೀತಿ-ನೀತಿ, ಆಚಾರ-ವಿಚಾರಗಳು ಬೇರೆ ಬೇರೆ. ಕರ್ನಾಟಕ ಸುಮಾರು ೭೪೨೯೩ ಚ. ಮೈ.ಗಳಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು ಅದರಲ್ಲಿ ೨೬ ಬಗೆಯ ಆದಿವಾಸಿಗಳು ಹಂಚಿಹೋಗಿದ್ದಾರೆ.



ಎಂದು ಅಂದಾಜು ಮಾಡಲಾಗಿದೆ. ಇವರಲ್ಲಿಯೂ ಆದಿವಾಸಿ ಸ್ಥಿತಿಯಿಂದ ಸುಧಾರಣೆಗೊಳ್ಳುತ್ತಿರುವ ಲಂಬಾಣಿಗಳು, ಕಾಡುಗೊಲ್ಲರು ಹಾಲಕ್ಕಿ ಗೌಡರು ಮುಂತಾದವರನ್ನು ಬಿಟ್ಟರೆ, ಇನ್ನೂ ಪರಿಪೂರ್ಣ ಆದಿವಾಸಿ ಜನಾಂಗದ ಸ್ಥಿತಿಯಲ್ಲಿಯೇ ಉಳಿದಿರುವವರೂ ಇದ್ದಾರೆ. ಜೇನು ಕುರುಬರು, ಬೆಟ್ಟಕುರುಬರು, ಮುಳ್ಳು ಕುರುಬರು, ಸೋಲಿಗರು, ಎರವರು, ಇರುಳರು, ಹಲಸರು, ಕೊರಗರು, ಸಿದ್ಧಿಯರು, ಮಲೆ ಕುಡಿಯರು, ಗೊಂಡರು, ಮುಂಡರು ಮುಂತಾದ ಕೆಲವು ಪ್ರಮುಖ ಆದಿವಾಸಿಗಳ ಜೀವನ ಪದ್ಧತಿ, ಸ್ಥಿತಿಗತಿ ಇನ್ನೂ ಹಾಗೆಯೇ ಉಳಿದಿದೆ. ಇವರೆಲ್ಲರೂ ಕರ್ನಾಟಕದ ಹಲವು ಭಾಗಗಳಲ್ಲಿ ಹರಡಿ ಹೋಗಿದ್ದಾರೆ. ಮುಖ್ಯವಾಗಿ ದಕ್ಷಿಣ ಕರ್ನಾಟಕ ಹಾಗೂ ಕರಾವಳಿಯ ಭಾಗಗಳಲ್ಲಿ ಹೆಚ್ಚಾಗಿದ್ದಾರೆ.

ಕಾಡು ಕುರುಬರಲ್ಲಿಯೇ ಬೆಟ್ಟ ಕುರುಬರು, ಜೇನು ಕುರುಬರು ಎಂದು ಎರಡು ಪಂಗಡಗಳು ಕಂಡು ಬರುತ್ತವೆ. ಇವರು ಒಂದೇ ಪ್ರದೇಶದಲ್ಲಿ ನೆಲಸಿದ್ದರೂ ವೃತ್ತಿ ಮಾತ್ರ ಬೇರೆ. ಜೇನು ಕುರುಬರಿಗಿಂತ ಬೆಟ್ಟ ಕುರುಬರು ಬೇಟೆಯಲ್ಲಿ ನಿಪುಣರು. ಜೊತೆಗೆ ತಮ್ಮದೇ ರೀತಿಯ ಬೇಸಾಯ ಕ್ರಮವನ್ನೂ ಅನುಸರಿಸುತ್ತ ಬಂದಿದ್ದಾರೆ. ಜೇನು ಕುರುಬರು ಹೆಸರೇ ಸೂಚಿಸುವಂತೆ ಜೇನುಬೇಟೆಯಲ್ಲಿ ನಿಸ್ಸೀಮರು. ಇವುಗಳ ಜೊತೆಗೆ ಕಾಡಿನಲ್ಲಿ ದೊರೆಯುವ ವಸ್ತುಗಳನ್ನೇ ಬಳಸಿ ತಯಾರಿಸಿದ ವಸ್ತುಗಳನ್ನು ತಂದು ಮಾರಾಟಮಾಡಿ ಹಣಗಳಿಸುತ್ತಾರೆ. ಇವರು ವಿಶೇಷವಾಗಿ ಕೊಡಗಿನ ವೀರರಾಜಪೇಟೆ, ಸೋಮವಾರಪೇಟೆ, ಹಾಗೂ ಮಡಕೇರಿ ತಾಲ್ಲೂಕುಗಳಲ್ಲಿ ವಾಸಿಸುತ್ತಾರೆ. ಅಲ್ಲದೆ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು ಮತ್ತು ಗುಂಡ್ಲುಪೇಟೆ ಬಳಿಯಲ್ಲಿಯೂ ಇದ್ದಾರೆ. ಮೈಸೂರು ಜಿಲ್ಲೆಯ ಪ್ರಮುಖ ಆದಿವಾಸಿಗಳಲ್ಲಿ ಸೋಲಿಗರು ಪ್ರಮುಖರಾದವರು. ಬಿಳಿಗಿರಿ ರಂಗನಬೆಟ್ಟ, ಮಲೆಯ ಮಾದೇಶ್ವರ ಬೆಟ್ಟ ಹಾಗೂ ಕೊಡಗಿನ ಕೆಲವು ಪ್ರದೇಶಗಳಲ್ಲಿ ಇವರು ನೆಲಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಸಿರ್ಸಿ, ಅಂಕೋಲಾ ಮುಂತಾದ ಭಾಗಗಳಲ್ಲಿ ಸಿದ್ಧಿ ಜನಾಂಗ ಕಂಡು ಬರುತ್ತದೆ. ಮೂಲತಃ ಇವರು ಆಫ್ರಿಕಾ ಬುಡಕಟ್ಟಿಗೆ ಸೇರಿದವರು. ಪೋರ್ಚುಗೀಸರ ಸೈನ್ಯದೊಂದಿಗೆ ಗೋವಾಕ್ಕೆ ಬಂದು ನಂತರ ಅಲ್ಲಿಂದ ತಪ್ಪಿಸಿಕೊಂಡು ಈ ಭಾಗಗಳಲ್ಲಿ ಬಂದು ನೆಲಸಿ, ಸ್ಥಳೀಯ ಹೆಂಗಸರನ್ನು ಮದುವೆಯಾಗಿ ಅಲ್ಲಿಯ ದಟ್ಟಕಾಡುಗಳಲ್ಲಿ ನೆಲಸಿದಂತೆ ತಿಳಿದು ಬರುತ್ತದೆ. ಇಲ್ಲಿಯ ಇನ್ನೊಂದು ವಿಶಿಷ್ಟ ಜನಾಂಗ ಹಾಲಕ್ಕಿ ಗೌಡರು. ಇವರು ನದಿಯ ದಂಡೆ ಹಾಗೂ ಬೆಟ್ಟ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ವಾಸಿಸಿ, ವ್ಯವಸಾಯವನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇವರಂತೆಯೇ ಗೊಂಡರು, ಕೊರಗರು ಕರ್ನಾಟಕದ ಪ್ರದೇಶದಲ್ಲಿ ಕಂಡುಬರುವ ಆದಿವಾಸಿಗಳು.

ಆದಿವಾಸಿಗಳ ಸಾಹಿತ್ಯ, ಕಲೆ, ಸಂಸ್ಕೃತಿ ವಿಶಿಷ್ಟವಾದುದು ಅಷ್ಟೇ ಅಲ್ಲ ಅಚ್ಚರಿಯನ್ನುಂಟು ಮಾಡುವಂತಹುದು. ಬಿಡಿಗೀತೆಗಳಿಂದ ಹಿಡಿದು ಎರವರ ಸಾಂಸ್ಕೃತಿಕ

ವೀರನನ್ನು ಕುರಿತ ಮಹಾಕಾವ್ಯದವರೆಗಿನ ಅದರ ಹರಹನ್ನು ಕಾಣಬಹುದು. ಹೆಂಗಸರು, ಗಂಡಸರು ಹಾಗೂ ಮಕ್ಕಳು ಕೂಡಿ ಕುಣಿಯುವ ಇವರ ಬಗೆ ಬಗೆಯ ಕುಣಿತಗಳು, ವಾದ್ಯ ವಿಶೇಷಗಳು ವಿಶೇಷ ಅಧ್ಯಯನಕ್ಕೆ ನಿಲುಕುವಂತಹವು. ರಾತ್ರಿಯಾಯಿತೆಂದರೆ ಬೆಂಕಿಯ ಸುತ್ತ ಎಲ್ಲರೂ ಕೂಡಿ ಹಾಡಿ ಕುಣಿಯುವ ಆ ದೃಶ್ಯ ಅದ್ಭುತವಾದುದು. ಹಾಲಕ್ಕಿ ಗೌಡರ 'ಹಾಲಕ್ಕಿ ಕುಣಿತ' ತನ್ನದೇ ಆದ ವಿಶೇಷತೆಯನ್ನೂ ಕಲಾ ಸೌಂದರ್ಯವನ್ನು ಹೊಂದಿದ ಕುಣಿತ. ಕಾಡು ಕುರುಬರ ಕೋಲಾಟ ವಿಶಿಷ್ಟ ಬಗೆಯದು. ಉದ್ದವಾದ ಕಾಡು ಕೋಲುಗಳನ್ನು ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿ ಹಾಡುತ್ತ ಕುಣಿಯುವ ಭಂಗಿ ನಾಡು ಕೋಲಾಟಕ್ಕಿಂತಲೂ ಭಿನ್ನವಾದುದು. ಸೋಲಿಗರು ತಮ್ಮ ಕ್ಯಾತೇದೇವರು ಹಬ್ಬದಲ್ಲಿ ನಡೆಸುವ ಧಾರ್ಮಿಕ ಕುಣಿತ 'ಗೋರುಕದ ಕುಣಿತ' ಮತ್ತು 'ಓಲಗದ ಕುಣಿತ'ಗಳು ಹೆಚ್ಚು ಆಕರ್ಷಕ. ಉತ್ತರ ಕರ್ನಾಟಕದ ಗೊಂಡರು ನಡೆಸುವ ಅಪೂರ್ವ ಬಗೆಯ ನೃತ್ಯ, ದಕ್ಷಿಣ ಕರ್ನಾಟಕದ ಪ್ರಸಿದ್ಧವಾದ 'ನಾಗಮಂಡಲ'ದ ನೃತ್ಯವನ್ನು ಹೆಚ್ಚಾಗಿ ಹೋಲುತ್ತದೆ. ಗೊಂಡರ ಸುಗ್ಗಿ ಕುಣಿತ ಕೂಡ ಅಷ್ಟೇ ಪ್ರಚಲಿತ.

ಪ್ರಕೃತಿಯ ಮಡಿಲಿನಲ್ಲಿಯೇ ಯಾವುದೇ ನಾಗರೀಕವಾದ ಪ್ರಲೋಭನೆಗಳಿಗೆ ಒಳಗಾಗದೆ, ಆಸೆ ಪಡದೆ ಸಹಜ ಬದುಕನ್ನು ಬದುಕುತ್ತ ಬಂದಿರುವ ಆದಿವಾಸಿಗಳು ಅದನ್ನೇ ನೆಚ್ಚಿಕೊಂಡು ಅದರಲ್ಲಿಯೇ ಸುಖ ಕಂಡವರು. ಅವರದ್ದೇ ಆದ ಕಟ್ಟುಪಾಡುಗಳು, ನೀತಿ ನಿಯಮಗಳ ನಡುವೆ ತಮ್ಮ ಸುಖದ ಜೀವನವನ್ನು ಕಂಡುಕೊಂಡವರು. ಅವರದ್ದೇ ಆದ ಅಡುಗೆ, ಉಡುಗೆ, ತೊಡುಗೆ. ಹಾಡು-ಕುಣಿತ ಬದುಕಿನ ಅವಿಭಾಜ್ಯ ಅಂಗ. ರಾತ್ರಿ ಬಹು ಹೊತ್ತು ಅದಕ್ಕೇ ಮೀಸಲು. ಜಾನಪದದ ಶ್ರೀಮಂತಿಕೆ ಇವರಲ್ಲಿ ಮಡುಗಟ್ಟಿರುವುದನ್ನು ಕಾಣಬಹುದು. ಅವುಗಳ ಅಧ್ಯಯನ ಇನ್ನೂ ಸಮಗ್ರವಾಗಿ ಆಗಿಲ್ಲ. ಅದನ್ನು ಶೋಧಿಸಿದರೆ ನಿಜಕ್ಕೂ ದೊಡ್ಡ ಜಾನಪದ ಭಂಡಾರವನ್ನು ಪಡೆದಂತಾಗುತ್ತದೆ. ಅವರ ಸಂಸ್ಕೃತಿಯ ಅಪೂರ್ವ ನಿಧಿಯನ್ನು ಸಂಗ್ರಹಿಸಿದಂತಾಗುತ್ತದೆ. ಕರ್ನಾಟಕ ಜಾನಪದ ಸಂಪತ್ತಿನಲ್ಲಿ ಆದಿವಾಸಿಗಳದ್ದೇ ಒಂದು ಪ್ರತ್ಯೇಕ ಭಾಗ-ವಿಶಿಷ್ಟ ಭಾಗವೂ ಹೌದು. ಅದಕ್ಕೇ ಪ್ರತ್ಯೇಕ ಸ್ಥಾನಮಾನವಿದೆ, ಮೌಲಿಕತೆ ಇದೆ. ಒಂದು ರೀತಿಯಲ್ಲಿ ಅದರ ಬಹುಭಾಗ ಈಗ ಪರಿವರ್ತನ ಘಟ್ಟದಲ್ಲಿದೆ. ಪೂರ್ತಿಯಾಗಿ ನಶಿಸಿ ಹೋಗುವ ಮುನ್ನ ಅದರ ಸಂಗ್ರಹದ, ದಾಖಲಾತಿಯ ಆವಶ್ಯಕತೆ ಹೆಚ್ಚಿನ ರೀತಿಯಲ್ಲಿದೆ. ಆದಿವಾಸಿಗಳ ಕೆಲವೊಂದು ಸಂಪ್ರದಾಯಗಳಂತೂ ವಿಶಿಷ್ಟವಾಗಿದ್ದು, ಸೂಕ್ಷ್ಮ ಅಧ್ಯಯನಕ್ಕೆ ಯೋಗ್ಯವಾದುವು.

ಕರ್ನಾಟಕದ ಜನಪದ ಸಾಹಿತ್ಯ ಮತ್ತು ಕಲೆ ಎರಡನ್ನೂ ಒಂದು ದೃಷ್ಟಿಯಿಂದ ಒಟ್ಟೊಟ್ಟಿಗೇ ನೋಡಬೇಕಾದವುಗಳು. ಏಕೆಂದರೆ ಬಹುತೇಕವಾಗಿ ಅವು ಒಂದನ್ನು ಬಿಟ್ಟು ಒಂದಿಲ್ಲ. ಕಲೆ ಸಾಹಿತ್ಯಗಳ ಸಂಗಮವನ್ನು ಅಲ್ಲಿ ದಟ್ಟವಾಗಿ ಗುರುತಿಸಬಹುದು. ಹಾಗೆಯೇ ಸಂಸ್ಕೃತಿಯ ಬಿಗಿಯಾದ ಗಂಟೂ-ನಂಟೂ ಅದಕ್ಕಿದೆ.



ಇಲ್ಲಿ ಜನಪದ ಸಾಹಿತ್ಯದ ವೈಶಿಷ್ಟ್ಯ ಎಷ್ಟು ಹಿರಿದಾದದ್ದೋ, ಜನಪದ ಕಲೆಗಳ ವೈವಿಧ್ಯವೂ ಅಷ್ಟೇ ಹಿರಿದಾದದ್ದು. ಜನಪದ ಸಾಹಿತ್ಯದ ಹತ್ತು ಹಲವು ಪ್ರಕಾರಗಳು ಅದರ ಭಂಡಾರವನ್ನು ತುಂಬಿವೆ. ಒಂದು ಕಡೆ ಸಾಮಾನ್ಯ ಗಾಯಕರು ತಮ್ಮ ನಿತ್ಯದ ಅನುಭವಗಳನ್ನು ಸಾಹಿತ್ಯವಾಗಿಸಿ ಹಾಡಿದರೆ, ಪರಂಪರೆಯಿಂದ ಬಂದ ದೇವರು ಧರ್ಮ ಸಂಬಂಧಿಯಾದ ಮಹಾಕಾವ್ಯಗಳವರೆಗೆ ಕಟ್ಟಿ ಹಾಡಿದ ವೃತ್ತಿಗಾಯಕರು ಕಂಡುಬರುತ್ತಾರೆ. ಕರ್ನಾಟಕ ಜನಪದ ಸಾಹಿತ್ಯದಲ್ಲಿ ಗೀತೆಗಳದ್ದೇ ಮೇಲುಗೈ. ಅದರ ಶ್ರೀಮಂತಿಕೆ ಬಹು ದೊಡ್ಡದು. ಅದರ ವಿವಿಧ ಪ್ರಕಾರಗಳು ಬದುಕಿನ ಎಲ್ಲ ಮುಖಗಳನ್ನೂ ಒಳಗೊಂಡದ್ದು. ಇಲ್ಲಿ ಕಂಡು ಬರುವ ಗೀತೆಯ ಹಲವು ಪ್ರಕಾರಗಳನ್ನು ಗಮನಿಸಿದರೇ ಸಾಕು ಅದರ ಶ್ರೀಮಂತಿಕೆ ಎಷ್ಟೆಂಬುದು ಗೊತ್ತಾಗುತ್ತದೆ:

- ದೇವರ ಪದಗಳು
- ಲಾಲಿಪದಗಳು
- ಬೀಸುವ ಹಾಡು
- ಕುಟ್ಟುವ ಹಾಡು
- ಕಳೆ ಕೀಳುವ ಹಾಡು
- ಮದುವೆ ಹಾಡು
- ಶಾಸ್ತ್ರದ ಹಾಡು
- ಗಾಡಿಯ ಪದಗಳು
- ಕೋಲಾಟದ ಪದಗಳು
- ಸೋಬಾನೆ ಪದಗಳು
- ಗೀಗೀ ಪದಗಳು
- ಹಂತಿ ಹಾಡುಗಳು

ಇತ್ಯಾದಿ ಇತ್ಯಾದಿ, ಅವುಗಳ ಪಟ್ಟಿ ಅಪರಿಮಿತ. ಬದುಕಿನ ಎಲ್ಲ ಸೂಕ್ಷ್ಮಗಳನ್ನೂ ಸೆರೆ ಹಿಡಿದಿರುವ ಅವರ ಸಾಹಿತ್ಯಿಕ ಪ್ರತಿಭೆ ಬೆರಗುಗೊಳಿಸುತ್ತದೆ. ಅದು ತ್ರಿಪದಿಗಳಲ್ಲಿ ಒಂದು ಬಗೆಯಾದರೆ, ಕಥನ ಗೀತೆಗಳಲ್ಲಿ, ಲಾವಣಿಗಳಲ್ಲಿ ಮತ್ತೊಂದು ರೀತಿಯಲ್ಲಿ ಹರಡಿ ನಿಂತಿರುವುದನ್ನು ಕಾಣಬಹುದು. ಅವರ ಸಾಹಿತ್ಯಿಕ ಶಕ್ತಿಗೆ ನಿಲುಕದ ವಸ್ತುವೇ ಇಲ್ಲವೆನ್ನಬಹುದು. ಇವನ್ನೆಲ್ಲ ಹಾಡುವ ಹಾಡುಗಾರರೂ ನಮ್ಮಲ್ಲಿದ್ದಾರೆ. ಹಾಡುಗಾರ್ತಿಯರೂ ನಮ್ಮಲ್ಲಿದ್ದಾರೆ. ಕೆಲವಕ್ಕೆ ಬಗೆ ಬಗೆಯ ವಾದ್ಯಗಳ ಬಳಕೆಯಾದರೆ, ಮತ್ತೆ ಕೆಲವು ಹಾಗೆಯೇ ನಿರೂಪಿತವಾಗುತ್ತವೆ.

ಜನಪದ ಸಾಹಿತ್ಯ ಪ್ರಕಾರದಲ್ಲಿ 'ಜನಪದ ಮಹಾಕಾವ್ಯ' ಗಳದ್ದೊಂದು ದೊಡ್ಡ ಘಟ್ಟ. ಕರ್ನಾಟಕ ಹಲವು ಜನಪದ ಮಹಾಕಾವ್ಯಗಳಿಗೆ ಕಾರಣವಾದ ಧಾರ್ಮಿಕ ನೆಲೆಗಳನ್ನು

ಹೊಂದಿದೆ. ಇಲ್ಲಿಯ ಒಂದೊಂದು ಕ್ಷೇತ್ರವೂ ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಹೊಂದಿರುವಂತೆಯೋ, ಮಹಾಕಾವ್ಯದ ಸಾಹಿತ್ಯ ಸಂಪತ್ತಿನಿಂ'ಲೂ ಶ್ರೀಮಂತವಾಗಿ ಗಮನ ಸೆಳೆದಿವೆ. ಕರ್ನಾಟಕದಲ್ಲಿ ಪ್ರಚಲಿತವಿರುವ ಧಾರ್ಮಿಕ ವೃತ್ತಿಗಾಯಕರು ಹಾಗೂ ಲೌಕಿಕ ವೃತ್ತಿಗಾಯಕರು ಕಾವ್ಯದ ದೊಡ್ಡ ಕಣಜವೇ ಆಗಿದ್ದಾರೆ. ಮಾದೇಶ್ವರದ ಗುಡ್ಡರು, ಮಂಟೇಸ್ವಾಮಿಯ ನೀಲಗಾರರು, ಜಂಜಪ್ಪನ ಗಣೆಯವರು, ಎಲ್ಲಮ್ಮನ ಚೌಡಿಕೆಯವರು, ಹಾಗೂ ಗೊರವರು ದೊಡ್ಡ ಸಾಹಿತ್ಯ ಭಂಡಾರವೇ ಆಗಿದ್ದಾರೆ. ಧಾರ್ಮಿಕ ಸಂಪ್ರದಾಯದ ಒಂದು ಅಪೂರ್ವ ಪರಂಪರೆಯನ್ನು ಸಾಹಿತ್ಯ ರೂಪದಲ್ಲಿ ಉಳಿಸಿಕೊಂಡು ಬಂದಿದ್ದಾರೆ.

ಲೌಕಿಕ ವೃತ್ತಿಗಾಯಕ ವರ್ಗದಲ್ಲಿ ಬರುವ-ಕರಪಾಲ ಮೇಳದವರು, ದೊಂಬಿದಾಸರು, ಕಿನ್ನರಿ ಜೋಗಿಗಳು ಮುಂತಾದವರು ಮತ್ತೊಂದು ಬಗೆಯ ಗೀತ ಸಂಪ್ರದಾಯವನ್ನು ಉಳಿಸಿಕೊಂಡು ಬಂದ ಗಾಯಕರು. ಐತಿಹಾಸಿಕ ಲಾವಣಿಗಳ ಜೊತೆಗೆ ಹಲವು ಜನಪ್ರಿಯ ಲೌಕಿಕ ಕಥನ ಗೀತೆಗಳನ್ನು ಸೊಗಸಾಗಿ ಹಾಡುವುದರ ಮೂಲಕ ಜನಮನ್ನಣೆ ಗಳಿಸಿದ ಕಲಾವಿದರು. ಈ ಒಂದೊಂದು ಸಂಪ್ರದಾಯದ - ಹಾಡುಗಾರಿಕೆ, ವಾದ್ಯ ವಿಶೇಷ, ವೇಷಭೂಷಣ ಎಲ್ಲವೂ ವಿಭಿನ್ನ ರೀತಿಯವು. ಇವರ್ಯಾರೂ ಕೇವಲ ಗಾಯಕರಲ್ಲ, ಆಕರ್ಷಕ ವೇಷಭೂಷಣಗಳೊಂದಿಗೆ ಅಭಿನಯವನ್ನೂ ಮಾಡುವ ಚತುರರು. ಸಾಹಿತ್ಯ ಅವರಿಗೆ ಸಿದ್ಧಸಿದ್ದು, ಅಭಿನಯ ಅವರಿಗೆ ಒಲಿದು ಬಂದದ್ದು. ಕರ್ನಾಟಕ ಜನಪದ ಸಾಹಿತ್ಯದ ಬಹು ಮುಖ್ಯ ಭಾಗ ಗೀತ ಪ್ರಕಾರವೇ. ಅದರ ಸತ್ವದಂತೆಯೇ ಅದರ ವ್ಯಾಪ್ತಿಯೂ ಹಿರಿದು.

ಜನಪದ ಸಾಹಿತ್ಯದ ಗದ್ಯ ಪ್ರಕಾರಗಳಲ್ಲಿ ಕಂಡುಬರುವ ಕತೆ, ಪುರಾಣ, ಐತಿಹ್ಯಗಳಲ್ಲಿ, ಕತೆ ಹಾಗೂ ಐತಿಹ್ಯಗಳನ್ನು ಕುರಿತಂತೆ ಹೆಚ್ಚಿನ ಕೆಲಸ ನಡೆದಿದೆ. ಸಂಗ್ರಹದ ದೃಷ್ಟಿಯಿಂದ ನೋಡಿದಾಗ ಗೀತ ಪ್ರಕಾರದ್ದೇ ಮೇಲುಗೈಯಾಗಿ ಕಂಡರೂ, ಗದ್ಯ ಪ್ರಕಾರ ತೀರ ಹಿಂದೆ ಬಿದ್ದಿಲ್ಲ. ಹಲವು ಪ್ರಮುಖ ಸಂಕಲನಗಳು ಹೊರಬಂದಿವೆ. ಅವನ್ನು ಕುರಿತ ವೈಜ್ಞಾನಿಕ ರೀತಿಯ ಅಧ್ಯಯನಗಳೂ ನಡೆದಿವೆ, ನಡೆಯುತ್ತಿವೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಈ ಕಾರ್ಯ ಹೆಚ್ಚಿನ ರೀತಿಯಲ್ಲಿ ನಡೆದಿರುವುದು ಗಮನಾರ್ಹ.

ಕರ್ನಾಟಕ ಜಾನಪದದ ಪ್ರಮುಖ ಭಾಗ ಜನಪದ ಕಲೆಗಳು. ಅವುಗಳ ವೈಶಿಷ್ಟ್ಯ ಹಾಗೂ ವೈವಿಧ್ಯಗಳು ಅಪೂರ್ವ ಬಗೆಯವು. ಕರ್ನಾಟಕದ ಉದ್ದಗಲಕ್ಕೂ ವಿವಿಧ ಬಗೆಯ ಜನಪದ ಕಲೆಗಳು ಗೋಚರಿಸುತ್ತವೆ. ಬದುಕಿನೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿರುವ ಈ ಕಲೆಗಳು ಜನಪದ ಸಂಸ್ಕೃತಿಯ ಅವಿಭಾಜ್ಯ ಅಂಗ. ಕಲೆ-ಸಾಹಿತ್ಯ-ಸಂಸ್ಕೃತಿ ಈ ಮೂರೂ ಮುಪ್ಪುರಿಗೊಂಡಂತೆ ಈ ಕಲೆಗಳು ಶ್ರೀಮಂತಗೊಂಡಿವೆ ಹಾಗೂ ಆಕರ್ಷಣೆಯನ್ನು ಪಡೆದಿವೆ. ಜನಪದ ಕುಣಿತ ಅಥವಾ ನೃತ್ಯಗಳಲ್ಲಿ ಕಂಡುಬರುವ ಕಂಸಾಳೆ, ಚೌಡಿಕೆ, ಗೊರವ, ಸೋಮ, ಪೂಜಾ, ಡೊಳ್ಳು, ವೀರಗಾಸೆ, ಪಟಾಕುಣಿತ, ಹಾಲಕ್ಕಿ ಕುಣಿತ, ಕುಡುಬಿ ನೃತ್ಯ ಮುಂತಾದುವು ಅದ್ಭುತ ಕಲಾ ವೈಭವದಿಂದ ಆಕರ್ಷಿತವಾದವುಗಳು ಈ ಕಲಾವಿದರು ಬಳಸುವ



ವಾದ್ಯ ವಿಶೇಷಗಳು, ಹಾಕುವ ವೇಷ ಭೂಷಣಗಳು, ಕುಣಿಯುವ ಭಂಗಿ ಎಲ್ಲವೂ ಅಪೂರ್ವ ಹಾಗೂ ಮನಮೋಹಕ. ಬದುಕಿನ ಹಾಗೂ ಧಾರ್ಮಿಕ ಸಂಬಂಧದ ವಿವಿಧ ಸಂದರ್ಭಗಳಲ್ಲಿ ಬಳಕೆಯಾಗುವ ಈ ಕಲೆಗಳು ಎಲ್ಲರನ್ನೂ ರಂಜಿಸುವ ಸಾಮರ್ಥ್ಯವುಳ್ಳವು. ಇವು ಕೇವಲ ಕಲೆಗಳಲ್ಲ, ಧಾರ್ಮಿಕ ಸಂಬಂಧಿಯಾದ ಆಚರಣೆಗಳೂ ಹೌದು. ಇವಲ್ಲದೆ ಆದಿವಾಸಿಗಳಲ್ಲಿ ಕಂಡುಬರುವ ವಿವಿಧ ಬಗೆಯ ಕುಣಿತಗಳು ಅವುಗಳದ್ದೇಯಾದ ವೈಶಿಷ್ಟ್ಯವನ್ನು ಪಡೆದವುಗಳು. ಕೊಡಗಿನ ಕಾಡುಕುರುಬರಲ್ಲಿ ಕಂಡುಬರುವ 'ಕುಂಡೆಹಬ್ಬ'ದಲ್ಲಿ ಹಲವು ಬಗೆಯ ಕುಣಿತಗಳು ರೂಢಿಯಲ್ಲಿವೆ. ಭದ್ರಕಾಳಿಯ ಹಬ್ಬದ ಸಂದರ್ಭದಲ್ಲಿ ಮನೆ ಮನೆಗೆ ಹೋಗಿ ಹಾಡಿ ಕುಣಿಯುವ ಸಂಪ್ರದಾಯ ಇದು. ಮುಖಕ್ಕೆ ಬೂದಿ ಬಳಿದುಕೊಂಡು, ಸ್ತ್ರೀಯರಂತೆ ವೇಷ ಧರಿಸಿದ ಪುರುಷರು ಒಂದು ಕೈಯಲ್ಲಿ ಕಾಡು ಸೋರೇ ಬುರುಡೆ ಮತ್ತೊಂದು ಕೈಯಲ್ಲಿ ಉದ್ದನೆಯ ದೊಣ್ಣೆ ಹಿಡಿದು ಕುಣಿಯುತ್ತ ಗುಂಪುಗುಂಪಾಗಿ ಅಶ್ಲೀಲ ಪದಗಳನ್ನು ಹಾಡುತ್ತಾರೆ. ಎಷ್ಟೋ ಬೈದರೂ ಆ ದಿನ ಯಾರೂ ಅವರನ್ನು ಆಕ್ಷೇಪಿಸುವುದಿಲ್ಲ. ಬದಲಾಗಿ ಉಡುಗೊರೆ ಕೊಟ್ಟು ಕಳುಹಿಸುತ್ತಾರೆ. ಆ ಒಂದು ದಿನ ಮಾತ್ರ ಈ ಅವಕಾಶ.

ಹಾಗೆಯೇ ಎರವರು, ಸಿದ್ಧಿಯರು, ಕೊರಗರು ಹಾಗೂ ಗೊಂಡರ ಕುಣಿತಗಳೂ ವೈವಿಧ್ಯಮಯವಾಗಿ ಗೋಚರಿಸುತ್ತವೆ. ರಾತ್ರಿವೇಳೆ ಕಾಡಿನಲ್ಲಿ ಬೆಂಕಿಯ ಸುತ್ತ ಸ್ತ್ರೀ ಪುರುಷರೆಲ್ಲ ಕೂಡಿ ಹಾಡಿ ಕುಣಿಯುವ ಕುಣಿತಗಳೂ ಮನಮೋಹಕ.

ಕರ್ನಾಟಕದ ಪ್ರದರ್ಶಕ ಜನಪದ ಕಲೆಗಳ ಸಾಲಿನಲ್ಲಿ ಬರುವ ಇನ್ನೂ ಹಲವು ಕಲೆಗಳು ಅಪೂರ್ವ ರೀತಿಯವು. ಜನಪದ ರಂಗಪ್ರಕಾರಗಳಲ್ಲಿ ಬರುವ - ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆಯಾಟ, ಹಾಗೂ ತೊಗಲು ಗೊಂಬೆ ಆಟಗಳು ಪ್ರಾದೇಶಿಕ ವೈವಿಧ್ಯಗಳೊಂದಿಗೆ ಹೆಚ್ಚು ವೈಶಿಷ್ಟ್ಯಪೂರ್ಣವಾಗಿ ಕಂಡುಬರುತ್ತವೆ.

ಜನಪದ ರಂಗಭೂಮಿಯಲ್ಲಿ ಪ್ರಮುಖವಾಗಿ ಕಂಡುಬರುವ 'ಬಯಲಾಟ' ಅತ್ಯಪೂರ್ವವಾದ ಪ್ರಾದೇಶಿಕ ಸೊಗಡನ್ನು ಮೈಗೂಡಿಸಿಕೊಂಡು ಬೆಳೆದು ಬಂದ ಕಲೆ. ಕುಣಿತ , ಅಭಿನಯ, ಸಂಗೀತ, ಸಾಹಿತ್ಯ, ವೇಷಭೂಷಣ ಇತ್ಯಾದಿಗಳಿಂದ ವಿಜೃಂಭಿಸುವ ಈ ಪ್ರಕಾರ ಎಲ್ಲ ಕಾಲದ, ಎಲ್ಲ ಬಗೆಯ, ಎಲ್ಲ ವರ್ಗದ ಜನರನ್ನೂ ಆಕರ್ಷಿಸುತ್ತ ಬಂದಿರುವ ಕಲೆ. ಪ್ರಾದೇಶಿಕವಾಗಿ ಇದನ್ನು ಮೂರು ಪ್ರಮುಖ ಭಾಗಗಳಾಗಿ ವಿಂಗಡಿಸಲಾಗಿದೆ - ಕರಾವಳಿ ಯಕ್ಷಗಾನ. ದಕ್ಷಿಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕ ಭಾಗದ ಯಕ್ಷಗಾನ, ಇದನ್ನೇ ಕರಾವಳಿ ಭಾಗದ ಯಕ್ಷಗಾನವನ್ನು 'ಪಡುವಲಪಾಯ' ಎಂದೂ, ಹಾಗೂ ಉಳಿದೆರಡನ್ನೂ ಸೇರಿಸಿ 'ಮೂಡಲಪಾಯ' ಯಕ್ಷಗಾನ ಎಂದು ಹೆಸರಿಸಲಾಗಿದೆ.

ಮೂಡಲಪಾಯ ಮತ್ತು ಪಡುವಲಪಾಯ - ಎರಡು ಪ್ರಧಾನವಾದ ವಿಂಗಡಣೆಯಾದರೂ, ಅವುಗಳಲ್ಲಿಯೇ ಇನ್ನೂ ಕೆಲವು ಒಳ ಪ್ರಭೇದಗಳು ಕಂಡು ಬರುತ್ತವೆ. ಇವೆಲ್ಲವೂ ಕಾಲಾನಂತರದಲ್ಲಿ, ಸಂದರ್ಭೋಚಿತವಾಗಿ ಉಂಟಾದ ಬದಲಾವಣೆಗಳು.

ಕರಾವಳಿ ಭಾಗದಲ್ಲಿಯ 'ಪಡುವಲಪಾಯ' ಯಕ್ಷಗಾನದಲ್ಲಿಯೇ ಮುಖ್ಯವಾಗಿ - 'ತೆಂಕುತಿಟ್ಟು' 'ಬಡಗುತಿಟ್ಟು' ಎಂಬ ಪ್ರಭೇದಗಳು ಪ್ರಚಲಿತವಾಗಿವೆ. ಈ ತಿಟ್ಟುಗಳಲ್ಲಿಯ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಿ ಅವುಗಳನ್ನು ಪ್ರತ್ಯೇಕವಾಗಿಯೇ ಪರಿಗಣಿಸಲಾಗಿದೆ. ಆದರೆ ಕೆಲವೊಂದು ವಿದ್ವಾಂಸರಲ್ಲಿ ಈ ಪ್ರಭೇದದ ಪರಿಗಣನೆಯ ಬಗೆಗೆ ಭಿನ್ನಾಭಿಪ್ರಾಯಗಳಿರುವುದೂ ಉಂಟು. ಕೆಲವರು ಇದು ಎಂದೇ ಭಾವಿಸುತ್ತಾರೆ. ಆದರೆ ವಾಸ್ತವವಾಗಿ - ವೇಷಭೂಷಣ, ಕುಣಿತ, ವಾದ್ಯ ವಿಶೇಷ ಹಾಗೂ ಹಾಡುಗಾರಿಕೆ ಇವುಗಳಲ್ಲಿ ಅಲ್ಲಲ್ಲಿ ಕೆಲವೊಂದು ವ್ಯತ್ಯಾಸಗಳು ಕಂಡಬರುವುದು ಸಹಜ. ಈ ಬಗೆಯ ಕವಲೊಡೆಯುವಿಕೆ ಇನ್ನೂ ಅಷ್ಟಕ್ಕೇ ನಿಂತಿಲ್ಲ. ಈ ತಿಟ್ಟುಗಳಲ್ಲಿಯೇ ಮತ್ತೆ ಪ್ರಭೇದಗಳುಂಟಾಗಿವೆ.

ಕರ್ನಾಟಕದಲ್ಲಿ ಪಡುವಲಪಾಯ ಯಕ್ಷಗಾನ ಒಂದು ಜನಪದ ಕಲೆಯಾಗಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆದು ನಿಂತಿರುವ ಕಲೆ. ಅದಕ್ಕೊಂದು ಪ್ರತಿಷ್ಠಿತ ಸ್ಥಾನಮಾನ ಇಂದು ಎಲ್ಲೆಡೆ ದೊರೆತಿದೆ. ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಗಳಿಸಿ ಹಣಗಳಿಕೆಯಲ್ಲಿಯೂ ಮುಂದಾಗಿದೆ. ಜನಪದ ಕಲಾವಿದರು ಕೈತುಂಬ ಹಣಗಳಿಸಲು ಈ ಕಲೆ ಸಹಾಯಕವಾಗಿದೆ. ಇದನ್ನೊಂದು ವೃತ್ತಿಯನ್ನಾಗಿಸಿಕೊಂಡು, ಅದಕ್ಕೇ ತಮ್ಮನ್ನು ಅರ್ಪಿಸಿಕೊಂಡು, ಅದರಲ್ಲಿಯೇ ಮೈಮರೆತ ಅದೆಷ್ಟೋ ಕಲಾವಿದರು ಇಂದು ಕರಾವಳಿ ಪ್ರದೇಶದಲ್ಲಿ ನಮಗೆ ದೊರೆಯುತ್ತಾರೆ. ಹಾಗಾಗಿ ಕಲೆಯಲ್ಲಿ ಹಾಗೂ ಕಲಾವಿದರಲ್ಲಿ ಪೈಪೋಟಿ ಉಂಟಾಗಲು ಅದು ಪ್ರೇರಕವಾಗಿರುವುದೂ ಸಹಜ. ಹೊಸ ಹೊಸ ಪ್ರಯೋಗಗಳು, ವೇಷ ಭೂಷಣ, ವಾದ್ಯವಿಶೇಷ ಹಾಗೂ ಮಾತುಗಾರಿಕೆಯಲ್ಲಿ ಕಾಣಿಸಿಕೊಂಡು ಜನರನ್ನು ಆಕರ್ಷಿಸುವ ಮಾರ್ಗದತ್ತ ಸಾಗಿಬಂದಿದೆ. ಇಂದು ಅದು ಒಂದು ಜನಪದ ಕಲೆಯಾಗಿ ಉಳಿದಿಲ್ಲ ಎಂಬ ಅಭಿಪ್ರಾಯವನ್ನು ಎಷ್ಟೋ ಜನರಲ್ಲಿ ಉಂಟುಮಾಡುವಷ್ಟು ಬದಲಾವಣೆಯತ್ತ ಸಾಗಿದೆ.

ಇಷ್ಟಾದರೂ ಪಡುವಲಪಾಯ ಯಕ್ಷಗಾನ ಒಟ್ಟಾಗಿ ಶ್ರೀಮಂತ ಜನಪದ ಕಲೆ. ಇದು ಎಲ್ಲ ರೀತಿಯಿಂದಲೂ ಹೌದು. ಅದೊಂದು ಶಿಸ್ತಿನ ಶಾಸ್ತ್ರೀಯ ಕಲೆಯಾಗಿ ಬೆಳೆದಿದೆ. ಅದರಲ್ಲಿನ ಚಂಡೆಯ ಬಡಿತ, ಮಾತಿನ ವೈಖರಿ, ಅಭಿನಯದ ಗತ್ತು-ಅತ್ಯಪೂರ್ವವಾದುದು. ಎಂತಹವರನ್ನೂ ಆಕರ್ಷಿಸುವಂತಹುದು. ಇದಕ್ಕೆ ಕಾರಣ ಪಡುವಲಪಾಯ ಯಕ್ಷಗಾನ ತನ್ನ ಮೂಲರೂಪದಿಂದ ಬಹಳ ಮುನ್ನಡೆದಿದೆ ಎಂಬುದು.

ಇದಕ್ಕೆ ಹೋಲಿಸಿದರೆ ಮೂಡಲಪಾಯ ಯಕ್ಷಗಾನ ತದ್ವಿರುದ್ಧ ಸ್ಥಿತಿಯಲ್ಲಿದೆ. ಪಡುವಲಪಾಯದಂತೆಯೇ ಇಲ್ಲಿಯೂ ಉತ್ತರ ಸಂಪ್ರದಾಯ ಮತ್ತು ದಕ್ಷಿಣ ಸಂಪ್ರದಾಯ ಎಂಬ ಎರಡು ಪ್ರಭೇದಗಳು, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಭಾಗದ ಬಯಲಾಟಗಳನ್ನು ಗುರುತಿಸಿದಂತೆ ಕರೆಯಲಾಗಿದೆಯಾದರೂ, ಇವಿನ್ನೂ ಜಾನಪದ ಮೂಲಕ್ಕೆ ಹೆಚ್ಚಾಗಿಯೇ ಅಂಟಿಕೊಂಡು ಬಂದಿರುವುದರಿಂದ, ಅದೇ ಸ್ಥಿತಿಯಲ್ಲಿ ಉಳಿದಿವೆ. ಪಡುವಲಪಾಯದಂತೆ ಶ್ರೀಮಂತವಾಗಿ ಬೆಳೆದಿಲ್ಲ, ಜನಾಕರ್ಷಣೆಯನ್ನು ಪಡೆದಿಲ್ಲ.



ವಾಸ್ತವವಾಗಿ ಈ ಎಲ್ಲ ಪಾಯಗಳೂ ಒಂದೇ ಮೂಲದಿಂದ ಬಂದವುಗಳಾದರೂ, ಅವುಗಳು ಬೇರೆ ಬೇರೆ ಎಂದು ಕರೆಸಿಕೊಳ್ಳುವಷ್ಟು ವ್ಯತ್ಯಾಸಗಳನ್ನು ಪಡೆದುಕೊಂಡಿವೆ.

ಪಡುವಲಪಾಯ ಯಕ್ಷಗಾನ ಬಯಲಾಟದಂತೆಯೇ, ಮೂಡಲಪಾಯ ಯಕ್ಷಗಾನ ಬಯಲಾಟದಲ್ಲಿಯೂ ಕಂಡುಬರುವ ಎರಡು ಸಂಪ್ರದಾಯಗಳಲ್ಲಿಯೂ ಹಲವು ವ್ಯತ್ಯಾಸಗಳನ್ನು ಗುರುತಿಸಬಹುದಾದರೂ ಆ ಬಗೆ ಅಷ್ಟಾಗಿ ಯಾರೂ ತಲೆ ಕೆಡಿಕೊಂಡಂತೆ ಕಾಣುವುದಿಲ್ಲ. ಉತ್ತರ ಸಂಪ್ರದಾಯದ ಬಯಲಾಟವನ್ನು 'ದೊಡ್ಡಾಟ' ಎಂದೇ ಕರೆಯುತ್ತಾರೆ. ಹೆಸರಿಗೆ ತಕ್ಕಂತೆ ಅದು ತನ್ನ ಸ್ವರೂಪವನ್ನು ಪಡೆದುಕೊಂಡಿದೆ. ಎಲ್ಲ ರೀತಿಯಿಂದಲೂ ಅದಕ್ಕೆ ಅನ್ವರ್ಥವಾಗಿ ಬೆಳೆದು ನಿಂತಿದೆ. ಅದರ ವಾದ್ಯ ವಿಶೇಷಗಳು, ವೇಷಭೂಷಣಗಳು, ಕುಣಿತ, ಹಿಮ್ಮೇಳ - ಎಲ್ಲವೂ ಗಾತ್ರದಲ್ಲಿ ದೊಡ್ಡವೇ.

ಮೂಡಲಪಾಯದ ದಕ್ಷಿಣ ಸಂಪ್ರದಾಯವೂ, ಉತ್ತರ ಸಂಪ್ರದಾಯದಿಂದ ಪ್ರತ್ಯೇಕಿಸುವಷ್ಟು ವ್ಯತ್ಯಾಸಗಳನ್ನು ಪಡೆದುಕೊಂಡಿದೆ. ದೊಡ್ಡಾಟದಷ್ಟು ದೊಡ್ಡ ದೊಡ್ಡ ವೇಷಭೂಷಣ, ವಾದ್ಯ ವಿಶೇಷಗಳು ಹಾಗೂ ಹಿಮ್ಮೇಳದವರನ್ನು ಹೊಂದಿರದಿದ್ದರೂ. ಮಿಕ್ಕಂತೆ ಅದಕ್ಕೆ ಹತ್ತಿರವಾಗಿಯೋ ಇದನ್ನು ಗುರುತಿಸಬಹುದು. ಈ ಎರಡೂ ಸಂಪ್ರದಾಯಗಳ ಭಿನ್ನತೆ ಏನೆ ಇದ್ದರೂ, ಒಟ್ಟಾಗಿ ಮೂಡಲಪಾಯ ಯಕ್ಷಗಾನ ಜಾನಪದ ಸೊಗಡನ್ನು ಸಂಪೂರ್ಣವಾಗಿ ಉಳಿಸಿಕೊಂಡು ಬಂದಿರುವ ಜನಪದ ಕಲೆಯಾಗಿ ಉಳಿದುಬಂದಿದೆ. ರಂಗಸಜ್ಜಿಕೆ, ಕುಣಿತ, ವೇಷಭೂಷಣ, ಅಭಿನಯ, ಹಾಡುಗಾರಿಕೆ, ವಾದ್ಯಬಳಕೆ, ಹಿಮ್ಮೇಳ - ಈ ಎಲ್ಲದರಲ್ಲಿಯೂ ಅದು ತನ್ನ ಮೂಲ ಸ್ವರೂಪಕ್ಕೆ ಹತ್ತಿರವಾಗಿಯೇ ಇದೆ.

ಈ ಎರಡೂ ಪಾಯಗಳಲ್ಲಿ ಕಪ್ಪು-ಬಿಳುಪಿನಷ್ಟು-ವ್ಯತ್ಯಾಸ ತಲೆದೋರಲು ಇರಬಹುದಾದ ಕಾರಣಗಳನ್ನು ಇಲ್ಲಿ ಊಹಿಸಬಹುದಾಗಿದೆ. ಅದು ಸಂಪೂರ್ಣವಾಗಿ ಪ್ರಾದೇಶಿಕತೆಯ ಪ್ರಭಾವ. ಯಾವುದೇ ಕಲೆ ಉಳಿಯುವುದು, ಬೆಳೆಯುವುದು ಅಲ್ಲಿಯ ಜನರ ಪ್ರೋತ್ಸಾಹದಿಂದ ಹಾಗೂ ಆರ್ಥಿಕ ನೆರವಿನಿಂದ. ಜೊತೆಗೆ ಭೌಗೋಳಿಕ ಪ್ರಭಾವವೂ ಕಾರಣವಾಗಿರುತ್ತದೆ. ಈ ಎಲ್ಲ ನೆರವೂ ಪಡುವಲ ಪಾಯಕ್ಕೆ ಸಮೃದ್ಧವಾಗಿ ದೊರೆಯಿತು. ಪದವೀಧರರು ಹಾಗೂ ಇನ್ನಿತರ ಆಸಕ್ತರು ಅದರಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡರು. ವೇಷ ಹಾಕಿ ಕುಣಿದರು. ಅದರಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಮುಂದಾದರು. ಕಲಿತ ವರ್ಗ ಅದರಲ್ಲಿ ಭಾಗವಹಿಸಿದ್ದರಿಂದ ಕಲೆಯಲ್ಲಿ ಹೊಸ ಹೊಸ ಆಯಾಮಗಳು ತಲೆದೋರಲಾರಂಭಿಸಿದುವು. ಪೈಪೋಟಿ ತಲೆದೋರಿತು. ಹಣದ ಹೊಳೆ ಹರಿಯಲಾರಂಭಿಸಿತು. ಕಲೆ ಜೀವಂತವಾಯಿತು. ಶ್ರೀಮಂತಿಕೆಯನ್ನೂ ಪಡೆಯಿತು. ಅಲ್ಲಲ್ಲಿ ಯಕ್ಷಗಾನ ತರಬೇತಿ ಕೇಂದ್ರಗಳು ಹುಟ್ಟಿಕೊಂಡುವು. ಯುವಕರಿಗೆ ತರಬೇತಿ ಆರಂಭವಾಯಿತು. ಆದರೆ ಮೂಡಲಪಾಯಕ್ಕೆ ಇವಾವುವೂ ಇಲ್ಲವಾಯಿತು. ಅಲ್ಲಿ ಪಡುವಲಪಾಯ ಪ್ರತಿದಿನ ನಡೆಯುವ ಕಾಯಕವಾದರೆ, ಇಲ್ಲಿ ಮೂಡಲಪಾಯ ವರ್ಷಕ್ಕೆ

ಒಂದು ಬಾರಿಯೋ ಅಥವಾ ಎರಡು ಬಾರಿಯೋ ನಡೆಯುವ ಪರಿಸ್ಥಿತಿಯನ್ನು ಪಡೆಯಿತು. ಹಾಗಾಗಿ ಕಲೆ ಸೊರಗಿತು, ಕಲಾವಿದ ಸೊರಗಿದ. ಆದರೂ ಅದು ಉಸಿರಾಡುತ್ತಿದೆ. ಇತ್ತೀಚೆಗೆ ಅಲ್ಲಿ ಇಲ್ಲಿ ಅದು ಚೇತರಿಸಿಕೊಳ್ಳುವ ಆಶಾಭಾವನೆಯನ್ನು ಹುಟ್ಟಿಸುವ ಸಂದರ್ಭಗಳು ತಲೆದೋರಿವೆ. ಸ್ವಲ್ಪಮಟ್ಟಿಗೆ ಕಲಿತ ಯುವಕರು ಈ ರಂಗವನ್ನು ಪ್ರವೇಶಿಸುತ್ತಿದ್ದಾರೆ. ಅವರುಗಳಿಗೆ ಹೆಚ್ಚೆಚ್ಚು ಅವಕಾಶಗಳು ದೊರೆತರೆ ಕಲೆಯು ಜೀವಂತವಾಗಿ ಉಳಿಯಲು ಸಾಧ್ಯವಾಗುತ್ತದೆ.

ಜನಪದ ರಂಗಭೂಮಿಯ ಇನ್ನೆರಡು ಪ್ರಕಾರಗಳಾದ - ಸೂತ್ರದ ಗೊಂಬೆ ಆಟ ಮತ್ತು ತೊಗಲುಗೊಂಬೆ ಆಟಗಳೂ ಕರ್ನಾಟಕದ ಪ್ರತಿಷ್ಠಿತ ಕಲೆಗಳಾಗಿಯೇ ಬೆಳೆದು ಬಂದಿವೆ. ಇವು ಮಾನವ ರಂಗಭೂಮಿಯ ಪಡಿನೆರಳೇ ಆದರೂ, ತಮ್ಮ ತಮ್ಮ ವಿಶಿಷ್ಟ ಸ್ವರೂಪದಿಂದಾಗಿ ಜನಾಕರ್ಷಣೀಯವಾಗಿವೆ. ಇವುಗಳಲ್ಲಿ ಸೂತ್ರದಗೊಂಬೆ ಆಟ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಪ್ರಚಲಿತವಿದ್ದರೆ, ತೊಗಲುಗೊಂಬೆ ಆಟ ಕರಾವಳಿ ಪ್ರದೇಶವನ್ನು ಹೊರತುಪಡಿಸಿ ಮಿಕ್ಕೆಲ್ಲ ಭಾಗಗಳಲ್ಲಿಯೂ ಕಂಡುಬರುತ್ತದೆ.

ಸೂತ್ರದಗೊಂಬೆಯಾಟ ಎಲ್ಲ ರೀತಿಯಿಂದಲೂ, ಮಾನವ ರಂಗಭೂಮಿಯಂತೆಯೇ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಪಡೆದುಕೊಂಡಿರುವ ಕಲೆ: ಅಲ್ಲಿಯ ಮನುಷ್ಯರಿಗೆ ಬದಲಾಗಿ ಇಲ್ಲಿ ಗೊಂಬೆಗಳು ಕಾಣಿಸಿಕೊಳ್ಳುತ್ತವೆ ಹಾಗೂ ಅದಕ್ಕೆ ತಕ್ಕ ರಂಗಸಜ್ಜಿಕೆಯನ್ನು ಪಡೆದಿರುತ್ತದೆ ಎಂಬುದನ್ನು ಬಿಟ್ಟರೆ, ಮಿಕ್ಕಂತೆ ಆಯಾಭಾಗದ ಮಾನವ ರಂಗಭೂಮಿಯ ಪ್ರತಿರೂಪವೇ ಇದೆನ್ನಬಹುದು. ಸೂತ್ರದಗೊಂಬೆಯಾಟ ನಿಜಕ್ಕೂ ಅಪೂರ್ವವಾದ ಜನಪದ ಕಲೆ. ಕಲಾವಿಧಾನ ಕೈಚಳಕ ಇಲ್ಲಿ ಮೆಚ್ಚುವಂತಹುದು. ಗೊಂಬೆಗಳಿಗೆ ಜೀವ ತುಂಬುವವನು ಅವನೇ. ಅದನ್ನೊಂದು ಮಾಯಾಲೋಕವಾಗಿ ಸೃಷ್ಟಿಸುವವನು ಅವನೇ. ಮರೆಯಲ್ಲಿ ನಿಂತು ಕೇವಲ ಸೂತ್ರಗಳ ನೆರವಿನಿಂದ ಅವನು ತೋರುವ ತಂತ್ರ ಅತ್ಯಪೂರ್ವ.

ತೊಗಲುಗೊಂಬೆ ಆಟ ಕರಾವಳಿ ಪ್ರದೇಶ ಹೊರತಾಗಿ ಕಂಡುಬರುವ ಮತ್ತೊಂದು ಬಗೆಯ ತಂತ್ರಪ್ರಧಾನ ಕಲೆ. ಸೂತ್ರದ ಗೊಂಬೆಗಳನ್ನು ಯಾರು ಬೇಕಾದರೂ ಆಡಿಸಬಹುದಾದರೆ, ಬಯಲಾಟದಲ್ಲಿ ಯಾರು ಬೇಕಾದರೂ ವೇಷ ಹಾಕಿ ಕುಣಿಯಬಹುದಾದರೆ ಇಲ್ಲಿ ಮಾತ್ರ ಒಂದು ನಿರ್ದಿಷ್ಟ ಜನಾಂಗ ಈ ಕಲೆಯನ್ನು ಹಮ್ಮಿಕೊಂಡು ಉಳಿಸಿಕೊಂಡು ಬಂದಿದೆ. ಅದು ಅವರಿಗೊಂದು ವೃತ್ತಿ. ಅದರಿಂದಲೇ ಅವರ ಬದುಕು. ಇವರನ್ನು 'ಕಿಳ್ಳೇಕ್ಯಾತರು' 'ಗೊಂಬೆರಾಮರು' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಸಾಮಾನ್ಯವಾಗಿ ಒಂದೇ ಕುಟುಂಬಕ್ಕೆ ಸೇರಿದ - ಗಂಡಸರು, ಹೆಂಗಸರು, ಮಕ್ಕಳು ಎಲ್ಲಾ ಕೂಡಿಯೇ ಪ್ರದರ್ಶನವನ್ನು ನಡೆಸುತ್ತಾರೆ. ಇವರು ಒಂದೆಡೆ ನೆಲೆಯಾಗಿ ನಿಲ್ಲುವವರಲ್ಲ; ಅಲೆಮಾರಿಗಳು. ಒಂದು ನಿರ್ದಿಷ್ಟ ಪ್ರದೇಶವನ್ನು ತಾವೇ ಹಂಚಿಕೊಂಡು ವರ್ಷದಲ್ಲಿ ಹಲವು ಬಾರಿ ಆ ಪ್ರದೇಶದಲ್ಲಿಯೇ ಸುತ್ತಾಡುತ್ತಾರೆ. ಮನರಂಜನೆಯನ್ನು ನೀಡಿ ತಮ್ಮ ಹೊಟ್ಟೆಪಾಡನ್ನು ತೀರಿಸಿಕೊಳ್ಳುತ್ತಾರೆ.



ಅವರನ್ನು ಸಾಕುವ ಹೊಣೆಗಾರಿಕೆಯೂ ಆಯಾ ಪ್ರದೇಶದ ಜನರಿಗೆ ಸೇರಿದ್ದು. ಏಕೆಂದರೆ ಜನಪದ ಕಲೆಗಳು ಕೇವಲ ಕಲೆಗಳಾಗಿಯಷ್ಟೇ ಉಳಿದಿಲ್ಲ, ಅವು ಜನಪದ ಸಂಸ್ಕೃತಿಯ ಮುಖ್ಯವಾಹಿನಿಯಾಗಿ ಹರಿದು ಬಂದಿವೆ. ಅವರ ಬಾಳಿನಲ್ಲಿ ಬೆರೆತು ಬಂದಿವೆ. ಹತ್ತಾರು ನಂಬಿಕೆ ಸಂಪ್ರದಾಯಗಳಿಗೆ ಕಾರಣವಾಗಿವೆ. ಗೊಂಬೆಆಟ ಆಡಿಸಿದರೆ ಮಳೆಬರುತ್ತದೆ, ದನಗಳಿಗೆ ರೋಗಬರುವುದಿಲ್ಲ ಮುಂತಾದ ನಂಬಿಕೆಗಳಿಗೆ ಅವು ಇಂಬಾಗಿವೆ. ನಮ್ಮೆಲ್ಲ ಜನಪದ ಕಲೆಗಳಿಗೂ ಇಂದಿಗೂ ಜೀವಂತವಾಗಿ ಉಳಿದು ಬಂದಿರುವುದಕ್ಕೆ ಇಂತಹ ಕಾರಣಗಳು ಹಲವು.

ತೊಗಲುಗೊಂಬೆಯ ಕಲಾವಿದರ ಕೈ ಚಳಕ ಅದ್ಭುತ ರೀತಿಯದು. ಆ ಚಮತ್ಕಾರಕ್ಕೆ ಮನಸೋಲದವರಿಲ್ಲ. ಇಲ್ಲಿಯ ಕಥಾವಸ್ತು ರಾಮಾಯಣ - ಮಹಾಭಾರತದ್ದೇ ಆದರೂ, ಅದರಲ್ಲಿ ಬಳಸುವ ಅದರ ಭಾಷೆ ಮಾತ್ರ ಮಿಶ್ರರೂಪದ್ದು. ಮರಾಠಿ, ತೆಲುಗು, ಕನ್ನಡ ಹಾಗೂ ಮಧ್ಯೆ ಮಧ್ಯೆ ಉರ್ದು ಭಾಷೆಯನ್ನು ಅವರು ಧಾರಾಳವಾಗಿ ಬಳಸುತ್ತಾರೆ. ಅಲ್ಲದೆ, ಸೂತ್ರದ ಗೊಂಬೆ ಆಟದಂತೆ ಇಲ್ಲಿಯ ಸಂಭಾಷಣೆ ಗಂಭೀರವಾಗಿರದೆ, ಅಶ್ಲೀಲ ಅಲ್ಲಲ್ಲಿ ತಲೆ ಹಾಕುವುದೂ ಉಂಟು. ಇದು ಪ್ರೇಕ್ಷಕರನ್ನವಲಂಬಿಸಿ ರೂಪುಗೊಳ್ಳುವ ಸಂಭಾಷಣೆ ಆದರೆ, ಅದರದ್ದೇ ಒಂದು ವೈಖರಿ-ವೈಶಿಷ್ಟ್ಯ.

ಕರ್ನಾಟಕದ ತೊಗಲುಗೊಂಬೆ ಆಟದಲ್ಲಿ ಎರಡು ಬಗೆಯ ಗೊಂಬೆಗಳು ಕಾಣಸಿಗುತ್ತವೆ. ಒಂದು, ಆಳೆತ್ತರದ ಗೊಂಬೆಗಳು, ಮತ್ತೊಂದು ೨½ ಯಿಂದ ೩ ಅಡಿ ಎತ್ತರದ ಗೊಂಬೆಗಳು. ಅದಕ್ಕೆ ತಕ್ಕ ರಂಗಸಜ್ಜಿಕೆಯೂ ಸಿದ್ಧಗೊಳ್ಳುತ್ತವೆ. ಸಣ್ಣ ಗೊಂಬೆಗಳನ್ನು ಕುಳಿತು ಕುಣಿಸಿದರೆ, ದೊಡ್ಡ ಗೊಂಬೆಗಳನ್ನು ನಿಂತು ಕುಣಿಸುತ್ತಾರೆ.

ಕರ್ನಾಟಕ ಜನಪದ ರಂಗಭೂಮಿಯ ಈ ಮೂರು ಪ್ರಮುಖ ಪ್ರಕಾರಗಳು ಇಂದಿಗೂ ತಮ್ಮ ಪ್ರಾದೇಶಿಕ ವೈವಿಧ್ಯಗಳೊಂದಿಗೆ ಜೀವಂತಿಕೆಯನ್ನು ಪಡೆದು ಉಳಿದು ಬಂದಿವೆ.

ಕರ್ನಾಟಕದ ಜನಪದ ರಂಗಭೂಮಿಯ ಪ್ರಕಾರಗಳಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಲಿತವಿರುವ 'ಸಣ್ಣಾಟ'ಗಳದ್ದೇ ಒಂದು ವೈಶಿಷ್ಟ್ಯ. ವೈವಿಧ್ಯಮಯವಾದ ವಸ್ತುಗಳನ್ನೊಳಗೊಂಡು ರೂಪಿತನಾದ ಈ ಪ್ರಕಾರಗಳು ಸಂದರ್ಭದ ಒತ್ತಡದಿಂದ ಕಾಲಾನಂತರದಲ್ಲಿ ಹುಟ್ಟಿಕೊಂಡವುಗಳು. ಪೌರಾಣಿಕ, ಐತಿಹಾಸಿಕ, ಭಕ್ತಿ, ಸಾಮಾಜಿಕ ವಸ್ತುಗಳನ್ನೊಳಗೊಂಡು ಸೃಷ್ಟಿಯಾಗಿರುವ ಈ ನಾಟಕಗಳು ಜಾನಪದ - ಶಿಷ್ಟಗಳ ಮಧ್ಯಂತರದ ಸ್ಥಿತಿಯವು. ಇವುಗಳಲ್ಲಿ ಸಣ್ಣಾಟಗಳ 'ರಾಜ' ಎಂದೇ ಪ್ರಸಿದ್ಧಿ ಪಡೆದಿರುವ 'ಶ್ರೀ ಕೃಷ್ಣ ಪಾರಿಜಾತ' ಉತ್ತರ ಕರ್ನಾಟಕ ಭಾಗದ ಅತ್ಯಂತ ಜನ ಪ್ರಿಯ ಕಲೆ ಅದರ ಹೆಸರನ್ನು ಕೇಳದವರಾಗಲಿ, ಪ್ರದರ್ಶನವನ್ನು ನೋಡದವರಾಗಲಿ ಅಲ್ಲಿಲ್ಲ. ಅದರಂತೆಯೇ 'ಸಂಗ್ಯಾ-ಬಾಳ್ಯ' ಕೂಡ ಅಲ್ಲಿಯ ಮತ್ತೊಂದು ಜನಾಕರ್ಷಣೀಯ ಕಲೆ.

ಸಾಹಿತ್ಯ, ಕಲೆಗಳಂತೆಯೇ ಕರ್ನಾಟಕ ಜಾನಪದ, ಜಾನಪದದ ಇನ್ನಿತರ ಹತ್ತು ಹಲವು ಪ್ರಕಾರಗಳಿಂದ ಶ್ರೀಮಂತವಾಗಿದೆ. ವೃತ್ತಿ ಸಂಬಂಧವಾದ ಕಲೆಗಾರಿಕೆಗಳು ಜನಪದರ ಅದ್ಭುತ ಪ್ರತಿಭೆಗೆ ಹಾಗೂ ಕೈಚಳಕಕ್ಕೆ ಸಾಕ್ಷಿಯಾಗಿವೆ. ಮಡಿಕೆ ಮಾಡುವುದು, ಬುಟ್ಟಿ ಎಣೆಯುವುದು, ಬಟ್ಟೆ ನೆಯ್ಯುವುದು, ಮರದ ಕೆತ್ತನೆ, ಆಭರಣಗಳ ತಯಾರಿ, ಕಲ್ಲು-ಮಣ್ಣುಗಳಲ್ಲಿ ವಿಗ್ರಹಗಳನ್ನು ಸೃಷ್ಟಿಸುವುದು ಇತ್ಯಾದಿ ಇತ್ಯಾದಿಗಳ ಕಲಾ ವೈಭವ ಅಪೂರ್ವ ರೀತಿಯದು. ಇಲ್ಲೆಲ್ಲ ಕಲೆ ಮತ್ತು ಬದುಕು ಒಂದಾಗಿರುವುದನ್ನು ಕಾಣಬಹುದು. ಅದರಲ್ಲಿ ಅವರು ಜೀವನವನ್ನು ಕಂಡುಕೊಂಡ ಬಗೆ ವ್ಯಕ್ತವಾಗುತ್ತದೆ.

ಇವುಗಳಂತೆಯೇ 'ಜನಪದ ಆಟ'ಗಳದ್ದೂ ಒಂದು ವೈಶಿಷ್ಟ್ಯ. ಗ್ರಾಮೀಣ ಕ್ರೀಡೆಗಳ ಬಗೆಯೇ ಬೇರೆ. ಲಗ್ಗೇ ಚೆಂಡಾಟ, ಚಿಣ್ಣಿದಾಂಡು, ಮರಕೋತಿ ಆಟ, ಟೋಪಿ ಆಟ, ಜೂಟಾಟ, ಕಣ್ಣುಮುಚ್ಚಾಲೆ ಆಟ, ಅಳುಗುಣಿಮನೆ ಆಟ, ಕುಂಟಾಟ, ಚೌಕಾಬಾರ, ಬುಗುರಿ ಆಟ, ಕೋಲಾಟ, ಕುಸ್ತಿ ಇವಲ್ಲದೆ ಹಲವು ಬಗೆಯ ಮಕ್ಕಳ ಆಟಗಳು ಜನಪದ ಜೀವನದ ಪ್ರತಿಬಿಂಬವೇ ಆಗಿವೆ. ಇವು ಮೇಲ್ನೋಟಕ್ಕೆ ಕೇವಲ ಆಟಗಳಾಗಿ ಕಂಡರೂ, ಅವುಗಳು ಹಿಂದಿನ ಪ್ರೇರಣೆ ಹಾಗೂ ಅಂತರ್ಗತವಾಗಿರುವ ಆಶಯಗಳು ಅಧ್ಯಯನ ಯೋಗ್ಯವಾದುವು.

ಜನಪದರ ಭಾಷೆ, ನಂಬಿಕೆ, ಸಂಪ್ರದಾಯ, ಆಚರಣೆ, ವೇಷಭೂಷಣ, ಅಚುಗೆ ಸಂಪ್ರದಾಯಗಳು, ಗಾದೆ, ಒಗಟು ಮುಂತಾದವುಗಳ ಸಂಗ್ರಹ - ಅಧ್ಯಯನ ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ. ಅವುಗಳ ತಲಸ್ಪರ್ಶಿ ಅಧ್ಯಯನದಿಂದ ಜನಪದ ಸಂಸ್ಕೃತಿಯ ಬಳಪದರಗಳನ್ನು ಗುರುತಿಸಬೇಕಾಗಿದೆ.

ಕರ್ನಾಟಕದ ಜಾನಪದ ಹೆಚ್ಚು ವ್ಯಾಪಕವಾದುದು. ಅದರ ಎತ್ತರದಂತೆಯೇ ಅದರ ಬಿತ್ತರವೂ ಗಮನಾರ್ಹವಾಗಿದೆ. ಆದರೆ ಅದನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕಾಗಿದೆ. ವಿಶ್ವವಿದ್ಯಾನಿಲಯಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಈ ಕಾರ್ಯದಲ್ಲಿ ಅಡಿಯಿಟ್ಟಿವೆಯಾದರೂ. ಕರ್ನಾಟಕ ಜಾನಪದ ಟ್ರಸ್ಟ್, ಜನಪದ ರಂಗ ಕಲೆಗಳ ಅಧ್ಯಯನ ಕೇಂದ್ರಗಳಂತಹ ಸಂಸ್ಥೆಗಳ ಸಂಖ್ಯೆಯೂ ಹೆಚ್ಚಾಗಬೇಕಾಗಿದೆ. ಎಲ್ಲಕ್ಕಿಂತ ವಿಶೇಷವಾಗಿ ಫಿನ್‌ಲೆಂಡಿನಲ್ಲಿ ಬಹಳ ಹಿಂದೆಯೇ ನಡೆದ ವ್ಯವಸ್ಥಿತವಾದ ಕಾರ್ಯ ಹಾಗೂ ಸಾಮಾಜಿಕ ಎಚ್ಚರ ಎಲ್ಲೆಡೆಯೂ ಉಂಟಾಗುವ ಅಗತ್ಯವಿದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಜಾನಪದ ಜಾಗೃತಿಯನ್ನುಂಟುಮಾಡಿ ಸ್ವಪ್ರೇರಣೆಯಿಂದ ಕಂಡದ್ದನ್ನು ಕೇಳಿದ್ದನ್ನು ಸಂಗ್ರಹಿಸಿ ಒಂದು ಮೂಲ ಕೇಂದ್ರಕ್ಕೆ ದಾಖಲಾತಿಗಾಗಿ ಕಳುಹಿಸುವ ವ್ಯವಸ್ಥೆ ಭರದಿಂದ ಆಗಬೇಕಾಗಿದೆ. ಈ ಕಾರ್ಯ ಶೀಘ್ರವಾಗಿ ಆದಷ್ಟೂ ಕೈ ತಪ್ಪಿ ಹೋಗುತ್ತಿರುವ ಅದೆಷ್ಟೋ ಜಾನಪದ ಸಂಪತ್ತು ಕೈಸೇರಿದಂತಾಗುತ್ತದೆ.



# ಜಾನಪದ ಮುನ್ನೋಟ

ಡಾ. ದೇವೇಂದ್ರ ಕುಮಾರ ಹಕಾರಿ

ಅ. ೧೮೪೬ ಜಾನಪದ ಅಧ್ಯಯನಕ್ಕೆ ನಾಂದಿ ಹಾಡಿದ ಕಾಲಾವಧಿ 'Folklore' ಎಂಬ ಪದವನ್ನು ಸೃಷ್ಟಿಸಿದ ವ್ಯಕ್ತಿ ವಿಲಿಯಮ್ ಜೆ ಥಾಮ್ಸನ್. ಅದುವರೆಗೂ ಪ್ರಾಚ್ಯವಸ್ತು ಸಂಶೋಧನೆಗೆ ಸಂಬಂಧಿಸಿದ ವಿವಿಧ ವಿಷಯ ಸಾಮಗ್ರಿ ಕುರಿತಾದ ಅನೇಕ ಅರ್ಥಗಳನ್ನು ಒಳಗೊಂಡ ಮತ್ತು ತಲೆತಲಾಂತರ ಮೌಖಿಕ ಪರಂಪರೆಯ ಮೂಲಕ ಸಾಗಿಬಂದ ಬದುಕಿನ ವಿವಿಧ ಮಗ್ಗಲುಗಳ ಜಾಣ್ಮೆ, ಕುಶಲತೆ, ಅರಿವು ಅನುಭವಗಳನ್ನು ಸೂಚಿಸುವ ಒಂದು ಸಮರ್ಥ ಪದಸಮುಚ್ಚಯ ಈ ನಿಟ್ಟಿನ ಸಂಶೋಧಕರಿಗೆ ಲಭ್ಯವಾಗಿರಲಿಲ್ಲ. ವಿಲಿಯಮ್ ಜೆ. ಥಾಮ್ಸನ್ ಅವರು ಟಂಕಿಸಿದ ಈ ಪದ ವಿವಿಧ ರಾಷ್ಟ್ರಗಳ ಈ ಕ್ಷೇತ್ರದ ವಿದ್ವಾಂಸರ ಗಮನ ಸೆಳೆದದ್ದು, ಬೇರೆ ಬೇರೆ ಸಂದರ್ಭಗಳಲ್ಲಿ ಚರ್ಚಿತವಾದದ್ದು ಒಂದು ಚರಿತ್ರೆಯೇ ಆಗಿದೆ; ಮತ್ತು ಬಹುಶಃ ಇಂದಿಗೂ 'ಫೋಕಲೋರ್' ಪದದ ಅರ್ಥಸಮುಚ್ಚಯ ಕುರಿತು ಚರ್ಚೆ ನಡೆಯುತ್ತಲೇ ಇದೆ. 'ಫೋಕಲೋರ್ ಪದಸೃಷ್ಟಿಯ ಸು. ೧೦೮ ವರ್ಷಗಳ ಬಳಿಕ (೧೯೫೩-೫೪) ಕೂಡ ಇದರ ಚರ್ಚೆಯಾಗಿರುವುದು ಈ ನಿಟ್ಟಿನಲ್ಲಿ ಒಂದು ಉದಾಹರಣೆ. ವಿಲಿಯಮ್ ಭಾಸ್ಕಮ್. ಮತ್ತು ಪಿ.ಎಸ್. ಬೇಯಾರ್ಡ್ ಎನ್ನುವ ಜಾನಪದ ವಿದ್ವಾಂಸರ ನಡುವೆ ನಡೆದ ಚರ್ಚೆ ತುಂಬ ಸ್ವಾರಸ್ಯಕರ ಮತ್ತು ಅರ್ಥಪೂರ್ಣ. ಜನಪದ ಪುರಾಣ ಐತಿಹ್ಯಗಳ ವಿಶ್ವಕೋಶಕ್ಕೆ ಬರೆದ 'ವರ್ಬಲ್ ಆರ್ಟ್' - ಶಾಬ್ದಿಕಕಲೆ - ಲೇಖನದಲ್ಲಿ ವಿಲಿಯಮ್ ಬಾಸ್ಕಮ್ 'ಜಾನಪದ'ವನ್ನು ಶಾಬ್ದಿಕ ಕಲೆ ಎಂದು ವಿವರಿಸಬಹುದು ಮುಂತಾಗಿ ಹೇಳಿದ್ದರು. ಈ ಅಭಿಪ್ರಾಯವನ್ನು ಎಸ್. ಪಿ. ಬೇಯಾರ್ಡ್ ತಮ್ಮ 'The Materials of Folklore' - ಜಾನಪದದ ಸಾಮಗ್ರಿಗಳು - ಎನ್ನುವ ಪ್ರಬಂಧದಲ್ಲಿ ಕೆಲವು ಖಚಿತ ಕಾರಣಗಳೊಂದಿಗೆ ನಿರಾಕರಿಸಿದರು. ಅದನ್ನು ಗಮನಿಸಿದ ವಿಲಿಯಮ್ ಬಾಸ್ಕಮ್ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡು ಶಾಬ್ದಿಕ ಕಲೆ - ಜಾನಪದ - ಸಂಸ್ಕೃತಿಯ ಒಂದು ಅಂಶವೆಂದು ಹೇಳಲಾಗಿತ್ತೇ ಹೊರತು ಅಖಂಡ ಸಂಸ್ಕೃತಿಯ ರೂಪ ಎಂದು ಭಾವಿಸಲಾಗಿರಲಿಲ್ಲ ಎಂದು ವಿವರಿಸಿ, 'ಜಾನಪದ ಅಂದರೆ ಜನಪದ ಕಲಿಕೆ; ಅದು ಎಲ್ಲ ಶಬ್ದ, (ಮೌಖಿಕ) ಉದಾಹರಣೆ ಅಥವಾ ಅನುಕರಣೆಯ ಮುಖಾಂತರ ಕಲಿತ ಕೌಶಲ ತಂತ್ರಗಳು, ಜೊತೆಗೆ

ಹುಟ್ಟಿಕೊಂಡ ಕರಕುಶಲಕಲೆಗಳು ''ಎಲ್ಲ ಜ್ಞಾನವನ್ನು ಒಳಗೊಂಡಿರುತ್ತದೆ. ಮುಂತಾಗಿ ಸ್ಪಷ್ಟೀಕರಣ ನೀಡಿದರು. ಹೀಗೆ Folk lore ಪದದ ವ್ಯಾಕ್ಯ ವಿವರಣೆಗಳು ಮುಂದುವರೆದು ಅದು ಜನಪದ ಬದುಕಿನ ಎಲ್ಲ ಬಗೆಯ ಅನುಭವಗಳ ಸಮುಚ್ಚಯ ರೂಪ ಎಂದು ಮುಂತಾಗಿ ಆಲೋಚಿಸಲಾಗುತ್ತದೆ. ಮೌಖಿಕ ಪರಂಪರೆಯ ಕಲಿಕೆಯ ವಿಶೇಷ ಒತ್ತಿನಿಂದ ಮೊದಲುಗೊಂಡು ಆಧುನಿಕ ನಾಗರಿಕತೆ. ವಿವಿಧ ವೈಜ್ಞಾನಿಕ ಅವಿಷ್ಕಾರಗಳ ಪ್ರಭಾವ ಪರಿಣಾಮಗಳ ನಗರೀಕರಣ ಪ್ರಕ್ರಿಯೆಯವರೆಗೂ ಜಾನಪದ ಎನ್ನುವುದು ಇಡೀ ಜೀವನವನ್ನು ಒಳಗೊಳ್ಳುತ್ತದೆ ಇತ್ಯಾದಿ ಚರ್ಚೆ-ಪರಿಚರ್ಚೆಗಳು ನಡೆಯುತ್ತಲೇ ಇವೆ. ಈ ಪರ್ಯಾಲೋಚನೆಯಲ್ಲಿ ಮ್ಯಾಕ್ಸ್‌ಮುಲ್ಲರ, ಅಚರ್ಟರ ಟೇಯಲರ್ ಮೊದಲುಗೊಂಡು ಸ್ಟಿತ್ ಥಾಮ್ಸನ್, ರಿಚರ್ಡ್ ಡಾರ್ಸನ್, ವಿಲಿಯಮ್ ಬಾಸ್ಕಮ್ ವರೆಗೆ ಅನೇಕ ವಿದ್ವಾಂಸರು ತಮ್ಮ ತಮ್ಮ ವಿವಿಧ'ಶಿಸ್ತು'ಗಳ ದೃಷ್ಟಿಕೋನದಿಂದ ಜಾನಪದವನ್ನು ವಿವೇಚಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಸಂವರ್ಧನೆಗೆ ತಮ್ಮ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ.

ಗ್ರಿಮ್ ಸೋದರರರ ಜರ್ಮನ್ ಭಾಷೆಯ ಪ್ರಾಥಮಿಕ ಅನ್ವೇಷಣೆ, ಭಾಷಾ ವಿಜ್ಞಾನಕ್ಕೆ ಅಧೀನವಾದ ಜಾನಪದ ಸಾಮಗ್ರಿಗಳಲ್ಲಿ ಅವರ ಆಸಕ್ತಿ, ಜರ್ಮನ್ ಭಾಷೆ ಉಪಭಾಷೆಗಳ ಭಾಷಾವೈಜ್ಞಾನಿಕ ಅಧ್ಯಯನದಲ್ಲಿ ಅವರು ಅನ್ವಯಗೊಳಿಸಿದ 'ತುಲನಾತ್ಮಕ ವಿಧಾನ', ಮೌಖಿಕ ಪರಂಪರೆಯ ಕಥನ ಕಾವ್ಯಗಳಿಗೂ ಅದರ ಸಂಬಂಧಗಳನ್ನು ಗಮನಿಸಿದ ರಶಿಯಾದ ಜಾನಪದ ತಜ್ಞ ಸುಕೊಲೋವ್ - ಇದೇ ಕ್ರಮವನ್ನು ಪ್ರಾಚೀನ ಮಾನವ ಸಮುದಾಯದ ವಿವಿಧ ಬುಡಕಟ್ಟುಗಳಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಪರಂಪರೆಯ ಮೂಲಕ ಸಾಗಿಬಂದ ಅದ್ಭುತರಮ್ಯ ಕಲ್ಪನೆಯುಳ್ಳ ಕಥನಗಳ ಅಧ್ಯಯನ ವಿಶ್ಲೇಷಣೆಗಳಲ್ಲಿಯೂ ಅನ್ವಯಗೊಳಿಸಬಹುದು ಎಂದು ಕಾರ್ಯಮಾಡಿದ ವ್ಯಕ್ತಿ - ಬಳಿಕ ಗ್ರಿಮ್ ಸೋದರರೇ, ಪುರಾಣಗಳ ಸ್ವರೂಪ ಮತ್ತು ಇತರ ಅಭಿವ್ಯಕ್ತಿ ರೂಪ ಕುರಿತು ಮಾಡಿದ ವೈಚಾರಿಕ ವಿವೇಚನೆ ಅದರಿಂದ ಪ್ರೇರಿತರಾದ ಮಾಕ್ಸ್‌ಮುಲ್ಲರ್ ಮಾಡಿದ ಭಾರತೀಯ ಪುರಾಣಗಳ ಅಧ್ಯಯನದ ಫಲಶ್ರುತಿ 'ಮೈಥಾಲಜಿಕಲ್ ಥಿಯೊರಿ' ಪೌರಾಣಿಕ ಸಿದ್ಧಾಂತ ಹೀಗೆ ಇನ್ನೂ ಈ ಅಧ್ಯಯನ ನಡೆದುಬಂದ ದಾರಿ, ಅದೇ ಒಂದು ಪ್ರತ್ಯೇಕ ವಸ್ತು ವಿಷಯ. ಆದರೆ ಭಾರತೀಯ ಜನಾಂಗ ಸಂಸ್ಕೃತಿಗೆ ಒಂದು ಭವ್ಯ ಪರಂಪರೆಯಿದೆ ಎನ್ನುವ ಮತ್ತು ಈ ಅಗಣಿತ ಸಾಂಸ್ಕೃತಿಕ ವೈವಿಧ್ಯಗಳಲ್ಲಿ ಜನಸಮುದಾಯದ ಶೋಷಣೆ ಯಾತನೆಗಳ ಅಂಶಗಳ ಜೊತೆಗೆ ಧೀರ ದಿಟ್ಟ ಸಂಘರ್ಷದ ಗೆಲುವಿನ ಮಾನವ ವಿಜಯದ ಜನಾಂಗೀಯ ಉತ್ಕರ್ಷಗಳ ಅಂಶಗಳೂ ಸೇರಿವೆ ಎನ್ನುವುದನ್ನು ಅನೇಕ ಪಾಶ್ಚಾತ್ಯ ಪೌರ್ವಾತ್ಯ ವಿದ್ವಾಂಸರು ಗುರುತಿಸಿ ಭಾರತೀಯ ಸಂಸ್ಕೃತಿಗಿರಬಹುದಾದ ಭದ್ರ ನೆಲೆಗಳ ಅನ್ವೇಷಣೆಗೆ ತೊಡಗಿರುವುದು ಗಮನಾರ್ಹ.

ವಸಾಹತುಶಾಹಿಗೆ ಅಧೀನವಾಗಿದ್ದ ಭಾರತಕ್ಕೆ ಒಂದು ಅರ್ಥದಲ್ಲಿ ಪಾಶ್ಚಾತ್ಯರ



ವಿಚಾರಧಾರೆ ಭಾರತೀಯ ವಿದ್ವಾಂಸರ ಅಧ್ಯಯನಕ್ಕೆ ವಿಶಿಷ್ಟ ನೆಲೆಗಳನ್ನು ಒದಗಿಸಿದ್ದು ಅನೇಕ ಮಾನವಿಕಗಳ ಅಧ್ಯಯನಕ್ಕೆ ಪ್ರೇರಣೆ ನೀಡಿದ್ದು, ಒಂದು ಹಂತದ ಸತ್ಯ. ಆದರೆ ಜ್ಞಾನದ ವಿವಿಧ ಶಾಖೆಗಳ ಅಧ್ಯಯನ ವಿಶ್ಲೇಷಣೆಗಳಿಗೆ ಪಾಶ್ಚಾತ್ಯ ಅಧ್ಯಯನದ ಮಾದರಿಗಳನ್ನೇ ಅನುಸರಿಸುತ್ತ ಬಂದ ಭಾರತೀಯ ವಿದ್ವಾಂಸರಿಗೆ ತಮ್ಮದೇ ಆದ ವೈಜ್ಞಾನಿಕ ಅಧ್ಯಯನದ ನೆಲೆಗಳನ್ನು ರೂಪಿಸಿಕೊಳ್ಳುವುದು ಸುಲಭ ಸಾಧ್ಯವಾಗಲಿಲ್ಲ. ಈ ಬಗೆಯ ವಿವಿಧ ಜ್ಞಾನ ಶಾಖೆಗಳಲ್ಲಿ 'ಜಾನಪದ ವಿಜ್ಞಾನ' ಅಥವಾ 'ಜಾನಪದ ಶಾಸ್ತ್ರ'ವೂ ಒಂದು. ಇದೊಂದು 'ಬಹುಶಾಸ್ತ್ರೀಯ ಅಧ್ಯಯನ ಶಾಖೆ' ಎಂದು ತಿಳಿದ ಅನೇಕ ವಿದ್ವಾಂಸರು ವೈಜ್ಞಾನಿಕ ಅವಿಷ್ಕಾರಗಳು, ಔದ್ಯಮೀಕರಣ, ಕೈಗಾರೀಕರಣ, ನಗರೀಕರಣಗಳ ಫಲವಾಗಿ ಕಳೆದುಕೊಂಡ ತಮ್ಮ 'ಗ್ರಾಮೀಣ ಸಂಸ್ಕೃತಿ'ಯ ತಾಯಿಬೇರಾದ 'ಜನಪದ ಪರಂಪರೆ'ಗಳಿಗಾಗಿ ಹುಡುಕಾಡಿದರು; ನಗರೀಕರಣಗೊಂಡ ಔದ್ಯಮಿಕ ಸಂಸ್ಕೃತಿಯ ವಿವಿಧ ಜನಪದ ಸಮುದಾಯಗಳ ಜೀವನದ ರೀತಿ ನೀತಿ, ಭಾಷೆ, ಧರ್ಮ, ನಂಬಿಕೆ, ವಿಧಿಕ್ರಿಯೆ, ಆಚರಣೆ ನಮಗೆ ಸಂಬಂಧ, ನಡವಳಿಕೆ, ಕಮತ ಕೃಷಿ, ಮನೆ ಮಾದರಿಗಳು, ಹೈನುಗಾರಿಕೆ, ವೈದ್ಯ, ಮಂತ್ರ, ಮಾಟ, ಹಾಡು, ರಾಗ ಪರಂಪರೆ, ಕಲೆಗಳು ಇತ್ಯಾದಿ ದೊರೆಯಬಹುದಾದ ಅಗಣಿತ ಜನಪದರೂಪ ಸ್ವರೂಪಗಳನ್ನು ಕುರುಹಿಟ್ಟು ಅನ್ವೇಷಿಸುವ ಗಂಭೀರ ಪ್ರಯತ್ನ ನಡೆಸಿದರು. ಆದರೆ ವಿವಿಧ ಮಾನವಿಕಶಾಸ್ತ್ರ ಪರಿಣತ ಜಾನಪದ ಆಸಕ್ತಿಯುಳ್ಳ ವಿದ್ವಾಂಸರಿಗೆ ಈ ನಿಟ್ಟಿನಲ್ಲಿ ಎದುರಾದದ್ದು ನಿರಾಶೆಯೇ. ಅದಕ್ಕೆ ಕಾರಣ ಮುಖ್ಯವಾಗಿ ನಗರೀಕರಣ; ಔದ್ಯಮಿಕ ಯಾಂತ್ರಿಕ ಜೀವನ ಮತ್ತು ವೈಜ್ಞಾನಿಕ ಸಂಶೋಧನೆ ಅವಿಷ್ಕಾರಗಳಿಂದಾಗಿ ಉಂಟಾದ ವೇಗೋತ್ಕರ್ಷ ಜೀವನಪ್ರಕ್ರಿಯೆಗಳಿಂದಾಗಿ ಉಂಟಾದ ನೈಸರ್ಗಿಕ ಬದಲಾವಣೆ, ಅರಣ್ಯ ವಿನಾಶ, ನದನದಿಗಳ ಒತ್ತುವಿಕೆ, ಮಳೆಗಾಲದ ಅಸಮತೋಲ ನುರಿತ ಮತ್ತು ತೀವ್ರ ಪರಿವರ್ತನೆಗೊಳಗಾಗಿ ಗ್ರಾಮೀಣ ಭಾಗಗಳಿಂದ ದುಡಿದ ಜನಸಮುದಾಯಗಳ ಸಾಮೂಹಿಕ ವಲಸೆ ಇತ್ಯಾದಿ ಉಪಜ ಸಮಸ್ಯೆಗಳು; ಮಹತ್ತ್ವದ್ದಾದ ಏನನ್ನೋ ನಾವು ಕಳೆದು ಕೊಂಡಿದ್ದೇವೆ ಎಂದು ಮಿಡುಕಿ, ಅದರ ಹುಡುಕಾಟದಲ್ಲಿ ತೊಡಗಿದ ಈ ವಿದ್ವಾಂಸರು ಎಲ್ಲೋ ಒಂದು ಬುಡಕಟ್ಟಿನ ವಿರಳ ಹಾಡು, ಅಲೆಮಾರಿಗಳ ಒಂದು ಕುಣಿತ, ಒಂದು ಆಚರಣೆ, ಒಂದು ವೈದ್ಯಕೀಯ ಚಿಕಿತ್ಸಾ ವಿಧಾನ, ಒಂದು ವಿಧಿಕ್ರಿಯೆ, ಪ್ರತಿಯೊಂದನ್ನೂ ಕಂಡು ಅರೇ, ಇದನ್ನೆಲ್ಲ ನಾವು ಕೇಳಿರಲಿಲ್ಲ, ಕಂಡಿರಲಿಲ್ಲ ಇದೆಂಥ ಅದ್ಭುತ: ಎಷ್ಟು ರೋಮಾಂಚಕ ಎಂದು ವಿಸ್ಮಯಗೊಂಡು ಇಂಥಲ್ಲೆಲ್ಲ ತಮ್ಮ ಮೂಲ ಸಂಸ್ಕೃತಿಯ ಬೇರುಗಳನ್ನು ಕಂಡರಿಸುವಾಗ ಇದೆಲ್ಲ ಕೆಲವರಿಗಾದರೂ ಆಗಲೇ ಪಳೆಯುಳಿಕೆಗಾಗಿ ಕಂಡಿತು. ಆದರೆ ಪಳೆಯುಳಿಕೆಯಾದರೂ ಇಂದಿಗೂ ಒಂದಲ್ಲ ಒಂದು ರೀತಿಯಲ್ಲಿ ರೂಪದಲ್ಲಿ ಜೀವಂತವಾಗಿ, ಬದುಕಿನಲ್ಲಿ ಬದುಕಿನ ವಿವಿಧ ಚಟುವಟಿಕೆಗಳಲ್ಲಿ ಪರಿಚಲನೆಗೊಳ್ಳುತ್ತಿದೆ. ಇದು ಪಳೆಯುಳಿಕೆಯಾಗಿರಬಹುದು. ಆದರೆ ಇದಕ್ಕೆ ನಾವಿಲ್ಲ ಎನ್ನುವ ಒಂದು ಒಳನೋಟ ಅಥವಾ ಒಳ ಅರಿವು ಮೂಡಿತು, ಬಹುಶಃ ಇಂಥ

ಕ್ಷಣದಲ್ಲಿಯೇ ಚಾರ್ಲ್ಸ್ ಫ್ರಾನ್ಸಿಸ್ ಪಾಟರ್ ಹೇಳಿದ್ದು 'ಜಾನಪದ ಸಾವನ್ನು ಧಿಕ್ಕರಿಸುವ ಒಂದು ಜೀವಂತ ಪಳೆಯುಳಿಕೆ.

ಈ ಹೇಳಿಕೆ ಭಾರತೀಯ ಜಾನಪದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮಹತ್ವದ್ದು; ಮತ್ತು ಅಧ್ಯಯನಕ್ಕೆ ಹೊಸ ತಿರುವು ನೀಡಿದ್ದು ಎಂದು ನನ್ನ ನಂಬುಗೆ. ಏಕೆಂದರೆ ಭಾರತ ವಿಶೇಷತ: ಕರ್ನಾಟಕದ ದೃಷ್ಟಿಯಿಂದ 'ಜಾನಪದ ಒಂದು ಜೀವಂತ ಪಳೆಯುಳಿಕೆ' ಅಲ್ಲ; ಇದೊಂದು ಜೀವಂತ ಪ್ರಕ್ರಿಯೆ. ಜಾನಪದ ಕೆಲವು ಮುಖ್ಯ ಲಕ್ಷಣಗಳಲ್ಲಿ ಒಂದು ಮೌಖಿಕ ಪಂರಪರೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರುಷಗಳೇ ಕಳೆದ್ದಿದರೂ ಇಂದಿಗೂ ಪ್ರತಿಶತ ಸುಮಾರು ಅರವತ್ತು ಅರುವತ್ತೈದು ಜನ ಅನಕ್ಷರಸ್ಥರು; ಮತ್ತು ಈ ಪ್ರತಿಶತ ಸುಮಾರು. ಅರುವತ್ತು ಜನರ ಸಂವಹನ ಮಾಧ್ಯಮ, ಎಲ್ಲ ಕಲಿಕೆ ಅರಿವಿನ ಮಾಧ್ಯಮ ಮೌಖಿಕ ಪರಂಪರೆಯೇ. ಈ ಕಾರಣದಿಂದ ವಿದೇಶೀ ತತ್ವಸಿದ್ಧಾಂತಗಳನ್ನು ಅವರ ಎಲ್ಲ ಅಧ್ಯಯನದ ಕ್ರಮ ವಿಧಾನಗಳನ್ನು ಭಾರತೀಯ ಅಧ್ಯಯನಕ್ಕೆ ವಿಶೇಷತಃ ಭಾರತೀಯ ಜಾನಪದ ಅಧ್ಯಯನಕ್ಕೆ ಇದ್ದಕ್ಕಿದ್ದ ರೀತಿಯಲ್ಲಿ ಅನ್ವಯಗೊಳಿಸುವುದು ಅಪಾಯಕಾರಿ ಎನ್ನುವ ಮಾತು ಮೇಲುನೋಟಕ್ಕೇ ಸ್ಪಷ್ಟಗೊಳ್ಳುವಂಥದು.

ಭಾರತ ಸ್ವಾತಂತ್ರ್ಯಕ್ಕೆ ಐವತ್ತು ವರ್ಷ ತುಂಬಿದ ಸಂದರ್ಭದಲ್ಲಿಯಂತೂ ಈ ಮಾತನ್ನು ನಾವು ಗಂಭೀರವಾಗಿ ಪರಿಗಣಿಸಿ ನಮ್ಮ ಬದುಕಿನ ಹಿನ್ನೆಲೆಯಲ್ಲಿ ಭಾರತೀಯ ಅಧ್ಯಯನದ ಮಾದರಿಗಳನ್ನು ರೂಪಿಸಿಕೊಳ್ಳಬೇಕಾದುದು ಅತ್ಯಂತ ಅಗತ್ಯ. ಇದರ ಅರ್ಥ ಅನಕ್ಷರಸ್ಥ ಜನಪದ ಸಮುದಾಯಗಳ ಮೌಖಿಕ ಪರಂಪರೆಯೇ ನಮ್ಮ ಸಂಸ್ಕೃತಿಯ ಉನ್ನತ ಆದರ್ಶವೆಂದಾಗಲಿ ಅಥವಾ ಲಿಖಿತ ಪರಂಪರೆಯಲ್ಲಿ ಬದುಕುವ ಜನಸಮುದಾಯ ಸಂಸ್ಕೃತಿಯ ಸ್ವರೂಪವನ್ನು ಕಳೆದುಕೊಂಡಿದೆಯೆಂದಾಗಲಿ ಅಲ್ಲ. ಜೀವನ ನಿರಂತರ ಪರಿವರ್ತನಶೀಲ. ವಿವಿಧ ಜನಸಮುದಾಯಗಳ ಚಲನಶೀಲ ಜೀವದ್ರವ್ಯಗಳಿಂದ ಜೀವಪರ ಜನಪರ ಗುಣಗಳಿಂದಲೇ ಆಯಾ ಜನಾಂಗದ ಸಂಸ್ಕೃತಿ ಸ್ವರೂಪ ನಿರ್ಮಾಣಗೊಳ್ಳುವಂಥದು. ಆದರೆ ಪರಿವರ್ತನೆ, ಚಲನಶೀಲತೆಗಳ ಹೆಸರಿನಲ್ಲೆ ಯಾವುದೇ ಜನಾಂಗ ತನ್ನನ್ನು ತಾನು ಕಳೆದುಕೊಳ್ಳಬಾರದು; ತನ್ನ ಸಾಂಸ್ಕೃತಿಕ ಅನನ್ಯತೆಯನ್ನು 'ತನ್ನತನ'ವನ್ನು-ಅಸ್ಮಿತೆ' ಕಳೆದುಕೊಳ್ಳಕೂಡದು. ನಾಗರಿಕತೆಯ ವಿಕಾಸದ ವಿವಿಧ ಹಂತಗಳಲ್ಲಿ ಪರಿವರ್ತನೆ ಅನಿವಾರ್ಯವಾದ್ದರಿಂದ, ಜಾನಪದ ಸೃಷ್ಟಿಗೆ ಸಂದರ್ಭ ಮತ್ತು ಪರಿಸರ ಕೂಡ ಮಹತ್ವದ ನೆಲೆಯಾಗಿರುವುದರಿಂದ ಬಹು ಸಂಸ್ಕೃತಿಗಳುಳ್ಳ, ಯಾವುದೇ ಸಮುದಾಯ ತನ್ನ ಸಂಸ್ಕೃತಿಯ ಸ್ವರೂಪದಲ್ಲಿ ಕೆಲವನ್ನು ಕಳೆದುಕೊಳ್ಳುವುದು ಮತ್ತೆ ಕೆಲವನ್ನು ಸೇರಿಸಿಕೊಳ್ಳುವುದು ಕೂಡ ಸಹಜವಾಗಿ ಜರುಗುತ್ತದೆ. ಯಾವುದು ಸಹಜ, ಯಾವುದು ಕೃತಕ ಎನ್ನುವುದನ್ನು ಕೂಡ ಗಂಭೀರವಾಗಿ ಪರ್ಯಾಲೋಚಿಸಬೇಕಾಗುತ್ತದೆ.



ತನ್ನ ಪಾರಂಪರಿಕ ಸಂಸ್ಕೃತಿಯ ಜಡಗಟ್ಟಿದ ಜೀವವಿನಾಶಕ ಜೀವನ ವಿರೋಧಿ ಅಂಶಗಳನ್ನು ಧಿಕ್ಕರಿಸಿ ಜೀವಪೋಷಕ ಜೀವನಪರ ಗುಣಗಳನ್ನು ಸ್ವೀಕರಿಸಿ ಸಂಯೋಜಿಸುವ ಪ್ರಕ್ರಿಯೆ ಮುಂದುವರೆಯಬೇಕು. ಈ ಬಗೆಯ ಎಚ್ಚರಿಕೆಯುಳ್ಳ ವಿವಿಧ ಶಾಸ್ತ್ರಗಳ ತಜ್ಞರು ಒಂದೆಡೆ ಸೇರಿ ಅಳಿದುಳಿದ ಜಾನಪದ ಸಾಮಗ್ರಿಗಳನ್ನು ಸಂಗ್ರಹಿಸುವ, ವರ್ಗೀಕರಿಸುವ, ವಿಶ್ಲೇಷಿಸುವ ಮತ್ತು ಅದರ ಇಡೀ ಆಳ ಮತ್ತು ಅಗಲಗಳನ್ನು ಗಮನಿಸಿ ಇಂದು ಅಧ್ಯಯನ ಮುಂದುವರೆಯಬೇಕಾಗಿದೆ. ಈ ದೃಷ್ಟಿಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ 'ಫೋಕಲೋರ್ ನೂರೈವತ್ತು' ಒಂದು ಮಹತ್ವ ಪಡೆದಿದ್ದರೆ, ಜಾನಪದ ಇನ್ನೂ ಜೀವಂತವಾಗಿರುವ ಭಾರತದಲ್ಲಿ - ವಿಶೇಷತಃ 'ಕರ್ನಾಟಕ ಮೂವತ್ತು' ವಿಶೇಷ ಮಹತ್ವ ಪಡೆದಿದ್ದು ಭಾರತದ ವಿವಿಧ ಪ್ರದೇಶಗಳ ಅಗಣಿತ ಬುಡಕಟ್ಟು ಅಲೆಮಾರಿ, ಅರಅಲೆಮಾರಿ, ಕುಲಗುಂಪು ಮುಂತಾದ ವಿಷಯಗಳ ಪರಿಣತರ ಸಮಾವೇಶ ಮಾಡುವವರು ಯಾರು? ಹೇಗೆ? ಕಾರಣ ಈ ನೆಲೆಯ ಸಂಶೋಧನೆ ಇಂದು ನಮಗೆ ಒಂದು ಸವಾಲಾಗಿದೆ. ನಮ್ಮ ಜಾನಪದ ಅಕಾಡೆಮಿ ಇಂಥ ಪ್ರಯತ್ನ ಮಾಡುತ್ತಲೇ ಇದೆ. ಈ ವರ್ಷವಾದರೂ ಅದು ಸಾಧ್ಯವಾದೀತೆ? ಕಾದು ನೋಡಬೇಕು.

ವಾಸ್ತವವಾಗಿ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು ಜನಪದ ಬದುಕನ್ನು ಕುರಿತ ವಿವೇಚನೆ ಕರ್ನಾಟಕದಲ್ಲಿ ೧೯೧೫ರಷ್ಟು ಮೊದಲೇ ಆರಂಭವಾಯಿತು. ದಿನ ಕಳೆದಂತೆ ಈ ನಿಟ್ಟಿನ ಆಲೋಚನೆಗಳು ಗಟ್ಟಿಗೊಳ್ಳುತ್ತ ನಡೆದುವು. ಓ.ಪಿ. ಜೋಷಿ (ಪೇಂಟೆಡ್ ಫೋಕ್‌ಲೋರ್ ಆ್ಯಂಡ್ ಫೋಕ್‌ಲೋರ್ ಪೇಂಟರ್ಸ್ ಆಫ್ ಇಂಡಿಯಾ), ಪಿ. ಸಿ. ರಾಯ್‌ಚೌಧರಿ, ಶಂಕರ್‌ಸೇನ ಗುಪ್ತಾ ಮುಂತಾದವರು ಭಾರತೀಯ ನೆಲೆಯಲ್ಲಿ ಕಾರ್ಯ ಮಾಡುತ್ತ ಬಂದರೆ ಕರ್ನಾಟಕದ ನೆಲೆಯಲ್ಲಿ ವಿನೀತರಾಮಚಂದ್ರರಾಯ, ದೇವುಡು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ, ಕರಾಕೃ, ಗದ್ದಿಗೀಮಠ, ಮಧುರಚೆನ್ನ, ಕಾಪಸೆ ರೇವಪ್ಪ, ಪಿ. ಧೂಲಾ, ಸಿಂಪಿ ಲಿಂಗಣ್ಣ, ಆನಂದಕಂದ, ಅರ್ಚಕ ರಂಗಸ್ವಾಮಿ, ಎಚ್.ಎಲ್. ನಾಗೇಗೌಡ - ಹೀಗೆ ಹತ್ತಾರು ಜನ ಜನಪದ ಹಾಡು ಕಥೆ ಇತ್ಯಾದಿಗಳನ್ನು ಸಂಗ್ರಹಿಸಿ ಪ್ರಕಟಿಸುತ್ತ ಬಂದರು; ವಸ್ತುವಿನ ವೈಭವೀಕರಣ ಈ ಕಾಲದ ವಿಶಿಷ್ಟ ಧೋರಣೆಯಾಗಿತ್ತು. ಇಂಥ ಕಾಲಾವಧಿಯಲ್ಲಿಯೇ 'ಜನಾಂಗದ ಜೀವಾಳ' (ಸಿಂಪಿ ಲಿಂಗಣ್ಣ), 'ನಮ್ಮ ಹಳ್ಳಿ' (ಅರ್ಚಕ ರಂಗಸ್ವಾಮಿ) ಮುಂತಾದ ವಿಭಿನ್ನ ಪುಸ್ತಿಕೆಗಳು ಜಾನಪದ ಅಧ್ಯಯನ ಮುಂದೆ ನಡೆಯಬಹುದಾದ ದಿಕ್ಕಿಗೆ ಸೂಚಿಯಾದುವು. ೧೯೩೦ರ ಅವಧಿಯಲ್ಲಿ ಗರತಿಯ ಹಾಡು ಪ್ರಕಟವಾದ ಬಳಿಕ ಮುಂದಿನ ಮೂರು ದಶಕಗಳವರೆಗೆ ಜನಪದ ಅಧ್ಯಯನವೆಂದರೆ ಹೆಚ್ಚು ಕಡಮೆ ವಿವಿಧ ಪ್ರಕಾರಗಳ ಜನಪದ ಸಾಹಿತ್ಯದ ಅಧ್ಯಯನವೇ ಎನ್ನುವ ಧೋರಣೆ ಮುಂದುವರೆಯಿತು. ಕರ್ನಾಟಕ ವಿಶ್ವವಿದ್ಯಾಲಯದಿಂದ ಗದ್ದಿಗೀಮಠರು ಪಡೆದ ಡಾಕ್ಟರೇಟ್ ಮಹಾಪ್ರಬಂಧ ಈ ನಿಟ್ಟಿನ ಒಂದು ಮಹತ್ವದ ಹೆಜ್ಜೆ. ೧೯೬೦ರ ದಶಕದಲ್ಲಿ ಇದ್ದಕ್ಕಿದ್ದಂತೆ ಕರ್ನಾಟಕದ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಒಂದು ವೈಚಾರಿಕ ಬಿರುಗಾಳಿ

ಬೀಸಿದಂತಾಯಿತು. ಹಾ.ಮಾ.ನಾಯಕರ 'ಜಾನಪದ ಸ್ವರೂಪ' ಪುಸ್ತಿಕೆಯಲ್ಲಿ ಚರ್ಚಿತವಾದ ಅನೇಕ ಸಂಗತಿಗಳು ಈ ಕ್ಷೇತ್ರದ ಅನೇಕ ಆಸಕ್ತರ ಗಮನ ಸೆಳೆದುವು; ಹೊಸ ವಿಚಾರ ಆಲೋಚನೆಗೆ ಅಂಥವರನ್ನು ತೊಡಗಿಸಿದುವು. 'ಜನಪದಾಧಿಗಮ' ಎಂದು ಕೆಲವರು, ಜಾನಪದ ಸಾಹಿತ್ಯ ಜಾನಪದ ಆಚರಣೆ, 'ರಂಗಭೂಮಿ' ಇತ್ಯಾದಿ ಕೆಲವರು, ಜನಪದ ಕಥೆ, ಜನಪದ ಹಾಡು, ಜನಪದ ಕುಣಿತ ನಂಬುಗೆ ಇತ್ಯಾದಿ ಸೇರಿ 'ಜಾನಪದ' ಎಂದು ಕೆಲವರು ಹೀಗೆ ಹತ್ತಾರು ವೇದಿಕೆಗಳಲ್ಲಿ ಚರ್ಚೆ ನಡೆದದ್ದೇ ನಡೆದದ್ದು. ಹೀಗೆ 'ಜನಪದ' 'ಜಾನಪದ' ಕುರಿತು ಚರ್ಚೆ ಪರಿಚರ್ಚೆಗಳು ಇಂದಿಗೂ ಸುಮಾರು ಮೂವ್ವತ್ತು ವರ್ಷಗಳ ನಂತರವೂ ನಡೆಯುತ್ತದೆಯಾದರೂ ಡಾ.ಹಾ.ಮಾ.ನಾಯಕರ 'ಫೋಕ್‌ಲೋರ್' ಎನ್ನುವುದು ಸಂಪ್ರದಾಯ ಕುರಿತ ವಿಜ್ಞಾನ... ನಾಗರಿಕತಾ ದೂರವಾದ ಶಿಷ್ಟ ಸಂಸ್ಕೃತಿಯಿಂದ ದೂರ ಸರಿದ ಪಂರಪರಾಗತ ಬೆಳವಣಿಗೆಯನ್ನು ಪಡೆದ ಜನಸಾಮಾನ್ಯರ ವಿಶಿಷ್ಟ ಸಂಸ್ಕೃತಿಯೇ ಜಾನಪದ' ಎಂದು ವಿವರಣೆ ನೀಡಿದರು.

ಆಧುನಿಕ ನಾಗರಿಕತೆಯು ಜಟಿಲ ಮತ್ತು ಸಂಕೀರ್ಣ ಸ್ವರೂಪದ ಹಿನ್ನೆಲೆಯಲ್ಲಿ 'ಜಾನಪದ' ಅಂಶಗಳನ್ನು ಗುರುತಿಸುವುದು ವಾಸ್ತವವಾಗಿ ತುಂಬ ಕ್ಲಿಷ್ಟ. ಅವಾಢವ್ಯವಾಗಿ ಬೆಳೆಯುತ್ತಿರುವ ವರ್ತಮಾನದ ಸಮುದಾಯಕ್ಕೆ ಸಮುದಾಯಗಳನ್ನೇ ನಿಯಂತ್ರಿಸುವ, ಶ್ರಮಸಂಸ್ಕೃತಿಯ ಕಟ್ಟುಪಾಡು, ಗ್ರಾಮೀಣ ಪ್ರದೇಶದಿಂದ ವಲಸೆ ಬಂದು ಕೊಳಚೆ ಪ್ರದೇಶದಲ್ಲಿ ಹೇಗೋ ಹೇಗೋ ಜೀವನ ಸಾಗಿಸುತ್ತ ತಮ್ಮ ಮೂಲ ಸಂಸ್ಕೃತಿಯ ನೆಲೆಯಿಂದ ದೂರ ಸರಿದರೂ ಅದನ್ನು ಸಂಪೂರ್ಣ ಕಳೆದುಕೊಳ್ಳಲಾಗದ ಒಂದು ವಿಧದ ಅನಾಥ ಕೇಂದ್ರಿತ ಸಂಸ್ಕೃತಿ ಇಂಥ ಪ್ರಸಂಗ ಸಂದರ್ಭ ಪರಿಸರಗಳಲ್ಲಿ ಬದುಕುತ್ತಿರುವ ಕೂಲಿ ಕಾರ್ಮಿಕ ಶ್ರಮಿಕ ವ್ಯಾಪಾರಿ ಇತ್ಯಾದಿ ಗುಂಪುಗಳಲ್ಲಿ ಜಾನಪದ ಪರಂಪರೆಯ ಅಚ್ಚರೂಪಗಳನ್ನು ಕಂಡು ಗುರುತಿಸುವುದು ಸುಲಭವೇನಲ್ಲ.[೧]

ಕೆಲವೊಮ್ಮೆ ಗ್ರಾಮೀಣ ಸಂಸ್ಕೃತಿಯ ಹಾಡು ಹಬ್ಬಹರಿದಿನಗಳ ಆಚರಣೆ ಮುಂತಾದವು ಕಂಡುಬಂದರೂ ಅಂಥವುಗಳ ಮೇಲೆ ನಗರದ ಶಿಷ್ಟಸಂಸ್ಕೃತಿ ತನ್ನ ಛಾಪು ಒತ್ತಿರುತ್ತದೆ; ಆಗ ಅದು 'ನಗರ ಜಾನಪದ' ಎನ್ನುವ ಸಂಕೀರ್ಣರೂಪ ಪಡೆಯುತ್ತದೆ. ಪ್ರಾದಿಮ ಮಾನವ ಸಮುದಾಯಗಳು, ಬುಡಕಟ್ಟುಗಳು ನಗರಕ್ಕೆ ಬಂದು ಸೇರಿದರೂ ಅವು ತಮ್ಮ ನಡವಳಿಕೆ, ಆಚರಣೆಗಳ ವಿಶಿಷ್ಟತೆಗಳನ್ನು ಅಷ್ಟು ಸುಲಭವಾಗಿ ಕಳೆದುಕೊಳ್ಳುವುದಿಲ್ಲವಾದರೂ ಕಾಲಾನಂತರ ಆಧುನೀಕರಣದ ಮೋಡಿಗೆ ಮೋಹಕತೆಗೆ ಒಳಗಾಗಿ ಅಪ್ರಜ್ಞಾಪೂರ್ವಕವಾಗಿ

---

೧. ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಬಂದ ಕಾರ್ಮಿಕ ಗುಂಪಿನ ಒಂದು ಭಾಗದ ನೆಲೆ ವಸತಿಗಳನ್ನು ಗಮನಿಸಿದಾಗ ಒಂದು ಗುಡಿಸ ಬಾಗಿಲಲ್ಲಿ ರಂಗೋಲೆ ಬಾಗಿಲಿಗೆ ಮಾವಿನ ಎಲೆಯಾಕಾರದ ಹಸಿರು ಬಣ್ಣದ ಪ್ಲಾಸ್ಟಿಕ್ ಎಲೆಗಳ ತಳಿರು ಇತ್ಯಾದಿ ಕಂಡರೆ ಅದು ಅವರ ಪರಂಪರೆಯ ಪ್ರಜ್ಞೆಗ ಸಾಕ್ಷಿಯಾಗಿರುತ್ತದೆ.



ಅವರ ಪರಂಪರೆ ಕಣ್ಮರೆಯಾದರೆ ಅಚ್ಚರಿ ಪಡಬೇಕಾಗಿಲ್ಲ. ಈ ಅವಧಿಗೆ ಮೊದಲು ಪ್ರೊ. ದೇ.ಜ.ಗೌ. ಅವರು ತಮ್ಮ ಜನಪದ ಸಾಹಿತ್ಯ ಸಂಗ್ರಹ ಮತ್ತು ವಿಚಾರ ಪ್ರಕಟಣೆಗಳ ಮೂಲಕ ಜಾನಪದ ಕುರಿತು ಗಂಭೀರವಾಗಿ ಆಲೋಚಿಸಿ ಜಾನಪದ ವಸ್ತುಸಂಗ್ರಹಾಲಯದ ಹೊಳಹು ಹಾಕುತ್ತಿದ್ದರು; ಅನೇಕ ಯುವ ಸಹೋದ್ಯೋಗಿಗಳನ್ನು ಈ ಕ್ಷೇತ್ರಕ್ಕೆ ಆಕರ್ಷಿಸಿ ಕಾರ್ಯಪ್ರೇರಣೆ ನೀಡಿದರು. ಭಾಷಾಶಾಸ್ತ್ರದ ಮೂಲಕ ಜಾನಪದವನ್ನು ಕುರಿತು ಆಲೋಚಿಸಿದ ಡಾ.ಹಾ.ಮಾ. ನಾಯಕರ, ಮೇಲೆ ವಿವರಿಸಿದ ಪುಸ್ತಿಕೆ ಪ್ರಕಟವಾದ ಬಳಿಕ ಈಗಾಗಲೇ ಜನಪದದಲ್ಲಿ ಕಾರ್ಯ ಮಾಡುತ್ತಿದ್ದ ಅನೇಕ ಪ್ರತಿಭಾವಂತರು ಜಾನಪದ ಕುರಿತಾಗಿ ವೈಜ್ಞಾನಿಕ ಚರ್ಚೆ ಮಾಡಿದರು; ಮತ್ತು ಇದನ್ನೊಂದು ಪ್ರತ್ಯೇಕ ವ್ಯಾಸಂಗ ವಿಷಯವನ್ನಾಗಿ ರೂಪಿಸುವ ಕನಸು ಕಂಡ ದೇಜಗೌ ಮುಂತಾದವರ ಮಾರ್ಗದರ್ಶನದಲ್ಲಿ ಮುನ್ನಡೆದು ಜಾನಪದ ಅಧ್ಯಯನಕ್ಕೆ ಒಂದು ವೈಜ್ಞಾನಿಕ ನೆಲೆಗಟ್ಟು ಒದಗಿಸಿದರು. ಅಂಥವರಲ್ಲಿ ತಮ್ಮ ಪ್ರತಿಭೆ, ಪರಿಶ್ರಮ ವ್ಯಾಸಂಗ ವಿದ್ವತ್ತುಗಳ ಮೂಲಕ ಜಾನಪದ ಒಂದು ಅಖಿಲ ಭಾರತ ಮನ್ನಣೆ ತಂದುಕೊಟ್ಟ ಒಬ್ಬೊಬ್ಬರಲ್ಲಿ ಜೀಶಂಪ ಉಲ್ಲೇಖನಾರ್ಹ, ಸ್ಮರಣೀಯ. ಜೀಶಂಪ ಸ್ವೋಪಜ್ಞತೆ, ಜನಪದ ಬದುಕಿನ ಬದ್ಧತೆ ಮತ್ತು ಜನಪದ ಸಂಸ್ಕೃತಿಯ ಗಾಢ ಕಾಳಜಿಗಳಿಂದಾಗಿ ತಾವು ೧೯೬೦ರ ವರೆಗೆ ಮಾಡಿದ್ದ ಜನಪದ ಸಾಹಿತ್ಯ ಸಂಗ್ರಹಕಾರ್ಯದ ಜೊತೆಗೆ ಸಾಹಿತ್ಯೇತರ ಜಾನಪದದ ವಿವಿಧ ಆಯಾಮಗಳನ್ನು ತಮ್ಮ ಅಧ್ಯಯನದಲ್ಲಿ ಅಳವಡಿಸಿಕೊಂಡು ಜಾನಪದ ಅನೇಕ ಅಜ್ಞಾತ ಕ್ಷಿತಿಜಗಳನ್ನು - ತಮ್ಮ ನಿರಂತರ ಕಾರ್ಯದ ಮೂಲಕ - ತೆರೆದು ತೋರಿಸಿದರು. ಭಾರತ ಸ್ವಾತಂತ್ರ್ಯಾನಂತರದ ಸುಮಾರು ೩೦ ವರ್ಷಗಳ ವರೆಗೂ ಜನಪದ ಸಾಹಿತ್ಯವನ್ನೇ ಪ್ರಧಾನ ಭೂಮಿಕೆಯಾಗಿಟ್ಟುಕೊಂಡು ಕಾರ್ಯಮಾಡಿದ ಅನೇಕರಲ್ಲಿ ಕೆಲವರು ಜನಪದ ಸಾಹಿತ್ಯ ಸಂಕಲನಗಳ ಪ್ರಕಟಣೆಯಲ್ಲಿಯೇ ಪರ್ಯವಸಾನಗೊಂಡರು ಆದರೆ ಜೀಶಂಪ ಮಾತ್ರ ಅಂತರರಾಷ್ಟ್ರೀಯ ಸ್ತರದ ಮತ್ತು ಭಾರತದ ವಿವಿಧ ಆಲೋಚನೆ, ಚರ್ಚೆ, ತೀರ್ಮಾನಗಳನ್ನು ಗಮನಿಸುತ್ತ ಕರ್ನಾಟಕದ ಜಾನಪದ ಅಧ್ಯಯನದ ಹೊಸ ಸಾಧ್ಯತೆಗಳನ್ನು ಮನಗಾಣಿಸಿದರು. ಜೀಶಂಪ ಕಾರ್ಯವ್ಯಾಪ್ತಿ, ಕಾರ್ಯಗಳ ಹಿರಿಮೆಯನ್ನು ಇಲ್ಲಿ ವಿವರಿಸುವುದು ಅನಗತ್ಯ. ಆದರೆ ಒಂದು ಮಾತನ್ನು ಎತ್ತಿ ಹೇಳಲೇಬೇಕು. ವೃತ್ತಿ ಗಾಯಕರ ಸಾಂಸ್ಕೃತಿಕ ಗುಂಪುಗಳು ನೀಲಗಾರ, ಚೌಡಿಕೆ, ಕಾಡುಗೊಲ್ಲ, ಗೊರವ, ದೊಂಬಿದಾಸ, ಹೆಳವ, ಕಿನ್ನರಿಜೋಗಿ, ಕರಪಾಲ, ಮೈಲಾರ - ಹೀಗೆ ಮುಂತಾದವರನ್ನು ಕುರಿತ ಸಾಂಸ್ಕೃತಿಕ ಮಾನವಶಾಸ್ತ್ರೀಯ ವಿವೇಚನೆ ಮಾಡಿದ ಅವರ ಮಹಾಪ್ರಬಂಧ ವೈಜ್ಞಾನಿಕ ದೃಷ್ಟಿ, ಬಹುಶಾಸ್ತ್ರೀಯ ವಿಧಾನಗಳ ಅಧ್ಯಯನ ವಿಧಾನಗಳು ಅಂದಿನ ಅನೇಕ ಜಾನಪದ ಪರಿಣತರ ಗಮನ ಸೆಳೆದುವು; ಜನಪದ ಆಸಕ್ತರಿಗೆ ಮಾರ್ಗದರ್ಶಿಯಾದುವು. ಅವರ ಮಹಾಪ್ರಬಂಧ ಕುರಿತು ಅವರ ಗುರುಗಳಾದ ಡಾ.ಹಾ.ಮಾ.ನಾಯಕ ಬರೆದ ಒಂದು ಮಾತು ಹೀಗಿದೆ: 'ಮೇಲುನೋಟಕ್ಕೆ ಈ ಕೃತಿ ವೃತ್ತಗಾಯಕರ ಸಂಶೋಧನೆಗೆ ಸಂಬಂಧಿಸಿದ ಕೃತಿಯಂತೆ ಕಂಡರೂ ಅದರಲ್ಲಿ ಸಮಗ್ರ ಜಾನಪದವನ್ನು ಕುರಿತಂತೆ

ಬರೆದಿದ್ದಾರೆ... ಕನ್ನಡ ಜಾನಪದ ಪ್ರಬಂಧಗಳಲ್ಲಿ ಇದು ತುಂಬ ಪ್ರಸಿದ್ಧವಾಗಿದೆ; ವೈಶಿಷ್ಟ್ಯಪೂರ್ಣವಾಗಿದೆ.

ಇನ್ನೊಂದು ಮಾತು ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಎಚ್.ಜೆ. ಲಕ್ಕಪ್ಪಗೌಡರದು. ಜೀಶಂಪ ಎಂಬ ಮೂರು ಅಕ್ಷರಗಳನ್ನು ಕೇಳುತ್ತಲೇ ಜಾನಪದದ ಬಗ್ಗೆ ಅಲ್ಪಸ್ವಲ್ಪ ಅಭಿರುಚಿ, ಆಸಕ್ತಿ ಇರುವವರೆಲ್ಲರ ಮನಸ್ಸಿನಲ್ಲೂ ಸಹ ಅಖಂಡ ಕರ್ನಾಟಕದ ಸಂಪತ್ ಸಮೃದ್ಧ ವೈವಿಧ್ಯಮಯ ಜನಪದ ಗಣಿ ಜೀವತಳೆದು ಎದ್ದುನಿಲ್ಲುತ್ತದೆ. ಮತ್ತೊಂದು ಮಾತು ಜಾನಪದವನ್ನು ಪೂರಕವಾದ ಜಾನಪದ ವಸ್ತುಸಂಗ್ರಹಾಲಯ ಕಟ್ಟಿ ಬೆಳೆಸಿದ ದೇಜಗೌ ಅವರದು. ಜೀಶಂಪ ಅವರನ್ನು ತಮ್ಮ ಆಪ್ತಕಾರ್ಯದರ್ಶಿ ಎಂದು ಆಯ್ದುಕೊಂಡು ಜಾನಪದ ಬದುಕಿನ ಸುದೀರ್ಘ ಹಾದಿಯಲ್ಲಿ ಮುನ್ನಡೆಸಿದ ದೇಜಗೌ '...ಅವರನ್ನು ಸರಿಗಟ್ಟುವ ವ್ಯಕ್ತಿಗಳು ಇಂಡಿಯಾದಲ್ಲಿಯೇ ವಿರಳ. ಆ ಕ್ಷೇತ್ರದ ಎಲ್ಲ ಮುಖಗಳೂ ಮೂಲೆ ಮೊಡಕುಗಳೂ ಅವರಿಗೆ ಸುಪರಿಚಿತ....' ಈ ಮಾತುಗಳು ಜೀಶಂಪ ಅವರ ಜಾನಪದ ಕಾರ್ಯ ಕುರಿತಾಗಿ ಮೂಡಿಬಂದಿದ್ದರೂ ಒಂದು ಅರ್ಥದಲ್ಲಿ ಜೀಶಂಪ ಜೊತೆಗೆ ಅಂದು ಕಾರ್ಯಮಾಡಿದ ಅನೇಕ ಜಾನಪದ ಆಸಕ್ತರ, ಪರಿಣತರ ದೃಷ್ಟಿಧೋರಣೆಗಳನ್ನು ಸೂಚಿಸುತ್ತವೆ. ಇಂಥ ವಿವಿಧ ನೆಲೆಯ ಕಾರ್ಯ-ಜಾನಪದ ಕುರಿತಾದ ಅಲ್ಲೊಂದು ಇಲ್ಲೊಂದು ಜರುಗಿದ ಸಮ್ಮೇಳನಗಳು, ವಿಚಾರಸಂಕಿರಣಗಳು ಜಾನಪದ ಅಧ್ಯಯನದ ಬೆಳವಣಿಗೆಗೆ ಸಹಕಾರಿಯಾದುವು.

೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾಲಯ ಪ್ರತ್ಯೇಕವಾಗಿ ಜಾನಪದ ವಿಭಾಗವನ್ನು ಸ್ಥಾಪಿಸಿದಾಗ ಜಾನಪದ ಅಧ್ಯಯನ ಗರಿಗೆದರಿ ಬೆಳೆಯಿತು. ಮಾನವಶಾಸ್ತ್ರ ಸಮಾಜಶಾಸ್ತ್ರಗಳ ವ್ಯಾಸಂಗದ ಫಲವೂ ಇಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಾಯಿತು. ಇದಾದ ೪-೬ ವರ್ಷಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಭಾಷಾವಿಜ್ಞಾನಿ ಖ್ಯಾತ ಪ್ರಾಧ್ಯಾಪಕ ಡಾ. ಆರ್. ಸಿ. ಹಿರೇಮಠರ ನೇತೃತ್ವದಲ್ಲಿ 'ಜನಪದ ಸಾಹಿತ್ಯ'ದ ಸ್ನಾತಕೋತ್ತರ ವಿಭಾಗ ಸ್ಥಾಪಿಸಿ ಜಾನಪದ ಅಧ್ಯಯನದ ಹೊಸ ಗವಾಕ್ಷ ತೆರೆದರು. ಇಲ್ಲಿ ನಡೆದ ಪ್ರತಿವರ್ಷದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳು - ಇದುವರೆಗೆ ಒಟ್ಟು ೨೪ - ಜಾನಪದ ಕುರಿತು ತುಂಬ ಮಹತ್ವದ ಸಾಮಗ್ರಿಗಳನ್ನು - ಮುದ್ರಿತ ಸಾವಿರ ಹದಿನೈದುನೂರು ಪುಟಕ್ಕೂ ಮಿಕ್ಕಿ - ಪ್ರಕಟಿಸಿ ಜಾನಪದ ಸಾಹಿತ್ಯ ದರ್ಶನದಿಂದ ಮೊದಲುಗೊಂಡು ವಾದ್ಯ, ಹಾಡು, ಕುಣಿತ, ರಂಗಭೂಮಿ, ವಿಧಿ ನಿಷೇಧ, ಮಾಟ ಮಂತ್ರ ವೈದ್ಯ, ಜನಪದಕಲಾಮೇಳಗಳು ನಂಬಿಕೆ, ಆಚರಣೆ, ಗ್ರಾಮದೇವತೆ, ಕತೆ, ಐತಿಹ್ಯ ಪುರಾಣ ಹೀಗೆ ಹಲವು ಹತ್ತಾರು ವಿಷಯಗಳ ಅಧ್ಯಯನಕ್ಕೆ ಭದ್ರಬುನಾದಿ ಒದಗಿಸಿದ್ದಲ್ಲದೆ ಸಮುದ್ರ ಜಾನಪದ, ಆಕಾಶ ಜಾನಪದ ಮುಂತಾದ ಹೊಸ ಹೊಸ ವಿಷಯಗಳನ್ನು ಆಧರಿಸಿದ ಸಮ್ಮೇಳನ ಜರುಗಿಸಿ ಅಧ್ಯಯನದಲ್ಲಿ ದಾಪುಗಾಲನ್ನಿಟ್ಟಿತು. ಜೊತೆಗೆ ಬೆಂಗಳೂರು, ಕುವೆಂಪು, ಕನ್ನಡ ವಿಶ್ವವಿದ್ಯಾಲಯ, ಗುಲಬರ್ಗಾ



ವಿಶ್ವವಿದ್ಯಾಲಯಗಳು ಕೂಡ ಜಾನಪದ ಕುರಿತು ವಿಚಾರಸಂಕಿರಣ ನಡೆಸಿ ನೂರಾರು ಜನ ಅಧ್ಯಾಪಕರನ್ನು ಜಾನಪದ ಅಧ್ಯಯನದತ್ತ ಸೆಳೆದು ತೊಡಗಿಸಿದ್ದು ಕೂಡ ತುಂಬ ಮಹತ್ವದ್ದು. ಕುವೆಂಪು ವಿಶ್ವವಿದ್ಯಾಲಯ ನಡೆಸಿದ 'ಅರಣ್ಯ ಜಾನಪದ', ಗುಲಬರ್ಗಾ ವಿಶ್ವವಿದ್ಯಾಲಯ ಏರ್ಪಡಿಸಿದ 'ಕೃಷಿ ಜಾನಪದ' ಇತ್ಯಾದಿ ಸಮಾವೇಶಗಳು ಉಲ್ಲೇಖನಾರ್ಹವೇ. ಕರ್ನಾಟಕದ ಈ ಮೂವತ್ತು ವರ್ಷಗಳ ಅಧ್ಯಯನದಲ್ಲಿ ನೂರಾರು ಜನಪದ ಕಲಾವಿದರು ತಲೆಯೆತ್ತಿ ತಮ್ಮ ಕಲಾಪ್ರದರ್ಶನ ನೀಡಿ ರಾಷ್ಟ್ರೀಯ ಅಂತರಾಷ್ಟ್ರೀಯ ಮನ್ನಣೆ ಪಡೆದಿದ್ದಾರೆ. ಕಂಸಾಳೆ ಮಹಾದೇವಯ್ಯನಂಥ ಅದ್ವಿತೀಯ ಕಲಾವಿದ ವಿಶ್ವವಿದ್ಯಾಲಯದ ಜಾನಪದ ವಿಭಾಗದಲ್ಲಿ ಕಂಸಾಳೆ ಕಲೆಯ ತರಬೇತಿ ನೀಡಿದರು. ತಿಕೋಟಾದ ಗೌರವ್ವ ಮಾದರ, ಲೋಕಾಪುರದ ದೇಶಫಾಂಡೆ, ಅಂತರವಳ್ಳಿ ಜೀವನಗೌಡ, ಪಿ.ವಿ. ಹಾಸ್ಯಗಾರ ಮುಂತಾದವರು ಇಂದು ಕಣ್ಮರೆಯಾಗಿದ್ದರೂ ಜನಪದ ಕಲಾ ಪ್ರಪಂಚದಲ್ಲಿ ಚಿರಸ್ಮರಣೀಯರಾಗಿದ್ದಾರೆ.

ಯಡ್ರಾಮನಹಳ್ಳಿಯ ದೊಡ್ಡಭರಮಪ್ಪ, ಇಡಗುಂಜಿ ಮೇಳದ ಯಕ್ಷಗಾನ ಕಲಾವಿದ ಶಂಭು ಹೆಗಡೆ, ಜಮಖಂಡಿಯ ಅಪ್ಪಾಲಾಲ್ ನದಾಫ್, ಕೊಕಟನೂರಿನ ರಾಧಾ ಮಾದರ, ಮಾರುತಿ ಮಾದರ ಹೀಗೆ ಆಗಣಿತ ಕಲಾವಿದರಲ್ಲಿ ಇಂದು ಆತ್ಮವಿಶ್ವಾಸ ಮೂಡಿದೆ. ಆದರೆ ಇಂದಿಗೂ ಇವರಾರೂ ಆರ್ಥಿಕ ಸ್ವಾವಲಂಬಿಗಳಾಗಿ ಜನಪದ ಕಲೆಗಳ ಸಾಧನೆ ಸಿದ್ಧಿಗಳನ್ನೇ ತಮ್ಮ ಜೀವಿತದ ಪರಮ ಗುರಿ ಎಂದು ಬಾಳುವ ಸ್ಥಿತಿಯಲ್ಲೆಲ್ಲ ವಿದ್ವತ್ ಪ್ರಪಂಚದ ಜಾನಪದ ಜನಪದ ಕಲೆಗಳನ್ನು ಕುರಿತ ಚರ್ಚೆ ಈಗೀಗ ಜನಪದ ಕಲಾವಿದರಿಗೂ ತಲುಪಿ ಅವರು ತಮ್ಮ ಕಲೆಗಳ ಹಿರಿಮೆಯನ್ನು ಅರಿತುಕೊಳ್ಳತೊಡಗಿದ್ದಾರೆ. ಆದರೆ ಇವರನ್ನು ಬೆಂಬತ್ತಿ ಕಾಡುತ್ತಿರುವ ಬಡತನದಿಂದ ಇವರನ್ನು ಮುಕ್ತಗೊಳಿಸುವವರು ಯಾರು? ಕೆಲವರಿಗೆ ಒಂದೊತ್ತಿನ ಹಿಟ್ಟಿಗೂ ಗತಿಯಿಲ್ಲ; ಇನ್ನು ಕೆಲವರಿಗೆ ಇರಲು ತಲೆಮೇಲೆ ಸೂರು ಇಲ್ಲ. ತಮ್ಮ ತಮ್ಮ ಕಲೆಗಳಿಗೆ ಅಗತ್ಯವಾದ ವಾದ್ಯ ಸಲಕರಣೆಗಳನ್ನು ಕೊಳ್ಳಲೂ ಅವರಿಗೆ ಗತಿಯಿಲ್ಲ. ಹೀಗೇ ಬೆಳೆಯುವ 'ಇಲ್ಲ'ಗಳ ಪಟ್ಟಿಗೆ ಉತ್ತರ ಹುಡುಕಬೇಕಾಗಿದೆ. ಈ ಬಗೆಯ ಇನ್ನೂ ನೂರಾರು ನೆಲೆಯ ಸಮಸ್ಯೆಗಳಿಗೆ ಪರಿಹಾರ ಹುಡುಕಿ ಒಂದು ದಾರಿ ಕಂಡುಕೊಳ್ಳಬೇಕಿದೆ.

ದೇಜಗೌ ತಮ್ಮ ಜಾನಪದ ಅಧ್ಯಯನ ಕೃತಿಯಲ್ಲಿ 'ಬಾಲಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಅಡಗಿದಂತೆ ಜಾನಪದದಲ್ಲಿ ಎಲ್ಲವೂ ಅಡಗಿದೆ ಎಂದು ಜಾನಪದದ ವ್ಯಾಪಕ ಸ್ವರೂಪ ಎತ್ತಿ ತೋರಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷ ಕಳೆದ ಸಂದರ್ಭದಲ್ಲಿ ಜಾನಪದವನ್ನು ಸೃಷ್ಟಿಸಿದ ಸೃಷ್ಟಿಸುತ್ತಿರುವ ಕೋಟ್ಯಂತರ ಜನರ ಸಮಸ್ಯೆಗಳು ಬ್ರಹ್ಮಾಂಡದಷ್ಟಾಗಿರುವುದು ಎಲ್ಲ ಜಾನಪದ ಆಸಕ್ತರನ್ನು ತಜ್ಞರನ್ನು ಕಳವಳಿಕ್ಕೀಡು ಮಾಡುತ್ತಿದೆ.

ಜಾನಪದ ಅನೇಕ ಶಿಸ್ತುಗಳ ಆಂತರಿಕ ಸಂಯೋಜನೆಯ ಒಂದು ಸಂಕೀರ್ಣ ಅಧ್ಯಯನ. ಜಾನಪದ ವಿವಿಧ ಆಯಾಮಗಳು ಅನಾವರಣಗೊಳ್ಳುತ್ತ ಅವುಗಳ ಮೂಲಕ ಮಾನವ

ಸಂಸ್ಕೃತಿಯ ಸ್ವರೂಪ ವಿಶ್ಲೇಷಣೆಯ ಹೊಸ ಕ್ಷಿತಿಜಗಳು ತೆರೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಜಾನಪದದ ತಲಸ್ಪರ್ಶಿಯಾದ ತಾತ್ವಿಕ ಚಿಂತನೆ ಕೈಕೊಳ್ಳುವುದು ಅಗತ್ಯವಾಗಿ ನಡೆಯಬೇಕಾಗಿರುವ ಕಾರ್ಯ ಎಂದು ಮುಂತಾಗಿ ತಾನೇ ಒಂದುಕಡೆ ಬರೆದು ಜಾನಪದದ ಮೂಲಭೂತ ಪಂಚತತ್ವಗಳ ಗಾಢ ವಿವೇಚನೆ ಕೈಕೊಂಡಿದ್ದೆ. ಆದರೆ ಇಂದು ಕೇವಲ ವಿವೇಚನೆ ತಾತ್ವಿಕ ಸೈದ್ಧಾಂತಿಕ ವಿಶ್ಲೇಷಣೆಗಳು ವಿದ್ವತ್ ಪ್ರಪಂಚದ ಗ್ರಾಸವಾಗಬಲ್ಲುವೇ ಹೊರತು ಇದರಿಂದ ಜನಪದ ಸಮುದಾಯಕ್ಕೆ ಜನಪದ ಸಮುದಾಯಗಳ ಜೊತೆಗೆ ಯಾವುದೇ ಪರಿಹಾರ ದೊರಕಲಾರದೇನೋ ಎನ್ನುವ ತೀವ್ರ ನಿರಾಸೆ ಕಾಡತೊಡಗಿದೆ.

ಜಾನಪದದ ಅರಿವು ಹೊಂದಿದ ವ್ಯಕ್ತಿಗಳು ತಮ್ಮ ಕಣ್ಣೆದುರೇ ಕಳೆದುಹೋಗುತ್ತಿರುವ ಜನಾಂಗ ಸಂಸ್ಕೃತಿಯ ಅಪೂರ್ವ ಭಂಡಾರವನ್ನು ಉಳಿಸಿಕೊಳ್ಳಲು ಅನ್ವಯಿಕ ಜಾನಪದದ ತೀವ್ರ ಪ್ರಕ್ರಿಯೆ ಆರಂಭಗೊಳ್ಳಬೇಕಿದೆ.

'ಫೋಕಲೋರ್' ಮತ್ತು ಜಾನಪದ ವ್ಯಾಖ್ಯೆ ಇತ್ಯಾದಿಗಳ ಕಾರ್ಯ ಒಂದು ವಲಯದಲ್ಲಿ ಮುಂದುವರೆಯಲಿ. ಆದರೆ ಕರ್ನಾಟಕದ ಮಟ್ಟಿಗೆ 'ಜಾನಪದ ೩೦' ಕೇವಲ ವಿದ್ವತ್ ಗೋಷ್ಠಿಗೆಳ ಚರ್ಚೆಯ ವಿಷಯವಾಗಿ ಉಳಿಯಕೂಡದು.  ಮುಂದೇನು? ಎನ್ನುವ ಪ್ರಶ್ನೆಗೆ 'ಅನ್ವಯಿಕ' ಪ್ರಕ್ರಿಯೆಯ ಮೂಲಕ ನಮ್ಮ ಸಂಸ್ಕೃತಿ ವಿನಾಶಕ್ಕೆ ಕಾರಣವಾಗಿರುವ ಅಥವಾ ಕಾರಣವಾಗಬಹುದಾದ ಬದುಕಿನ ವಿವಿಧ ನೆಲೆಗಳ ಸಂಗತಿಗಳನ್ನು ಅನ್ವೇಷಿಸಿ ಜನಪದರನ್ನು ಮುಖಾಮುಖಿಯಾಗಿ ಕಂಡು ಪರಿವೀಕ್ಷಿಸಿ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಜನಪದ ತಾತ್ವಿಕ ಸೂತ್ರಗಳನ್ನು ನೇರವಾಗಿ ಅನ್ವಯಗೊಳಿಸಿ ಪರಿಹಾರ ಕಂಡುಕೊಳ್ಳುವುದು ಮುಂದೆ ನಾವು ಮಾಡಬೇಕಾಗಿರುವ ಕಾರ್ಯ. ವಸ್ತುನಿಷ್ಠವಾಗಿ ಆಲೋಚನೆ ಮಾಡಿದರೆ ಅನ್ವಯಿಕ ಜಾನಪದದ ಹಲವಾರು ನೆಲೆಗಳಾದರೂ ನಮ್ಮ ಕಣ್ಣಿಗೆ ಹೊಡೆದು ಕಾಣುತ್ತವೆ. ಸಂಸ್ಕೃತಿಯಿಂದ ಜನಪದರನ್ನು ವಿಮುಖ ಗೊಳಿಸುತ್ತಿರುವ ಕೆಲವು ನೆಲೆಗಳನ್ನು ನೋಡಿ: ಒಂದು ಭಾಷೆ, ಎರಡು ಶಿಕ್ಷಣ, ಮೂರು ಕೃಷಿ, ನಾಲ್ಕು ವ್ಯಾಪಾರೋದ್ದಿಮೆ, ಐದು: ಚುನಾವಣೆ, ರಾಜಕಾರಣ, ಆಡಳಿತ ಇತ್ಯಾದಿ: ಆರು: ಕಲೆ ಸಾಹಿತ್ಯ ರಂಗಪರಂಪರೆ ಇತ್ಯಾದಿ

ಒಂದು: ಯಾವುದೇ ಭಾಷೆ ಅದು ಕೇವಲ ಲಿಪಿಯಾಗಿರುವುದಿಲ್ಲ. ಅದು ಆ ಜನಾಂಗದ ಸಕಲ ಮುಖದ ಚಟುವಟಿಕೆ ಬೆಳವಣಿಗೆಗಳ ಒಟ್ಟಾರೆ ಸಂಸ್ಕೃತಿಯ ಕಟಕಿಯಾಗಿರುತ್ತದೆ. ಕಾರಣ ಯಾವು ಜನಪದ ಗುಂಪೇ ಆಗಲಿ ತನ್ನ ಭಾಷೆಯನ್ನು ಕಳೆದುಕೊಳ್ಳದ ಹಾಗೆ ಕಾಪಿಟ್ಟುಕೊಂಡು ಬರುವುದು ಅದರ ಕರ್ತವ್ಯ. ಕರ್ನಾಟಕದಂಥ ಬಹುಸಂಸ್ಕೃತಿಗಳ ಕೇಂದ್ರಭೂಮಿಯಲ್ಲಿ ಕನ್ನಡಕ್ಕೆ ಪ್ರಾಧಾನ್ಯ ದೊರೆಯಬೇಕು, ಕನ್ನಡ ಮಕ್ಕಳು ಕನ್ನಡಿಗರ ತಮ್ಮ ವಿವಿಧ ಮುಖಗಳ ಕಾರ್ಯ ಚಟುವಟಿಕೆಗಳಿಗೆ ರಾಜ್ಯಭಾಷೆ ಕನ್ನಡವನ್ನೇ ಅವಲಂಬಿಸಿ ಬದುಕುವಂತಾಗಬೇಕು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಅದ್ದದ್ದೇನು? ಕರ್ನಾಟಕ ಏಕೀಕರಣ ಚಳವಳಿ, 'ವಂದೇಮಾತರಂ' ಚಳವಳಿ, 'ಅಸಹಕಾರ ಚಳವಳಿ,' 'ಮಾಡು ಇಲ್ಲವೆ



ಮಡಿ' ಕರೆ, ಸ್ವಾತಂತ್ರ್ಯ ಪ್ರಾಪ್ತಿ, ಬಳಿಕ 'ಕರ್ನಾಟಕ ರಾಜ್ಯ'ದ ಉದಯ, ಆ ಬಳಿಕ ಮತ್ತೆ ಗೋಕಾಕ ಚಳವಳಿ, ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಪ್ರಾಶಸ್ತ್ಯ ದೊರೆತಾಗ ಮಾತ್ರ ಕನ್ನಡಿಗರಿಗೆ ತಮ್ಮ ಸಂಸ್ಕೃತಿಯ ಹಿರಿಮೆ ಸಾಹಿತ್ಯದ ಘನತೆ ಉಂಟಾಗಲು ಸಾಧ್ಯ. ಇಲ್ಲಿಯೇ ಕನ್ನಡ ಅನಾಥವಾದರೆ ಆಗ ಕವಿ ಕೊಟ್ಟ 'ಕನ್ನಡಕೆ ಹೋರಾಡು ಕನ್ನಡದ ಕಂದಾ', 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ', 'ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ' ಈ ಮೊದಲಾದ ಕರೆಗಳನ್ನು ಕೇಳಿ ಮತ್ತೊಮ್ಮೆ ಹೋರಾಟಕ್ಕಾಗಿ ನಾವು ಪುಟಿದು ನಿಲ್ಲಬೇಕಾಗುತ್ತದೆ. ಸಂಸ್ಕೃತಿಯ ಈ ಮೊದಲ ಅಂಶವನ್ನು ನೆಲೆಗೊಳಿಸಲು ಜನಪದರನ್ನು ಕೂಡಿಕೊಂಡು ಹೋರಾಟ ಮಾಡಬೇಕಾಗುತ್ತದೆ.

ಎರಡು: ಶಿಕ್ಷಣ ಜನಾಂಗ ಕೇವಲ ಮೌಖಿಕ ಪರಪರೆಯಲ್ಲಿ ಬದುಕುವುದಿಲ್ಲ. ನಾಗರಿಕತೆಯ ವಿಕಾಸವಾದಂತೆ ಅದು ತನ್ನ ಜ್ಞಾನಾರ್ಜನೆಗೆ, ಜ್ಞಾನಸಂವರ್ಧನೆಗೆ ಲಿಖಿತ ಪರಂಪರೆಗೆ ಒಳಪಟ್ಟು ಶಿಕ್ಷಣದ ವಿವಿಧ ಘಟ್ಟ, ವಿಷಯಗಳನ್ನು ಸಾಂಸ್ಥಿಕವಾಗಿ ಅವಲಂಬಿಸಿ ಬೆಳೆಯಬೇಕಾಗುತ್ತದೆ. ವ್ಯಕ್ತಿಗೆ ಉದಾತ್ತ ಸಂಸ್ಕಾರ ನೀಡುವ ಉನ್ನತ ಜೀವನ ಮೌಲ್ಯಗಳ ಪ್ರಜ್ಞೆ ಮೂಡಿಸುವ ಶಿಕ್ಷಣ ಇಂದು ಏನಾಗಿದೆ? ಗುರು ಶಿಷ್ಯರ ಸಂಬಂಧಗಳು ಅಥವಾ ಶಿಕ್ಷಕ ವಿದ್ಯಾರ್ಥಿಯ ಸಂಬಂಧಗಳು ಯಾವ ರೂಪ ತಾಳಿವೆ, ಇಡೀ ಶಿಕ್ಷಣ ವ್ಯವಸ್ಥೆ ಹೇಗೆ ವ್ಯಾಪಾರೀಕರಣದ ಕಪಿಮುಷ್ಠಿಯಲ್ಲಿ ಸಿಕ್ಕು ನರಳುತ್ತಿದೆ; ಮಠಮಾನ್ಯಗಳು ಸಾರ್ವಜನಿಕ ಪ್ರತಿಷ್ಠಿತರು, ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ಉನ್ನತ ಶಿಕ್ಷಣ ಮುಗಿಸಿ ಹೊಸ ಕನಸು ಹೊತ್ತ ಉತ್ಸಾಹದಿಂದ ನೌಕರಿಗಾಗಿ ಬರುವ ಪದವೀಧರ ಯುವಕ ಯುವತಿಯರನ್ನು ದಿಕ್ಕು ತಪ್ಪಿಸಿ ಶೋಷಣೆಗೆ ಈಡುಮಾಡುವ ಕೆಲವು ಅಪವಾದಗಳಿರಬಹುದು ವ್ಯಾಪಾರಿ ಕೇಂದ್ರಗಳಾಗಿಲ್ಲವೆ? ನಮ್ಮ ದೇಶಕ್ಕೆ ಅಗತ್ಯವಾದ ಶಿಕ್ಷಣದ ಸ್ವರೂಪ ಯಾವುದು, ವಿವಿಧ ವಿಜ್ಞಾನ ತಾಂತ್ರಿಕ ಶಿಕ್ಷಣಕ್ಕೂ ಅವರ ಭವಿಷ್ಯದ ಬದುಕಿಗೂ ಏನಾದರೂ ಅನ್ವಯಿಕ ಸಂಕಲ್ಪ ಸಂಬಂಧಗಳು ಇರುವುವೇ? ಇವೇ ಮೊದಲಾದ ಸಮಸ್ಯೆಗಳನ್ನು ವಿವಿಧ ಜನಪದ ಸಮೂಹಗಳೊಂದಿಗೆ ಮುಖಾಮುಖಿಯಾಗಿ ಮಾತಾಡಬೇಕು, ಆಧುನಿಕ ಜಗತ್ತಿನ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಲೇ ತಮ್ಮತನವನ್ನು ಕಳೆದುಕೊಳ್ಳದಂತಹ ಶಿಕ್ಷಣ ನೀತಿಯನ್ನು ರೂಪಿಸಿ ಶಿಕ್ಷಣದ ವಿವಿಧ ಹಂತಗಳಲ್ಲಿ ಅದನ್ನು ಅನ್ವಯಗೊಳಿಸಬೇಕು. ಆಗ ಮಾತ್ರ ನಮ್ಮ ಸಂಸ್ಕೃತಿಗೆ ಪೋಷಕವಾದ ಶಿಕ್ಷಣ ಸಾಹಿತ್ಯಗಳು ನಮ್ಮ ಜನರಿಗೆ ದೊರೆಯಲು ಸಾಧ್ಯವಾದೀತು.

ಮೂರು: ಕೃಷಿ ಒಕ್ಕಲುತನ ಭಾರತದ ಬೆನ್ನೆಲುಬು ಎಂದು ಹೇಳಲಾಗುತ್ತದೆ. ನೆಲ ಉತ್ತಿ ಬಿತ್ತಿ ಬೆಳೆಯುವ ಒಕ್ಕಲಿಗ ಒಬ್ಬನೇ ಇರುವುದಿಲ್ಲ. ದನ ಕರು, ಕುಲಕಸಬುಗಳ ಹತ್ತಾರು ವೃತ್ತಿಗಳ ಜನಪದರು ಹೀಗೆ ಒಂದು ಗುಂಪೇ ಇರುತ್ತದೆ. ಪರಸ್ಪರಾವಲಂಬಿ ಸಾಮೂಹಿಕ ಜೀವನವೇ ಅವರ ಬದುಕಿನ ವಿಧಾನ, ರೀತಿ. ಪಶುಸಂಗೋಪನೆ, ಕೃಷಿಸಲಕರಣೆ, ಬೀಜ, ಗೊಬ್ಬರ ಒಕ್ಕಲಿ ಹೀಗೆ ಹತ್ತಾರು ವಸ್ತು ವಿಷಯಗಳ ಮೂಲಕ ಆತ ಬೆಳೆಗಳ

ಉತ್ಪಾದನೆ ಮಾಡುತ್ತಾನೆ. ತಾನು ಬೆಳೆದ ಕಾಳುಕಡ್ಡಿ ಮಾಲು ಪೇಟೆಗೆ ತಂದಾಗ ಆತನನ್ನು ತಮ್ಮ ಜಾಲಕ್ಕೆ ಎಳೆಯುವ ನೂರಾರು ದಲ್ಲಾಳಿಗಳ ಗುಂಪೇ ಸಿದ್ಧವಾಗಿರುತ್ತದೆ. ರೈತರಿಗೆ ಸಹಾಯವಾಗಲು ರೂಪಿಸಿದ ಸಹಕಾರಿ ಸಂಘಗಳು ರೈತರ ನೆರವಿಗೆ ಬರುವಲ್ಲಿ ವಿಫಲವಾಗಿ ಇಡೀ ಮಾರುಕಟ್ಟೆಯ ವ್ಯವಸ್ಥೆ ಕುಸಿದು, ರೈತ ಸಮುದಾಯವನ್ನು ಸಾಲಸೋಲಗಳಲ್ಲಿ ಸಿಲುಕಿಸಿ ಅವರ ಜೀವ ಹಿಂಡುವ ನೆಲೆಗಳಾಗಿ ಶ್ರಮಸಂಸ್ಕೃತಿಯ ಹಿರಿಮೆಯನ್ನು ಹುಸಿಗೊಳಿಸುವ ಶ್ರಮಿಕರು ನಗರಗಳಿಗೆ ವಲಸೆಹೋಗಿ ಹಳ್ಳಿಗಳು ಬರಿದಾಗುತ್ತಿವೆ. ಆಗ ಜಾನಪದದ ಅರಿವು ಹೊಂದಿದ ಜನ ಈ ಜನಪದರಲ್ಲಿಗೆ ಹೋಗಿ ಅವರ ನಿಜವಾದ ಸಮಸ್ಯೆಗಳ ಸ್ವರೂಪ ತಿಳಿಸಿ ವೃತ್ತಿಗಳ ತಾರತಮ್ಯವಿಲ್ಲದ ಸತ್ಯಶುದ್ಧ ಕಾಯಕ ಮತ್ತು ಶ್ರಮಸಂಸ್ಕೃತಿಗಳಿಂದ ಸರಕು ಸಂಸ್ಕೃತಿಯ ಕಡೆಗೆ ಸರಿಯುವ ಅಪಾಯದ ಅರಿವು ಮೂಡಿಸಬೇಕು. ಮೂಲ, ಪ್ರಾಕೃತಿಕವಾಗಿ ಕಾಪಾಡಿಕೊಂಡು ಬಂದ ತಮ್ಮ ಪಾರಂಪರಿಕ ಬಿತ್ತನೆ ಬೀಜ, ಗೊಬ್ಬರಗಳಿಗೆ ಎರವಾಗಿ ಹೆಚ್ಚಿನ ಇಳುವರಿಯ ಬಿಸಿಲುಗುದುರೆಯ ಬೆನ್ನು ಹತ್ತಿ ಮಿಶ್ರತಳಿ ಬೀಜ ಮತ್ತು ಅಮೇರಿಕಾ ಸರಕಾರವೇ ಬಹಿಷ್ಕರಿಸಿದ್ದ ರಾಸಾಯನಿಕ ಗೊಬ್ಬರಗಳಿಗಾಗಿ ಬಹುರಾಷ್ಟ್ರೀಯ ಕಂಪನಿಗಳ ಕೃಪೆಯನ್ನೇ ಅವಲಂಬಿಸಿದ ಅವಲಂಬಿಕ ಬೇಕಾಗಿರಬಹುದಾದ ಈ ಅಪಾಯಗಳಿಂದ ರೈತ ಸಮುದಾಯವನ್ನು ಪಾರುಮಾಡುವ ತುರ್ತು ಕಾರ್ಯ ನಡೆಯಬೇಕು. ಇನ್ನು ಮಳೆಯ ಕೊರತೆ, ವಿಫಲತೆ ಆಧಿಕ್ಯದ ಸಮಸ್ಯೆಗಳೇ ಬೇರೆ.

**ನಾಲ್ಕು: ವ್ಯಾಪಾರೋದ್ದಿಮೆ.** ಅತಿ ರಭಸ, ವೇಗಗಳಿಂದ ಬೆಳೆಯುತ್ತಿರುವ ನಾಗರಿಕತೆ, ನಾಗರಿಕ ಸಂಪರ್ಕ ಸೌಲಭ್ಯಗಳಿಂದಾಗಿ ವ್ಯಾಪಾರ ಉದ್ದಿಮೆಗಳು ಅನಿರೀಕ್ಷಿತ, ಅನಪೇಕ್ಷಿತವಾಗಿ ಹೆಚ್ಚುತ್ತಿರುವುದು ಅನಿವಾರ್ಯವಾಗಿರಬಹುದು. ಆದರೆ ನಮ್ಮ ದೇಶದ ಉತ್ಪನ್ನಗಳನ್ನು ಗ್ರಾಮೀಣ ಕರಕುಶಲ ವಸ್ತುಗಳನ್ನು ಮೆಟ್ಟಿ ನಮ್ಮ ಗ್ರಾಮೀಣ ಮತ್ತು ನಗರ ಜನತೆಯನ್ನು, ತಮ್ಮ ಅಬ್ಬರದ ಜಾಹೀರಾತು ಪ್ರಚಾರಗಳಿಂದ ಸೆಳೆದು ನಮ್ಮ ಜನ ಕೈಚಾಚಿದರೆ ವಿದೇಶಿ ಉತ್ಪನ್ನ ಸರಕುಗಳ ಸ್ಪರ್ಧೆಗೆ ಈಡಾಗಿ ದೇಶೀಯ ಉತ್ಪನ್ನಗಳಿಗೆ ಗಿರಾಕಿಗಳೇ ಇಲ್ಲದಂತಹ ಸ್ಥಿತಿಯ ಸೃಷ್ಟಿಗೆ ಕಾರಣಗಳೇನು? ಇದಕ್ಕೆ ಉಪಾಯಗಳೇನಾದರೂ ಇವೆಯೆ? ಸಂಬಂಧಿಸಿದ ವ್ಯಾಪಾರಿ, ಉದ್ದಿಮೆದಾರ, ಕಾರ್ಮಿಕ, ಕುಶಲ ಕಾರ್ಮಿಕರ ಜೊತೆಗೆ ಕೂತು ವಾಸ್ತವಾಂಶಗಳ ಬೆಳಕಿನಲ್ಲಿ ಸಮಸ್ಯೆಗಳ ಸ್ವರೂಪ ಅರಿತು ಪರಿಹಾರ ಕಾಣಬೇಕಿದೆ.

**ಐದು: ಚುನಾವಣೆ, ರಾಜಕಾರಣ, ಆಡಳಿತ ಇತ್ಯಾದಿ** ಭಾರತ ಸ್ವಾತಂತ್ರ್ಯವಾದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ಹೇಳಿದ್ದರು: '... ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸುವುದು ನಮ್ಮ ಗುರಿಯಾಗಿರಬೇಕು... ಈ ಮಹಾನ್ ದಿನದಂದು ನಾವು ಅಂಥ ಸಂಕಲ್ಪ ಮಾಡೋಣ... ಜಯಹಿಂದ್.'

ಆದರೆ ಇಂದೇನಾಗಿದೆ? ಚುನಾವಣೆಗಳು ಬಹುತರವಾಗಿ ಪುಂಡರ, ಬಂಡವಾಳ ಶಾಹಿಗಳ ಕೈಗೊಂಬೆಗಳಾಗಿವೆ. ರಾತ್ರೋರಾತ್ರಿ ಸಂಚರಿಸಿ ಅಮಿಷಗಳನ್ನು ವಿತರಿಸಿ ಅನಕ್ಷರಸ್ಥ



ಜನರ 'ಮತ'ಗಳನ್ನು ಕಿತ್ತುಕೊಳ್ಳುವ ಮತಗಟ್ಟೆಗಳನ್ನೇ ನಿಯಂತ್ರಿಸಿ ಹೆಚ್ಚು ಹಣ ಸುರಿದು ತಮ್ಮ ತಮ್ಮ ಅಭ್ಯರ್ಥಿಯನ್ನೇ ಆರಿಸಿ ತರುವ ತಮಗಿಷ್ಟವಾದವರನ್ನೇ ತಮ್ಮ ತಾಳಕ್ಕೆ ಕುಣಿಯುವಂಥ ವ್ಯಕ್ತಿಯನ್ನೇ ನಾಯಕನನ್ನಾಗಿ ರೂಪಿಸುವ ತಂತ್ರಗಳ ಭರಾಟೆ ಪ್ರತಿನಿತ್ಯದ ಮಾತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುವ ಈ ವಿಧಾನ, ಜನಪರ ಜನಪರ ಎಂದು ಜನರನ್ನೇ ಪರಪರ ಸುಲಿಯುವ ಪ್ರಕ್ರಿಯೆಗಳ ಮೂಲ ನೆಲೆಯನ್ನು ಹುಡುಕಿ ಹೆಚ್ಚಾಗಿ ಧನಾಭಿಮುಖಿಯಾದ ಜನಪದರಲ್ಲಿ ವಾಸ್ತವ ಸಂಗತಿಗಳ ಮೂಲಭೂತ ಹಕ್ಕುಗಳ, ಸಂವಿಧಾನಾತ್ಮಕ ಸೂಕ್ಷ್ಮಗಳ ಅರಿವು ಮೂಡಿಸುವ ಕೆಲಸ ಯಾರು ಮಾಡಬೇಕು? ಇಲ್ಲಿ ಜಾನಪದ ತಜ್ಞರ ಹೊಣೆಗಾರಿಕೆಯಿಲ್ಲವೇ?

**ಆರು: ರಂಗಪರಂಪರೆ, ಕಲೆ, ಸಾಹಿತ್ಯ ಇತ್ಯಾದಿ.** ಜನಾಂಗ ಸಂಸ್ಕೃತಿಯ ಆಂತರಿಕ ಜೀವಾಳ ಆ ಜನಾಂಗ ಹೊಂದಿರುವ ರಂಗಪರಂಪರೆ ಧರ್ಮ, ಕಲೆ, ಸಾಹಿತ್ಯಗಳು ವೈಜ್ಞಾನಿಕ ಆವಿಷ್ಕಾರಗಳ ಫಲವಾಗಿ ಮೂಡಿದ ವಿವಿಧ ಸಮೂಹ ಸಂವಹನ ಮಾಧ್ಯಮಗಳ ಪ್ರಭಾವ ದಿನೇ ದಿನೇ ವ್ಯಾಪಕವಾಗಿ ಹರಡುತ್ತಿರುವುದು ಸಹಜವೆ. ಆದರೆ ಇವೆಲ್ಲವುಗಳಲ್ಲಿ ಸಿನಿಮಾ ಮತ್ತು ದೂರದರ್ಶನಗಳು ನೇರವಾಗಿ ನಮ್ಮ ರಂಗಚಟುವಟಿಕೆ ಮತ್ತು ಜನಪದ ಪ್ರದರ್ಶನ ಕಲೆಗಳ ಮಹತ್ವವನ್ನು ಕೆಲಮಟ್ಟಿಗೆ ಕುಗ್ಗಿಸಿರುವುದು ನಿಜ. ಇದಕ್ಕೆ ಅನೇಕ ಸಲ ಸ್ವಯಂಘೋಷಿತ ರಂಗಪರಿಣತರು ಕಾರಣವಾದರೆ ಇನ್ನು ಕೆಲವು ಸಲ ದೊರೆವ ಸಂಭಾವನೆಯ ಆಸೆಗಾಗಿ ಹೇಗೆ ಹೇಗೋ ತಮ್ಮ ಕಲೆಗಳ ಪ್ರದರ್ಶನ ನೀಡುವುದು ಮತ್ತು ಕಲೆಗಳ ಮೂಲ ಸ್ವರೂಪಕ್ಕೆ ಕಲಾತ್ಮಕ ಸೃಷ್ಟಿಗೆ ಅಪಚಾರವೆಸಗುವುದು ಮತ್ತೊಂದು ಕಾರಣ. ಈ ನಡುವೆ ಧರ್ಮ ಸಂಸ್ಥೆಗಳ ಟೊಳ್ಳು ಘೋಷಣೆಗಳು, ಪ್ರತಿಷ್ಠಿತರ ಮಧ್ಯಸ್ಥರ ಹಾವಳಿ ಹೊಂಚು, ಸಾಹಿತ್ಯದ ಗತಿಯಂತೂ ದೇವರೇ ಬಲ್ಲ. ಸಾಹಿತ್ಯ ಪರಂಪರೆಯ ಆಳವಾದ ಅಧ್ಯಯನ ಯಾರಿಗೆ ಬೇಕಾಗಿದೆ? ವಿದ್ಯಾರ್ಥಿಗಳಿಗೆ 'ಗೈಡ್' ಗುರುಗಳೇ ಸಾಕು. ಹೀಗೆ ಒಂದು ಪದವಿ ಗಿಟ್ಟಿಸುವ ಹುನ್ನಾರು. ಪಂಪನಿಂದ ಕುವೆಂಪು ವರೆಗೆ ಚಾಚಿರುವ ಈ ಸಾಹಿತ್ಯ ಪರಂಪರೆಯ ಶ್ರೇಷ್ಠ ಕೃತಿಗಳನ್ನಾದರೂ ಅಧ್ಯಯನ ಮಾಡಬೇಕಲ್ಲ? ಆದರೆ ಅಷ್ಟು ಪುರುಸೊತ್ತು ಯಾರಿಗಿದೆ?

ಜಾನಪದ ಮುಂದೇನು ಎಂದು ಗಂಭೀರ ಚಿಂತನೆ ನಡೆಸುವ ಕಾಲದಲ್ಲಿ 'ಜಾಗತೀಕರಣ' ಮತ್ತು ವಿಶ್ವ ಸಂಸ್ಕೃತಿಯ ಪ್ರಕ್ರಿಯೆಗಳು ಅತಿ ವೇಗದಲ್ಲಿ ನಮ್ಮನ್ನು ತಟ್ಟುತ್ತಿವೆ ಮತ್ತು ಮೇಲುನೋಟಕ್ಕೆ ಮೋಹಕವಾಗಿಯೂ ಕಾಣುತ್ತವೆ. ಆದರೆ ಇದು ಭಾರತೀಯ ಸಂಸ್ಕೃತಿಗೆ ಕರ್ನಾಟಕ ಸಂಸ್ಕೃತಿಗೆ ಆಕರವಾಗಿರುವ ಜನಪದ ಸಂಸ್ಕೃತಿಯನ್ನು ಕಣ್ಮರೆಯಾಗಿಸುವ ಅಥವಾ ಅದರ ಅನನ್ಯತೆಗಳನ್ನು ನಿರ್ನಾಮಗೊಳಿಸುವ ದಿಸೆಯತ್ತ ಮುನ್ನಡೆಯದಂತೆ ನಮ್ಮ ಜನಾಂಗವನ್ನು ಆತ್ಮವಿಸ್ಮೃತಿಯ ಕೂಪಕ್ಕೆ ತಳ್ಳದಂತೆ ಎಚ್ಚರಿಕೆ ವಹಿಸಬೇಕಾಗಿದೆ.

ಜನಪದದ ವಿವಿಧ ಸಾಮುಗ್ರಿಗಳಿಗೆ ಜಾನಪದ ತತ್ವಸಿದ್ಧಾಂತಗಳನ್ನು ಅನ್ವಯಗೊಳಿಸುವುದು, ನಮ್ಮಷ್ಟಕ್ಕೆ ನಾವೇ ಚರ್ಚಿಸಿ 'ಆತ್ಮರತಿ ಸಂತೋಷ'ದಲ್ಲಿ

ಮುಳುಗುವುದಕ್ಕಿಂತ ಮಹತ್ವದ್ದಾಗಿದೆ ಇನ್ನು ಮುಂದಿನ ಕಾರ್ಯ. ಹಿಂದೊಮ್ಮೆ ಜನನಾಯಕ ಜಯಪ್ರಕಾಶ ನಾರಾಯಣ ಹೇಳಿದ 'ಸಮಗ್ರ ಕ್ರಾಂತಿ'ಯ ಸಂದೇಶ ಈ ನಿಟ್ಟಿನಲ್ಲಿ ನಮಗೆ ಮಾರ್ಗದರ್ಶಿಯಾದೀತು.

ನಮ್ಮ ಸಮಕಾಲೀನ ಹೋರಾಟಗಾರ ಪ್ರೊ. ಚಂದ್ರಶೇಖರ ಪಾಟೀಲ ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನ ಕುರಿತಂತೆ 'ಇದೊಂದು ಜನಾಂದೋಲನವಾಗಬೇಕು' ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ನನಗೆ ತಿಳಿದಮಟ್ಟಿಗೆ ಜನಾಂಗ ಸಂಸ್ಕೃತಿಯ ಭಂಡಾರವಾಗಿರುವ 'ಜಾನಪದ', ಅದರ ತತ್ವಸೂತ್ರಗಳು, ಈಗ ಜನಾಂಗದ ಬದುಕಿನ ವಿವಿಧ ನೆಲೆಗಳಿಗೆ ಅನ್ವಯಗೊಳ್ಳುವ ನಾಡಿನ ಬದುಕಿನಲ್ಲಿ ತೀವ್ರ ಪರಿವರ್ತನೆಯ ಕಹಳೆ ಮೊಳಗಿಸುವ ಜನಾಂದೋಲನವಾಗಬೇಕು. ಜನಪದ ಬದುಕಿಗೆ ಜನಪದರಿಗೆ ಜನಾಂಗ ಸಂಸ್ಕೃತಿಗೆ ಸಮ್ಮುಖವಾಗಿ ಆಂದೋಲನ ನಡೆಸದ ಕೇವಲ ಅಧ್ಯಯನ ನಿರತ ಜಾನಪದದಿಂದ ಯಾವ ಪ್ರಯೋಜನ?



# ದಕ್ಷಿಣ ಭಾರತೀಯ ಜಾನಪದ

ಡಾ. ಆರ್ವಿಯಸ್. ಸುಂದರಂ

ದ್ರಾವಿಡ ಭಾಷೆಗಳ ಬಗ್ಗೆ ನಡೆದ ಸಂಶೋಧನೆಗೆ ಹೋಲಿಸಿದಾಗ ದ್ರಾವಿಡ ಜಾನಪದದ ಬಗ್ಗೆ ನಡೆದ ಸಂಶೋಧನೆ ಅತ್ಯಲ್ಪವೆಂದೇ ಹೇಳಬೇಕು. ಸಾಹಿತ್ಯಕ ದ್ರಾವಿಡ ಭಾಷೆಗಳ ಜಾನಪದವನ್ನು ಬಿಡಿಬಿಡಿಯಾಗಿ ಅಧ್ಯಯನ ಮಾಡುವ ಪ್ರಯತ್ನಗಳು ನಡೆದಿವೆಯೇ ಹೊರತು ಅವುಗಳಲ್ಲಿರುವ ಸಮಾನಾಂಶಗಳನ್ನಾಗಲಿ, ವಿಭಿನ್ನಾಂಶ ಗಳನ್ನಾಗಲಿ ಆಳವಾಗಿ ಅಧ್ಯಯನ ಮಾಡುವ ಪ್ರಯತ್ನಗಳು ನಡೆದಿಲ್ಲ. ಜಾನಪದದಲ್ಲಿ ಮೌಖಿಕ ಪ್ರಸಾರದ ಅನಿವಾರ್ಯತೆಯನ್ನು ಗಮನಿಸಿ ಮೌಖಿಕ ಭಾಷೆಗಳ ಜಾನಪದ ಮತ್ತು ಅದರ ಪ್ರಸಾರದ ಕಡೆ ಹೆಚ್ಚಿನ ಗಮನ ಹರಿಸಬೇಕಾಗಿತ್ತು. ಆದರೆ ನಮ್ಮ ಗಮನವೆಲ್ಲ ಲಿಖಿತ ಭಾಷೆಗಳ ಮೌಖಿಕ ಸಾಹಿತ್ಯದ ಕಡೆ ಹರಿದುಬಂದಿದೆ. ಎಲ್ಲ ದ್ರಾವಿಡ ಭಾಷೆಗಳ ಮೌಖಿಕ ಪರಂಪರೆಯನ್ನು ಆಳವಾಗಿ ಅಧ್ಯಯನ ಮಾಡದೆ ಮೂಲದ್ರಾವಿಡ ಜಾನಪದದ ಪರಿಕಲ್ಪನೆ ಅಸಮಂಜಸವೆನಿಸುತ್ತದೆ.

ದ್ರಾವಿಡ ಸಂಸ್ಕೃತಿಯ ಮತ್ತು ಜಾನಪದದ ಅಧ್ಯಯನದಲ್ಲಿ ಇತಿಮಿತಿಗಳಿದ್ದರೂ ದಕ್ಷಿಣಭಾರತದ ಮುಖ್ಯ ಲಿಖಿತ ಭಾಷೆಗಳ ಮೌಖಿಕ ಪರಂಪರೆಯನ್ನಾದರೂ ಗಂಭೀರವಾಗಿ ಪರಿಶೀಲಿಸುವುದು ನಮ್ಮ ಕರ್ತವ್ಯ. ಕನ್ನಡ ಜಾನಪದಕ್ಕೆ ಈ ಶತಮಾನದಲ್ಲಿ ಎಷ್ಟೋ ಜನ ಮಹನೀಯರು ಮಹತ್ತ್ವದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡದಲ್ಲಿ ನಡೆದಿರುವಷ್ಟು ಕೆಲಸ ಇತರ ಭಾಷೆಗಳಲ್ಲಿ ನಡೆದಿಲ್ಲವೆಂಬುದು ನಿಜ. ಜನಪದ ಗೀತೆ, ವೃತ್ತಿಗಾಯಕ ಪರಂಪರೆ, ಜನಪದ ಕಥೆಗಳು, ಗಾದೆ, ಒಗಟು, ನಂಬಿಕೆಗಳು, ಜನಪದ ಕಲೆಗಳು ಮುಂತಾದ ಕ್ಷೇತ್ರಗಳಲ್ಲಿ ನಡೆದಿರುವ ಸಂಗ್ರಹಕಾರ್ಯ ಮೆಚ್ಚತಕ್ಕದ್ದು. ಬೋಧನೆ ಹಾಗೂ ಸಂಶೋಧನೆಗಳಲ್ಲೂ ಪ್ರಶಂಸಾರ್ಹವಾದ ಕೆಲಸ ನಡೆದಿದೆ. ಆದರೆ ತೌಲನಿಕ ಕ್ಷೇತ್ರದಲ್ಲಿ ನಡೆದ ಕೆಲಸ ಬಹಳ ಕಡಿಮೆ. ಅಕ್ಕಪಕ್ಕದ ಪ್ರದೇಶಗಳಲ್ಲಿರುವ ಜಾನಪದದ ಜೊತೆಗೆ ಹೋಲಿಸಿ ಬರೆದವರು ಕೂಡ ವಿರಳ. ಕನ್ನಡದ ಗೀತೆ, ಕಾವ್ಯ, ಕಥೆ, ಗಾದೆ, ಒಗಟು ಮುಂತಾದವುಗಳನ್ನು ತೌಲನಿಕವಾಗಿ ನೋಡಿದ ಬರೆಹಗಳು ತೆಲುಗಿನಲ್ಲಿ ಬಂದಿವೆ. ಆದರೆ ಕನ್ನಡದಲ್ಲಿ ಅಂಥವು ಬೆರಳೆಣಿಕೆಯಷ್ಟು ಮಾತ್ರ ಬಂದಿವೆ. ಈ ನಿಟ್ಟಿನಲ್ಲಿ ನಡೆಯಬೇಕಾದ ಕೆಲಸ ಬಹಳಷ್ಟಿದೆ.

ದಕ್ಷಿಣ ಭಾರತದ ಒಂದೊಂದು ಭಾಷೆ ಮತ್ತು ಒಂದೊಂದು ಪ್ರದೇಶ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಸಾಂಸ್ಕೃತಿಕವಾಗಿ ಪ್ರತ್ಯೇಕ ಕ್ಷೇತ್ರಗಳೆಂದು ಗುರುತಿಸಬಹುದಾದ ಪ್ರದೇಶಗಳು ದಕ್ಷಿಣ ಭಾರತದಲ್ಲಿವೆ. ಇಂಥ ಪ್ರತ್ಯೇಕ ಸಾಂಸ್ಕೃತಿಕ ಕ್ಷೇತ್ರಗಳ ನಡುವೆ ತಲೆತಲೆಮಾರುಗಳಿಂದ ಸಾಂಸ್ಕೃತಿಕ ಪ್ರಸಾರ ವಿನಿಮಯಗಳೂ ನಡೆದಿವೆ. ಇದರಿಂದ ದಾಕ್ಷಿಣಾತ್ಯ ಅಥವಾ ದ್ರಾವಿಡ ಸಂಸ್ಕೃತಿ ಎಂದು ಹೇಳಬಹುದಾದ ವಿಸ್ತೃತ ಪರಿಧಿಯ ಜಾನಪದಕ್ಷೇತ್ರವೂ ರೂಪುಗೊಂಡಿದೆ. ಸಾದೃಶ್ಯ ವೈದೃಶ್ಯಗಳ ಈ ಸಾಂಸ್ಕೃತಿಕ ನೆಲೆಗಳನ್ನು ತೌಲನಿಕವಾಗಿ ಪರಿಶೀಲಿಸುವ ಅಗತ್ಯವಿದೆ ಎಂಬುದರಲ್ಲಿ ಸಂದೇಹವಿಲ್ಲ.

**ಜನಪದ ಸಾಹಿತ್ಯ**

ದಕ್ಷಿಣ ಭಾರತದ ಜನಪದ ಸಾಹಿತ್ಯದಲ್ಲಿರುವ ಪ್ರಾದೇಶಿಕ ಭಿನ್ನತೆಗಳು ಮತ್ತು ಸಮಾನತೆಗಳನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸುವ ಸಾಧ್ಯತೆ ಇದೆ. ಗೀತೆ, ಕಥನಗೀತೆ, ಕಥೆ, ಗಾದೆ, ಒಗಟು ಮುಂತಾದವುಗಳಲ್ಲಿ ಬಹಳಷ್ಟು ವೈವಿಧ್ಯವಿದೆ. ಕಾವ್ಯ ಪ್ರಕಾರಗಳಲ್ಲಿ ಕಂಡುಬರುವ ಮಟ್ಟುಗಳನ್ನೇ ಸೂಕ್ಷ್ಮ ಪರಿಶೀಲನೆ ಮಾಡಬಹುದು; ಆ ಮಟ್ಟುಗಳಲ್ಲಿ ಗುರುತಿಸಬಹುದಾದ ದೇಶೀಯತೆಯನ್ನು ತೌಲನಿಕವಾಗಿ ಪರಿಶೀಲಿಸಬಹುದು. ಜನಪದ ಕಾವ್ಯ ಪ್ರಕಾರಗಳಲ್ಲಿ ಬಹಳಷ್ಟು ಕೊಳುಕೊಡುಗೆಗಳು ನಡೆದಿವೆ.

**ಕನ್ನಡ-ತೆಲುಗು:** ಕನ್ನಡ ಮತ್ತು ತೆಲುಗು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಹಲವು ಸಮಾನಾಂಶಗಳನ್ನು ಗುರುತಿಸಬಹುದು. 'ತೆಲುಗು ಮತ್ತು ಕನ್ನಡ ಜನಪದ ಗೀತೆಗಳು' ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ(೧೯೭೩) ಈ ಎರಡು ಭಾಷೆಗಳ ಜನಪದ ಗೀತೆಗಳ ಸಮಾನ ಮತ್ತು ವಿಭಿನ್ನಾಂಶಗಳನ್ನು ಡಾ. ಆರ್ವಿಯಸ್. ಸುಂದರಂ ತೋರಿಸಿಕೊಟ್ಟಿದ್ದಾರೆ. ಕನ್ನಡ ಜನಪದ ಗೀತೆಗಳ ಮಾಧ್ಯಮಗಳಲ್ಲಿ ತ್ರಿಪದಿ, ಷಟ್ಪದಿ, ಸಾಂಗತ್ಯ, ಏಳೆ ಮುಂತಾದವು ಪ್ರಮುಖ ಸ್ಥಾನ ಪಡೆದರೆ ತೆಲುಗು ಜನಪದ ಗೀತೆಗಳಲ್ಲಿ ದ್ವಿಪದಿ, ತರುವೋಜ, ಏಲ, ಸಾಂಗತ್ಯ ಮತ್ತು ಷಟ್ಪದಿಯ ಲಯವನ್ನೊಳಗೊಂಡ ಮಟ್ಟುಗಳಿವೆ.

ಉದಾ: ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲಿ ಕಾಯೊ ಗಣನಾಯ್ಕ

ಎಂಬ ಗಣನಾಯಕನ ಸ್ತುತಿಯ ಲಯದಲ್ಲೇ

ಶಿವಶಿವಮೂರ್ತಿವಿ ಗಣನಾಥ
ನೀವು ಶಿವುನಿ ಕುಮಾರುಡವು ಗಣನಾಥ.....

ಎಂಬ ತೆಲುಗು ಹಾಡಿದೆ.

ಇದೀ ರೀತಿ ಮಕ್ಕಳ ಹಾಡಾದ-

ಆನೆ ಬಂತಾನೆ - ಇದ್ಯಾವೂರಾನೆ
ವಿಜಯನಗರದಾನೆ - ಇಲ್ಲಿಗ್ಯಾಕೆ ಬಂತು
ಹಾದಿ ತಪ್ಪಿ ಬಂತು - ಹಾದಿಗೊಂದು ದುಡ್ಡು....



ಎಂಬುದು ತೆಲುಗಿನಲ್ಲಿ

ಏನುಗೊಚ್ಚಿಂದೇನುಗು - ಏವೂರೊಚ್ಚಿಂದೇನುಗು
ಮಾವೂರೊಚ್ಚಿಂ ದೇನುಗು - ಮಂಚಿನೀಳ್ಳುತಾಗಿಂದೇನುಗು

ಎಂದು ಅದೇ ಲಯದಲ್ಲೇ ಮೂಡಿಬಂದಿದೆ.

ಹೆಣ್ಣುಗಂಡು ಸವಾಲು ಜವಾಬಿನ ರೂಪದಲ್ಲಿ ಮಾಡುವ ಚಮತ್ಕಾರ ಸಂಭಾಷಣೆಯ ಗೀತೆಗಳು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿವೆ.

ಒಬ್ಬನ್ನ ಕಟ್ಟಿದ್ದೆ ಒಬ್ಬನ್ನ ಬಿಟ್ಟಿದ್ದೆ ಒಬ್ಬನ
ಕರಕೊಂಡು ಒಳಗ್ಹೋದ ಮಲ್ಲಿಗೆ
ಯಾವೋನ ಕಟ್ಟಿದ್ದೆ ಯಾವೋನ ಬಿಟ್ಟಿದ್ದೆ
ಯಾವೋನ ಕರಕೊಂಡು ಒಳಗ್ಹೋದೆ ಮಲ್ಲಿಗೆ
ಹಸುವನ್ನು ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ
ಹಾಲನ್ನು ಕರಕೊಂಡು ಒಳಗ್ಹೋದೆ ಮಲ್ಲಿಗೆ

ಹೀಗೆ ಗೂಡಾರ್ಥಗಳನ್ನು ಸೇರಿಸಿ ಪ್ರಶ್ನೋತ್ತರ ರೂಪದಲ್ಲಿ ಬರೆಯುವ ರಚನೆಗಳನ್ನು 'ಉದ್ಘಾತ್ಯಕ' ವೆನ್ನುತ್ತಾರೆ. ಕನ್ನಡದ ಹಾಡನ್ನೇ ಹೋಲುವ ತೆಲುಗು ಹಾಡೂ ಒಂದಿದೆ:

ಒಕರೀಕಿ ಚೆಯ್ಯಿಚ್ಚಿ ಒಕರೀಕಿ ಕಾಲಿಚ್ಚಿ
ಒಕರೀಕಿ ನಡುಮಿಚ್ಚಿ ಕೂಕುನ್ನಾನೋಯ್
ರಾಜಾ ಕೂಕುನ್ನಾನೋಯ್
ಎವರೀಕಿ ಚೆಯ್ಯಿಚ್ಚಿ ಎವರೀಕಿ ಕಾಲಿಚ್ಚಿ
ಎವರೀಕಿ ನಡುಮಿಚ್ಚಿ ಕೂಕುನ್ನಾವೋಲೆ
ಜಾಣ ಕೂಕುನ್ನವೇ
ಗಾಜುಲ್ಕಿ ಚೇಯಿಚ್ಚಿ ಅಂದೆಲ್ಕಿ ಕಾಲಿಚ್ಚಿ
ವಡ್ಯಾಣಾನ್ಕಿ ನಡುಮಿಚ್ಚಿ ಕೂಕುನ್ನಾನೋಯ್
ರಾಜಾ ಕೂಕುನ್ನಾನೋಯ್

ಜನಪದ ಕಾವ್ಯ ಪ್ರಕಾರಗಳಲ್ಲಿ ತೌಲನಿಕವಾಗಿ ಅಧ್ಯಯನ ಮಾಡಬೇಕಾದುವು ಬಹಳಷ್ಟಿವೆ. ಕನ್ನಡದ ಮಲೆಯಮಾದೇಶ್ವರ, ಮಂಟೇಸ್ವಾಮಿ, ಪಿರಿಯಾಪಟ್ಟಣದ ಕಾಳಗ ಮುಂತಾದವು ಕನ್ನಡದ ಪ್ರಾದೇಶಿಕತೆಯನ್ನು ಪ್ರತಿನಿಧಿಸುವ ಕೃತಿಗಳು. ಎಲ್ಲಮ್ಮನ ಕಾವ್ಯ, ಸಾರಂಗಧರ, ನಾಗರಕನ್ನೆ, ಕುಮಾರರಾಮನ ಕಥೆ ಮುಂತಾದವು ಎರಡೂ ಭಾಷೆಗಳಲ್ಲಿ ಅತ್ಯಂತ ಜನಪ್ರಿಯ ಕಥೆಗಳು ಕರ್ನಾಟಕದ ಹೆಳವರು, ದೊಂಬಿದಾಸರು, ತೆಲುಗು ಜಂಗಮರು ಮುಂತಾದ ವೃತ್ತಿಗಾಯಕರು ತೆಲುಗು ಮಾತನಾಡುವ ಕನ್ನಡ ಕಲಾವಿದರು. ಚೌಡಿಕೆ, ತಂಬೂರಿ, ಗಣೆ, ಗಂಟೆ ಮುಂತಾದ ವಾದ್ಯಗಳನ್ನು ಬಳಸಿ ಮಾಡುವ ಕಥಾಗಾನ ಕರ್ನಾಟಕಾಂಧ್ರಗಳಿಗೆ ಸಮಾನವಾದಂಥವೇ.

ಕನ್ನಡ ಮತ್ತು ತೆಲುಗು ಪುರಾಣ, ಐತಿಹ್ಯ ಮತ್ತು ಕಥೆಗಳಲ್ಲೂ ಸಾಕಷ್ಟು

ಹೋಲಿಕೆಗಳಿವೆ. ಗ್ರಾಮದೇವತೆಗಳಿಗೆ ಸಂಬಂಧಿಸಿದ ಪುರಾಣಗಳು, ಸ್ಥಳೀಯ ಮತ್ತು ಪ್ರವಾಸಿ ಐತಿಹ್ಯಗಳು, ಜನಪ್ರಿಯ ಕಥೆಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಪ್ರಸಾರವಾಗಿವೆ. ಗಂಗಮ್ಮ, ಎಲ್ಲಮ್ಮ, ಚೌಡಮ್ಮ, ಮಂಚಮ್ಮ ಮುಂತಾದವರ ಬಗ್ಗೆ ಹೇಳುವ ಪುರಾಣಗಳು ತುಲನೆಗೆ ಅರ್ಹವಾಗಿವೆ. ಮನುಷ್ಯರ ಹೊಟ್ಟೆಯಲ್ಲಿ ನಾಗರಹಾವು ಹುಟ್ಟಿ ಅದನ್ನು ಸಾಕಿದರೆಂಬಂಥ ಐತಿಹ್ಯಗಳು ಕರ್ನಾಟಕದಲ್ಲಿರುವಂತೆ ಆಂಧ್ರದ ಧರಣಿಕೋಟ ವಂಶಸ್ಥರ ಬಗ್ಗೆಯೂ ಪ್ರಚಲಿತವಾಗಿವೆ.

ಗಾದೆ ಮತ್ತು ಒಗಟುಗಳನ್ನು ಕೂಡ ತೌಲನಿಕವಾಗಿ ಪರಿಶೀಲಿಸುವ ಸಾಧ್ಯತೆಗಳು ಈ ಎರಡು ಭಾಷೆಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಕನ್ನಡದ ಸಾವಿರಾರು ಗಾದೆಗಳಿಗೆ ಸಮಾನವಾದ ತೆಲುಗು ಗಾದೆಗಳಿವೆ. ತೆಲುಗು ಮತ್ತು ಕನ್ನಡ ಗಾದೆಗಳ ತೌಲನಿಕ ಪರಿಶೀಲನೆ ಮಾಡಿ ಡಾ. ಪಿ. ಎಸ್. ಗೋಪಾಲಕೃಷ್ಣ ತೆಲುಗಿನಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ (ಮೈಸೂರು ವಿಶ್ವವಿದ್ಯಾನಿಲಯ). ಇದೇ ರೀತಿ ಒಗಟುಗಳ ಬಗ್ಗೆಯೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಯುತ್ತಿದೆ. ಕನ್ನಡ ಹಾಗೂ ತೆಲುಗುಗಳಲ್ಲಿರುವ ಕೆಲವು ಸಮಾನ ಗಾದೆಗಳನ್ನು ನೋಡಬಹುದು.

ಕುರುಡನ ಕೈಗೆ ಕನ್ನಡಿ ಕೊಟ್ಟಹಾಗೆ
ಗುಡ್ಡಿವಾಡಿಕಿ ಅದ್ದಂ ಚೂಪಿನಟ್ಲು

ಕುಂಬಳಕಾಯಿಕಳ್ಳ ಅಂದ್ರ ಹೆಗಲು ಮುಟ್ಟಿ ನೋಡಿಕೊಂಡ
ಗುಮ್ಮಡಿಕಾಯ ದೊಂಗ ಅಂಟೆ ಭುಜಾಲು ತಡುಮುಕುನ್ನಟ್ಲು

ಮಂಗನಕೈಗೆ ಮಾಣಿಕ್ಯ ಕೊಟ್ಟಂಗೆ
ಕೋತಿ ಚೇತಿಕಿ ಕೊಬ್ಬರಿಕಾಯ ಇಚ್ಚಿನಟ್ಲು

ಕೂಳಿಗೆ ಬಡವನಾದರೆ ಕುಲಕ್ಕೆ ಬಡವನಾ
ಕೂಟಿಕಿ ಪೇದಯಿತೇ ಕುಲಾನಿಕಿ ಪೇದಾ

ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು
ಮಿಂಗಮೆತುಕು ಲೇದು ಮೀಸಾಲಕು ಸಂಪಂಗಿ ನೂನ

ಹೆತ್ತವರಿಗೆ ಹೆಗ್ಗಣ ಮುದ್ದು
ಕಾಕಿ ಪಿಲ್ಲ ಕಾಕಿಕಿ ಮುದ್ದು

ಇಂಥ ಸಾವಿರಾರು ಉದಾಹರಣೆಗಳನ್ನು ಪಟ್ಟಿ ಮಾಡಬಹುದು.

ಕನ್ನಡ ಮತ್ತು ತೆಲುಗು ಜನಪದ ಸಾಹಿತ್ಯಗಳನ್ನು ಗಮನಿಸಿದಾಗ ಈ ಎರಡು ಭಾಷೆಗಳ ಮೂಲಸಂಸ್ಕೃತಿ ಒಂದೇ ಆಗಿರುವುದರಿಂದ ಅದರ ಆಧಾರದ ಮೇಲೆ ರೂಪುಗೊಂಡ ವಿವಿಧ ಪ್ರಕಾರಗಳಲ್ಲಿ ಸಮಾನತೆಯನ್ನು ಗುರುತಿಸಬಹುದು. ಮುಖ್ಯವಾಗಿ ಕಾವ್ಯ ಮಾಧ್ಯಮವಾದ ಜನಪದ ಲಯಗಳಲ್ಲಿರುವ ಸಮಾನತೆಯನ್ನು ಅಧ್ಯಯನ ಮಾಡಬಹುದು.



ಪುರಾಣ, ಐತಿಹ್ಯ, ಕಥೆ ಮತ್ತು ಕಥನಗೀತೆಗಳಲ್ಲಿರುವ ಆಶಯಗಳನ್ನು ಹೋಲಿಸಿ ನೋಡಿದಾಗಲೂ ಸಾಕಷ್ಟು ಸಮಾನತೆ ಕಂಡುಬರುತ್ತದೆ. ಇನ್ನೊಂದು ಕಡೆ ಪ್ರಾದೇಶಿಕತೆಯ ಅಂಶಗಳನ್ನು ಕೂಡಾ ಗುರುತಿಸಬಹುದು. ಉದಾ: ಶ್ರೀಹರಿಕೋಟದಿಂದ ಹಿಡಿದು ಶ್ರೀಕಾಕುಳಂವರೆಗೆ ಸುಮಾರು ೮೫೦ ಕಿ.ಮೀ. ಇರುವ ಆಂಧ್ರದ ಕರಾವಳಿ ತೆಲುಗರ ಸಂಸ್ಕೃತಿಯ ಮೇಲೆ ಅಪಾರ ಪ್ರಭಾವ ಬೀರಿದೆ. ಇದಲ್ಲದೆ ಆಂಧ್ರದಲ್ಲಿ ನೂರಾರು ಕಿ.ಮೀ. ದೂರ ಹರಿಯುತ್ತಿರುವ ಗೋದಾವರಿ ಮತ್ತು ಕೃಷ್ಣಾನದಿಗಳು ಉಂಟು ಮಾಡಿದ ದ್ವೀಪಗಳಿಂದ ಹಡಗುಗಳ ಸಂಚಾರ ಅನಿವಾರ್ಯವಾಗಿದೆ. ಈ ಕಾರಣದಿಂದ ತೆಲುಗಿನಲ್ಲಿ ದೋಣಿಯ ಹಾಡುಗಳು ಸಮೃದ್ಧವಾಗಿವೆ. ಧಾರ್ಮಿಕ ಹಿನ್ನೆಲೆಯಿಂದ ಜನಪದ ಸಾಹಿತ್ಯವನ್ನು ಪರಿಶೀಲಿಸಿದಾಗ ಕನ್ನಡ ಮತ್ತು ತೆಲುಗುಗಳ ನಡುವೆ ವ್ಯತ್ಯಾಸ ಕಂಡುಬರುತ್ತದೆ. ಕನ್ನಡದಲ್ಲಿ ಶೈವ ಸಾಹಿತ್ಯ ಸಮೃದ್ಧವಾಗಿದೆ. ತೆಲುಗಿನಲ್ಲಿ ರಾಮಾಯಣ ಸಾಹಿತ್ಯ ಹೇರಳವಾಗಿದೆ. ಕನ್ನಡದಲ್ಲಿ ಮಲೆಯ ಮಾದೇಶ್ವರ, ಮಂಟೇಸ್ವಾಮಿಯಂಥ ಧಾರ್ಮಿಕ ವೀರರು ಮಹಾಕಾವ್ಯಗಳ ನಾಯಕರಾಗಿದ್ದಾರೆ. ತೆಲುಗಿನಲ್ಲಿ ಕಾಟಮರಾಜು, ಪಲನಾಡಿನ ವೀರರು ವೀರಕಾವ್ಯಗಳಿಗೆ ಸ್ಫೂರ್ತಿ ನೀಡಿದ್ದಾರೆ. ಇವೆಲ್ಲ ವಿಷಯಗಳು ತೌಲನಿಕ ಅಧ್ಯಯನಕ್ಕೆ ವೈವಿಧ್ಯದ ವಸ್ತುಗಳನ್ನು ಒದಗಿಸಬಲ್ಲವು.

## ಕನ್ನಡ - ತಮಿಳು

ಕನ್ನಡ ಮತ್ತು ತಮಿಳು ಭಾಷೆಗಳ ನಡುವಣ ಸಂಬಂಧವನ್ನು ಭಾಷಾವಿಜ್ಞಾನಿಗಳು ಗಮನಿಸಿದಷ್ಟು ಸಾಹಿತಿಗಳು ಗಮನಿಸಿಲ್ಲ. ಕನ್ನಡದ ವೀರಶೈವಸಾಹಿತ್ಯ ಮತ್ತು ತಮಿಳಿನ ಶೈವಸಾಹಿತ್ಯಗಳ ಸಂಬಂಧ ಕುರಿತಂತೆ ಸ್ವಲ್ಪ ಮಟ್ಟಿಗೆ ಕೆಲಸ ನಡೆದಿದೆಯಾದರೂ ಜನಪದ ಛಂದಸ್ಸು, ಜನಪದ ಗೀತೆಗಳ ವಸ್ತು ವೈವಿಧ್ಯ, ಕಾವ್ಯ ಪ್ರಕಾರಗಳು, ಪುರಾಣಕಥೆ ಮುಂತಾದವುಗಳನ್ನು ತೌಲನಿಕವಾಗಿ ಪರಿಶೀಲಿಸುವ ಕಾರ್ಯ ಬಹಳಷ್ಟು ನಡೆಯಬೇಕಾಗಿದೆ.

ತಮಿಳಿನ ಜನಪದ ಗೀತೆಗಳನ್ನು ಗಮನಿಸಿದಾಗ ಅನೇಕ ಗೀತೆಗಳು ಲಯದಲ್ಲಿ ಮತ್ತು ವಸ್ತುವಿನಲ್ಲಿ ಕನ್ನಡ ಗೀತೆಗಳನ್ನು ಹೋಲುವಂತಿವೆ. ಕನ್ನಡದಲ್ಲಿರುವಂತೆಯೇ ಕೆಲಸದ ಹಾಡುಗಳು. ಸ್ತುತಿಗೀತೆಗಳು, ಲಾಲಿ, ಜೋಗುಳ, ಶೃಂಗಾರ ಮತ್ತು ಹಾಸ್ಯಗೀತೆಗಳು ತಮಿಳಿನಲ್ಲೂ ಕಂಡುಬರುತ್ತವೆ.

ಮಕ್ಕಳ ಕೈಯನ್ನು ಬೀಸುತ್ತಾ ತಮಿಳರು ಹಾಡುವ -

ಕೈವೀಚಮ್ಮಾ ಕೈವೀಚು
ಕಡೈಕ್ಕು ಪೋಗಲಾಮ್ ಕೈವೀಚು
ಮಿಟ್ಟಾಯ್ ವಾಂಗಲಾಮ್ ಕೈವೀಚು
ಮೆದುವಾಯ್ ತಿನ್ನಲಾಮ್ ಕೈವೀಚು

ಎಂಬ ಹಾಡನ್ನು ಹೋಲುವ ಹಲವು ಹಾಡುಗಳು ಕನ್ನಡದಲ್ಲಿವೆ.

೧. ಕೈ ಕೈಯೆಲ್ಲ ಎಲ್ಹೋದೋ - ಸಂತೆಗ್ಹೋದೋ...

೨. ತಾರಮ್ಮಯ್ಯ ತಾರಕ್ಕಯ್ಯ...

ಮಕ್ಕಳಿಗೆ ತಿಂಗಳು ಮಾವನನ್ನ ತೋರಿಸಿ ತಮಿಳರು ಹಾಡುವ

ನಿಲಾ ನಿಲಾ ಓಡಿವಾ
ನಿಲ್ಲಾಮಲ್ ಓಡಿವಾ
ಮಲ್ಕೆ ಮೇಲೆ ಏರಿವಾ
ಮಲ್ಲಿಗ್ಗೆ ಪ್ಪೂ ಕೊಂಡು ವಾ

ಕನ್ನಡದಲ್ಲಿ

ಚಂದಮಾಮ ಓಡಿ ಬಾ
ಚಂದದಿಂದ ಆಡುಬಾ...

ಎಂದಿದೆ ತೆಲುಗಿನಲ್ಲೂ ಇದೇ ಬಗೆಯ ಹಾಡುಗಳಿವೆ.

ಆನೆ ಬಂತೊಂದಾನೆ.. ಎಂಬ ಹಾಡು ತೆಲುಗಿನಲ್ಲಿರುವಂತೆ ತಮಿಳಿನಲ್ಲೂ ಇರುವುದನ್ನು ಕಾಣಬಹುದು.

ಆನ್ಯೆ ಆನ್ಯೆ ಅಳಗರ್ ಯಾನ್ಯೆ
ಅಳಗರುಮ್ ಚೊಕ್ಕರ.ುಮ್ ಏರುಮ್ ಯಾನ್ಯೆ
ಕಟ್ಟಿಕ್ಕರುಮ್‌ಬ್ಯೆ ಮುರಿಕ್ಕುಮ್ ಯಾನ್ಯೆ
ಕಾವೇರಿ ನೀರ್ಕೈಕ್ಕಲಕ್ಕುಮ್ ಯಾನ್ಯೆ
ಕುಟ್ಟಿಯಾನ್ಯಕ್ಕು ಕ್ಕೊಮ್ಬು ಮುಳೈತ್ತದು
ಪಟ್ಟಣಮೆಲ್ಲಾಮ್ ಪರನ್ದೋಡಿಪ್ಪೋಚ್ಚು

ಭಾವನನ್ನು ಗೇಲಿ ಮಾಡುವ ಹಾಸ್ಯದ ಹಾಡುಗಳು ಕೂಡ ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿವೆ.

ಯಾಕ್ರಿ ಭಾವ ಕೂಕ್ಶಿಟ್ರಿ
ನಾನ್ಹೇಳಿದ್ನ ಮರೆಕ್ಶಿಟ್ರಿ
ಮೈಸೂರ್ಗ ಹೋಗಣ ಬನ್ನಿ ಭಾವ
ಮೈಸೂರ್ಪಾಕ್ ತಕ್ಕೊಡಿ ಭಾವ...

ಇದೇ ರೀತಿಯ ಹಾಡು

ಬಾವ ಬಾವಪನ್ನೀರು
ಬಾವನು ಎಟ್ಟುಕ ತನ್ನೀರು
ವೀಧಿವೀಧಿ ತಿಪ್ಪೇರು
ವೀಸೆಡು ಗಂಧಂ ಪೂಸೇರು

- ಎಂದು ತೆಲುಗಿನಲ್ಲಿದೆ.



ತಮಿಳಿನಲ್ಲಿ

ಅತ್ತಾನ್ ಅತ್ತಾನ್ ವಾಂಗ
ಆಚನಪ್ಪಲಗ್ಯೆಯಿಲೇ ಇರುಂಗ
ಕುಟ್ಟಕ್ಕುಳತ್ತುಕ್ಕು ಪ್ಪೋಂಗ
ಕುಳಿಚ್ಚು ಮುಳುಗಿ ವಾಂಗ
ಕಾಸು ಇರುನ್ದಾಲ್ ತಾಂಗ
ದೋಸ್ಯೆ ಚುಟ್ಟುತ್ತಾರೇನ್
ತಿನ್ನುಪ್ಪಿಟ್ಟುಪ್ಪೋಗ್ಯೆಯಿಲೇ
ಪೊಣ್ಣು ಕಟ್ಟಿತ್ತಾರೇನ್ -

ಎಂದಿದೆ.

ತಮಿಳಿನ ಅನೇಕ ವೀರಗೀತೆಗಳಲ್ಲಿ ಕನ್ನಡ ರಾಜರ ಪ್ರಸ್ತಾವ ಬರುತ್ತದೆ. ತಮಿಳಿನ ಚೋಳರೊಂದಿಗೆ ಮೊದಲಿನಿಂದಲೂ ಕರ್ನಾಟಕಕ್ಕೆ ಹಾಗೂ ಕನ್ನಡ ರಾಜರಿಗೆ ಸಂಬಂಧಗಳಿದ್ದುವು. ಚಾರಿತ್ರಿಕ ಕಥನಗೀತೆಗಳ ಮೊದಲನೆಯ ಘಟ್ಟದಲ್ಲಿ ಕನ್ನಡ ರಾಜರಿಗೂ ಪಾಂಡ್ಯ ರಾಜರಿಗೂ ನಡೆದ ಯುದ್ಧಗಳ ವಿಚಾರ ಕಾವ್ಯರೂಪ ಪಡೆದಿದೆ. ಕುಲಶೇಖರ ಪಾಂಡ್ಯ ಮತ್ತು ಅವನ ಸೋದರರು ಕಯತೂರಿನಲ್ಲಿ ಆಳುತ್ತಿದ್ದಾಗ ಕನ್ನಡರಾಜ ಬಲವಾದ ಮುತ್ತಿಗೆ ಹಾಕಿದನೆಂದು 'ಐವರ್ ರಾಜಾಕ್ಕಳ್ ಕದೈ' ಹೇಳುತ್ತದೆ. ಯುದ್ಧದಲ್ಲಿ ನಾಲ್ವರು ಸೋದರರು ಸತ್ತರು. ಕೊನೆಯವನನ್ನು ಕನ್ನಡ ರಾಜ ಸೆರೆ ಹಿಡಿದ. ಕನ್ನಡ ರಾಜಕುಮಾರಿ ಅವನನ್ನು ಪ್ರೀತಿಸಿದಳು. ಆದರೆ ಅವನು ಅದನ್ನು ಸಹಿಸದೆ ವಜ್ರ ನುಂಗಿ ಅಸುನೀಗಿದ. ಕನ್ನಡ ರಾಜಕುಮಾರಿ ಅವನೊಡನೆ ಸಹಗಮನ ಮಾಡಿದಳು. 'ಕನ್ನಡಿಯನ್ ಪ್ಪಡೈಪ್ಪೋರ್' ಎಂಬುದು ಕೂಡಾ ಇದೇ ರೀತಿಯದೇ.

ಹೀಗೆಯೇ ಗಾದೆ, ಒಗಟು ಮುಂತಾದ ಭಾಷಿಕ ಅಭಿವ್ಯಕ್ತಿಗಳಲ್ಲಿ ಕನ್ನಡ ಮತ್ತು ತಮಿಳಿನ ಸಮಾನಾಂಶಗಳನ್ನು ಗುರುತಿಸಬಹುದು. ದಕ್ಷಿಣ ಭಾರತದ ನಾಲ್ಕು ಪ್ರಮುಖ ಭಾಷೆಗಳಲ್ಲೂ ಕಂಡುಬರುವ ಸಮಾನ ಗಾದೆಗಳ ಸಂಕಲನವೊಂದನ್ನು ದಕ್ಷಿಣ ಭಾರತ ಪುಸ್ತಕ ಸಂಸ್ಥೆಯವರು ನಾಲ್ಕು ಭಾಷೆಗಳಲ್ಲೂ ಪ್ರಕಟಿಸಿದ್ದಾರೆ.

ಕುಣಿಯಲಾರದ ಸೂಳೆ ನೆಲಡೊಂಕೆಂಳು
ಆಡತ್ತೆರಿಯಾದ ತೇವಡಿಯಾಳ್ ತೆರುಕ್ಕೋಣಲ್ ಎನ್ರಾರಳಮ್

ಹೆದರಿಕೊಂಡವನಿಗೆ ನೋಡಿದ್ದೆಲ್ಲಾ ದೆವ್ವ
ಮರುಣ್ಣವನ್ ಕಣ್ಣುಕ್ಕು ಇರುವುದೆಲ್ಲಾಮ್ ಪೇಯ್

ಒಂದು ದಿನದ ಆಟಕ್ಕೆ ಮೀಸೆ ಬೋಳಿಸಬೇಕೇ
ಒರುನಾಳ್ ಕೂತ್ತುಕ್ಕು ಮೀಸ್ಯೆ ಸಿರೈಕ್ಕಲಾಮಾ

ಒಗಟುಗಳನ್ನು ಕೂಡಾ ತೌಲನಿಕವಾಗಿ ಪರಿಶೀಲಿಸಿ ಒಂದೇ ರೀತಿಯ ಅರ್ಥವನ್ನು ಕೊಡಲು ಬೇರೆ ಬೇರೆ ಭಾಷೆಗಳಲ್ಲಿ ಭಾವಾಭಿವ್ಯಕ್ತಿ ಹೇಗಿರುತ್ತದೆಂಬುದನ್ನು ತಿಳಿಯಬಹುದು.

ಗಗನದಲ್ಲಿರುವ ಚುಕ್ಕಿಗಳನ್ನು ಹೇಳಬಯಸಿದಾಗ ತಮಿಳರು ಕೆಳಗಿನ ಒಗಟನ್ನು ಸೃಷ್ಟಿಸಿದ್ದಾರೆ.

ಎಲ್ಲೈಯಿಲ್ಲಾದ ವಯಲಿಲೇ
ಎಣ್ ಮುಡಿಯಾದ ಆಡುಗಳ್

(ಎಲ್ಲೆಯೇ ಇಲ್ಲದ ಬಯಲಿನಲ್ಲಿ ಎಣಿಯಿಲ್ಲದ ಆಡುಗಳು)

ಕನ್ನಡದಲ್ಲಿ ಇದನ್ನೇ 'ಅಂಗೈಯಗಲದ ರೊಟ್ಟಿಗೆ ನೂರೊಂದು ಉಪ್ಪಿನಕಾಯಿ' ಎನ್ನುತ್ತಾರೆ. ಅವ್ವನ ಸೀರೆ ಮಡಿಸಲಾರೆ, ಅಪ್ಪನ ರೊಕ್ಕ ಎಣಿಸಲಾರೆ ಎಂದು ಆಕಾಶವನ್ನು ಸೂಚಿಸಬೇಕಾದಾಗ ತಮಿಳರು. 'ಉಲಗಕ್ಕೆಲ್ಲಾಮ್ ಒರೇ ತುಪ್ಪಟಿ' (ಪ್ರಪಂಚಕ್ಕೆಲ್ಲ ಒಂದೇ ದುಪ್ಪಟಿ) ಹೀಗೆಂದಿದ್ದಾರೆ.

'ನೋಡಿದರೆ ನೋಡುವುದು, ನಕ್ಕರೆ ನಗುವುದು, ಒಡೆದರೆ ಚೂರಾಗುವುದು' - ಕನ್ನಡಿ. ಇದನ್ನೇ

ಪಾತ್ತಾಲ್ ಪಾಕ್ಕುಮ್
ಸಿರಿತ್ತಾಲ್ ಸಿರಿಕ್ಕುಮ್
ಕುತ್ತಿನಾಲ್ ಸಿಲ್ಲಾಗುಮ್ ಅದು ಎನ್ನ? ಎಂದಿದ್ದಾರೆ ತಮಿಳರು.

## ಕನ್ನಡ - ಮಲಯಾಳಂ

ಕರ್ನಾಟಕದೊಂದಿಗೆ ನೇರ ಸಂಪರ್ಕ ಇರುವ ಇನ್ನೊಂದು ರಾಜ್ಯ ಕೇರಳ. ಕರ್ನಾಟಕದ ದಕ್ಷಿಣ ಪ್ರಾಂತ್ಯಗಳಲ್ಲಿ ಕೇರಳದ ಆರಾಧನಾ ಪದ್ಧತಿಗಳು, ಗೀತ ಸಂಪ್ರದಾಯಗಳು ಚಿರಪರಿಚಿತವಾಗಿವೆ. ಕೇರಳದ ಜನಪದ ಸಾಹಿತ್ಯದಲ್ಲಿ ಪ್ರಾದೇಶಿಕ ಸಂಪ್ರದಾಯಗಳ ಸೊಬಗನ್ನು ಕೂಡಾ ಬಹಳಮಟ್ಟಿಗೆ ಕಾಣಬಹುದು.

ಕೇರಳದ ಜನಪದ ಸಾಹಿತ್ಯದಲ್ಲಿ ವಡಕ್ಕನ್ ಪಾಟ್ಟುಗಳ ಸಂಗ್ರಹ ಮತ್ತು ಅಧ್ಯಯನ ನಡೆದಿದೆ. ಈ ಹಾಡುಗಳಲ್ಲಿ ಕಂಡುಬರುವ ವೀರರು ಸುಮಾರು ಮುನ್ನೂರು ವರ್ಷಗಳ ಹಿಂದೆ ಬಾಳಿ ಬದುಕಿದವರು. ಉತ್ತರ ಕೇರಳದಲ್ಲಿ ಜನರ ಮನ್ನಣೆ ಪಡೆದ ಪರಾಕ್ರಮಿಗಳು ಈ ಹಾಡುಗಳಿಗೆ ಸ್ಫೂರ್ತಿ ನೀಡಿದ್ದಾರೆ. ಅವರಲ್ಲಿ ಪುತ್ತೂರು ಮನೆತನ ಮತ್ತು ತಚ್ಚೋಳಿ ಮನೆತನ ಎಂಬ ಎರಡು ಮನೆತನಗಳಿದ್ದುವು. ಕೇರಳದ 'ರಾಬಿನ್ ಹುಡ್' ಎಂದು ಹೆಸರು ಪಡೆದ ಒದೇವನ ಬಗ್ಗೆ ಸುಮಾರು ಹದಿನೈದಕ್ಕೂ ಹೆಚ್ಚು ಲಾವಣಿಗಳು ಮೂಡಿ ಬಂದಿವೆ. ಅವನು ಹುಟ್ಟು ವೀರ. ಜನ್ಮತಾಳಿದಂದಿನಿಂದ ಅಸುನೀಗುವವರೆಗೆ ಅವನು ತೋರಿದ ವೀರತ್ವ ಹಾಡುಗಳಿಗೆ ವಸ್ತುವಾಗಿದೆ. ಇವನನ್ನು ಕುರಿತ ಲಾವಣಿಗಳಲ್ಲಿ ವಿರೋಧಿಗಳು



ಭಿನ್ನರಾಗಿದ್ದರೂ ವಸ್ತು ಮತ್ತು ವರ್ಣನೆ ಒಂದೇ. ಒದೇನನ ಪರಾಕ್ರಮವನ್ನ ಮೆಚ್ಚಿ ಹಾಡಿರುವಂತೆ ಅವನ ವಿರೋಧಿಗಳ ಶೌರ್ಯವನ್ನು ಕೂಡಾ ಜನಪದ ಗಾಯಕರು ಮೆಚ್ಚಿದ್ದರೆ.

ಕಾಮುಕನನ್ನು ನಾಯಕನನ್ನಾಗಿ ಮಾಡಿ ಬರೆದ ಪುದುನಾಡನ್ ಕೇಳು, ಕುರನ್ನರನ್ನಿಲೆ ಕಣ್ಣನ್ ಮತ್ತು ಮಂತ್ರವಿದ್ಯೆಯನ್ನು ಆಧರಿಸಿ ಬರೆದ ಆದಿರಾಜನ ಕಥೆ ಮುಂತಾದುವು ಕೇರಳದಲ್ಲಿ ಜನಪ್ರಿಯವಾಗಿವೆ. ಪುದುನಾಡನ್ ಕೇಳು ಎಂಬುದು ಪುದುನಾಡಿನಲ್ಲಿದ್ದ ಚಂದು ಮತ್ತು ಕೇಳು ಎಂಬ ಸೋದರರ ಕಥೆ. ಕಾಮದಾಸೆಯಿಂದ ಮಾಧು ಎಂಬ ಹೆಣ್ಣು ಚಂದುವನ್ನು ಕೊಲ್ಲಿಸಿದ ಕಥೆಯಿದು. ಕುರುನ್ನರಬ ಎಂಬ ಗ್ರಾಮದಲ್ಲಿದ್ದ ಕಣ್ಣನ್ ಎಂಬ ಯುವಕನ ಕಥೆ ಕುರುನ್ನರನ್ನಿಲ್ ಕಣ್ಣನ್. ಕೆಲವು ಅದ್ಭುತ ವಿದ್ಯೆಗಳನ್ನು ಕಲಿತ ಮಾಟಗಾರನಾದ ಆಲಿಕುಟ್ಟಿಯ ಕಥೆ 'ಬೊಂಬಾಯಿ ಆಲಿಕುಟ್ಟಿ'.

ಕೇರಳದಲ್ಲಿ ರಾಮಾಯಣ, ಮಹಾಭಾರತ ಕಥೆಗಳು ವೈವಿಧ್ಯಮಯ ಕಾವ್ಯಗಳಾಗಿ ಮೂಡಿಬಂದಿವೆ. ಉತ್ತರ ರಾಮಾಯಣದ ಒಂದು ಸ್ವಾರಸ್ಯಕರ ಪ್ರಸಂಗವನ್ನು ಜೀಶಂಪರವರು ಉದಾಹರಿಸಿದ್ದಾರೆ. (ಡಾ. ಹಿ.ಶಿ. ರಾಮಚಂದ್ರೇಗೌಡರ 'ಕೇರಳ ಜಾನಪದ'ದ ಮುನ್ನುಡಿ). ''ಅಯೋಧ್ಯೆಗೆ ರಾಮಸೀತೆಯರು ಮರಳಿದ ಮೇಲೆ ಕೌಸಲ್ಯೆ ವಿಲಕ್ಷಣ ರೀತಿಯ ಅತ್ತೆಯಾಗಿ ಕಾಣಿಸಿಕೊಳ್ಳುತ್ತಾಳೆ. ರಾವಣನಂಥ ಖಳನಾಯಕ ಹೇಗೆ ಕಾಣುತ್ತಾನೆ ನೋಡಬೇಕೆಂಬ ಕುತೂಹಲವನ್ನು ವ್ಯಕ್ತಪಡಿಸಿ ಸೀತೆ ಅವನ ಚಿತ್ರವನ್ನು ಬರೆಯುವಂತೆ ಮಾಡುತ್ತಾಳೆ. ಚಿತ್ರರಚನೆಯಾದ ಮೇಲೆ ಆ ಚಿತ್ರವನ್ನು ರಾಮನಿಗೆ ತೋರಿಸಿ ರಾಮನಿಗೆ ಹೆಂಡತಿಯ ಬಗ್ಗೆ ಸಂಶಯ ಮೂಡುವಂತೆ ಮಾಡಿ ಸೀತೆಯನ್ನು ಲಕ್ಷ್ಮಣನೊಡನೆ ಅವನು ಕಾಡಿಗೆ ಕಳಿಸುವ ಸನ್ನಿವೇಶವನ್ನು ತಂದೊಡ್ಡುತ್ತಾಳೆ.'' ಇದೇ ಪ್ರಸಂಗ ತೆಲುಗಿನ ರಾಮಾಯಣಗಳಲ್ಲೂ ಇದೆ (ರಾಮಾಯಣದ ಹಾಡುಗಳು, ಆಂಧ್ರ ಸಾರಸ್ವತ ಪರಿಷತ್ತು), ಕನ್ನಡದಲ್ಲೂ ಈ ತರಹದ ಕಥೆ ಇದೆ.

ಕನ್ನಡ ಮತ್ತು ಮಲಯಾಳಂ ಗಾದೆಗಳನ್ನು ಕೂಡಾ ತೌಲನಿಕವಾಗಿ ಪರಿಶೀಲಿಸುವ ಅಗತ್ಯವಿದೆ. ಕನ್ನಡಿಗರಿಗೆ ಪರಿಚಿತವಾದ ಹಲವು ಗಾದೆಗಳು ಮಲಯಾಳಂ ಭಾಷೆಯಲ್ಲಿವೆ.

ಇಲ ಮುಳ್ಳಿಲ್ ವೀನಲುಮ್ ಮುಳ್ಳು ಇಲಯಿಲ್ ವೀನಲುಮ್ ಇಲಕ್ಕು ತಾನೆ ಕೇಡು
ಎಲೆ ಮುಳ್ಳಿನ ಮೇಲೆ ಬಿದ್ದರೂ ಮುಳ್ಳು ಎಲೆಯ ಮೇಲೆ ಬಿದ್ದರೂ ಎಲೆಗೆ ತಾನೆ ಕೇಡು

ಪುರಕ್ಕುತೀ ಪಿಡಿಕ್ಕುಂ ಬೋಲ್ ಕಿನರು ಕುಳಿಕ್ಕಾನ್ ಪೋಯಿ
ಮನೆ ಉರಿಯುತ್ತಿರುವಾಗ ಭಾವಿ ತೋಡಿದಂತ

ಅಂಜು ವಿರಲುಂ ಒರು ಪೋಲೆಯೋ?
ಐದು ಬೆರಳು ಒಂದೇ ಸಮನಾಗಿ ಇರುತ್ತವೆಯೇ?

ಕೇರಳದ ಕರಾವಳಿ ಪ್ರದೇಶ, ಗುಡ್ಡಗಾಡುಗಳು, ಭೂತಾರಾಧನೆ, ನಾಗಪೂಜೆಯಂಥ

ಸಂಪ್ರದಾಯಗಳು, ಸಾಂಪ್ರದಾಯಿಕ ಜನಪದ ಲಯಗಳು ವಿಶಿಷ್ಟ ಸಾಹಿತ್ಯ ಸೃಷ್ಟಿಗೆ ಅವಕಾಶ ನೀಡಿವೆ.

### ಸಾಹಿತ್ಯೇತರ ಜಾನಪದ

ನಾವು ಜನಪದ ಸಾಹಿತ್ಯದ ಕಡೆ ಗಮನ ಕೊಟ್ಟಷ್ಟು ಸಾಹಿತ್ಯೇತರ ಜಾನಪದದ ಕಡೆ ಕೊಟ್ಟಿಲ್ಲ ಎನ್ನುವುದು ನಿಜ. ಜಾನಪದರ ಸಂಸ್ಕೃತಿಯ ಸ್ವರೂಪವನ್ನು ತಿಳಿಯುವಲ್ಲಿ ನಂಬಿಕೆ, ಸಂಪ್ರದಾಯ, ಪೂಜಾವಿಧಾನಗಳು, ವೈದ್ಯ, ಅಡುಗೆ ವಿಧಾನಗಳು, ಪ್ರದರ್ಶನ ಕಲೆಗಳು ಕೂಡಾ ನೆರವಾಗುತ್ತವೆಂಬುದರಲ್ಲಿ ಸಂದೇಹವಿಲ್ಲ.

### ಕನ್ನಡ - ತೆಲುಗು

ಜನಪದ ಸಾಹಿತ್ಯದ ವಿಷಯದಲ್ಲಿರುವಂತೆಯೇ ಸಾಹಿತ್ಯೇತರ ಜಾನಪದ ವಿಷಯದಲ್ಲೂ ಕನ್ನಡ ಮತ್ತು ತೆಲುಗುಗಳ ನಡುವೆ ನಿಕಟ ಸಂಬಂಧವಿದೆ. ನಂಬಿಕೆಗಳಂಥ ವಿಸ್ತಾರವಾದ ವಿಷಯವನ್ನು ತೌಲನಿಕವಾಗಿ ಪರಿಶೀಲಿಸಬೇಕಾದರೆ ಮಹಾಪ್ರಬಂಧಗಳನ್ನೇ ಬರೆಯ ಬೇಕಾಗುತ್ತದೆ. ಧಾರ್ಮಿಕ ನಂಬಿಕೆಗಳು, ಗೃಹಸಂಬಂಧಿ ನಂಬಿಕೆಗಳು, ಪ್ರಾಣಿ ಸಸ್ಯಗಳಿಗೆ ಸಂಬಂಧಿಸಿದ ನಂಬಿಕೆಗಳು. ವೈದ್ಯಕೀಯ ನಂಬಿಕೆಗಳು ಮುಂತಾದವನ್ನು ತೌಲನಿಕವಾಗಿ ಪರಿಶೀಲಿಸಿದಾಗ ಸಾಂಸ್ಕೃತಿಕ ಸಂಬಂಧಗಳು ಸ್ಪಷ್ಟವಾಗುತ್ತವೆ.

''ನಂಬಿಕೆಗಳು ಪದ್ಧತಿಗಳ, ನಿಯಮಗಳ ಮತ್ತು ಸಂಸ್ಥೆಗಳ ರೂಪದಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುವ ಸಾಂಸ್ಕೃತಿಕ ವಿಧಿಗಳೆಂದೇ ಹೇಳಬೇಕು. ಆದರೆ ನಂಬಿಕೆಗಳಿಂದ ಮೂಢನಂಬಿಕೆಗಳನ್ನು ಪ್ರತ್ಯೇಕಿಸುವ ಚೆಚ್ಚರ ಜನರಲ್ಲಿರಬೇಕು'' ಎಂಬ ದೇಜಗೌ ಅವರ ಮಾತನ್ನು ಒಪ್ಪಬೇಕು ('ದಕ್ಷಿಣ ಭಾರತದ ಜಾನಪದ ನಂಬಿಕೆಗಳ ಅಧ್ಯಯನ', ಜಾನಪದ ವಾಹಿನಿ, ೧೯೮೬) ಅವರೇ ಹೇಳಿರುವಂತೆ ನಂಬಿಕೆಗಳ ಕ್ಷೇತ್ರದಲ್ಲಿ ಕನ್ನಡ ವಿದ್ವಾಂಸರು ಸಾಧಿಸಿರುವ ಸಿದ್ಧಿ ಸಾಮಾನ್ಯವಾದುದಲ್ಲ. ತೆಲುಗಿನಲ್ಲಿ ಇನ್ನೂ ಬಹಳ ಕೆಲಸ ನಡೆಯಬೇಕಾಗಿದೆ. ಕನ್ನಡ ಮತ್ತು ತೆಲುಗು ಜನರ ಕೆಲವು ಸಮಾನ ನಂಬಿಕೆಗಳನ್ನು ಪಟ್ಟಿ ಮಾಡಬಹುದು.

೧. ಕೂದಲು ಮತ್ತು ಉಗುರುಗಳನ್ನು ಹೊರಗೆ ಬಿಸಾಡಬಾರದು
೨. ದೇವಸ್ಥಾನಕ್ಕೆ ಹೋದವರು ಅಲ್ಲಿಂದ ಬರುವ ಮುಂಚೆ ಸ್ವಲ್ಪ ಹೊತ್ತು ಕುಳಿತುಕೊಳ್ಳಬೇಕು.
೩. ಮಲಗಿರುವ ಮಕ್ಕಳನ್ನು ದಾಟಬಾರದು, ಮಲಗಿರುವ ಮಕ್ಕಳಿಗೆ ಅಲಂಕಾರ ಮಾಡಬಾರದು.
೪. ಆರು ಬೆರಳಿದ್ದರೆ ಅದೃಷ್ಟ
೫. ರಾತ್ರಿ ವೇಳೆ ಹೊಲಿಯಬಾರದು



೬. ಬೆಕ್ಕು ಅಡ್ಡ ಬಂದರೆ ಪ್ರಯಾಣ ಮಾಡಬಾರದು
೭. ಗೂಬೆ, ಕಾಗೆ ಮನೆಯೊಳಗೆ ಬರಬಾರದು
೮. ಉತ್ತರದಿಕ್ಕಿನ ಕಡೆ ತಲೆಯಿಟ್ಟು ಮಲಗಬಾರದು
೯. ಪುಸ್ತಕಗಳನ್ನು ಒದೆಯಬಾರದು
೧೦. ಮೂಲಾ ನಕ್ಷತ್ರದಲ್ಲಿ ಮಗ ಹುಟ್ಟಿದರೆ ಹಾನಿಯಾಗುತ್ತದೆ.

ನಂಬಿಕೆಗಳಲ್ಲದೆ ಇತರ ಸಾಮಾಜಿಕಾಚಾರಗಳು, ದೇವತೆಗಳು, ಮಂತ್ರತಂತ್ರಗಳು, ಕುಲದೇವತಾಪದ್ಧತಿ, ವೀರಾರಾಧನೆ ಮುಂತಾದವು ಸಾಂಸ್ಕೃತಿಕ ಜೀವನವನ್ನು ರೂಪಿಸುತ್ತವೆ. ಹುಟ್ಟಿದಂದಿನಿಂದ ಸಾಯುವ ತನಕ ಅನುಸರಿಸುವ ಆಚಾರಗಳ ತೌಲನಿಕ ಅಧ್ಯಯನವೂ ಅಗತ್ಯ. ಸಮಾಜದ ವಿವಿಧ ಸ್ತರಗಳ ಜನರ ಆಚಾರಗಳಲ್ಲಿ ಭಿನ್ನತೆಯಿದೆ. ಆಯಾ ಸ್ತರಗಳಿಗೆ ಸೇರಿದ ಕನ್ನಡಿಗರಲ್ಲಿ ಮತ್ತು ತೆಲುಗರಲ್ಲಿ ಒಂದೇ ರೀತಿಯ ಆಚಾರಗಳನ್ನೇ ನೋಡುತ್ತೇವೆ. ಕನ್ನಡಿಗರು ಮತ್ತು ತೆಲುಗರು ಪೂಜಿಸುವ ಗ್ರಾಮದೇವತೆಗಳು ಹೆಸರಿಗೆ ಬೇರೆಯಾಗಿದ್ದರೂ ಆರಾಧನಾ ವಿಧಾನಗಳಲ್ಲಿ, ಅಲಂಕಾರಗಳಲ್ಲಿ, ಜಾತ್ರೆ-ಉತ್ಸವಗಳಲ್ಲಿ ವ್ಯತ್ಯಾಸವಿಲ್ಲ. ಕನ್ನಡಿಗರು ಮತ್ತು ತೆಲುಗರು ಚಾಂದ್ರಮಾನವನ್ನೇ ಅನುಸರಿಸುವುದರಿಂದ ಒಂದು ವರ್ಷದಲ್ಲಿ ಅನುಕ್ರಮವಾಗಿ ಆಚರಿಸುವ ಯುಗಾದಿ ಮುಂತಾದ ಹಬ್ಬಗಳು, ಉತ್ಸವಗಳು ಬಹುಪಾಲು ಒಂದೇ ಆಗಿರುತ್ತವೆ. ಜನಪದ ಆಟಗಳ ಹಾಗೂ ವಿನೋದಗಳ ವಿಷಯದಲ್ಲೂ ಬಹಳಷ್ಟು ಸಮಾನತೆ ಇದೆ. ಕಣ್ಣಾಮುಚ್ಚಾಲೆ, ಹುಲಿ-ಮೇಕೆ, ಕೋಳಿಪಂದ್ಯ ಮುಂತಾದವು ಸಾಮಾನ್ಯ ಜನರಿಗೆ ಸಂತೋಷವನ್ನು ಉಂಟುಮಾಡುವ ವಿನೋದಗಳು.

ಆಹಾರ ಸಂಪ್ರದಾಯಗಳ ವಿಷಯದಲ್ಲಿ ನಡೆಯಬೇಕಾದ ಸಂಶೋಧನೆ ಬಹಳಷ್ಟಿದೆ. ಶಿಷ್ಟ ಆಹಾರಕ್ಕಿಂತ ಜನಪದ ಆಹಾರದಲ್ಲಿ ಅನಂತ ವೈವಿಧ್ಯವಿದೆ. ಪ್ರಾದೇಶಿಕವಾಗಿ ಆಹಾರ-ಪಾನೀಯಗಳಲ್ಲಿ ಕಂಡುಬರುವ ವೈವಿಧ್ಯದ ಅಭಿರುಚಿಗಳು ಅಚ್ಚರಿಯನ್ನುಂಟು ಮಾಡುತ್ತವೆ. ಪ್ರಾದೇಶಿಕವಾಗಿ ಲಭಿಸುವ ವಸ್ತುಗಳು, ಹವಾಗುಣ, ಸಾಂಸ್ಕೃತಿಕ ಪದ್ಧತಿಗಳು, ಸಾಮೂಹಿಕ ಅಭಿರುಚಿಗಳು ಮುಂತಾದವು ಆಹಾರಪಾನೀಯಗಳ ವೈವಿಧ್ಯಕ್ಕೆ ಕಾರಣವಾಗುತ್ತವೆ. ಆವಕಾಯ (ಮಾವಿನಕಾಯಿಯ ಉಪ್ಪಿನಕಾಯಿ), ಗೋಂಗೂರ(ಪುಂಡಿಸೊಪ್ಪು) ತೆಲುಗರ ಆಹಾರಾಬಿರುಚಿಯ ಂಸೇಕತಗಳೆಂದು ತಿಳಿಯಲಾಗಿದೆ. ಮೈಸೂರು ಪಾಕ ವೋಕ ಪ್ರಸಿದ್ಧ.

ಕರ್ನಾಟಕದ ಮತ್ತು ಆಂಧ್ರದ ಜನಪದ ಕಲೆಗಳ ವಿಸ್ತಾರ ಅಧ್ಯಯನ ನಡೆಯಬೇಕಾಗಿದೆ. ಸಂಗೀತ, ನೃತ್ಯ ಮತ್ತು ಅಭಿನಯಕಲೆಗಳನ್ನು ನೋಡಿದಾಗ ಈ ಎರಡು ಪ್ರದೇಶಗಳ ಕಲಾಭಿವ್ಯಕ್ತಿಯಲ್ಲಿ ಬಹಳಷ್ಟು ಸಾದೃಶ್ಯಗಳು ಕಂಡುಬರುತ್ತವೆ. ಚೌಡಿಕೆ, ತಂಬೂರಿ, ಕೊಳಲು, ಬುಡುಬುಡಿಕೆ, ತಮಟೆ, ಡಮರುಗ, ತಾಳ ಮುಂತಾದ ಹಲವು ವಾದ್ಯಗಳು ಕರ್ನಾಟಕಾಂಧ್ರಗಳಲ್ಲಿ ಬಳಕೆಯಾಗುತ್ತಿವೆ. ಕಂಸಾಳೆಯಂಥ ಕಲೆಗಳು ಕರ್ನಾಟಕದ ಪ್ರತ್ಯೇಕತೆಯನ್ನು ತಿಳಿಸುತ್ತವೆ. ಚೌಡಿಕೆಯವರು, ಹೆಳವರು, ಗೊರವರು, ಬುಡುಬುಡಿಕೆಯವರು,

ದಾಸರು ಮುಂತಾದ ಅನೇಕ ಕಲಾವಿದರು ಈ ಎರಡು ರಾಜ್ಯಗಳಲ್ಲೂ ಚಿರಪರಿಚಿತರಾಗಿದ್ದಾರೆ. ಕೊಡಗಿನ ಮತ್ತು ದಕ್ಷಿಣ ಕನ್ನಡದ ಅನೇಕ ಕಲೆಗಳು ಕರ್ನಾಟಕದ ವಿಶಿಷ್ಟ ಕಲೆಗಳಾಗಿವೆ. ತೊಗಲುಗೊಂಬೆಯಾಟ, ಗಾರುಡಿಗೊಂಬೆ, ಕೋಲೆ ಬಸವ, ಹಗಲು ವೇಷ ಮುಂತಾದ ಹಲವು ಕಲೆಗಳ ತೌಲನಿಕ ಅಧ್ಯಯನ ಮಾಡುವ ಅಗತ್ಯವಿದೆ. ಬುರ್ರಕಥಾ, ತಪ್ಪೆಟಗುಳ್ಳು, ವೀಧಿಭಾಗವತ ಮುಂತಾದವು ಆಂಧ್ರದ ವಿಶಿಷ್ಟ ಕಲೆಗಳಾಗಿವೆ. ಕನ್ನಡದ ಕರಪಾಲಮೇಳವನ್ನು ಹೋಲುವ ಬುರ್ರಕಥೆ ಕರ್ನಾಟಕದಲ್ಲೂ ಇತ್ತೀಚೆಗೆ ಪ್ರಚಲಿತದಲ್ಲಿರುವುದನ್ನು ನೋಡಬಹುದು.

### ಕನ್ನಡ - ತಮಿಳು

ಕರ್ನಾಟಕದ ಮತ್ತು ತಮಿಳುನಾಡಿನ ಆಚಾರ ಸಂಪ್ರದಾಯಗಳನ್ನು, ಕಲೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗಲೂ ಅನೇಕ ಕುತೂಹಲಕಾರಿ ವಿಷಯಗಳು ತಿಳಿದು ಬರುತ್ತವೆ. ತಮಿಳುನಾಡು ಎಂದ ಕೂಡಲೇ ಅಡ್ಡಪಂಚೆ, ಇಡ್ಲಿಸಾಂಬಾರ್, ಪೊಂಗಲ್, ಮಾರಿಯಮ್ಮ, ತೆರುಕ್ಕೂತ್ತು ಮುಂತಾದವು ನೆನಪಿಗೆ ಬರುತ್ತವೆ. ತಮಿಳರು ಸೌರಮಾನವನ್ನು, ಕನ್ನಡಿಗರು ಚಾಂದ್ರಮಾನವನ್ನು ಅನುಸರಿಸುವುದರಿಂದ ಯುಗಾದಿಯಂಥ ಹಬ್ಬಗಳ ಆಚರಣೆಯಲ್ಲಿ ವ್ಯತ್ಯಾಸ ಕಂಡುಬಂದರೂ ಜನಪದ ಆಚಾರ ಸಂಪ್ರದಾಯಗಳಲ್ಲಿ ಹೆಚ್ಚಿನ ಹೋಲಿಕೆಗಳೇ ಕಂಡುಬರುತ್ತವೆ. ಕನ್ನಡಿಗರ ಮತ್ತು ತಮಿಳರ ನಂಬಿಕೆಗಳಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಆದರೆ ಪ್ರಾದೇಶಿಕವಾದ ವಿಶಿಷ್ಟ ನಂಬಿಕೆಗಳು ಇದ್ದೇ ಇರುತ್ತವೆ. ಉದಾಹರಣೆಗೆ ತಿರುನಲ್ವೇಲಿ ಜಿಲ್ಲೆಯಲ್ಲಿ ಒಂದು ನಂಬಿಕೆ ಇದೆ. ಬಸವನ ಹುಳುವೊಂದು ನಿರ್ದಿಷ್ಟ ಮರವನ್ನು ಹತ್ತಿದರೆ ಮಳೆಯಾಗುವುದಿಲ್ಲ. ಕಾಗೆ ಕೋಳಿಗಳು ತಮ್ಮ ರೆಕ್ಕೆಗಳನ್ನು ಬಿಚ್ಚಿಕೊಂಡು ಹಾರಾಡಿದರೆ ಭಾರೀ ಮಳೆಯಾಗುವುದೆಂದು ಕನ್ಯಾಕುಮಾರಿ ಜಿಲ್ಲೆಯ ಜನ ಭಾವಿಸುತ್ತಾರೆ. ಇದೇ ಜಿಲ್ಲೆಯ ಸ್ವಾಮಿತ್ತೊಪ್ಪು ಗ್ರಾಮದಲ್ಲಿ ಮೇಲೇರಿದ ಬಾವುಟ ಹಾರಾಡುವ ದಿಕ್ಕು ಶುಭ ಅಶುಭಗಳನ್ನು ಸೂಚಿಸುತ್ತದೆ. ಅದು ದಕ್ಷಿಣದಿಕ್ಕಿಗೆ ಹಾರಾಡಿದರೆ ಬೇಕಾದಷ್ಟು ಮೀನುಗಳು ದೊರೆಯುತ್ತವೆ. ಆದರೆ ಮಳೆ ದುರ್ಲಭವಾಗುತ್ತದೆ. ಉತ್ತರ ದಿಕ್ಕಿಗೆ ಹಾರಾಡಿದರೆ ಮಳೆಯ ಆಗಮನ ಖಂಡಿತ. ಇರುವೆಗಳು ಗೋಣಿಚೀಲದ ಮೇಲೆ ಹತ್ತಿದರೆ ಮಳೆ ಬರುತ್ತದೆ (ಈ ನಂಬಿಕೆಗಳ ವಿವರಗಳಿಗೆ ನೋಡಿ, ತಮಿಳುನಾಡಿನ ಜಾನಪದ, ಲಕ್ಷ್ಮಣನ್ ಚೆಟ್ಟಿಯಾರ್, ೧೯೮೪).

ಕನ್ನಡಿಗರಿಗೂ ತಮಿಳರಿಗೂ ಸಮಾನವಾದ ಕೆಲವು ನಂಬಿಕೆಗಳು ಹೀಗಿವೆ:

೧. ಮಕ್ಕಳಿಗೆ ಕನ್ನಡಿ ತೋರಿಸಬಾರದು

೨. ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣಿಗೆ ಅಪಾಯ

೩. ಸಿಡುಬಿನಿಂದ ಸತ್ತರೆಂದು ಬರೆಯುವುದು, ಹೇಳುವುದು ಸಂಪ್ರದಾಯ ವಿರುದ್ಧ

೪. ಗರ್ಭಿಣಿ ಸ್ತ್ರೀಯ ಛಾಯಾಚಿತ್ರವನ್ನು ತೆಗೆಯಬಾರದು



೫. ಅಂಗಾಲು ಕೆರೆತ ಮುಂಬರುವ ಪ್ರಯಾಣದ ಸೂಚನೆ

೬. ಎದುರಿಗೆ ಬೆಕ್ಕು ಬಂದರೆ ಪ್ರಯಾಣ ಮಾಡಬಾರದು

೭. ಉತ್ತರ ದಿಕ್ಕಿಗೆ ತಲೆಯಿಟ್ಟು ಮಲಗಬಾರದು

೮. ಕತ್ತಲಾದ ಮೇಲೆ ತಲೆಗೂದಲು ಅಥವಾ ಉಗುರನ್ನು ಕತ್ತರಿಸಬಾರದು.

ತಮಿಳುನಾಡಿನ ಸಂಗೀತ ಸಂಪ್ರದಾಯಗಳಲ್ಲಿ ನಗಾರಿ, ಡಮರಂ, ಉಡಕ್ಕೈ, ದವಂಡೈ, ಗಮ್ಮಟೆ, ಎಕ್ಕಲಂ, ಪಂಬೈ (ಚೌಡಿಕೆ) ಮುಂತಾದವನ್ನು ಬಳಸುತ್ತಾರೆ. ಇವರ ಜನಪದ ಸಂಗೀತ ಸಂಪ್ರದಾಯಗಳಲ್ಲಿ ವಿಲ್ಲುಪಾಟ್ಟು ಒಂದು. ಇದು ತಮಿಳರ ಸಾಂಸ್ಕೃತಿಕ ಸಂಪತ್ತಿನ ಸಂಕೇತವಾಗಿದೆ.

ದಕ್ಷಿಣ ಭಾರತದ ಜನಪದ ಕಲೆಗಳಲ್ಲಿ ಕೋಲಾಟ ಒಂದು. ಇದು ತಮಿಳುನಾಡಿನಲ್ಲೂ ಪ್ರಸಿದ್ಧವಾಗಿರುವ ಒಂದು ಕಲೆ. ಕಾವಡಿ ಕುಣಿತವೂ ಇಲ್ಲಿ ಪ್ರಮುಖವಾಗಿದೆ. ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ಒಂದು ಧಾರ್ಮಿಕ ವಿಧಿಯಾಗಿ ಮತ್ತು ಕಲೆಯಾಗಿ ಜನಪ್ರಿಯವಾಗಿರುವಂಥದು ಕರಗ. ಮಾರಿಯಮ್ಮನ ಉಪಾಸನೆಯ ಜೊತೆ ಇದು ತಮಿಳುನಾಡಿನಲ್ಲಿ ಬೆಳೆದು ಬಂದಿದೆ. ಗೊಂಬೆಯಾಟ ಅಥವಾ ಪಾವೈಕೂತ್ತು, ತೊಗಲುಗೊಂಬೆಯಾಟ, ಕುರವಂಜಿ, ಭಾಗವತ ಮೇಳ ಮುಂತಾದವೆಲ್ಲ ಕರ್ನಾಟಕದಲ್ಲೂ ಪರಿಚಿತವಾದಂಥವೇ. ಕರವೈಕ್ಕೂತ್ತು, ಕಾನೆಕೂತ್ತು, ಕಣಿಯನ್ ಆಟಂ, ಮೊವ್ಲಿ ನಾಟಕಂ, ನೊಂಡಿ ನಾಟಕಂ ಇತ್ಯಾದಿಗಳು ತಮಿಳುನಾಡಿನ ವಿಶಿಷ್ಟ ಪ್ರದರ್ಶನ ಕಲೆಗಳು.

### ಕನ್ನಡ - ಮಲಯಾಳಂ

ಕರಾವಳಿ ಮತ್ತು ಗುಡ್ಡಗಾಡುಗಳಿಂದ ಕೂಡಿದ ಮಲಯಾಳ ನಾಡಿನಲ್ಲಿ ತನ್ನವೇ ಆದ ಸಂಪ್ರದಾಯಗಳು, ಉತ್ಸವಗಳು, ಜಾತ್ರೆಗಳು ಇವೆ. ಕೇರಳದ ಅನೇಕ ಪ್ರಾಂತ್ಯಗಳಲ್ಲಿ ವಳ್ಳಮ್‌ಕಳಿ (ಹಡಗಿನಾಟ) ಪ್ರಚಲಿತವಾಗಿದೆ. ಕೇರಳದ ಅತ್ಯಂತ ಪ್ರಸಿದ್ಧ ಕ್ರೀಡೆಗಳಲ್ಲಿ ಚೂಡನ್ ವಳ್ಳಂ (ಹಾವಿನ ದೋಣಿ ಪಂದ್ಯ) ಒಂದು. ಕೇರಳದ ಹಬ್ಬಗಳು ಮತ್ತು ಧಾರ್ಮಿಕ ಸಂಪ್ರದಾಯಗಳು. ಅವರದೇ ಆದ ಪಂಚಾಂಗವನ್ನು ಅನುಸರಿಸುತ್ತವೆ. ಕೇರಳದಲ್ಲಿ ಭೂತಾರಾಧನೆ, ನಾಗಪೂಜೆ, ಬಲಿಪೂಜೆ ಮುಂತಾದವುಗಳಿಗೆ ಪ್ರಾಧಾನ್ಯವಿದೆ. ಕೇರಳದ ಅನೇಕ ಗೀತ ಮತ್ತು ನೃತ್ಯ ಸಂಪ್ರದಾಯಗಳು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಸಂಪ್ರದಾಯಗಳನ್ನು ಹೋಲುತ್ತವೆ.

ಕೇರಳದಲ್ಲಿ 'ಅಮ್ಮ' ಎಂಬ ಹೆಸರಿನ ಭಗವತಿಯ ಆರಾಧನೆಗೆ ಮಹತ್ವವಿದೆ. ಈ ದೇವತೆ ಕೇರಳೀಯರಿಗೆ ಮನೆಮನೆಯ ದೇವತೆ. ಇಲ್ಲಿ ಭಗವತಿ ಪರವಾದ ಧಾರ್ಮಿಕ ನೃತ್ಯಗಳು ಹೇರಳವಾಗಿವೆ. ಕಾಳಿದಾರಿಕನೆಂಬ ರಾಕ್ಷಸನನ್ನು ಕೊಲ್ಲುವ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡು ಅನೇಕ ನೃತ್ಯಗಳು ರೂಪುಗೊಂಡಿವೆ. ಭಗವತಿಯಾಟ ಕೇರಳದ

ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ ಕಂಡುಬರುವಂಥದು. 'ಮುಡಿಯೇಟ್ಟಂ' ಅಂಥದೇ. ಇದು ಕರ್ನಾಟಕದ ಕರಿಬಂಟನ ಕಥೆಯನ್ನು ಹೋಲುತ್ತದೆ. ಇದರಲ್ಲಿ ಚಂಡೆ, ವೀಕ್ಕನ್ ಮತ್ತು ಎಲೆ ತಾಳಗಳನ್ನು ಬಳಸುತ್ತಾರೆ. ಹಾಡುಗಾರರು ಕೈತಟ್ಟಿಕೊಂಡು ಹಾಡುವುದುಂಟು. ದಾರಿಕನನ್ನು ಬಿಟ್ಟು ಉಳಿದ ಪಾತ್ರಗಳು ಸಂಭಾಷಿಸುವುದಿಲ್ಲ. ಚಂಡೆಯ ಆರ್ಭಟ ಕೇರಳದ ಅನೇಕ ಕಲೆಗಳಲ್ಲಿ ಕೇಳಿಬರುತ್ತದೆ.

ಮುಡಿಯೇಟ್ಟಂನ ಕೊನೆಯ ಭಾಗ 'ಕೂಡಿಯಾಟ್ಟಂ'. ಕಾಳಿ ಮತ್ತು ದಾರಿಕಾಸುರ ಎದುರು ನಿಂತು ಯುದ್ಧವರಸೆಗಳನ್ನು ಪ್ರದರ್ಶಿಸುತ್ತಾ ನೃತ್ಯ ಮಾಡುತ್ತಾರೆ.

ಕೇರಳದ ತೀಯಾಟ್ಟಂ, ತೆಯ್ಯನೃತ್ಯ ಮುಂತಾದವು ಧಾರ್ಮಿಕ ಹಿನ್ನೆಲೆಯಿಂದಲೇ ಮೂಡಿಬಂದಂಥವು. 'ತೀ' ಎಂದರೆ ಬೆಂಕಿ. ಇದನ್ನು ಬೆಂಕಿಯಾಟ ಎನ್ನಬಹುದು. ಪಾಪಿಗಳನ್ನು ಜೀವಸಹಿತ ಸುಡುವ ಬೆಂಕಿಯಾಟ ಒಂದು ಧಾರ್ಮಿಕ ನೃತ್ಯ ತೆಯ್ಯನೃತ್ಯ ಭಗವತಿ ಆರಾಧನೆಯ ಮತ್ತು ವೀರಾರಾಧನೆಯ ಒಂದು ಭಾಗ. ತೋಟ್ಟಂ ಪಾಟ್ಟುಗಳು ಕೂಡಾ ಕೇರಳದ ಹಲವು ಪ್ರದೇಶಗಳಲ್ಲಿವೆ. ತೋಟ್ಟಂ ಎಂದರೆ ಜೀವ ಬರಿಸುವುದು ಎಂದರ್ಥ. ತೆಯ್ಯಗಳನ್ನು ಕಟ್ಟಿ ಕೊಲಂ ನಡೆಸುವಾಗ ಈ ಹಾಡುಗಳನ್ನೇ ಹಾಡುತ್ತಾರೆ. ದಕ್ಷಿಣ ಕನ್ನಡದ ಭೂತ ನೃತ್ಯಗಳಿಗೂ ಕೇರಳದ ಭಗವತೀ ಆರಾಧನೆಯ ನೃತ್ಯಗಳಿಗೂ ಬಹಳಷ್ಟು ಹೋಲಿಕೆಗಳಿವೆ. ಕೇರಳದಲ್ಲಿ ಕಾವಡಿಯಾಟ, ಸರ್ಪನೃತ್ಯ, ಕುಮ್ಮಿ, ಕುರತ್ತಿಯಾಟ್ಟಂ, ಪೂರಕ್ಕಳಿ, ಕುಮ್ಮಾಟ್ಟಿ, ತುಳ್ಳಲ್ ಮುಂತಾದ ಕಲಾಪ್ರಕಾರಗಳಿವೆ. ಇವುಗಳನ್ನು ಕನ್ನಡದ ಕಲಾಸಂಪ್ರದಾಯಗಳೊಂದಿಗೆ ತೌಲನಿಕವಾಗಿ ಪರಿಶೀಲಿಸಬೇಕಾಗಿದೆ.

ಜಾನಪದ ಎಂಬ ವಿಸ್ತಾರವಾದ ಸಾಂಸ್ಕೃತಿಕ ಕ್ಷೇತ್ರವನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದು ಅಷ್ಟು ಸುಲಭದ ಕೆಲಸವಲ್ಲ ಇದಕ್ಕೆ ವಿವಿಧ ಭಾಷೆಗಳ ಪರಿಚಯ, ಸಂಸ್ಕೃತಿಯ ಅರಿವು, ಸಮಾನ ಮತ್ತು ವಿಭಿನ್ನ ಅಂಶಗಳನ್ನು ಗುರುತಿಸುವ ತಾಳ್ಮೆ, ವಿವೇಚನೆಯ ಸಾಮರ್ಥ್ಯ ಅಗತ್ಯ. ಜಾನಪದದಂಥ ಮೂಲ ಸಂಸ್ಕೃತಿಯ ನೆಲೆಗಳನ್ನು ನೆರೆಹೊರೆಯ ಸಂಸ್ಕೃತಿಗಳ ನೆರವಿನೊಂದಿಗೆ ವಿಶ್ಲೇಷಣೆ ಮಾಡುವ ಕೆಲಸಕ್ಕೆ ಇನ್ನು ಮೇಲಾದರೂ ನಾವು ತೊಡಗಬೇಕಾಗಿದೆ.



# ಪರಿಸರ ಜಾನಪದ

ಡಾ. ದೇಜಗೌ

ಜೀವ ಜಗತ್ತೊಂದು ಸಂಕೀರ್ಣವರ್ಣಮಯ ವೈವಿಧ್ಯ ಸಮೃದ್ಧ ಜಾಲವಾಗಿದೆ, ಕುಟುಂಬ ಅಥವಾ ಸಂಸಾರವಾಗಿದೆ ಎಂದರೂ ಸಲ್ಲುತ್ತದೆ. ಏಕಾಣು ಜೀವಿಯಿಂದ ಹಿಡಿದು ಸಸ್ಯ-ಪ್ರಾಣಿ-ಮಾನವ ಸಮುದಾಯಗಳೆಲ್ಲ ಪರಸ್ಪರಾವಲಂಬಿಗಳಾಗಿವೆ. ಪ್ರಾಣಿ ಮಾನವ ಸಮೂಹಗಳಿಗಿಂತ ಮೊದಲೇ ಹುಟ್ಟಿದ್ದು ಸಸ್ಯ ಸಮೂಹ. ಹುಟ್ಟುವುದಕ್ಕೆ ಮುಂಚೆಯೇ ಮಕ್ಕಳಿಗಾಗಿ ಮೊಲೆಹಾಲು ಮಡುಗೊಂಡಿರುವಂತೆ, ನರಜಂತುಗಳ ಸೃಷ್ಟಿ ಪೂರ್ವದಲ್ಲಿಯೇ ಸಸ್ಯರೂಪದಲ್ಲಿ ಅವುಗಳ ಆಹಾರ ಸಿದ್ಧವಾಗುತ್ತದೆ. ಆಹಾರ ಮಾತ್ರವಲ್ಲ, ಸಸ್ಯಗಳು ನರಜಂತುಗಳಿಗಗತ್ಯವಾದ ಪ್ರಾಣವಾಯುವನ್ನು ತಯಾರಿಸುವ ಕಾರ್ಖಾನೆಗಳೂ ಆಗಿವೆ. ಸಸ್ಯವರ್ಗ ಮತ್ತು ನರಜಂತು ಜಾತಿಗಳ ನಡುವೆ ಹೊಕ್ಕುಳ ಬಳ್ಳಿ ಸಂಬಂಧವುಂಟೆಂಬುದರಲ್ಲಿ ಸಸ್ಯ ಸಂಪತ್ತಿನ ವಿನಾಶದೊಡನೆ ನರಜಂತು ವಿನಾಶ ತಪ್ಪದೆಂಬುದರಲ್ಲಿ, ಈ ಮೂರು ಜೀವವರ್ಗಗಳಲ್ಲಿ ಯಾವುದಕ್ಕೆ ಹಾನಿಯಾದರೂ ನೈಸರ್ಗಿಕ ಸಮತೋಲನಕ್ಕೆ ಸೋಲುಂಟಾಗುತ್ತದೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಜೀವಿ ಜೀವಿಗಳ ನಡುವಣ ಪರಸ್ಪರ ಕ್ರಿಯೆ ಮತ್ತು ಪ್ರಕ್ರಿಯೆಗಳ ಆಂತರಿಕ ಸಂಬಂಧವುಳ್ಳ ನಿಸರ್ಗವನ್ನು ಪರಿಸರವೆಂದು ಕರೆಯಬಹುದಾಗಿದೆ. ಅದನ್ನು ಕುರಿತ ಅರಿವೇ ಪರಿಸರ ವಿಜ್ಞಾನ.

ಈ ಪರಿಸರದಲ್ಲಿ ಪ್ರತಿಕ್ಷಣವೂ ರಸ-ಕಸಗಳು, ನೈರ್ಮಲ್ಯ-ಮಾಲಿನ್ಯಗಳು ಉತ್ಪತ್ತಿಯಾಗುತ್ತಿರುತ್ತವೆ. ಆ ಪ್ರಕ್ರಿಯೆಯನ್ನು ರಸ-ಕಸ ಚಕ್ರ ಅಥವಾ ಪರಿಕ್ರಮವೆಂದರೂ ಸಲ್ಲುತ್ತದೆ. ಶ್ರೀ ಸಾಮಾನ್ಯರಿಗೂ ಗೊತ್ತಿರುವ ಅಥವಾ ಅರ್ಥವಾಗುವ ಒಂದೆರಡು ಸಂಗತಿಗಳನ್ನಿಲ್ಲಿ ಉದಾಹರಿಸಬಹುದು. ನರಜಂತುಗಳ ಪ್ರಾಣಧಾರಣೆಗೆ ಪ್ರಾಣವಾಯು ಅತ್ಯಗತ್ಯವಷ್ಟೆ. ಜಂತುಗಳ ನಿಶ್ವಾಸದ ಮೂಲಕ ಹೊರಚೆಲ್ಲುವ ಇಂಗಾಲವನ್ನು ಸಸ್ಯಗಳು ತಮ್ಮ ಆಹಾರ ತಯಾರಿಕೆಗಾಗಿ ಬಳಸಿಕೊಂಡು, ಪ್ರಾಣವಾಯುವನ್ನು ವಾಯುಮಂಡಲಕ್ಕೆ ಹಿಂದಿರುಗಿಸುತ್ತವೆ. ಸಸ್ಯ ನಾಶದಿಂದ ಇಂಗಾಲ ಅಧಿಕಗೊಂಡು, ಪ್ರಾಣವಾಯು ಕಡಮೆಯಾಗಿ, ಶಾಖೋತ್ಪತ್ತಿ ಮೇರೆ ಮೀರಿ, ಓಜೋನ್ ಪದರದ ಬಿರುಕು ಅಗಲವಾಗಿ, ಜಗತ್ತು ಅಪಾಯದಂಚನ್ನು ಮುಟ್ಟುತ್ತದೆನ್ನುವುದು ಈಗ ಸಕಲರಿಗೂ ತಿಳಿದಿರುವ ಸತ್ಯವಾಗಿದೆ.

ಮನುಷ್ಯರು ಮತ್ತು ಪ್ರಾಣಿಗಳು ಜೀವಧಾರಣೆಗಾಗಿ ಸಸ್ಯ ಜಗತ್ತನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಗಿದೆ ಎಂಬುದೂ ನಿರುತವೇ ಸರಿ. ಜೀವ ಸಂತಾನದ ಪ್ರಾರಂಭಕಾಲದಿಂದ ಈ ಪರಿಕ್ರಮ ನಡೆದೇ ಇದೆ. ಕಾಲ ಕ್ರಮೇಣ ಪರಿಸರದ ರಹಸ್ಯವನ್ನರಿತುಕೊಂಡು ಕೆಲವೊಮ್ಮೆ ಅದಕ್ಕೆ ವಿರುದ್ಧವಾಗಿ ವರ್ತಿಸಿದರೂ, ಬಹುತೇಕವಾಗಿ ಅದಕ್ಕೆ ಹೊಂದಿಕೊಂಡೇ ಮುಂದುವರಿದಿದ್ದಾನೆ. ಹೀಗಾಗಿ ಪರಿಸರಕ್ಕೂ ಜನಪದರಿಗೂ ನಡುವೆ ಇರುವ ಸಂಬಂಧ ಸಹಜ, ನಿಕಟ, ಗಾಢ, ಸೂಕ್ಷ್ಮಾತಿಸೂಕ್ಷ್ಮ, ನಿರಂತರ. ಅಂದ ಮೇಲೆ ಆ ಪರಸ್ಪರ ಸಂಬಂಧದ ಪಾರಿಣಾಮಕ ಕ್ರಿಯೆ ಪ್ರತಿ ಕ್ರಿಯೆಗಳು ವಿವಿಧ ಜಾನಪದ ಪ್ರಕಾರಗಳಲ್ಲಿ ಹೊಳಲುಗೊಡುತ್ತವೆ. ಇಂಥ ಪ್ರಕ್ರಿಯೆಗಳನ್ನು ಪರಿಸರ ಜಾನಪದವೆಂದು ಕರೆಯಬಹುದಾಗಿದೆ.

ವೃಕ್ಷ ಪ್ರಯೋಜನವನ್ನು, ತನ್ನ ಮತ್ತು ಸಸ್ಯಲೋಕದ ನಂಟನ್ನೂ ಮನುಷ್ಯ ತನ್ನ ಅವತಾರಾರಂಭದಲ್ಲಿಯೇ ಮನವರಿಕೆ ಮಾಡಿಕೊಳ್ಳುತ್ತಾನೆ. ತನ್ನ ಉಳಿವಿಗೆ ತನ್ನ ಶರೀರ ಹಾಗೂ ಪ್ರಾಣ ರಕ್ಷಣೆಗೆ ಸಸ್ಯವೇ ಆದಿ ಎಂಬುದನ್ನರಿಯಲು ಅವನಿಗೆ ಬಹುಕಾಲ ಬೇಕಾಗಿರಲಿಲ್ಲ. ಆದ್ದರಿಂದಲೇ ವೃಕ್ಷಾರಾಧಾನೆ ಅವನ ಮೊತ್ತ ಮೊದಲ ಧಾರ್ಮಿಕಾಚರಣೆಯಾಗುತ್ತದೆ ಈ ಆರಾಧನೆ ಚೇತನವಾದಕ್ಕೆ ಪ್ರೇರಕವಾಗಿ ಜಗತ್ತಿನ ಎಲ್ಲ ಕಡೆಗಳಲ್ಲಿ ಚಾಲ್ತಿಯಲ್ಲಿದ್ದು ಮಾನವನ ವೃಕ್ಷ ಪ್ರೇಮಕ್ಕೆ ಸಂಕೇತವಾಗಿದೆ. ಜಗದೀಶ್ ಚಂದ್ರ ಬೋಸರಂಥ ಆಧುನಿಕ ಸಸ್ಯ ವಿಜ್ಞಾನಿಗಳು ತಮ್ಮ ಆವಿಷ್ಕಾರಗಳನ್ನು ಪ್ರಕಟಪಡಿಸುವ ಮೊದಲು ಶತಶತಮಾನಗಳ ಹಿಂದೆಯೇ ಸಸ್ಯಗಳ ಭಾವ ಸಂವೇದನೆಯ ಜನಪದರಿಗೆ ತಿಳಿವಳಿಕೆ ಇತ್ತೆಂಬುದರಲ್ಲಿ ಅನುಮಾನವಿಲ್ಲ. ಹೂವು ಕಿತ್ತರೆ, ಕೊಂಬೆ ಕಡಿದರೆ, ಮೊಳೆ ಬಡಿದರೆ ಅವುಗಳಿಗೆ ನೋವಾಗುತ್ತದೆಂಬ ಅರಿವು ಅವರಿಗಿತ್ತು. ಪ್ರಾಣಿ ಹನನದಷ್ಟೇ ಸಸ್ಯಹನನ ಕ್ರೂರವೆಂಬ ಭಾವನೆಯೂ ಕೆಲವರಲ್ಲಿತ್ತು. ತೆಂಗಿನ ಮರದ ನಾಶ ಮಾತೃಹತ್ಯೆಗೆ ಸಮಾನವೆಂದು ಪೂರ್ವ ಆಫ್ರಿಕೆಯ ವಣಿಕರು ತಿಳಿದಿದ್ದರು. ಓಕ್, ಅರಳಿ, ಬೇವು ಮೊದಲಾದ ಮರಗಳ ಪೂಜೆಯಂತು ಇದ್ದದ್ದೇ. ಮಾವು ಹುಣಿಸೆ ಬೇವು ಅರಳಿಮರಗಳಿಗೆ ಮದುವೆ ಮಾಡಿಸುವುದೂ ಉಂಟು. ಮುಂಜಾನೆಯ ಅಶ್ವತ್ಥ ವೃಕ್ಷ ಪ್ರದಕ್ಷಿಣೆ ಬರಿಯ ಮೌಢ್ಯ ಸಂಪ್ರದಾಯವಲ್ಲ, ಆ ವೃಕ್ಷದ ಸುತ್ತಮುತ್ತಣ ಗಾಳಿ ಪರಿಶುದ್ಧವಾಗಿದ್ದು ಆರೋಗ್ಯದ ಮೇಲೆ ತುಂಬ ಪ್ರಭಾವ ಬೀರುತ್ತದೆಂಬುದರಲ್ಲಿ ಸಂಶಯವಿಲ್ಲ. ದೇವನಿದ್ದಾನೆಂಬ ನಂಬಿಕೆಯಿಂದ ವೃಕ್ಷ ಸಾಕ್ಷಿಯಾಗಿ ಹಿಂದಿನ ಕಾಲದ ಜನ ತಮ್ಮ ವ್ಯವಹಾರಗಳನ್ನು ಪೂರೈಸಿಕೊಳ್ಳುತ್ತಿದ್ದರು; ನ್ಯಾಯ ವಿತರಣೆಯನ್ನು ನಿರ್ವಹಿಸುತ್ತಿದ್ದರು; ಕೊನೆಗೆ ಸಾಲಗಳನ್ನು ಕೊಟ್ಟು ತೆಗೆದುಕೊಳ್ಳುತ್ತಿದ್ದರು. ಹಬ್ಬ ಹರಿದಿನ ವಿವಾಹ ಉತ್ಸವ ತಿಥಿ ಮೊದಲಾದ ಶುಭಾಶುಭ ಆಚರಣೆಗಳಲ್ಲಿ ಸಸ್ಯ ಅಥವಾ ಸಸ್ಯ ಭಾಗಗಳಿಗೆ ಧಾರ್ಮಿಕ ಸ್ಥಾನವುಂಟು. ಗೃಹ ಪ್ರವೇಶ ಸಮಯದಲ್ಲಿ ನಡೆಸುವ ನಾನಾಚರಣೆಗಳ ಪೈಕಿ ಕಟ್ಟಡಕ್ಕೆ ಬಳಸಿರುವ ಮರದ ಸಾಮಾನುಗಳಲ್ಲಿ ಹುದುಗಿರುವ ಚೈತನ್ಯ ಶಕ್ತಿಗೆ ಶಾಂತಿ ಮಾಡುವುದೆ ಆಗಿದೆ. ಕೈಗಾರಿಕೆಗಳನ್ನು ಮುಚ್ಚಿದರೆ, ವಿದ್ಯುತ್ ಸ್ಥಾವರಗಳನ್ನು ಸ್ಥಗಿತಗೊಳಿಸಿದರೆ, ಅಣುಬಾಂಬುಗಳನ್ನು ನಾಶಮಾಡಿದರೆ ಮನುಕುಲಕ್ಕೆ



ಹಾನಿಯಿಲ್ಲ, ಆದರೆ ಸಸ್ಯಕುಲ ನಾಶವಾದಂದೇ ಮನುಕುಲದ ಗತಿಯೂ ಮುಗಿಯಿತೆಂದೇ ತಿಳಿಯಬೇಕು.

ಸೃಷ್ಟಿಯ ಜೀವರಾಶಿಗಳೆಲ್ಲ ಸಾರಾಸಗಟಾಗಿ ವಿಜ್ಞಾನಿಯ ಹಿಡಿತಕ್ಕೆ ದಕ್ಕಿವೆಯೆಂದು ಹೇಳಲಾಗದು. ಹಳೆಯ ಸಸ್ಯ ಜಾತಿಗಳು ಮಾಯವಾಗುವುದುಂಟು, ಹೊಸ. ಸಸ್ಯ ಜಾತಿಗಳು ಬೆಳಕಿಗೆ ಬರುವುದುಂಟು. ಮನುಷ್ಯನ ಅಥವಾ ಪ್ರಾಣಿಕುಲದ ಪ್ರಯೋಜನಕ್ಕೆ ಬಾರದ ಸಸ್ಯವೇ ಇಲ್ಲವೆನ್ನಬಹುದು. ಕೊಳಚೆ ನೀರಿನಲ್ಲಿ ಬೆಳೆಯುವ ಹಯಸಿಂತ್ ಸಹ ದನಗಳ ಮೇವಿಗೊದಗುತ್ತದೆ. ಕೆಲವು ದೇಶಗಳಲ್ಲಿ ಅದನ್ನು ಹಂದಿಗಳ ಮೇವಿಗಾಗಿಯೇ ಬೆಳಸುತ್ತಾರಂತೆ. ಅದರಂತೆಯೇ ಪಾರ್ಥೀನಿಯಮ್ ಸಹ ಒಂದಲ್ಲ ಒಂದು ಜೀವಿಗೆ ಉಪಯೋಗವಾಗಬಹುದು, ಅಧಿಕ ಸಂಖ್ಯೆಯ ಔಷಧಿಗಳಿಗೆ ಗಿಡಗಳೇ ಮೂಲವೆಂಬುದು ಸರ್ವವೇದ್ಯ. ವಿಷ ಕಾರುವ ಸಸ್ಯಗಳು ಇಲ್ಲದಿಲ್ಲ. ಆದರೆ ಒಂದು ಜೀವಿಗೆ ವಿಷವಾದದ್ದು ಮತ್ತೊಂದು ಜೀವಿಗೆ ಅಮೃತವಾಗಬಹುದು. ಊರುಗಂಬಳಿಗೆ ಹಾಕುವ ಹುಣಿಸೆ ಬೀಜದ ಗಂಜಿ ಖಾದ್ಯಯೋಗ್ಯವೆಂಬುದನ್ನು ಆಹಾರ ವಿಜ್ಞಾನಿಗಳರಿಯಬೇಕು. ಈಚೀಚೆಗಂತು ಅದರ ಪುಡಿಯನ್ನು ಕಾಫಿಯೊಡನೆ ಬೆರಸುತ್ತಾರೆ. ನಾವು ಹುಡುಗರಾಗಿದ್ದಾಗ ಪಾಪಾಸುಕಳ್ಳಿಯ ಹಣ್ಣನ್ನು ತಿಂದದ್ದುಂಟು. ತೋಟಗಾರಿಕೆಯ ತಜ್ಞರು ಆ ಹಣ್ಣಿನ ಬಗ್ಗೆ ಶೋಧನೆ ನಡಸಬಾರದೆ? ಹಿಂದಿನ ಕಾಲದಲ್ಲಿ ಕ್ಷಾಮ ಬಂದಾಗ ಗ್ರಾಮವಾಸಿಗಳು ಭೂತಾಳಗಡ್ಡೆ ತಿನ್ನುತ್ತಿದ್ದರೆಂದು ಹಿರಿಯರಿಂದ ನಾನು ಕೇಳಿದ್ದುಂಟು. ಆ ಕಡೆಗೆ ವಿಜ್ಞಾನಿಗಳ ಗಮನಹರಿದದ್ದಾದರೆ ಆಹಾರಾಭಾವ ಸಮಸ್ಯೆಗೆ ಅಷ್ಟಷ್ಟು ಪರಿಹಾರ ದೊರೆತಂತಾಗುವುದಿಲ್ಲವೆ? ಬಂಜರು ನೆಲದಲ್ಲಿ ಐದಾರಂಗುಲ ಮಳೆಯಾದರೇನೇ ಬೆಳೆಯುವ, ಗುಣದಲ್ಲಿ ರಾಗಿಗಿಂತಲೂ ಕಡಮೆಯಲ್ಲದ ಹಾರಕ ಮರೆಯಾಗುತ್ತಿರುವುದು ಆಹಾರ ವಿಜ್ಞಾನದ ದೃಷ್ಟಿಯಿಂದ ನಷ್ಟವೇ ಸರಿ.

ಸಸ್ಯ ಕುಲದಷ್ಟೇ ಪ್ರಾಣಿಕುಲವೂ ಮನುಷ್ಯನಿಗೆ ಮಹೋಪಕಾರಿ. ಸರ್ವಸಸ್ಯ ಜಂತುಗಳೆಲ್ಲ ತನ್ನ ಬಳಕೆಗೆಂದೇ ಸೃಷ್ಟಿಯಾಗಿವೆ ಎನ್ನುವಷ್ಟರಮಟ್ಟಿಗೆ ಮನುಷ್ಯನ ಸ್ವಾರ್ಥ ಹೆಡೆ ಎತ್ತಿದೆ. ಹುಲಿ ಆನೆ ಮೊದಲಾದ ಕೆಲವು ಕಾಡುಪ್ರಾಣಿಗಳನ್ನು ಬಿಟ್ಟರೆ, ಗೊದ್ದ ಚಿಟ್ಟೆ ಕಪ್ಪೆ ಆಮೆ ಮೀನು ಹಾವುಗಳಿಂದ ಹಿಡಿದು ಸಣ್ಣಪುಟ್ಟ ಹಕ್ಕಿಗಳು ಸೇರಿದಂತೆ ಕಡವೆ ಎಮ್ಮೆ ದನಗಳವರೆಗಿನ ಎಲ್ಲ ಪ್ರಾಣಿಗಳೂ ಮನುಷ್ಯನ ಆಹಾರವಸ್ತುಗಳಾಗಿವೆ. ಅಷ್ಟೇ ಅಲ್ಲ, ಅವು ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಮನುಷ್ಯನಿಗೆ ಬಗೆ ಬಗೆಯಾಗಿ ಸಹಾಯ ಮಾಡುತ್ತಿವೆ. ಅವನ ಕೃಷಿ ಕರ್ಮದಲ್ಲಿ ಎರೆಹುಳು, ಗೊಬ್ಬರದ ಹುಳು, ಜೇನ್ನೊಣ ಮೊದಲಾದುವುಗಳ ನೆರವಿಲ್ಲದಿದ್ದರೆ ನರನ ಬದುಕೇ ಕಷ್ಟವಾಗುತ್ತಿತ್ತು. ಎರೆಹುಳು ಕಸಕಡ್ಡಿ ತಿಂದು, ತನ್ನ ಹೊಟ್ಟೆಯೊಳಗಿನ ರಾಸಾಯನಿಕ ಕ್ರಿಯೆಯಿಂದಾಗಿ, ಗಿಡಗಳಿಗೆ ಬೇಕಾದ ಒಳ್ಳೆಯ ಗೊಬ್ಬರವನ್ನು ಹೊರಹಾಕುತ್ತವೆ. ಸಂತಾನೋತ್ಪತ್ತಿಗಗತ್ಯವಾದ ಪರಾಗ ಸಾಗಾಣಿಕೆ ಜೇನು ಹುಳುಗಳಿಂದ ನಡೆಯುತ್ತದೆ. ಧಾನ್ಯವನ್ನು ಲೂಟಿಮಾಡುವ ಹೆಗ್ಗಣಗಳನ್ನು ಬೆಕ್ಕು ಹಾವು ಕೊಲ್ಲುತ್ತವೆ. ಮಾಲಿನ್ಯವನ್ನು ಹರಡುವ ಹುಳು ಹುಪ್ಪಟೆಗಳನ್ನು ಹಕ್ಕಿಗಳು ನಾಶಮಾಡುತ್ತವೆ. ಅರಣ್ಯ ಪ್ರಾಣಿಗಳ ಬೇಟೆಗೆ,

ಆಸ್ತಿ ಕಾವಲಿಗೆ, ಪ್ರಾಣರಕ್ಷಣೆಗೆ ನಾಯಿಗಳ ನೆರವು ಬೇಕೇ ಬೇಕು. ಹಾಗೆ ನೋಡಿದರೆ ಕುರಿಮೇಕೆ ಕೋಳಿ, ದನ, ಕುದುರೆ, ಬೆಕ್ಕು, ಒಂಟೆ ಮೊದಲಾದ ಪ್ರಾಣಿಗಳು ಮನುಷ್ಯನ ಬದುಕಿನ ಅವಿಭಾಜ್ಯಾಂಗಗಳಾಗಿವೆ. ಮಿರುಮಿರುಗುವ ಬಟ್ಟೆಗಳಿಗೆ ದಾರಕೊಡುವ ರೇಷ್ಮೆಹುಳುಗಳ ಅಂಗಾಂಶಗಳು ಮನುಷ್ಯನ ಹಾರ್ಮೋನುಗಳ ವೃದ್ಧಿಗೂ, ರೋಗ ನಿವಾರಣೆಗೂ ಅನುವಾಗುತ್ತವೆಂದು ಹೇಳಲಾಗಿದೆ. ಆಕಾರದಲ್ಲಿ ರೇಷ್ಮೆಗಳು ವಿನಂತಿರುವ ಹುತ್ತದ ಹುಳುಗಳನ್ನು ಕೃಶರೋಗದಿಂದ ನರಳುವ ಮಕ್ಕಳಿಗೆ ನುಂಗಿಸುವುದುಂಟು ಕೆಲವರಿಗೆ ಅಸಹ್ಯವೆಂದು ತೋರುವ ಹಂದಿಕೋಳಿಗಳು ಪರಿಸರ ನೈರ್ಮಲ್ಯ ಸಾಧನಗಳಾಗಿವೆ ಎಂದರೆ ತಪ್ಪಾಗದು. ಅವು ಯಾವಾಗಲೂ ಕೊಳಚೆಯಲ್ಲಿ ಬಿದ್ದಿರುತ್ತವೆ; ಕೊಳೆಯನ್ನೆ ತಿನ್ನುತ್ತವೆ; ಅವುಗಳ ಮಾಂಸ ಉತ್ತಮಾಹಾರವೆಂದು ಮನುಷ್ಯ ತಿಳಿದಿದ್ದಾನೆ. ಅಷ್ಟೇ ಅಲ್ಲ ಹಂದಿಯ ಯಕೃತ್ ಹೃದಯಗಳು ಮನುಷ್ಯಸ ಅದೇ ಅವಯವಗಳ ಗುಣಗಳನ್ನು ಹೊಂದಿರುವುದರಿಂದ, ಅವನ್ನು ರೋಗಪೀಡಿತ ಮನುಷ್ಯರಿಗೆ ಕಸಿಮಾಡಲು ವೈದ್ಯಕೀಯ ಪ್ರಯತ್ನ ನಡೆಯುತ್ತಿವೆ.

ಅವು ಯಾವಾಗಲೂ ಕೊಳಚೆಯಲ್ಲಿ ಬಿದ್ದಿರುತ್ತಿವೆ., ಕೊಳಚೆಯನ್ನೆ ತಿನ್ನುತ್ತವೆ; ಅವುಗಳ ಮಾಂಸ ಉತ್ತಮಾಹಾರವೆಂದು ಮನುಷ್ಯ ತಿಳಿದಿದ್ದಾನೆ. ಅಷ್ಟೇ ಅಲ್ಲ, ಹಂದಿಯ ಯಕೃತ್ ಹೃದಯಗಳು ಮನುಷ್ಯನ ಅದೇ ಅವಯವಗಳ ಗುಣಗಳನ್ನು ಹೊಂದಿರುವುದರಿಂದ, ಅವನ್ನು ರೋಗಪೀಡಿತ ಮನುಷ್ಯರಿಗೆ ಕಸಿಮಾಡಲು ವೈಧ್ಯಕೀಯ ಪ್ರಯತ್ನ ನಡೆಯುತ್ತಿವೆ. ವರಾಹವನ್ನು ಅವತಾರಶಕ್ತಿಯನ್ನಾಗಿ ಸ್ವೀಕರಿಸಿದ ಪುರಾಣಕಾರರಿಗೆ ವರಸೂಕರರ ದೈಹಿಕ ಸಾಮ್ಯ ಸಾದೃಶ್ಯ ಗೊತ್ತಿದ್ದಿರ ಬಹುದೆ? ಹಂದಿಕೋಳಿಗಳ ಅಂಗರಚನೆಯ ಆ ಅಂಗಗಳಲ್ಲಿ ಉತ್ಪತ್ತಿಯಾಗುವ ರಾಸಾಯನಿಕ ದ್ರವ್ಯ ಕೊಳಕನ್ನು ಪರಮಾಣು ಕೀಟಗಳನ್ನು ಮತ್ತು ಪರಿವರ್ತಿಸುವ ಮತ್ತು ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದೇ ಹೇಳಬಹುದು.

ಇಂಥದೇ ಅದ್ಭುತ ಸಾಮರ್ಥ್ಯ ಸಹಜವಾಗಿಯೇ ಸಸ್ಯವರ್ಗದಲ್ಲಿಯೂ ಇದೆ ಎಂಬುದು ಶ್ರೀ ಸಾಮಾನ್ಯನಿಗೂ ಗೊತ್ತಿರುವ ಸಂಗತಿ. ಕಸಗೊಬ್ಬರಗಳೇ ಸಸ್ಯಗಳಿಗೆ ಆಹಾರ, ಆಧಾರ, ಹಸು ಹೇಗೆ ಹುಲ್ಲು ತಿಂದು ಹಾಲನ್ನು ಕೊಡುತ್ತದೆಯೋ ಹಾಗೆಯೇ ಗಿಡ ಗೊಬ್ಬರದ ಸಾರವನ್ನು ಹೀರಿಕೊಂಡು ರುಚಿಕರವಾದ ಹಾಗೂ ಸುಂದರವಾದ ಫಲ ಪುಷ್ಪಗಳನ್ನು ಪುಷ್ಟಿಕರವಾದ ಆಹಾರಧಾನ್ಯಗಳನ್ನು ನೀಡುತ್ತವೆ. ಉಚ್ಚೆ ಹೇಲುಗಳ ನ್ನುಂಡ ಭೂಮಿಯಲ್ಲಿ ಹುಲುಸು ಬೆಳೆ ಬರುತ್ತದೆಂಬುದನ್ನು ಸಾಮಾನ್ಯ ರೈತನೂ ಬಲ್ಲ. ಅವುಗಳ ಪ್ರಯೋಜನವನ್ನು ಜಪಾನೀಯರು ವಿಶೇಷವಾಗಿ ಬಲ್ಲವರಾದ್ದರಿಂದ ಅವುಗಳನ್ನು ಸಂಗ್ರಹಿಸಿ ಉಪಯುಕ್ತವಾಗಿ ಬಳಸಿಕೊಳ್ಳುತ್ತಾರೆ. ಉಚ್ಚೆ ಹಾಳಾಗಬಾರದೆಂದು ಪ್ರತಿಯೊಂದು ಹೋಟೆಲಿನಲ್ಲಿಯೂ ಸಂಗ್ರಹಿಸಿಡಲು ಅತಿಥಿಗಳಿಗೆ ಮಡಕೆಗಳನ್ನು ಕೊಡುವ ಪದ್ಧತಿಯಿದೆ. ಮೂತ್ರ ಚಿಕಿತ್ಸೆ ಬಲ್ಲವರಿಗೆ ಉಚ್ಚೆಯ ಪ್ರಯೋಜನ ಮನದಟ್ಟಾಗುತ್ತದೆ.

ಪರಿಸರವೆಂದ ಕೂಡಲೇ ಆಕಾಶ ಪೃಥ್ವಿ ಅಪ್ಪು ಅಗ್ನಿ ವಾಯುಗಳೂ ಅವುಗಳ ನೈಸರ್ಗಿಕ



ಕ್ರಿಯೆಗಳೂ, ಪರಿಣಾಮಗಳೂ ನೆನಪಿಗೆ ಬರುತ್ತವೆ. ಅವು ತಮಗೆ ತಾವೇ ಶುದ್ಧ. ಅವುಗಳ ಸಮತೋಲನ ಕ್ರಿಯೆಯಿಂದ ನಿಸರ್ಗಕ್ಕೆ ಮಾತ್ರವಲ್ಲ ಮನುಷ್ಯ ಸಮಾಜಕ್ಕೂ ಸುಖವುಂಟು, ಕ್ಷೇಮವುಂಟು, ಬಹುವೇಳೆ ಮನುಷ್ಯನ ಸ್ವಾರ್ಥ ಲೋಭಗಳಿಂದಾಗಿ ನಿಸರ್ಗ ನಶಿಸುವುದರ ಜತೆಗೆ, ಪಂಚತತ್ವಗಳಿಗೂ ಮಾಲಿನ್ಯವುಂಟಾಗುತ್ತದೆ. ಈ ಮಾಲಿನ್ಯವೂ ನೈಸರ್ಗಿಕ ಕ್ರಿಯೆ ಪ್ರತಿಕ್ರಿಯೆಗಳ ಪರಿಣಾಮವಾಗಿ ಸಂಭವಿಸುತ್ತದೆ. ಅಂದ ಮೇಲೆ ಕಸರಸ, ನೈರ್ಮಲ್ಯ-ಮಾಲಿನ್ಯಗಳು ಪರಸ್ಪರ ಪರಿಣಾಮಗಳು, ಪರಸ್ಪರಾವಲಂಬಿಗಳು. ರಾಸಾಯನಿಕ ಕ್ರಿಯೆಗಳ ಪರಿಣಾಮವಾಗಿ ರಸದ ಕೆಲವು ಗುಣಗಳು ಕೊರೆಯಾಗಲಾಗಿ ಅದು ಕಸವಾಗಿ ಪರಿವರ್ತನೆಗೊಳ್ಳುತ್ತದೆ; ಅಂತೆಯೇ ಕೊರೆಯಾದ ಗುಣಗಳು ರಾಸಾಯನಿಕ ಮಾರ್ಗದಲ್ಲಿ ಸೇರಿಕೊಳ್ಳಲಾಗಿ ಕಸವೆ ರಸವಾಗುತ್ತದೆ. ಆದ್ದರಿಂದ ಕಸವಾಗಲಿ ಮಾಲಿನ್ಯವಾಗಲಿ ಅಸಹ್ಯವೂ ಅಲ್ಲ ತ್ಯಾಜ್ಯವೂ ಅಲ್ಲ. ಮಾಲಿನ್ಯವನ್ನು ನಿರ್ಮಲೀಕರಿಸುವ ರಹಸ್ಯವನ್ನು ತಿಳಿದ ಮನುಷ್ಯನಿಗೆ ನಿಸರ್ಗದ ಭಾಗವಾದ ಮಾಲಿನ್ಯ ವರವಾಗಿ ಪರಿಣಮಿಸುತ್ತದೆ. ಇದು ಸಂಕ್ಷೇಪವಾಗಿ ಕಸ-ರಸ ಅಥವಾ ಮಾಲಿನ್ಯ- ನಿರ್ಮಾಲಿನ್ಯ ಸಿದ್ಧಾಂತ. ನಿರ್ಮಲೀಕರಣ ಸಾಮರ್ಥ್ಯವನ್ನು ನಿಸರ್ಗ ತನ್ನ ಗರ್ಭದಲ್ಲಿರಿಸಿಕೊಂಡಿದೆ ಎಂದು ಮಾನವ ಅರಿತಿರುವುದೊಳ್ಳೆಯದು.

ನಿಸರ್ಗವನ್ನು ಮಾಲಿನ್ಯ ದೂರವಾಗಿರಿಸುವುದೇ 'ಓಂ ದೌಃ ಶಾಂತಿರಂತರಿಕ್ಷಂ ಶಾಂತಿಃ 'ಮಧುವಾತಾ ಋತಾಯತೇ' ಮೊದಲಾದ ವೇದ ಮಂತ್ರಗಳ ಉದ್ದೇಶವಾಗಿತ್ತು. ಈ ಕಸರಸ ಸಿದ್ಧಾಂತವನ್ನು ಡಿವಿಜಿಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಸೊಗಸಾದ ಕಾವ್ಯ - ವೇದಾಂತ ಮಾರ್ಗದಲ್ಲಿ ವಿವರಿಸಿದ್ದಾರೆ.

ಕೊಳೆಕೆಂದು ಹುಳುಕೆಂದು ಹೇಸಿಗೆಯ ಹುಳುವೆಂದು
ಇಳೆಯೊಳಾವುದರೊಳಮಸಹ್ಯಪಡಬೇಡ
ಬೆಲೆಯುಂಟು ಕೊಳೆಗಮೀ ಜೀವಸಾಮಗ್ರಿಯಲಿ
ಕೊಳೆ ಶುಚಿವ್ಯಾಪಕವೊ ಮಂಕುತಿಮ್ಮ

ತಳೆಯಲಾರನೆ ಬೊಮ್ಮ ಬೀಭತ್ಸರೂಪಗಳ?
ನಲಿಯಲಾರನೆ ತಿಪ್ಪೆರೊಚ್ಚುನಾತದಲಿ?
ಮಲವೇನೊ? ಹೊಲೆಯೇನೊ ಜೀವಸಂಬಂಧ
ಮಲಿನದಲಿ ನೆನೆ ಶುಚಿಯ ಮಂಕುತಿಮ್ಮ

ವೇದಾಂತಿಯ ದೃಷ್ಟಿಯಲ್ಲಿ ಪರಬ್ರಹ್ಮನ ಆವಾಸಸ್ಥಾನವಾಗಿರುವ ಕಸರಸಗಳೆಲ್ಲವೂ ಒಂದೇ, ದೃಷ್ಟಿ ಭೇದದಿಂದ, ಸ್ಥಿತಿ ಸ್ಥಾನ ಭೇದದಿಂದ ಅವು ಬಿನ್ನ ವಿಭಿನ್ನವಾಗಿ ತೋರುತ್ತವೆ. ಭಗವಂತನ ಸೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ, ಯಾವುದೂ ತಾಜ್ಯವಲ್ಲ, ಕಸರಸಗಳು ಪರಸ್ಪರ ಪರಿವರ್ತನೀಯ ಎಂಬ ತತ್ವವನ್ನರಿತುಕೊಂಡಾಗ ಮಾತ್ರ ನಿಸರ್ಗ ಮಾನವನಿಗೆ ವರವಾಗುತ್ತದೆ. ಜಗತ್ತು ಸ್ವರ್ಗವಾಗುತ್ತದೆ. ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ,

ಪ್ರತಿಯೊಂದು ಜೀವಿಯೂ ಅಣು ಪರಮಾಣುಕ್ವಾರ್ಕ್‌ಗಳಿಂದಾಗಿವೆಯೆಂಬ ವೈಜ್ಞಾನಿಕ ರಹಸ್ಯವನ್ನರಿತಾಗ, ಸಕಲ ಜೀವಿಗಳ ಪರಸ್ಪರ ಸಂಬಂಧ ನರನಿಗರಿವಾದೀತು.

ಈ ವಿಶ್ವದಲಿ ನೋಡಲೆಲ್ಲರೆಲ್ಲರ ನಂಟು
ಆವನಾ ಬಂಧುತೆಯ ಜಡೆಯ ಬಿಡಿಸುವನು?
ಜೀವ ಜೀವಕೆ ನಂಟು ಜಡಚೇತನಕೆ ನಂಟು
ಆವದದಕಂಟಿರದು? ಮಂಕುತಿಮ್ಮ

ಪರಿಸರದ ಪರಮಾರ್ಥ ಈ ಕವಿತೆಗಳಲ್ಲಿ ಸುಸ್ಪಷ್ಟವಾಗಿ ನಿರೂಪಣೆಗೊಂಡಿದೆ.

ಜನಪದರ ಪರಿಸರ ಪ್ರಜ್ಞೆ ಆಧುನಿಕ ನಾಗರಿಕ ಅರಿವಿಗಿಂತ ಉತ್ತಮವಾಗಿತ್ತೆಂದೇ ತೋರುತ್ತದೆ. ಮನೆಯ ವಿನ್ಯಾಸದಲ್ಲಿಯೇ ಅದು ಸ್ಪಷ್ಟವಾಗಿ ಮೈದೋರುತ್ತದೆ. ಹಿಂದಿನ ಕಾಲದಲ್ಲಿ ತೊಟ್ಟಿ ಹಟ್ಟಿಗಳೆ ಅಧಿಕವಷ್ಟೆ. ಹಗಲಿರಲಿ, ಇರಳು ಸಹ ಸಾಕು ಪ್ರಾಣಿಗಳು ಅವರ ಕಣ್ಮುಂದಿರಬೇಕು, ಪಕ್ಕದಲ್ಲಿರಬೇಕು. ಹಟ್ಟಿಯ ಒಂದು ಭಾಗದಲ್ಲಿ ಕೊಟ್ಟಿಗೆಯಾದರೆ, ಮತ್ತೊಂದು ಭಾಗದಲ್ಲಿ ಕೋಣೆಕಣಜ ಪಡಸಾಲೆ ಇತ್ಯಾದಿಗಳು. ಸೆಗಣಿ ಗಂಜಳಗಳ ಜತೆಗೆ ನಿಶ್ವಾಸ ದ ಇಂಗಾಲವೂ ಸೇರುವುದಾದರೆ ಮಳೆಯಲ್ಲಿ ಮಾಲಿನ್ಯ ತುಂಬಿಕೊಳ್ಳುತ್ತದೆ. ಯಥೇಚ್ಛವಾಗಿ ಗಾಳಿ ಬೆಳಕು ಬಿಸಿಲು ಬೀಳುವುದಾದರೆ ನಿರ್ಮಲೀಕರಣ ಜತೆಜತೆಯಲ್ಲಿಯೇ ಸಾಗುತ್ತದೆಂಬ ಅವರ ಭಾವನೆ ವೈಜ್ಞಾನಿಕವಾಗಿದೆ. ದೀರ್ಘಾನುಭವ ಪ್ರಯೋಗಗಳೇ ಅವರ ಆ ಭಾವನೆಗೆ ಆಧಾರ. ವಿಶಾಲವಾದ ತೊಟ್ಟಿ ಇರುವಾಗ ಕಿಟಕಿಗಳೇ ಅನಾವಶ್ಯಕ. ಇಂದಿಗೂ ಪರಿಸರ ರಕ್ಷಣೆಯಲ್ಲಿ ಬುಡಕಟ್ಟು ಜನಾಂಗಗಳ ಬದುಕು ಆದರ್ಶಪ್ರಾಯವಾಗಿದೆ.

ಹಿಂದಿನ ಕಾಲದಲ್ಲಿ ಜನ ಸಿಮೆಂಟಿನ ಹೆಸರನ್ನೆ ಕೇಳಿರಲಿಲ್ಲ. ನೆಲದ ಸಾರಣಿಗೆ ಸೆಗಣಿ ಬಳಕೆಯಾಗುತ್ತಿತ್ತು; ಹೆಚ್ಚೆಂದರೆ ಗಾದೆ, ಸೆಗಣಿ ನೆಲದಿಂದ ಶರೀರಕ್ಕೆ ತಂಪಾಗುತ್ತದೆಂಬ, ಪರಮಾಣು ಕೀಟ ಅಥವಾ ಬ್ಯಾಕ್ಟಿರೀಯಾಗಳು ಸೆಗಣಿ ಗಂಜಲಗಳಿಗಂಜುತ್ತವೆಂಬ ನಂಬಿಕೆ ಇತ್ತು. ಆ ನಂಬಿಕೆ ನಿರಾಧಾರವಾದದ್ದಲ್ಲ, ಶರೀರಶುದ್ಧಿಗೆ ಬಳಸುತ್ತಿದ್ದ ಪಂಚಗವ್ಯದಲ್ಲಿ ಹಾಲು ಮೊಸರು ತುಪ್ಪಗಳ ಜತೆಗೆ ದನದ ಗಂಜಲ ಮತ್ತು ಸೆಗಣಿಗಳೂ ಸೇರ್ಪಡೆಯಾಗುತ್ತಿದ್ದವು. ಈಗಲೂ ಕೆಲವು ಕಡೆ (ಉದಾ: ಕೊಯಮತ್ತೂರು) ದೊಡ್ಡ ಬಂಗಲೆಗಳಸುತ್ತ ಎರಡು ಮೂರಡಿ ಅಗಲ ನೆಲವನ್ನು ಅರಿಸಿನದ ಪುಡಿ, ಸೆಗಣಿ, ಗಂಜಲಗಳನ್ನು ಬೆರೆಸಿದ ಬಗ್ಗಡದಿಂದ ಸಾರಿಸುತ್ತಾರೆ. ಬಂಗಲೆಯ ಒಳಭಾಗವನ್ನು ಕ್ರಿಮಿಕೀಟಾದಿಗಳ ಹಾವಳಿಯಿಂದ ರಕ್ಷಿಸುವುದೇಈ ಸಾರಣೆಯ ಉದ್ದೇಶ. ಸನಾತನಿಗಳಿಗಿರಲಿ, ರೈತರಿಗೆ ಸೆಗಣಿ ಗಂಜಲಗಳು ಪವಿತ್ರ ವಸ್ತುಗಳು. ಕಸ ಅವರ ಪಾಲಿಗೆ ಕಸವರವೆ ಹೊರತು ದೂಷ್ಯವಲ್ಲ. ಕಸಗುಡಿಸುವ ಪೊರಕೆಗವರು ಕಾಲು ಸಹ ಸೋಕಿಸುವುದಿಲ್ಲ.

ಕಸ ಹೊಡೆದ ಕೈ ಕಸ್ತೂರಿ ನಾತವು
ಬಸವಣ್ಣನಿನ ಸೆಗಣೀಯ ಬಳಿದ ಕೈ
ಎಸಳಯಾಲಕ್ಕಿಗೊನೆ ನಾಕು.



ನಾತ ಎಂದರೆ ಸುಗಂಧ. ಕಸವನ್ನು ಕಸ್ತೂರಿಗೆ, ಸೆಗಣೆಯನ್ನು ಯಾಲಕ್ಕಿಗೆ ಹೋಲಿಸುವಲ್ಲಿ ಆ ಜನಪದರು ಈ ನಾಗರಿಕರಿಗೆ ಮಿಗಿಲೆನಿಸುತ್ತಾರೆ. ಹೊರಗಿನವರು ಬಾಣಂತಿ ಕೋಣೆಯನ್ನು ಪ್ರವೇಶಿಸುವ ಮುನ್ನ ಬಾಗಿಲಿಗೆ ಬೇವಿನ ಸೊಪ್ಪಿನ ತೋರಣ ಕಟ್ಟುವುದುಂಟು; ಅವರು ಸೆಗಣಿ ತುಳಿದು ಒಳಗೆ ಹೋಗಬೇಕು. ಇದು ಮೂಢನಂಬಿಕೆಯಂತು ಅಲ್ಲ.

ನಾಗರಿಕರಿಗೆ ಮಣ್ಣೆಂದರಾಗದು. ತಾವು ತಿರುಗಾಡುವ ನೆಲಕ್ಕೆ ಸಿಮೆಂಟ್ ಅಥವಾ ಅಮೃತಶಿಲೆಯ ಹಲಗೆಗಳನ್ನು ಹಾಸಬೇಕು. ಸತ್ತಮೇಲೂ ಕೆಲವರು ಸಿಮೆಂಟ್ ಸಮಾಧಿಯನ್ನು ಕಲ್ಪಿಸಿಕೊಳ್ಳುತ್ತಾರೆ. ಎಂದಾದರೊಂದು ದಿನ ತಾವು ಹೊರಗೆದ್ದು ಬರುವ ಆಸೆ ಅವರಿಗಿರಬಹುದು. ಆತ್ಮ ಆಕಾಶದಲ್ಲಿ ದೇಹ ಮಣ್ಣಿನಲ್ಲಿ ಬೆರೆಸಿಕೊಂಡಾಗಲೇ ದೇಹಿಗೆ ಮುಕ್ತಿಯೆಂಬುದನ್ನು ಮರೆಯಲಾಗದು. ಇದೇ ಸತ್ಯಸಹಜ; ಉಳಿದದ್ದೆಲ್ಲ ಕೃತ್ರಿಮ. ಈ ಸತ್ಯ ಜನಪದರಿಗೆ ಗೊತ್ತಿತ್ತು.

ಮಣ್ಣಿಂದ ನಂಬಿ ನಾಮಣ್ಣಿಂದ ಬದುಕೇನು
ಮಣ್ಣಿನಗೆ ಮುಂದೆ ಹೊನ್ನು। ಅಣ್ಣಯ್ಯ
ಮಣ್ಣೆ ಲೋಕದಲಿ ಬೆಲೆಯಾದ್ದು.

ಗಿಡ ಮಣ್ಣಿನಲ್ಲಿ ಬೆಳೆಯಬೇಕು; ಮನುಷ್ಯನಿಗೆ ಗಿಡದಿಂದ ಜೀವಸತ್ವ ಲಭಿಸಬೇಕು. ಅಂದಮೇಲೆ ದೇಹಕ್ಕೂ ಮಣ್ಣಿಗೂ ನಿಕಟತಮ ಮಾತೃಸಂಬಂಧವಿದೆಯೆಂದೇ ಹೇಳಬೇಕು. ಮಾನವ ಮನುಷ್ಯ ಪದಗಳಿಗೂ ಮಣ್ಣಿಗೂ ನೇರಸಂಬಂಧವಿರಬುದೇನೋ?

ಪ್ರಾಚೀನ ಮಾನವ ಪ್ರಕೃತಿ ಉಪಾಸಕ. ತಾನು ಪ್ರಕೃತಿಯ, ಅಂದರೆ ಸಮಗ್ರ ಜೀವರಾಶಿಯ ಒಂದು ಅಂಶವೆಂದೇ ತಿಳಿದುಕೊಂಡಿದ್ದನ್ನು ಜಡದಲ್ಲಿಯೂ ಅವನು ಚೈತನ್ಯದ ಲೀಲೆಯನ್ನು ಕಂಡಿದ್ದ. ಬಂಡೆಯನ್ನು ನಾಶಮಾಡಿದರೂ ನಿಸರ್ಗದ ಸಮತೋಲನ ತಪ್ಪುತ್ತದೆಂದವನು ನಂಬಿದ್ದ. ಅವನ ನಿಸರ್ಗಪ್ರೇಮವೇ ಉಪಾಸನೆಯಾಗಿ ಆರಾಧನೆಯಾಗಿ ಪರಿವರ್ತನೆಗೊಳ್ಳುತ್ತದೆ. ಹೊಳೆ ಕಡಲು ಮಳೆ ನೀರುಗಳು ಸಹ ಪ್ರಕೃತಿ-ಸಂಸಾರದ ಭಾಗವಷ್ಟೆ, ಮಳೆ ಬೆಳೆಗಳಿಗಂತು ಆತ್ಮೀಯ ಸಂಬಂಧ. ಸೂರ್ಯ ಭೂಮಿಯ ನೀರನ್ನು ಕುದಿಸಬೇಕು, ಕುದಿದ ನೀರು ಆವಿಯಾಗಿ ಗಗನಕ್ಕೇರಿ ಮುಗಿಲಾಗಬೇಕು; ಹೆಪ್ಪುಗಟ್ಟಿದ ಮುಗಿಲು ಮಳೆಯಾಗಿ ಮತ್ತೆ ಭೂಮಿಗೆ ಸುರಿಯಬೇಕು.ಅದೊಂದು ಕರ್ಮಚಕ್ರ. ನಿಸರ್ಗದಲ್ಲಿ ಇಂಥ ಚಕ್ರಗಳು ಅದೆಷ್ಟೋ! ಮಳೆಯಿಲ್ಲದಿದ್ದಾಗ ಬೆಳೆಯಿಲ್ಲ. ಅಂದ ಮೇಲೆ ಜಗತ್ತಿಗೆ ನೀರೇ ಜೀವನ. ಅದರಿಂದಾಗಿ ಮಾನವ ನೀರು ಮಳೆಗಳನ್ನು ಪೂಜಿಸುತ್ತಾನೆ. ಮಳೆಗೆ ಸಂಬಂಧಿಸಿದ ಆಚರಣೆಗಳನ್ನು ನಂಬಿಕೆಗಳು, ಪುರಾಣಕಥೆಗಳು, ಗಾದೆಗಳು, ಹಾಡುಗಳು ಜಗತ್ತಿನ ಎಲ್ಲ ಜನಾಂಗಗಳಲ್ಲಿ, ಎಲ್ಲ ಭಾಷೆಯಗಳಲ್ಲಿ, ಎಲ್ಲ ಜನಪದರಲ್ಲಿ ಹುಲುಸಾಗಿವೆ.

ವಾತಾವರಣ ಎಲ್ಲ ಕಡೆಗಳಲ್ಲಿ ಒಂದೆ ವಿಧವಾಗಿಲ್ಲ. ಅದಕ್ಕನುಗುಣವಾಗಿ ಜೀವನ ರೀತಿಯಲ್ಲಿಯೂ ವ್ಯತ್ಯಾಸವಾಗುತ್ತದೆ. ಅಮೆಜಾನ್ ಪ್ರದೇಶದ ಕುಟುಂಬವೊಂದು

ಶೀತವಲಯದಲ್ಲಿ ಒಂದು ದಿನ ಬದುಕಲಾರದು; ಅಂತೆಯೇ ಶೀತವಲಯದ ಎಸ್ಕಿಮೋಗಳು ಸಹರಾ ಮರಳುಗಾಡಿನಲ್ಲಿ ಒಂದು ದಿನ ನೂಕುವುದು ಕಷ್ಟವಾಗುತ್ತದೆ. ಉಷ್ಣವಲಯದ ಜೀವನ ವಿಧಾನವನ್ನು ಸಮಸೀತೋಷ್ಣವಲಯದ ಜೀವನವಿಧಾನಕ್ಕೂ ನಡುವೆ ಅಗಾಧ ಕಂದರವಿರುತ್ತದೆ. ಅಷ್ಟೇ ಏಕೆ,; ಒಂದೇ ರಾಜ್ಯದ ಬಯಲು ಸೀಮೆ ಮಲೆ ಸೀಮೆಗಳ ಜಾನಪದ ಸಂಸ್ಕೃತಿಗಳಲ್ಲಿ ಅನೇಕ ವೈವಿಧ್ಯಗಳನ್ನು ಗುರುತಿಸಬಹುದು. ಆ ಯಾವ ಹವಾಮಾನ ವಾತಾವರಣಗಳಿಗೆ ತಕ್ಕಂತೆ ಜೀವಿಗಳ ರೂಪ ಸ್ವರೂಪ ಆಚಾರ ವಿಚಾರಗಳಲ್ಲಿ ವ್ಯತ್ಯಾಸವಿದ್ದೇ ಇರುತ್ತದೆ. ಶೀತಲವಲಯದ ಜೀವಜಂತುಗಳು, ಸಸ್ಯವೃಕ್ಷಗಳು ಉಷ್ಣವಲಯದಲ್ಲಿ ಜೀವಿಸಲಾರವು. ಹೆಚ್ಚುಮಳೆ ಬೀಳುವ ಮಲೆನಾಡಿನಲ್ಲಿ ಕುರಿ ಜೀವಿಸಲಾರದು. ಬದನೆ ಬೆಂಡೆ ಬಾಳೆ ಮಾವು ಮೊದಲಾದ ಬೆಳೆಗಳು ಉತ್ತರಧ್ರುವದಲ್ಲಿ ಬದುಕಲಾರವು. ಒಟ್ಟಿನಲ್ಲಿ ಜೀವಿಗಳು ಪರಿಸರಾನುಗುಣವಾಗಿ ಹೊಂದಿಕೊಳ್ಳಬೇಕಾಗುತ್ತದೆ. ವೈವಿಧ್ಯವೇ ಜೀವಸಂತಾನದ ಉಸಿರು.

ಜೀವ ಜಗತ್ತೆಲ್ಲವೂ ಒಂದು ಅವಿಭಕ್ತ ಕುಟುಂಬವಾದ್ದರಿಂದ, ಪ್ರಾಣಿ ಸಸ್ಯವರ್ಗಗಳ ವೃದ್ಧಿ ಹ್ರಾಸಗಳು ಮಾನವ ಸಮುದಾಯದ ಮೇಲೆ ಅಪಾರ ಪ್ರಭಾವ ಬೀರುತ್ತವೆಂಬುದು ಸರ್ವಾನುಭವದ ಸಂಗತಿಯಾಗಿದೆ. ಸಹಸ್ರ ಸಹಸ್ರ ವರ್ಷಗಳಿಂದ ಸಲುವಳಿಯಾಗುತ್ತಿರುವ ಪರಿಸರಾತ್ಮಕವಾದ ಪ್ರಭಾವ ಪರಿಕ್ರಮಣ ಜಾನಪದದಲ್ಲಿ ಪ್ರತಿಫಲನಗೊಳ್ಳುತ್ತಿರುವುದುಂಟಷ್ಟೆ. ಈ ಪ್ರತಿಫಲನದ ಅಧ್ಯಯನವನ್ನು ಪರಿಸರ ಜಾನಪದದ ಹೆಸರಿನಲ್ಲಿ ನಡೆಸಬಹುದಾಗಿದೆ. ಭೌಗೋಳಿಕ, ಮಾನವಿಕ, ವೈಜ್ಞಾನಿಕ, ಪ್ರಾಣಾತ್ಮಕ, ಸಸ್ಯಾತ್ಮಕ, ಪಂಚತತ್ತ್ವಾತ್ಮವೇ ಮೊದಲಾದ ನೆಲೆಗಳಲ್ಲಿ ಪರಿಸರ ಜಾನಪದವನ್ನು ಅಧ್ಯಯನ ಮಾಡಬಹುದಾಗಿದೆ.

ಇತ್ತೀಚೆಗೆ ಪರಿಸರವೆಂದ ಕೂಡಲೇ ಮಾಲಿನ್ಯ ಅದರ ಜತೆಗಂಟಿಕೊಂಡೇ ಇರುತ್ತದೆ. ಈ ಮಾಲಿನ್ಯದಲ್ಲಿ ಎರಡು ವಿಧ: ಅಮಾನುಷ ಮತ್ತು ಮಾನುಷ. ಅನಾವೃಷ್ಟಿ ಅತಿವೃಷ್ಟಿ ಕ್ಷಾಮ ರೋಗರುಜಿನ ಭೂಕಂಪ ಇವೇ ಮೊದಲಾದ ಅಮಾನುಷ ಸಂಗತಿಗಳು ಮಾಲಿನ್ಯಕ್ಕೆ ಕಾರಣವಾಗುವುದುಂಟು. ಈ ಕಾರಣಗಳನ್ನು ತಡೆಯುವ ಶಕ್ತಿ ಮನುಷ್ಯನಿಗಿಲ್ಲ. ಮನುಷ್ಯನೇ ಕಾರಣವಾಗಿರುವ ಮಾಲಿನ್ಯಗಳೇ ಅಪಾರ. ಆದಿಮಾನವನ ಕಾಲದಲ್ಲಿ ಮಾಲಿನ್ಯದ ಪ್ರಶ್ನೆಯೇ ಇರಲಿಲ್ಲ. ಅವನು ಅಲೆಮಾರಿಯಾದ ನಂತರವೂ ನಿಸರ್ಗಕ್ಕೆ ಆಘಾತವಾಗದ ರೀತಿಯಲ್ಲಿ ತನ್ನ ಬದುಕು ನಡಸುತ್ತಿದ್ದ. ಆಗವನ ಬೇಡಿಕೆಗಳು ಕನಿಷ್ಠ ಪ್ರಮಾಣದಲ್ಲಿದ್ದವು. ಕೃಷಿ ಸಂಸ್ಕೃತಿಯ ಯುಗದಲ್ಲಿ ದುಡಿಮೆ ಬದುಕಿನ ಪ್ರಧಾನ ಭಾಗವಾಗಿದ್ದುದರಿಂದ ಮಾಲಿನ್ಯಕ್ಕವಕಾಶವಿರಲಿಲ್ಲ. ನಾಗರಿಕತೆ ವಿಕಾಸಗೊಳ್ಳುತ್ತ, ನಗರೀಕರಣ ಅಧಿಕವಾದಂತೆಲ್ಲ, ಜತೆಗೆ ಪಾಳೆಯಗಾರಿಕೆ ಪದ್ಧತಿ ರೂಢಿಗತವಾದನಂತರ, ವ್ಯಾಪಾರ ವಾಣಿಜ್ಯಗಳು ಕುದುರುತ್ತ, ಮಾನವನ ಆವಶ್ಯಕತೆಗಳು ದಿನದಿಂದ ದಿನಕ್ಕೆ ಬೆಳೆಯುತ್ತವೆ. ಬಂಡವಾಳಗಾರಿಕೆ ಪ್ರಚುರವಾದಂತೆ ಹಲವರು ಹಸಿದುಕೊಂಡೇ ಕೆಲವರ ಸುಖಕ್ಕಾಗಿ ದುಡಿಯುತ್ತಾರೆ.



ಕೈಗರಿಕಾ ಕ್ರಾಂತಿ ಮತ್ತು ತಂತ್ರಜ್ಞಾನಗಳು ಜೀವನ ವಿಧಾನವನ್ನು ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನೂ ರೂಢಮೂಲವಾಗಿ ಬದಲಾಯಿಸುತ್ತವೆ. ಅಂಕೆಯಿಲ್ಲದ, ಹತೋಟಿ ಮೀರಿದ ಅವಶ್ಯಕೆತಗಳು ಆಧುನಿಕ ನಾಗರಿಕತೆಯ ರೋಗಗಳು. ಈ ಅವಶ್ಯಕತೆಗಳ ಪೂರೈಕೆಗಾಗಿ ಅರಣ್ಯಗಳ ನಾಶವಾಗುತ್ತಿವೆ, ಮರಳುಗಾಡು ವಿಸ್ತಾರಗೊಳ್ಳುತ್ತಿದೆ. ಆಕಾಶ ಮಲಿನವಾಗುತ್ತಿದೆ. ಕೈಗಾರಿಕೆಗಳು ಯಂತ್ರಗಳು ವಾಹನಗಳು ಉಗುಳುವ ವಿಷಾನಿಲಗಳು ವಿನೂತನ ಮಾರಕ ರೋಗಗಳಿಗೆ ಎಡೆಮಾಡಿಕೊಡುತ್ತಿವೆ. ಇಂಗಾಲದ ಆಧಿಕ್ಯದಿಂದಾಗಿ ಜಗತ್ತು ಅಪಾಯದಂಚಿಗೆ ನುಗ್ಗುತ್ತಿದೆ; ಓಝೋನ್ ಪದರದ ಬಿರುಕು ಅಗಲವಾಗುತ್ತಿದೆ. ಋತುಮಾನಗಳು ಬದಲಾಗುವ ಸಂಭವವಿದೆ.

ಮಾಲಿನ್ಯದ ಉಲ್ಬಣತೆಗೆ ಜನಸಂಖ್ಯಾ ಸ್ಫೋಟವೂ ಅಪರಿಹಾರ್ಯಕಾರಣವಾಗಿದೆ. ಜನರ ಆವಶ್ಯಕತೆಗಳನ್ನು ಪೂರೈಸುವ ಸಲುವಾಗಿ ರಾಸಾಯನಿಕ ವಸ್ತುಗಳ ಬಳಕೆ ಹೆಚ್ಚುತ್ತಿದೆ. ಕೃಷಿಕ್ಷೇತ್ರಕ್ಕೂ ರಾಸಾಯನಿಕ ವಸ್ತುಗಳು ಧಾಳಿಮಾಡಿ, ಆ ಮೂಲಕ ಮನುಷ್ಯನ ಶರೀರವನ್ನು ಸೇರುತ್ತಿವೆ. ರಾಸಾಯನಿಕ ಗೊಬ್ಬರಗಳಿಂದ ಬೆಳೆಗಳ ಇಳುವರಿ ಹೆಚ್ಚಿರುವುದು ನಿಜ. ಆದರೆ ಧಾನ್ಯಗಳ ಮೂಲತತ್ವ ಉಳಿದಿಲ್ಲ. ಬಾಯಿ ಮೂಗು ಚರ್ಮ ಮೊದಲಾದ ನಾನಾ ದ್ವಾರಗಳ ಮೂಲಕ ಮನುಷ್ಯ ವಿಷಯವನ್ನು ಶರೀರದೊಳಕ್ಕೆ ಸೇದಿಕೊಳ್ಳುತ್ತಿದ್ದಾನೆ. ಇಡೀ ಮನುಕುಲವೇ ಮುದ್ರಾರಾಕ್ಷಸದ ವಿಷಕನ್ಯೆಯಂತೆ ವಿಷನರರೆ ಆಗಬಹುದೆಂದು ತೋರುತ್ತದೆ. ಇಂಥ ಪರಿಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ನಿರೋಧಕ ಶಕ್ತಿ ಎಂದು ಕರೆಯುತ್ತಾರಲ್ಲವೆ? ಎಮ್ಮೆದನಗಳಂತೆ ಕೆಸರು ಕೊಚ್ಚೆಗಳಲ್ಲಿ ಒದ್ದಾಡುವ, ಕುಂಟೆ ಕೆರೆಗಳಲ್ಲಿ ನೀರು ಕುಡಿಯುವ ಹಳ್ಳಿಗಳು ನಂಜುಂಡರಾಗುತ್ತಾರಲ್ಲವೆ?

ಅವಶ್ಯಕತೆಗಳನ್ನು ಕನಿಷ್ಠಗೊಳಿಸುವ ಮೂಲಕ ನಾನು ಶ್ರೀಮಂತನಾಗ ಬಯಸುತ್ತೇನೆಂದು ಥೋರೋ ಹೇಳಿದ. ಸಣ್ಣದೇ ಸುಂದರ ಎಂದು ಷಾಮೇಕರ್ ಹೇಳಿದ. ಗಾಂಧೀಜಿ ಅದನ್ನೇ ಹೇಳಿದ್ದು ಮಾತ್ರವಲ್ಲ ಮಾಡಿ ತೋರಿಸಿದರು. ವಿಜ್ಞಾನ ಅಥವಾ ಕೈಗಾರಿಕಾ ಪೂರ್ವಯುಗದ ಮಾನವನಿಗಿಂತ ಇಂದಿನ ಮಾನವ ಹೆಚ್ಚು ಸುಖಿ ಎಂದು ಹೇಳುವಂತಿಲ್ಲ. ಈಗ ಮಾನವನ ಮುಂದಿರುವ ಮಾರ್ಗ ಎರಡು : ಥೋರೋ, ಗಾಂಧಿ ಸಿದ್ಧಾಂತ ಅಥವಾ ವಿಜ್ಞಾನ ತಂತ್ರಜ್ಞಾನ. ಇವೆರಡರಲ್ಲೊಂದನ್ನು ಅವನೀಗ ಆರಿಸಿಕೊಳ್ಳಬೇಕಾಗಿದೆ. ವಿಜ್ಞಾನ-ತಂತ್ರ ಜ್ಞಾನ ಕ್ಷೇತ್ರದಲ್ಲಿ ಬಹುದೂರ ಮುಂದುವರಿದಿರುವ ಮಾನವ ಹಿಂದಕ್ಕೆ ಹೋಗಲು ಸಾಧ್ಯವೆ? ಸಾಧ್ಯವಿಲ್ಲವೆನ್ನುವುದಾದರೆ, ನರ್ಮದಾ, ಕೊಜೆಂಟ್ರಿಕ್ಸ್ ಯೋಜನೆಗಳನ್ನು ಸಹಿಸಿಕೊಳ್ಳ ಬೇಕಾಗುತ್ತದೆ. ಅನ್ನ ಮತ್ತು ವಿದ್ಯುಚ್ಛಕ್ತಿ ಹೆಚ್ಚು ಹೆಚ್ಚು ಬೇಕೆನ್ನುವುದಾದರೆ ಅವೆರಡನ್ನೂ ಸ್ವಚ್ಛತಾರಕ್ಷಣ ವಿಧಿಗಳನ್ನೊಳಗೊಂಡ ಷರತ್ತುಗಳೊಡನೆ ಒಪ್ಪಿಕೊಳ್ಳಬೇಕಾಗುತ್ತದೆ. ಬೀಸುವ ಕಲ್ಲು, ಒನಕೆ, ರುಬ್ಬು ಗುಂಡು, ಕುಟಾಣಿ, ನಾಡಹೆಂಚು, ಒಡ್ಡರ ಬಂಡಿ, ಮಣ್ಣಿನ ಮಡಕೆ ಕುಡಿಕೆಗಳು ಮತ್ತೆ ಮಾನವನ ಸೇವೆಗೊದಗುವುದುಂಟೆ? ವಿಜ್ಞಾನ ತಂತ್ರಜ್ಞಾನವನ್ನು ಮನುಷ್ಯ

ಒಪ್ಪಿಕೊಂಡದ್ದಾಗಿದೆ. ಅವುಗಳ ಪ್ರಭಾವ ಪರಿಸರದ ಮೇಲೆ ಅನಿವಾರ್ಯ. ಪರಿಸರದ ಬದಲಾವಣೆಯೊಡನೆ ಜಾನಪದ ಕ್ಷೇತ್ರದಲ್ಲಿಯೂ ವ್ಯತ್ಯಾಸಗಳು ಸಂಭವಿಸಲೇಬೇಕು. ಬದಲಾವಣೆ ಜೀವಂತಿಕೆಯ ಲಕ್ಷಣ, ಬದುಕಿನ ನಿಯಮ ಪ್ರಕೃತಿಯನ್ನು ಪ್ರೀತಿಸಿದಷ್ಟೂ ಮನುಷ್ಯನಿಗೆ ಹಾಗೂ ಜಗತ್ತಿಗೆ ಲೇಸಾಗುತ್ತದೆ. ಕೊನೆಯ ಪಕ್ಷ ಭೂಮಿಯ ಮೂರರಲ್ಲೊಂದು ಪಾಲಾದರೂ ಅರಣ್ಯವಿರಬೇಕು. ಸರ್ಕಾರಿ ಅಂಕಿಸಂಖ್ಯೆಗಳ ಪ್ರಕಾರ ಭರತ ಖಂಡದ ಅರಣ್ಯ ವಿಸ್ತಾರ ಶೇಕಡ ಇಪ್ಪತ್ತೆಂತೆ; ವಾಸ್ತವವಾಗಿ ಅದು ಹನ್ನೆರಡಕ್ಕಿಂತ ಹೆಚ್ಚಾಗಿಲ್ಲ. ಸುಳ್ಳು ಅಂಕಿ ಸಂಖ್ಯೆಗಳೇ ನಮ್ಮ ಆಡಳಿತಗಾರರ ಬಂಡವಾಳವೆನ್ನುವುದಕ್ಕೆ ಇದೂ ಒಂದು ನಿದರ್ಶನ. ಪರಿಸರ ಸಂರಕ್ಷಣೆಗೆ ಹಾಗೂ ನಿರ್ವಸಿತರ ಪುನರ್ವಸತೀಕರಣಕ್ಕೆ ಸರ್ಕಾರ ಬದ್ಧವಾಗಿರುವುದಾದರೆ, ಜನ ಯಾವ ಯೋಜನೆಯನ್ನು ವಿರೋಧಿಸಲಾರರು. ವನ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದರ ಜತೆಗೆ ಶಿಲಾಸಂಪತ್ತನ್ನು ಉಳಿಸಿಕೊಳ್ಳಬೇಕು ಕೊಳವೆ ಬಾವಿಗಳ ಮೂಲಕ ಅನಾದಶ್ಯಕವಾಗಿ ಭೂಗರ್ಭದಲ್ಲಿ ಮಾಲಿನ್ಯ ಹರಡಬಾರದು ಮನುಷ್ಯ ಸ್ವಾರ್ಥಕ್ಕಾಗಿ ಮಿತಿಮೀರಿ ನಿಸರ್ಗವನ್ನು ವಿಕಾರಗೊಳಿಸುವ, ಅಥವಾ ಕಲುಷಿತಗೊಳಿಸುವ ಪಾಪಕ್ಕೆ ಕೈ ಹಾಕಬಾರದು.



# ಗ್ಯಾಟ್ ಮತ್ತು ಜಾನಪದ

ಡಾ. ಹಿ.ಶಿ. ರಾಮಚಂದ್ರೇ ಗೌಡ

## I. 'ಗ್ಯಾಟ್'ಗೆ ಮುನ್ನ

ಜಾನಪದ ಅಧ್ಯಯನದ ಪ್ರಾಥಮಿಕ ಹಂತದಲ್ಲಿರುವವರ ಕೇಳುವ ಪ್ರಶ್ನೆ, ಜಾನಪದಕ್ಕೂ, ಗ್ಯಾಟ್‌ಗೂ ಎಲ್ಲಿಂದ ಎಲ್ಲಿಗೆ ಸಂಬಂಧ? ಇವರು ಜಾನಪದ ಏನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಜಾನಪದ ಸಂಸ್ಕೃತಿಯ ಉತ್ಪನ್ನ. ಸಂಸ್ಕೃತಿ ಜೀವನದ ಉತ್ಪನ್ನ. ಜೀವನ ಎಂಬುದು ಮನುಷ್ಯನ ಆರ್ಥಿಕ ಸಾಮಾಜಿಕ ಚಟುವಟಿಕೆ. ಆರ್ಥಿಕ ಚಟುವಟಿಕೆ ಎಂಬುದು ಬದುಕುವ ತಂತ್ರಜ್ಞಾನ. ಒಂದು ಸಮಾಜ ತನ್ನ ಆರ್ಥಿಕ ಚಟುವಟಿಕೆಯನ್ನು ನಡೆಸಲು ಕನಿಷ್ಠ ಹಾರೆ-ಗುದ್ದಲಿ, ಕುಡುಗೋಲಿನ ತಂತ್ರಜ್ಞಾನವಾದರೂ ಬೇಕು. ಇದನ್ನು ಸಾಮಾನ್ಯ ತಂತ್ರಜ್ಞಾನ ಎನ್ನುತ್ತೇವೆ. ಇದು ಬೆಳೆಯುತ್ತಾ ಒಂದು ಸಂಕೀರ್ಣ ತಂತ್ರ ಜ್ಞಾನವನ್ನು ತಲುಪುತ್ತದೆ.

ಒಂದು ಕಾಲದ ತಂತ್ರಜ್ಞಾನದಂತೆ ಆರ್ಥಿಕತೆ, ಈ ಆರ್ಥಿಕತೆಯನ್ನು ಅನುಸರಿಸಿ ಸಮಾಜ, ಈ ಸಮಾಜದ ಸಂಬಂಧಗಳನ್ನು ಕುರಿತು ಸಂಸ್ಕೃತಿ ಹುಟ್ಟುತ್ತದೆ. ಈ ಸಾಂಸ್ಕೃತಿಕ ಜೀವನದ ಸಮರ್ಥನೆ ಹಾಗೂ ಸೃಜನಾತ್ಮಕ ವಿರೋಧದ ಅಭಿವ್ಯಕ್ತಿಯಾಗಿ ಜಾನಪದ ಮೈದಾಳುತ್ತದೆ. ನಮ್ಮ ಸಂಸ್ಕೃತಿಯ ದೇವರುಗಳನ್ನೇ ನೋಡಿ; ಕಲ್ಲು ಹಿಡಿದ ದೇವರು, ಭರ್ಜಿ ಹಿಡಿದ ದೇವರು, ಗದೆ ಹಿಡಿದ ದೇವರು ಹಾಗೂ ಬಿಲ್ಲು ಹಿಡಿದ ದೇವರುಗಳನ್ನು ಕಾಣುತ್ತೇವೆ. ಗನ್ ಅಥವ ಬಾಂಬ್ ಹಿಡಿದು ನಿಂತಿರುವ ದೇವರುಗಳನ್ನು ಎಲ್ಲಿಯಾದರೂ ನೋಡಿದ್ದೀರಾ?

ಪಾಶ್ಚಾತ್ಯ ಆಧುನಿಕತೆಯ ಒತ್ತಡದಿಂದಾಗಿ ನಾವು ಸಂಸ್ಕೃತಿ ಎಂದರೆ ವಿಜ್ಞಾನಕ್ಕೆ ಹೊರತಾದುದು ಎಂದು ತಿಳಿದಿದ್ದೇವೆ. ಸಾಮಾಜಿಕ ವಿಷಯಗಳನ್ನು ಕುರಿತದ್ದು ಸಂಸ್ಕೃತಿ, ತಂತ್ರಜ್ಞಾನವನ್ನು ಕುರಿತದ್ದು ವಿಜ್ಞಾನ ಎಂದು ಸಂಸ್ಕೃತಿಯನ್ನು ಒಡೆದು ನೋಡುವ ಪ್ರವೃತ್ತಿ ನಮ್ಮಲ್ಲಿವೆ. ಒಂದು ಕಾಲದ ಸಂಸ್ಕೃತಿ ಎನ್ನುವುದು ಆ ಕಾಲದ ಜೀವನ ಪದ್ಧತಿ. ಇದರೊಳಗೆ ಎಲ್ಲ ಜ್ಞಾನಗಳು ಸಹ್ಯವಾಗಿ - ಸಹಜವಾಗಿ ಮಿಳಿತಗೊಂಡು ಒಂದು ಸಮಗ್ರ ಜೀವನ

ಪದ್ಧತಿಯನ್ನು ರೂಢಿಸುತ್ತವೆ. ಮನುಷ್ಯನನ್ನು ಕಕಡೆಗಣಿಸಲ್ಪಟ್ಟು ವಿಜ್ಞಾನವೆ ಪ್ರಧಾನವಾದರೆ ಅದು ದರೋಡೆಕಾರರ ವಿಜ್ಞಾನ, ಮನುಷ್ಯರ ವಿಜ್ಞಾನವಲ್ಲ. ವಿಜ್ಞಾನವನ್ನು ದೂರವಿಟ್ಟು ಮನುಷ್ಯನನ್ನು ಉಳಿಸಬಯಸುವ ಸಂಸ್ಕೃತಿ ಪ್ರಾಕೃತ ಸಂಸ್ಕೃತಿಯಾಗುತ್ತದೆ. ಸಮಾಜವೂ, ವಿಜ್ಞಾನವೂ ಇರುವ ಎಲ್ಲ ಮನುಷ್ಯರನ್ನು ಒಳಗೊಂಡು ರೂಪಿತವಾದರೆ ಅದನ್ನು ಆರೋಗ್ಯಕರವಾದ, ಜೀವನ ಸಂಬಂಧಿ ಸಂಸ್ಕೃತಿ ಎನ್ನುತ್ತೇವೆ. ಎಂದರೆ ಪ್ರತಿಯೊಂದು ಸಂಸ್ಕೃತಿ ಒಂದು 'ಜ್ಞಾನಪದ್ಧತಿ' (Knowledge system).

ಸಂಸ್ಕೃತಿಯಲ್ಲಿ ತಾನು ಸೃಷ್ಟಿಸಿಕೊಳ್ಳುವ ಭಾಗ, ಬೇರೆ ಬೇರೆ ಪ್ರಭಾವಗಳಿಂದ ಪಡೆಯಬಹುದಾದ ಭಾಗ ಎಂದು ಎರಡು ಸ್ಥಿತಿಗಳಿರುತ್ತವೆ. ಸೃಷ್ಟಿ ಕಡಿಮೆಯಾಗಿ ಪ್ರಭಾವಿತ ಸಂಸ್ಕೃತಿಯು ಹೆಚ್ಚಿರುವ ಸಮಾಜವನ್ನು ಹೆಳವ ಸಮಾಜ ಎಂದು ಕರೆಯಬಹುದು. ಪ್ರಭಾವಕ್ಕಿಂತ ಸೃಷ್ಟಿ ಹೆಚ್ಚಿರುವ ಸಮಾಜವನ್ನು ಕ್ರಿಯಾಶೀಲ ಸಮಾಜ. ಭಾರತವೂ ಹೀಗೆ ಬದುಕಬೇಕು. ಈಗ ಭಾರತ ಹೊರಗಿನ ತಂತ್ರಜ್ಞಾನ ಪರಮೋತ್ಕೃಷ್ಟ ಎನ್ನುವ ತೀರ್ಮಾನಕ್ಕೆ ಬಂದಿದೆ. ಇದು ಸೃಷ್ಟಿಸುವ ಸಮಾಜದ ಲಕ್ಷಣವಲ್ಲ ಕೊಳ್ಳುವ ಸಮಾಜದ ಲಕ್ಷಣ. ಒಂದು ಸಮಾಜ ತನಗೆ ಬೇಕಾದ ತಂತ್ರಜ್ಞಾನದ ಬಗ್ಗೆ ತಾನೇ ಸ್ವಂತ ಬುದ್ಧಿಯಿಂದ ತೀರ್ಮಾನ ತೆಗೆದುಕೊಳ್ಳಬೇಕು. ಈ ತೀರ್ಮಾನ ಆ ದೇಶದ ಜನ, ಪರಿಸರ, ಇತಿಹಾಸ ಮತ್ತು ಜೀವನ ತತ್ವಜ್ಞಾನವನ್ನು ಅವಲಂಬಿಸಿರಬೇಕು. ಹಾಗಲ್ಲದಿದ್ದರೆ ತಂತ್ರಜ್ಞಾನ ಬಿಸಾಡುವ ಅಥವ ರಾಕ್ಷಸ ತಂತ್ರಜ್ಞಾನವಾಗುತ್ತದೆ. ಅದು ಮನುಷ್ಯನಿಗೆ ಹೆಂಡ ಕುಡಿಸಿ ಅವನನ್ನು ನಾಶಮಾಡುತ್ತದೆ. ಒಂದು ಉದಾಹರಣೆ ನೋಡಿ: ನಮ್ಮ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ಮೂತ್ರಾಲಯ ಕಟ್ಟಿಸಿ ಅಲ್ಲಿ ಮೂತ್ರ ವಿಸರ್ಜನೆಗೆ ಒಂದು ರೀತಿಯ ನವೀನ ಗುಂಡಿಗಳನ್ನು ಅಳವಡಿಸಿರುತ್ತಾರೆ. ನಮ್ಮ ಸಾಮಾನ್ಯ ಜನ ಅವುಗಳ ಹೊರಗೇ ಮೂತ್ರವಿಸರ್ಜನೆ ಮಾಡುತ್ತಾರೆ. ವಿಶೇಷವೆಂದರೆ ಅಳವಡಿಸಿದ ಕೆಲ ದಿನಗಳಲ್ಲಿಯೆ ಆ ಮೂತ್ರದ ಗುಂಡಿಗಳನ್ನು ಕಿತ್ತು ಹಾಕಲಾಗಿರುತ್ತದೆ ಇಲ್ಲವೆ ಕಾಣೆಯಾಗಿರುತ್ತವೆ. ತನ್ನದಲ್ಲದ ವಿಜ್ಞಾನವನ್ನು ಜನ ಬೆಳೆಸಿಕೊಳ್ಳುವ ಅಥವ ತಿರಸ್ಕರಿಸುವ ರೀತಿ ಇದು. ಅಂದರೆ ಸಂಸ್ಕೃತಿಯಂತೆ ವಿಜ್ಞಾನ ಕೂಡ ಜನಸಂಬಂಧಿ ಹಾಗೂ ಸಹ್ಯವಾದುದಾಗಿರಬೇಕು. ಇಲ್ಲದಿದ್ದರೆ ನಾವು ಈಗ ರಸಗೊಬ್ಬರ ಬಳಸಿ ನಮ್ಮ ಮಣ್ಣು, ಜಲ ಹಾಗೂ ಜಲಚರಗಳನ್ನು ನಾಶಪಡಿಸಿಕೊಂಡು ಸಾವಯುವ ಗೊಬ್ಬರ ಬೇಸಾಯವನ್ನು ಹುಡುಕುತ್ತಿರುವ ಪರಿಸ್ಥಿತಿಗೆ ಬಹುಬೇಗ ತಲುಪುತ್ತೇವೆ.

ಈಗ ನಿಮಗೆ ಮನವರಿಕೆ ಆಗಿರಬೇಕು; ಗ್ಯಾಟ್ ಬಗ್ಗೆ ಚಿಂತಿಸುವುದೆಂದರೆ ನಮ್ಮ ಸಂಸ್ಕೃತಿಯ ಅಳಿವು-ಉಳಿವಿನ ಬಗ್ಗೆ ಚರ್ಚಿಸಿದಂತೆ ಎಂದು. ಈಗಾಗಲೆ ನಮ್ಮಲ್ಲಿ ಒಂದು ಜೀವನ ಸಂಸ್ಕೃತಿ ಇದೆ. ಅದು ಸಮಕಾಲೀನವಾಗಿ ಬೆಳೆಯುತ್ತಿದೆ. ಅದರ ಒಳಗಡೆಯಿಂದಲೇ ಬದುಕುವ ತಂತ್ರಜ್ಞಾನ - ಆರ್ಥಿಕತೆ ರೂಪುಗೊಳ್ಳಬೇಕು. ಅಂಥದು ಮಾತ್ರ ಹೆಚ್ಚುಕಾಲ ಉಳಿಯುತ್ತದೆ, ತನ್ನ ದೇಶದ ಎಲ್ಲ ಜನರನ್ನೂ ಉಳಿಸಿಕೊಳ್ಳುತ್ತದೆ. ಇದನ್ನು ಸೃಜನಾತ್ಮಕ



ಸಂಸ್ಕೃತಿಗೆ ಎನ್ನುತ್ತೇವೆ. ಹೊರಗಿನಿಂದ ಅನಾಮತ್ ಬರುವ ಮಾರುಕಟ್ಟೆ ಸಂಸ್ಕೃತಿಗೆ ನಾವು ಕೊಳ್ಳುವವರು ಮಾತ್ರ ಆಗುತ್ತೇವೆ. ಕೊಳ್ಳುವುದಕ್ಕೆ ಮುಖ್ಯವಾಗಿ ಸೃಷ್ಟಿಬೇಕಲ್ಲವೆ? ಬರುವ ತಂತ್ರಜ್ಞಾನ ಇಲ್ಲಿರುವ ಎಲ್ಲ ಜನರನ್ನು ಉತ್ಪತ್ತಿಗೆ ಹೆಚ್ಚುತ್ತದೆಯೆ? ಇದೇ ನಮ್ಮ ಮುಂದಿನ ದೊಡ್ಡ ಪ್ರಶ್ನೆ. ಬೃಹದಾಕಾರದ ಅತಿ ತಂತ್ರಜ್ಞಾನ ಮನುಷ್ಯನ ನೈಪುಣ್ಯ, ಶ್ರದ್ಧೆ, ಪ್ರಾಮಾಣಿಕತೆಗಳನ್ನು ನಂಬುವಂಥದಲ್ಲ. ಅದು ಕಡಿಮೆ ಶ್ರಮದಲ್ಲಿ ಹೆಚ್ಚು ಉತ್ಪನ್ನಮಾಡಿ ಲಾಭ ಪಡೆಯುವಂಥದು. ಈ ಲಾಭ ಸಂಸ್ಕೃತಿ ಪ್ರಾಮಾಣಿಕವಾದುದೆ? ಲಾಭ ಎಲ್ಲ ವ್ಯವಹಾರಗಳಲ್ಲೂ ಇದೆ. ಅದು ಪ್ರಾಮಾಣಿಕ ಲಾಭವಾಗಬೇಕು. ಅದು ಈ ಬೃಹತ್ ತಂತ್ರಜ್ಞಾನದಿಂದ ಸಾಧ್ಯವೆ ಇಲ್ಲ.

ಒಂದು ದೇಶದ ತಂತ್ರಜ್ಞಾನ ಆ ದೇಶದ ಸಂಸ್ಕೃತಿ ವ್ಯವಸ್ಥೆ (Culture system) ಈ ವ್ಯವಸ್ಥೆಗೆ ಹೊಂದಿಕೆಯಾಗದ ತಂತ್ರಜ್ಞಾನ ಆ ಸಂಸ್ಕೃತಿಯನ್ನು ಧ್ವಂಸ ಮಾಡುತ್ತವೆ. ಆಯಾ ತಂತ್ರಜ್ಞಾನ ವ್ಯವಸ್ಥೆಗೆ ತಕ್ಕುದಾಗಿ ಆ ಸಂಸ್ಕೃತಿಯ ಆರ್ಥಿಕ ಘಟಕವಾದ ಮನುಷ್ಯ ಬೆಳೆದಿರಬೇಕು. ಹಾಗಲ್ಲದ ತಂತ್ರಜ್ಞಾನ ಕೋಠಿಗೆ ತುಂಬಿದ ಸರಕಾಗುತ್ತದೆ. ಇಲ್ಲವೆ ಮನುಷ್ಯನನ್ನೇ ಗೋಡೌನ್‌ಗೆ ಹಾಕುತ್ತದೆ. ಭಾರತದಲ್ಲಿ ಸಂಸ್ಕೃತಿ ಎರಡು ಸ್ಥರಗಳಲ್ಲಿದೆ. ಒಂದು, ರಾಷ್ಟ್ರೀಯ ಸ್ವರೂಪದ್ದು. ಮತ್ತೊಂದು ಪ್ರಾದೇಶಿಕ ಸ್ವರೂಪದ್ದು. ರಾಷ್ಟ್ರೀಯ ಎನ್ನುವ ಹೆಸರಿನ ಸಂಸ್ಕೃತಿ ಕೆಲವೇ ನಗರಗಳಿಗೆ ಸೇರಿದ್ದು. ಪ್ರಾದೇಶಿಕ ಎನ್ನುವಂಥದು ಜನಾಂಗ, ಬುಡಕಟ್ಟು, ಧರ್ಮ, ಮತ ಹಾಗೂ ಭಾಷೆ ಗಳಂಥ ಹಲವು ಅನನ್ಯತೆ (identity) ಗಳಲ್ಲಿದೆ. ಇವು ನಿಜವಾದ ಜನಪದ ಸಂಸ್ಕೃತಿಗಳು. ನಮ್ಮ ಮುಂದಿರುವ ಪ್ರಶ್ನೆ ಇವುಗಳನ್ನು ಉಳಿಸಿಕೊಳ್ಳುವ ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳಬೇಕೆ ಅಥವ ರಾಷ್ಟ್ರೀಯ ಎನ್ನುವ ತಾತ್ಕಾಲಿಕ (temprary) ಹಾಗೂ ಖೊಟ್ಟಿ (fake) ಸಂಸ್ಕೃತಿಯನ್ನು ಉಳಿಸಿಕೊಳ್ಳುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕೆ ಎನ್ನುವುದು.

ಈ ಹಿನ್ನೆಲೆಯಲ್ಲಿ ನಮ್ಮ ಜನಪದ ಸಂಸ್ಕೃತಿಯ ಜೀವನ ಪರಿಕಲ್ಪನೆಯೊಡನೆ 'ಗ್ಯಾಟ್'ನ ಜೀವನ ಪರಿಕಲ್ಪನೆಯನ್ನು ತುಲನಾತ್ಮಕವಾಗಿ ಪರಿಶೀಲಿಸಬೇಕಿದೆ. ಈಗ 'ಗ್ಯಾಟ್' ಮತ್ತು ಜನಪದ ಸಂಸ್ಕೃತಿ (ಅಥವ ಜನಪದ)ಯ ಮೂಲ ಆಶಯಗಳನ್ನು ಪ್ರತ್ಯೇಕವಾಗಿ ವಿವರಿಸಿಕೊಂಡು ಮುಂದೆ ಹೋಗೋಣ.

**ಗ್ಯಾಟ್ ಬಂದರೆ:**

ಗ್ಯಾಟ್ (Gatt) ಎಂದರೆ: ವ್ಯಾಪಾರ ಮತ್ತು ಸುಂಕದ ಸಾಮಾನ್ಯ ಒಪ್ಪಂದ. ಇದರ ಪರಮ ಉದ್ದೇಶ: ಅಂತರ್ರಾಷ್ಟ್ರೀಯ ವ್ಯಾಪಾರ - ವ್ಯವಹಾರಗಳಲ್ಲಿನ ಅಡೆತಡೆಗಳನ್ನು ನಿವಾರಿಸುವುದು. ಪ್ರತಿ ದೇಶವನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಗೆ ತೆರೆದಿಡುವುದು. ಸರಕು ಸಂಸ್ಕೃತಿಯ ಮೂಲಕ ವಿಶ್ವಏಕೀಕರಣವನ್ನು ತರುವುದು.

ಗ್ಯಾಟ್‌ನ ಮುಖ್ಯ ಆಶಯಗಳೆಂದರೆ:

೧. ದ್ವಿಪಕ್ಷೀಯ ವ್ಯಾಪಾರದಿಂದ ಬಹುಪಕ್ಷೀಯ ವ್ಯಾಪಾರಕ್ಕೆ:

ಈವರೆಗೆ ಒಂದು ರಾಷ್ಟ್ರ ತನಗೆ ಇಷ್ಟ ಬಂದ ಮತ್ತೊಂದು ರಾಷ್ಟ್ರದೊಡನೆ ವ್ಯಾಪಾರವನ್ನು ಕುದುರಿಸಿಕೊಂಡು ಒಪ್ಪಂದ ಮಾಡಿಕೊಳ್ಳುತ್ತಿತ್ತು. ಗ್ಯಾಟ್ ಒಪ್ಪಂದಕ್ಕೆ ಸಹಿಹಾಕಿದರೆ ಆ ರಾಷ್ಟ್ರ ಪ್ರಪಂಚದ ಎಲ್ಲ ಗ್ಯಾಟ್ ಕೂಟದ ರಾಷ್ಟ್ರಗಳೊಡನೆ ಅನಿವಾರ್ಯವಾಗಿ ವ್ಯಾಪಾರ ಇಟ್ಟುಕೊಳ್ಳಬೇಕು. ವಿದೇಶದ ಯಾವುದೇ ಬಂಡವಾಳಿಗ ಆ ದೇಶಕ್ಕೆ ಬಂದು ಬಂಡವಾಳ ಹೂಡಲು, ಸಾಮಗ್ರಿ ತಯಾರಿಸಲು, ಮಾರಾಟ ಮಾಡಲು ತೆರೆದ ಅವಕಾಶವಿರಬೇಕು.

೨. ವಿದೇಶಿ ಬಂಡವಾಳಕ್ಕೆ ಮುಕ್ತ ಪ್ರವೇಶ

ಈ ನಿಯಮದ ಪ್ರಕಾರ ಯಾವುದೇ ದೇಶವು ಹೊರದೇಶಗಳ ಬಂಡವಾಳ ಅಥವ ಕಂಪನಿಗಳನ್ನು-

i) ದೇಶೀಯ ಕಂಪನಿಗಳಂತೆಯೆ ನಡೆಸಿಕೊಳ್ಳಬೇಕು

ii) ವಿದೇಶಿ ಬಂಡವಾಳ ಹೂಡಿಕೆಗೆ ಮಿತಿ ಒಡ್ಡಬಾರದು

iii) ಯಾವುದೇ ಕ್ಷೇತ್ರಕ್ಕೂ ಬಂಡವಾಳ ಹೂಡುವಂತಿರಬೇಕು.

iv) ಕಚ್ಚಾ, ಮಧ್ಯವರ್ತಿ, ಬಿಡಿ - ಎಲ್ಲ ಭಾಗಗಳ ಆಮದಿಗೆ, ತೆರೆದ ಅವಕಾಶ ವಿರಬೇಕು

v) ಆಮದಿನ ವೆಚ್ಚ ಭರಿಸಲು ರಫ್ತು ಕಡ್ಡಾಯವಿರಬಾರದು

vi) ಯಾವುದೆ ವಸ್ತುವಿನ ರಫ್ತಿಗೆ ನಿರ್ಬಂಧವಿರಬಾರದು.

೩. ಮೀಸಲು ರದ್ದು ( ಸಬ್ಸಿಡಿ ರದ್ದು )

ಈಗ ಅನೇಕ ಹಿಂದುಳಿದ ಹಾಗೂ ಮುಂದುವರಿಯುತ್ತಿರುವ ದೇಶಗಳಲ್ಲಿ ಮೀಸಲು ಪದ್ಧತಿ ಇದೆ. ಯಾವ ಕ್ಷೇತ್ರ ಬಡವಾಗಿದೆಯೊ ಅದನ್ನು ಅಭಿವೃದ್ಧಿ ಪಡಿಸಲು, ಮೇಲೆತ್ತಲು ಸಬ್ಸಿಡಿಯನ್ನು ಕೊಡಲಾಗುತ್ತದೆ. ಹಿಂದುಳಿದ ಜನರಿಗೆ ವಿಶೇಷ ಸೌಲಭ್ಯಗಳು, ರೈತರ ಗೊಬ್ಬರಕ್ಕೆ ಸಬ್ಸಿಡಿ ಇಲ್ಲಿ ಸೇರುತ್ತವೆ. ಗ್ಯಾಟ್ ಈ ಮೀಸಲಿನ ಮೇಲೆ ನಿರ್ಬಂಧವನ್ನು ಹೇರುತ್ತವೆ. ಹೇಗೆಂದರೆ:

i) ಎಲ್ಲ ಥರದ ರಫ್ತುಗಳಿಗೆ ನೀಡಬಹುದಾದ ಪ್ರಾಡಕ್ಟ್ ಸಬ್ಸಿಡಿ ಹಾಗೂ ಬೆಲೆ ಸಬ್ಸಿಡಿಯು ಶೇ. ಹತ್ತರೊಳಗಿರಬೇಕು.

ii) ಕೃಷಿ ಉದ್ದಿಮೆಗೆ ನೀಡುವ ಪ್ರಾಡಕ್ಟ್ ಸಬ್ಸಿಡಿಯನ್ನು ಉತ್ಪನ್ನದ ಶೇ. ಹತ್ತರೊಳಗೆ ಮಿತಗೊಳಿಸತಕ್ಕದ್ದು



iii) ಸಾಮಾಜಿಕ ಮತ್ತು ಸಾಮುದಾಯಿಕ ಅಭಿವೃದ್ಧಿಗಾಗಿ ನೀಡಬಹುದಾದ ಪಡಿತರ ವಸ್ತುಗಳ ಬೆಲೆಯಲ್ಲೂ ಶೇ. ಹತ್ತಕ್ಕಿಂತ ಹೆಚ್ಚಿನ ಸಬ್ಸಿಡಿ ಇರತಕ್ಕುದಲ್ಲ.

೪. ಏಕಸ್ವಾಮ್ಯ ಕಾಯ್ದೆಯ ಹಕ್ಕು ( ಪೇಟೆಂಟ್ ಆಕ್ಟ್ ):

ಇದೊಂದು ಮಹತ್ವದ ಕಾಯ್ದೆ. ಏಕಸ್ವಾಮ್ಯದ ಕಾಯ್ದೆ ಈ ಮೊದಲು ಇತ್ತು. ಭಾರತ ಸರ್ಕಾರದ ಏಕಸ್ವಾಮ್ಯ ಕಾಯ್ದೆ ಹಕ್ಕು ದೇಶೀಯ ಕೈಗಾರಿಕೆ ಹಾಗೂ ಕೃಷಿಯ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನಿರೂಪಿತವಾಗಿತ್ತು. ಗ್ಯಾಟ್‌ನ ಏಕಸ್ವಾಮ್ಯದ ಒಪ್ಪಂದ ಈ ನಿರ್ಬಂಧವನ್ನು ನಿರಾಕರಿಸುತ್ತದೆ. ಅದು ಹೇಳುತ್ತದೆ:

i) ನೋಂದಾಯಿತ ದಿನಾಂಕದಿಂದ ಸಂಶೋಧನೆಗೆ ಇಪ್ಪತ್ತು ವರ್ಷಗಳವರೆಗೆ ಏಕಸ್ವಾಮ್ಯ ಹಕ್ಕಿನ ರಕ್ಷಣೆ ಇರಬೇಕು.

ii) ಉತ್ಪನ್ನದ ತಯಾರಿಕೆಯ ವಿಧಾನದ ಬಗ್ಗೆ ಮಾತ್ರವಲ್ಲದೆ, ಅಂತಿಮ ಉತ್ಪನ್ನದ ಬಗ್ಗೆ ಸಹ ರಕ್ಷಣೆ ಕೊಡಬೇಕು.

iii) ಟ್ರಿಪ್ಸ್‌ನ ( ಟ್ರೇಡ್ ರಿಲೀಟೆಡ್ ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್) ಏಕಸ್ವಾಮ್ಯ ವ್ಯಾಪ್ತಿಯನ್ನು ಅಂತರಾಷ್ಟ್ರೀಯಗೊಳಿಸಬೇಕು.

iv) ಟ್ರಿಪ್ಸ್‌ನ ವ್ಯಾಪ್ತಿ ಮಾನವ, ಸಸ್ಯ ಹಾಗೂ ಪ್ರಾಣಿಗಳ ಮೇಲಿನ ಸಂಶೋಧನಾತ್ಮಕ ಹಕ್ಕುಗಳುದೇಶೀಯ ನಿಷೇಧಗಳನ್ನು ಮೀರಿ ನಿಲ್ಲುವಂಥವು.

೫. ವಂಶವಾಹಿ ಏಕಸ್ವಾಮ್ಯ ಹಕ್ಕು ( ಜೀನ್ ಪೇಟೆಂಟ್ ) :

ಇದರ ಪ್ರಕಾರ ಯಾವುದೇ ದೇಶದ ಮಾನವ, ಪ್ರಾಣಿ, ಸಸ್ಯ ಹಾಗೂ ಇಂಥ ಮೂಲ ಅಸ್ತಿತ್ವಗಳ ಹಾಗೂ ಅವುಗಳಲ್ಲಿ ಅಡಕಗೊಂಡಿರುವ ವಂಶವಾಹಿಗಳ ಏಕಸ್ವಾಮ್ಯ ಹಕ್ಕನ್ನು ಪಡೆಯಬಹುದು. ಇದರಿಂದ ತಮಗೆ ಬೇಕಾದ ಸಸ್ಯ ಅಥವ ಸಸ್ಯದ ಭಾಗ, ಪ್ರಾಣಿ ಅಥವ ಅದರ ಭಾಗ ಅಥವ ವಂಶವಾಹಿಯ ಮೇಲೆ ತಮ್ಮ ಹಕ್ಕು ಸಾಧಿಸಿ ಅದರಲ್ಲಿ ಇರುವ ಶಕ್ತಿಶಾಲಿ ಅಂಶವನ್ನು ಎತ್ತಿಕೊಂಡು ಹೋಗಬಹುದು.

iii ಜಾನಪದ ಇದ್ದರೆ :

ಜಾನಪದದ ಆಶಯಗಳನ್ನು ಗಮನಿಸಿ:

೧. ಸಾಮಾನ್ಯತೆ : Common Product

ಜಾನಪದದ ಸಾಮಾನ್ಯತೆಯ ಸ್ವಭಾವವನ್ನು ಜಾನಪದ ವಿದ್ವಾಂಸರು ಹಲವು ಪರಿಕಲ್ಪನೆಗಳಲ್ಲಿ ಮೂಡಿಸಿದ್ದಾರೆ. ಗಾಸ್ಟರ್, ಟಿ. ಹೆಚ್. "Folklore is that part of

people's culture" ಎನ್ನುತ್ತಾನೆ. ಇದೇ ವಿದ್ವಾಂಸ ಜಾನಪದ ಕುರಿತು "of common acceptance", 'popular Climate' ಎಂಬ ಮಾತುಗಳನ್ನು ಬಳಸಿದ್ದಾನೆ. ಎಂ. ಹಾರ್ಮೋನ್ ಜಾನಪದದ ಸರ್ವಸಾಮಾನ್ಯತೆಯನ್ನು "Folklore then may Crop up in any subject, any group or individual, any time, any place" ಎಂಬ ಸಮರ್ಥ ಮಾತುಗಳಲ್ಲಿ ವಿಷದೀಕರಿಸಿದ್ದಾನೆ. ಜಾನಪದವನ್ನು ಕುರಿತು People's ಮತ್ತು 'common product' ಎಂಬ ನುಡಿಗಟ್ಟುಗಳನ್ನು ಹಲವು ಜಾನಪದ ವಿದ್ವಾಂಸರು ಬಳಸಿದ್ದಾರೆ. ಜೊತೆಗೆ 'popular', 'popular Climate' ಎಂಬ ಪದಗಳೂ ಜಾನಪದ ಸ್ವಭಾವವನ್ನು ಕುರಿತವು ಎಂಬುದನ್ನು ತಿಳಿಸಲಾಗಿದೆ.

People's, popular ಹಾಗೂ common ಎಂಬ ಪದಗಳಿಗೆ ಸಂವಾದಿಯಾಗಿ Tradition ಎಂಬ ಪದ ಕೂಡ ಬಳಕೆಯಾಗಿದೆ. ಜಾನಪದ ಕೇವಲ ಕಲಾ ವಿಷಯಗಳಿಗೆ ಸಂಬಂಧಿಸಿದುದಲ್ಲ, ಅದು ಜೀವನದ ಸಾಮಾನ್ಯ ವಿಜ್ಞಾನ ಕೂಡ ಎಂಬುದನ್ನು ಬಿ.ಎ. ಬಾಟ್ಕಿನ್ "Traditional folkscience" ಎಂದು, ಪಿ. ಕುರ್ರ್ಯಾಥ್ 'The Science of tradition' ಎಂಬ ಮಾತನ್ನು ಬಳಸಿದ್ದಾರೆ.

ಅಂದರೆ ಜಾನಪದ 'ಜನರ ಸಂಸ್ಕೃತಿ', 'ಸಾಮಾನ್ಯ ಸ್ವೀಕಾರ' 'ಜನಪ್ರಿಯ ವಾತಾವರಣ', 'ಎಲ್ಲ ಜನ', ಎಲ್ಲ ಕಾಲ ಹಾಗೂ ಎಲ್ಲ ಸ್ಥಳದಲ್ಲೂ ಇರುವಂಥದು', 'ಸಾಮಾನ್ಯ ಉತ್ಪತ್ತಿ', ಪರಂಪರೆ, ಪರಂಪರಾ ವಿಜ್ಞಾನ ಎಂದ ಹಾಗಾಯಿತು.

ಸಾಮಾನ್ಯತೆ ಎಂದರೆ ಎಲ್ಲ ಜನರ ಉತ್ಪತ್ತಿ, ಹಂಚಿಕೆ ಹಾಗೂ ಬಳಕೆಗೆ ದಕ್ಕಿರುವುದು. ಎಲ್ಲರ ಅನುಭವಕ್ಕೂ ಸುಲಭವಾಗಿ ಸಿಗುವಂಥದು ಉದಾಹರಣೆಗೆ ಗಾಳಿ, ನೀರು, ಮತ್ತು ಆಹಾರ. ತಂಪು ಮಾಡಿದ ಗಾಳಿ, ಬಿಸಿಮಾಡಿದ ನೀರು, ವಿಶೇಷವಾದ ಆಹಾರ ಸಾಮಾನ್ಯವಲ್ಲ. ಕೃಷಿ ಮಾಡುವುದು ಸಾಮಾನ್ಯ, ವ್ಯಾಪಾರ, ಉದ್ಯೋಗ, ರಾಜಕಾರಣ ಮಾಡುವುದು ವಿಶೇಷ. ಸಮಯ, ಸಂದರ್ಭ ಹಾಗೂ ಪ್ರಾದೇಶಿಕ ವ್ಯತ್ಯಾಸಗಳನ್ನು ಅವಲಂಬಿಸಿ ಸಾಮಾನ್ಯ ಹಾಗೂ ವಿಶೇಷಗಳು ಬದಲಾಗುತ್ತವೆ. ಬರಡು ಪ್ರದೇಶದಲ್ಲಿ ರಾಗಿ, ಜೋಳದ ಆಹಾರ ಸಾಮಾನ್ಯ, ಅನ್ನ, ಗೋಧಿ ಪದಾರ್ಥಗಳು ವಿಶೇಷ. ನೀರಾವರಿ ಪ್ರದೇಶದಲ್ಲಿ ಅನ್ನ ಸಾಮಾನ್ಯ ಆಹಾರ. ಒಂದೇ ಪ್ರದೇಶದ ಜನಪದವೊಂದರಲ್ಲಿ ಸಾಮಾನ್ಯ – ವಿಶೇಷಗಳೆರಡೂ ಕಾಣುತ್ತವೆ. ಬರಡು ಪ್ರದೇಶದಲ್ಲಿ ರಾಗಿ : ಜೋಳದ ಆಹಾರ ಸಾಮಾನ್ಯ. ಆದರೆ ಹಬ್ಬ – ಜಾತ್ರೆಗಳಂಥ ಸಂದರ್ಭದಲ್ಲಿ ವಿಶೇಷ ಅಡುಗೆ ಮಾಡುತ್ತಾರೆ. ಈ ವಿಶೇಷ ಆ ಒಂದು ದಿನಕ್ಕೆ ಮಾತ್ರ. ಒಂದು ಸಾಮಾಜಿಕ ಸಂದರ್ಭದ ಬದಲಾವಣೆಯಿಂದಾಗಿ ವಿಶೇಷವಾದುದು ಸಾಮಾನ್ಯವಾಗಬಹುದು; ಸಾಮಾನ್ಯವಾದುದು ವಿಶೇಷವಾಗಬಹುದು. ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಸಿದ್ಧಿ ಜನಾಂಗ ವಿಶೇಷ ಜನಪದ (ಸೈನಿಕರು) ಎನಿಸಿಕೊಂಡಿತ್ತು. ಆ ರಾಜ್ಯದ ಪತನದ ನಂತರ ಅದು ಸಾಮಾನ್ಯ ಜನಪದವಾಯಿತು. ರಾಗಿಮುದ್ದೆ ಸೊಪ್ಪಿನ



ಸಾರು ದಕ್ಷಿಣ ಕರ್ನಾಟಕದ ಸಾಮಾನ್ಯ ಆಹಾರ. ಶ್ರೀ ಹೆಚ್.ಡಿ. ದೇವೇಗೌಡರು ಪ್ರಧಾನಿಯಾದ ಮೇಲೆ ದೆಹಲಿಯ ಅಂತಸ್ತು ಹೋಟಲುಗಳಲ್ಲಿ ರಾಗಿಮುದ್ದೆ + ಸೊಪ್ಪಿನ ಸಾರು ವಿಶೇಷ ಊಟವಾಗಿದೆ. ನಾನು ಹುಡುಗನಾಗಿದ್ದಾಗ ಸ್ಟೀಲ್‌ಪಾತ್ರೆ, ರೇಡಿಯೊ ಹಾಗೂ ಸೈಕಲ್‌ಗಳು ನಮ್ಮ ಜನಪದಕ್ಕೆ ವಿಶೇಷ ಬಳಕೆಗಳು. ಈಗ ಅವು ಸಾಮಾನ್ಯ ಬಳಕೆಗೆ ಬಂದಿವೆ.

೨. ಸಾಮೂಹಿಕತೆ : for the people

ಜಾನಪದ ಉತ್ಪತ್ತಿ, ಹಂಚಿಕೆ ಮತ್ತು ಬಳಕೆಯನ್ನು ಕುರಿತು ಪಿ.ಕುರ್ರ್ಯಾಥ್ ಹೇಳುತ್ತಾನೆ: "It is essentially a common product". ಇದೇ ಪರಿಕಲ್ಪನೆಯನ್ನು ಹೆಚ್. ಗಾಸ್ಪರ್ "It is essentially of the people, by the people and for the people" ಎಂದು ಜಾನಪದ ಜನರ ಸ್ವತ್ತು ಎಂಬುದನ್ನು ದೃಢಪಡಿಸುತ್ತಾನೆ. ಈ ಸಾಮೂಹಿಕತೆ ಎಂಬುದು ವಿಶ್ವ – ಜನರ ಸಾಮೂಹಿಕತೆ ಅಲ್ಲ ಒಂದು ''ಜನಪದ''ದ ಸಾಮೂಹಿಕತೆ ಹಾಗೂ ಸಮರ್ಥನೆ ಎಂಬುದನ್ನು ಜೇಮ್ಸ್ ಡಿ.ಆರ್. "the folklore of each group tend to strengthen the group and to bring a sense of security and therefore superiority to the members of it" ಎನ್ನುತ್ತಾನೆ.

ಜಾನಪದ ಹಲವರ ಸೃಷ್ಟಿ ಎಂಬುದಕ್ಕೆ 'Labouring many' ಹಾಗೂ 'Many men Many minds' ಎಂಬ ನುಡಿಗಳು ಕೂಡ ಸಮರ್ಥವಾಗಿ ಒಳಗೊಂಡಿವೆ. Communal Creation ಹಾಗೂ Communal recreation ಎಂಬ ಮಾತುಗಳು ಕೂಡ ಇದನ್ನೇ ಸಮರ್ಥಿಸುತ್ತವೆ. ಸೃಷ್ಟಿಯಲ್ಲಿ ವ್ಯಕ್ತಿಗಿಂತ ಸಮೂಹ ಮುಖ್ಯ ಎಂಬುದನ್ನು ಜಾನಪದ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತದೆ. ಜನಪದ ಬಳಸುವ ವಸ್ತು ವಿಷಯಗಳೆಲ್ಲ ಸಾಮೂಹಿಕ ಸೃಷ್ಟಿಗೆ ಒಳಪಟ್ಟವೇ ಆಗಿರುತ್ತದೆ. ಅಂದರೆ ಇಲ್ಲಿ ಉತ್ಪತ್ತಿದಾರ, ಹಂಚಿಕೆದಾರ ಹಾಗೂ ಬಳಕೆದಾರರ ಮಧ್ಯೆ ಹೆಚ್ಚು ಅಂತರವಿರುವುದಿಲ್ಲ. ಈ ಅಂತರ 'ಕಡಿಮೆ ಇರುವುದರಿಂದಲೆ ಎಲ್ಲರೂ ಅನ್ಯೋನ್ಯವಾಗಿದ್ದಾರೆ. ಈ ಅಂತರ ದೂರವಾದ ಹಂಚಿಕೆದಾರ ಸುಲಿಗೆ ಕೋರನಾಗುತ್ತಾನೆ.

ಬಹಳ ಮುಖ್ಯವಾದ ವಿಷಯವೆಂದರೆ ಜನಪದವೊಂದರಲ್ಲಿ ಎಲ್ಲರೂ ಉತ್ಪತ್ತಿ ಮಾಡುವವರು. ಹೆರವುವಳು ಕಷ್ಟ–ಸುಖ ಎರಡನ್ನೂ ಹಂಚಿಕೊಳ್ಳುವ ಹಾಗೆ ಜನಪದದೊಳಗಿನ ಸೃಷ್ಟಿಕರ್ತರು ಎಲ್ಲ ಅನುಭವಗಳಿಗೂ ಪಾಲುದಾರರಾಗುತ್ತಾರೆ. ಸೃಷ್ಟಿಯ ನೋವು ಮತ್ತು ಸುಖ ಎರಡನ್ನೂ ಅರಿಯದವ ವಂಚಕನಾಗುತ್ತಾನೆ, ತಂತ್ರಗಳನ್ನು ಹುಡುಕುತ್ತಾನೆ. ಇಲ್ಲಿ ಗ್ಯಾಟ್ ಇದೆ.

೩. ಸರಳತೆ : Simpleness

ಜಾನಪದದ ಸರಳತೆಯನ್ನು ಕುರಿತು 'ಆಡುಮಾತು' (spoken word), ಜನಪ್ರಿಯ

ಪರಂಪರೆಗಳು (popular traditions), ಮಾನವನ ಯುಗಗಳ ಅನುಭವದ ಮೊತ್ತ (millennia of human experience), ಜಾನಪದ ಅಥವ ಜನಪ್ರಿಯ ಜ್ಞಾನ (Folklore or popular knowledge) ಎಂಬ ಪದಗಳು ಬಳಕೆಯಾಗಿವೆ. ಜಾನಪದ ಹೇಗೆ ಸರಳ ಎಂಬುದಕ್ಕೆ ಮ್ಯಾಕ್ ಎಡ್‌ವರ್ಡ್ ಲೀಚ್ ಅವರು "the accumulated knowledge of a homogeneous unsophisticated people" ಎನ್ನುತ್ತಾರೆ. ಅದರ ಸರಳತೆಯನ್ನು ಅಧಿಕೃತವಾಗಿ ನಿರೂಪಿಸುವ ಮಾರಿಯಸ್, ಬಿ. "It is born opponent of the serial number, the stamped product, and the patented standard ಎಂದು ಸ್ಪಷ್ಟಪಡಿಸುತ್ತಾರೆ.

ಸಾಮಾನ್ಯನ ಉತ್ಪತ್ತಿ ಸರಳ. ಅದು ಅವನ ಭಾವನೆ, ವಸ್ತು ಹಾಗೂ ಬದುಕಿನಿಂದ ವ್ಯಕ್ತವಾಗುತ್ತದೆ. ಸಮರೂಪದಲ್ಲಿ ಬದುಕುವ, ಕೃತಕತೆ, ಆಡಂಬರ ಇಲ್ಲದ ಜನವರ್ಗದ ಸಂಪಾದನೆ ಎಲ್ಲವೂ ಸರಳ ರೂಪದಲ್ಲಿರುತ್ತದೆ. ನೋಡಲು, ಮಾಡಲು, ಅನುಭವಿಸಲು ಎಲ್ಲರಿಗೂ, ಎಲ್ಲ ಕಾಲದಲ್ಲೂ ಒಂದೇ ರೀತಿಯಲ್ಲಿ ಅದು ಲಭ್ಯವಾಗುತ್ತದೆ. ಯಾರೂ ಅದನ್ನು ಸುಲಭವಾಗಿ ಉತ್ಪತ್ತಿ ಮಾಡಬಹುದು, ಹಂಚಬಹುದು, ಬಳಸಿಕೊಳ್ಳಬಹುದು. ಇದಕ್ಕೆ ಜಾನಪದ ಬದ್ಧತೆ ಮಾತ್ರ ಇರಬೇಕು. ಜಾನಪದ ಬದ್ಧತೆ ಇಲ್ಲದೆ, ವ್ಯಕ್ತಿ, ವರ್ಗ, ಜಾತಿ ಬದ್ಧತೆಯಿಂದ ಉತ್ಪತ್ತಿಯಾಗಿ ಹೊರಬರುವ ಎಲ್ಲ ವಸ್ತು, ವ್ಯಕ್ತಿ, ಜ್ಞಾನ ಸರಳತೆಗೆ ದೂರವಾಗುತ್ತದೆ.

೪. ಸಜೀವತೆ : Lively

"Folklore is lively fossil which refuses to die" ಎನ್ನುತ್ತಾನೆ ಚಾರ್ಲ್ಸ್ ಇ. ಪಾಟರ್. ಈತ ಜಾನಪದವನ್ನು ಜೀವಂತ ಪಳೆಯುಳಿಕೆ (lively fossil) ಗೆ ಸೀಮಿತಗೊಳಿಸಿದ. ಪಳೆಯುಳಿಕಾ ಸ್ವಭಾವದ್ದಲ್ಲದ ಜೀವಂತ ಜಾನಪದ (lively folkore) ) ಕೂಡ ಇದೆ. ಪಳೆಯುಳಿಕಾ ಜಾನಪದ (fossil folklore), ಜೀವಂತ ಪಳೆಯುಳಿಕಾ ಜಾನಪದ (lively fossil folkore) ಹಾಗೂ ಜೀವಂತ ಜಾನಪದ lively folklore ಇವು ಜಾನಪದ ಸ್ಥಿತಿಯ ಮೂರು ಹಂತಗಳು. ನಮ್ಮ ಮನೆಯಲ್ಲಿರುವ ದೇವರ ಗೂಡು ಪಳೆಯುಳಿಕಾ ಜಾನಪದ, ನಮ್ಮ ಅಜ್ಜಿ ಜೀವಂತ ಪಳೆಯುಳಿಕಾ ಜಾನಪದ, ಬಹುನಾಗರೀಕತೆಗಳ ಸಂಕೀರ್ಣವಾದ ಬೆಂಗಳೂರಿನಲ್ಲಿ ಸೀರೆ-ರವಿಕೆ, ಓಲೆ, ಮೂಗುತಿ, ಬಳೆ, ಕುಂಕುಮ ತೊಟ್ಟು ಬದುಕುತ್ತಿರುವ ಆಧುನಿಕ ಮಹಿಳೆ ಜೀವಂತ ಜಾನಪದ.

ಜಾನಪದ ಅಳಿಯುವುದೇ ಇಲ್ಲ. ಕಳಚಿ ಬೀಳಬೇಕಾದ್ದು ಹೋಗಿ ಹೊಸದು ತನಗೆ ತಾನೆ ಬೆಳೆಯುತ್ತಿರುತ್ತದೆ. ಕಳೆದು ಹೋದದ್ದು ಬೇಡವಾದದ್ದು ಕಾಲ, ಸಮಾಜ ತಮ್ಮ ಅನಿವಾರ್ಯತೆಗೆ ತಕ್ಕಂತೆ ಬೇಡವಾದುದನ್ನು ಬಿಟ್ಟು, ಬೇಕಾದುದನ್ನು ಸೃಷ್ಟಿ, ಪುನರ್‌ಸೃಷ್ಟಿ



ಮಾಡಿಕೊಳ್ಳುತ್ತಾರೆ. ಬಿ.ಎ. ಬಾಟ್ಕಿನ್ ಹೇಳುವ ಹಾಗೆ "For the folkmemory forgets as much as it retains and restricts and corrupts as much as it transmits and improves". ಇದೇ ಅಭಿಪ್ರಾಯ ಬಿ. ಮಾರಿಯಸ್‌ನಿಂದ ಹೀಗೆ ವ್ಯಕ್ತವಾಗಿದೆ: Then we have folklore in its own perennial domain, at work as ever, alive and shifting, always apt to grasp and assimilate new elements on its way".

೫. ಸೋಪಜ್ಞತೆ : Originality

ಜಾನಪದವನ್ನು "the temper and genius of a group" ಎನ್ನುತ್ತಾನೆ. ಥಿಯೊಡಾರ್, ಹೆಚ್. ಗಾಸ್ಟರ್.

ಸಂಸ್ಕೃತಿಯ ಸಾಹಿತ್ಯ ಹಾಗೂ ವೈಚಾರಿಕ ಮುಖಗಳನ್ನು ಅದು ತೆರೆಯುತ್ತದೆ ಎಂಬುದನ್ನು ಚಾರ್ಜ್ ಹೆಡ್‌ಜಾಗ್ "Folklore in the specific sense....embraces those literary and intellectual phases of culture" ಎಂದು, ಅದು ಅನೇಕ ಯುಗಗಳ ಜೀವನ ಚಿಂತನೆ ಎಂಬುದನ್ನು C.F. Fotler 'It is a precipitate of the scientific and cultural lag of centuries and millennia of human experience' ಹೇಳಿಕೆ ಮೂಲಕ ಸಾದರಪಡಿಸುತ್ತಾನೆ.

ಸೋಪಜ್ಞತೆ (originality) ಮೂಲಗಳ (Source) ಜೊತೆಗೆ ಬದುಕುವ ಜನರು ಸೃಷ್ಟಿಸುವ ಮೂಲಾಂಶಗಳು, ಆಶಯಗಳು. ಗಾದೆ, ಒಗಟು, ಕತೆ ಕಥನಗೀತೆಗಳ ಸೃಷ್ಟಿ ಸೋಪಜ್ಞತೆ. ನಮ್ಮ ಶಿಷ್ಟ ಸಾಹಿತ್ಯವನ್ನೇ ತೆಗೆದುಕೊಳ್ಳಿ: ಜನಪದರಿಂದ ಹುಟ್ಟಿದ ಗೀತೆ, ಕಥೆ, ಕಥನಗೀತೆ, ಗಾದೆ, ಒಗಟು, ಲಾವಣಿ, ನುಡಿಗಟ್ಟು ಎಂಬ ಪ್ರಕಾರಗಳನ್ನು ಬಿಟ್ಟು ಎಷ್ಟು ಹೊಸ ಸಾಹಿತ್ಯ ಪ್ರಕಾರಗಳನ್ನು ಸೃಷ್ಟಿಸಿದ್ದಾರೆ? ಕಾದಂಬರಿ ಕತೆಯ ಮುಂದುವರಿದ ರೂಪ, ಭಾವಗೀತೆ, ಕಾವ್ಯ ಇವು ಜನಪದದೊಳಗಿಂದಲೇ ಪರಿಷ್ಕಾರಗೊಂಡು ವ್ಯಕ್ತಿ ವಿಶಿಷ್ಟತೆಯಲ್ಲಿ ಮೈತಾಳಿದವು. ಬಹುಶಃ ಹರಟೆ ಮತ್ತು ಭಾಷಣ ಪ್ರಕಾರಗಳಷ್ಟೆ ಇವರ ಹೊಸ ಸೃಷ್ಟಿಗಳೆಂದು ಕಾಣುತ್ತದೆ:

ಜನಪದ ಸೋಪಜ್ಞತೆ ಹಲವು ಸತ್ವಗಳದ್ದು, ಸ್ಪರ್ಶಗಳದ್ದು, ಭಾಗವಹಿಸುವಿಕೆಯದು, ಅಭಿವ್ಯಕ್ತಿಯದು, ಶ್ರೇಷ್ಠತೆಯದು. ಒಂದು ಸೋಪಜ್ಞ ಮೂಲ ಅಥವ ವಸ್ತು ಕಳೆದುಹೋದರೆ ಮತ್ತೊಂದನ್ನು ಸಮೂಹ ಪ್ರತಿಭೆ ಸೃಷ್ಟಿಸಿಕೊಳ್ಳುತ್ತದೆ. ವ್ಯಕ್ತಿಯ ಸೋಪಜ್ಞತೆ ಅವನ ಅವಸಾನದೊಂದಿಗೆ ನಿರ್ಗಮಿಸುತ್ತದೆ. ಜಾನಪದ ಸೋಪಜ್ಞತೆ ಜನಸಮೂಹದ ಆಶೋತ್ತರವಾಗಿ ಒಂದಿಲ್ಲೊಂದು ಮೂಲಗಳಿಂದ ಜನಗಳೊಳಗೆ ಹುಟ್ಟಿಬರುತ್ತಲೇ ಇರುತ್ತದೆ. ''ಸಂಭವಾಮಿ ಯುಗೇ ಯುಗೇ'' ಎನ್ನುವ ಮಾತು ಜಾನಪದ ಸೋಪಜ್ಞತೆಯ ಸೃಷ್ಟಿ ಪುನರ್‌ಸೃಷ್ಟಿಗೆ ಚೆನ್ನಾಗಿ ಅನ್ವಯಿಸುತ್ತವೆ, ಕೃಷ್ಣ ಪ್ರತಿಭೆಗೆ ಅಲ್ಲ.

## IV. ಅಳಿದ ಮೇಲೆ

ಜಾನಪದ ಮತ್ತು ಗ್ಯಾಟ್‌ಗಳ ಮೂಲ ಆಶೋತ್ತರಗಳೇನು ಎಂಬುದನ್ನು ತಿಳಿದುಕೊಂಡೆವು. ಮೇಲುನೋಟಕ್ಕೆ ಈ ಎರಡಕ್ಕೂ ಏನು ಸಂಬಂಧ ಎನಿಸಬಹುದು. ಆದರೆ ಈ ಎರಡು ಎರಡು ಬೇರೆ-ಬೇರೆ ಬದುಕಿನ ವಿಧಾನಗಳು. 'ಜಾನಪದಜೀವ'ನ ಸಂಸ್ಕೃತಿ ಬದ್ಧತೆ ಇರುವ ಜೀವನವಿಧಾನ. ಗ್ಯಾಟ್ ಜೀವನ ವಿಧಾನ ಅಸಾಂಸ್ಕೃತಿಕ ಹಾಗೂ ನಮ್ಮ ಮೇಲೆ ಬರುತ್ತಿರುವ ಜೀವನವಿಧಾನ. ಈ ಎರಡು ಜೀವನ ವಿಧಾನಗಳನ್ನು ಕೆಳಗಿನಂತೆ ಪರಿಶೀಲಿಸಬಹುದು:

**ಜಾನಪದ : ಇರುವ ಜೀವನ ಚಿಂತನೆ : ಮೂಲಗಳ ಜ್ಞಾನ**

ಎಲ್ಲ ದೇಶಗಳಲ್ಲೂ ಈಗಿರುವ ಜಾನಪದ ಉತ್ಪತ್ತಿ – ಉತ್ಪತ್ತಿದಾರನನ್ನು ಅವಲಂಬಿಸಿ ಹುಟ್ಟಿದ್ದು. ಅದು ಉತ್ಪತ್ತಿಯನ್ನು ಆಚರಿಸುತ್ತದೆ ಇಲ್ಲವೆ ಉತ್ಪತ್ತಿದಾರನನ್ನು ಆಚರಿಸುತ್ತದೆ. ಈ ಉತ್ಪತ್ತಿದಾರ ಒಂದೊಂದು ಸಂಸ್ಕೃತಿ ಹಾಗೂ ಅದರಿಂದ ನಿರ್ಮಾಣಗೊಂಡ ಜನಪದದಿಂದ ನಿಯಂತ್ರಿಸಲ್ಪಡುತ್ತಾನೆ. ಸಂಪತ್ತಿನ ಹಂಚಿಕೆ ಎಂಬುದು ಈ ಸಂಸ್ಕೃತಿಯ ನಿಯಂತ್ರಣದಲ್ಲಿದ್ದು ಹಂಚಿಕೆಯಾಗುತ್ತದೆ, ಹಾಗೂ ಬಳಕೆಗೆ ಬರುತ್ತದೆ. ಸಂಸ್ಕೃತಿಯ ಆಚೆಗಿನ ಉತ್ಪತ್ತಿ, ಹಂಚಿಕೆ ಮತ್ತು ಬಳಕೆ ನಿಷಿದ್ಧವೆನಿಸುತ್ತವೆ. ಇದು ಬದುಕಿಗೆ ಪೂರ್ವಕಾಲದಿಂದ ಬಂದ ಚೌಕಟ್ಟು. ಇದು ಮನುಷ್ಯನ ಆಕ್ರಮಣಕಾಲಿತ್ವ, ಅರಾಜಕತೆಯನ್ನು ತಡೆಗಟ್ಟಿ ಮನುಷ್ಯ ಬದುಕನ್ನು ನಿರಂತರ ಸಹ್ಯಗೊಳಿಸುತ್ತದೆ. ಇದರಿಂದ ಹೊರಬಂದ ಮನುಷ್ಯ ಏನು ಬೇಕಾದರೂ ಆಗಬಹುದು.

ಆದ್ದರಿಂದ ಜಾನಪದಜ್ಞಾನ ಮೂಲಗಳ ಜ್ಞಾನ, ಜಾನಪದ ಬದುಕು ಉತ್ಪತ್ತಿದಾರನ ಬದುಕು. ಜನಪದ ಬದುಕನ್ನು ಹೀಗೆ:

೧. ನೆಲದ ಬದುಕು
೨. ಸಂಸ್ಕೃತಿ ಚರಿತ್ರೆ (ಪರಂಪರೆ)
೩. ಭೌಗೋಳಿಕ-ಚಾರಿತ್ರಿಕ ಸೃಷ್ಟಿ
೪. ಜನಸೃಷ್ಟಿ – ಬಹುಸೃಷ್ಟಿ
೫. ಜನಸ್ವಾಮ್ಯ – ಜನಬಳಕೆ
೬. ಸಂಬಂಧ ಸಂಸ್ಕೃತಿ

ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ಬದುಕು ಎಂದು ನಿರ್ವಚಿಸಿಕೊಳ್ಳಬಹುದು.



**ಗ್ಯಾಟ್: ಬರುತ್ತಿರುವ ಜೀವನ ಚಿಂತನೆ : ಮಾದರಿಗಳ ಜ್ಞಾನ**

ಗ್ಯಾಟ್ ಬದುಕು ಈಗ ಹೊರಗಿನಿಂದ ಬರುತ್ತಿದೆ. ಇದು ಮಾರುಕಟ್ಟೆ ಆಧಾರಿತ ಬದುಕು. ಇಲ್ಲಿ ನಿಜವಾದ ಉತ್ಪತ್ತಿದಾರ ಕಾಣುತ್ತಿಲ್ಲ. ಬಂಡವಾಳ ಹೂಡುವವನು, ಮೂಲ ವಸ್ತು - ಸಂಪತ್ತುಗಳನ್ನು ಕೊಂಡುಕೊಳ್ಳುವವನು ಮುಖ್ಯವಾಗಿ ಕಾಣುತ್ತಿದ್ದಾನೆ. ಇವನು ಲಾಭಕ್ಕಾಗಿ ಉತ್ಪತ್ತಿ ಮಾಡುತ್ತಾನೆಯೆ ಹೊರತು ಜೀವನ ನಿರ್ವಹಣೆಗೆ ಅಲ್ಲ. ಬಳಕೆದಾರರನ್ನು ಸೃಷ್ಟಿ ಮಾಡುವುದು ಅವರಿಂದ ಅಧಿಕ ಲಾಭ ಪಡೆಯುವುದು ಇವನ ಪರಮ ಉದ್ದೇಶ. ಇಂಥ ಕಡೆ ಉತ್ಪತ್ತಿ ಮಾಡುವವನು ಯಾದೃಚ್ಛಿಕವಾಗುತ್ತಾನೆ. ಉತ್ಪತ್ತಿ ಮೂಲ ಇವನಿಗೆ ಕೊಳ್ಳುವ ವಸ್ತುವೆ ಹೊರತು ತಾಯಿಯಲ್ಲ. ಆದ್ದರಿಂದ ಅದು, ಅದರ ಉತ್ಪತ್ತಿ ಎಂದೂ ಆಚರಣೆಯಾಗಲಾರವು ಇದು ತನ್ನ ಸಿದ್ಧ ಮಾದರಿಗಳನ್ನು ಇಟ್ಟುಕೊಂಡು ಬರುತ್ತಿದೆ. ಅದಕ್ಕನುಗುಣವಾಗಿ ಜೀವನವನ್ನು ರೂಪಿಸಲು ಪ್ರಯತ್ನಿಸುತ್ತದೆ.

ಆದ್ದರಿಂದ ಗ್ಯಾಟ್‌ನ ಬದುಕು ಕೊಂಡುಕೊಳ್ಳಬೇಕಾದ ಬದುಕು, ಹೊಸದಾಗಿ ಪಡೆಯಬೇಕಾದ ಬದುಕು, ಈ ಗ್ಯಾಟ್ ಬದುಕನ್ನು:

೧. ಕೊಂಡ ಬದುಕು
೨. ಬಳಕೆದಾರನ ಬದುಕು
೩. ಅಚಾರಿತ್ರಿಕ ಬದುಕು
೪. ಏಕಸೃಷ್ಟಿ ಅವಲಂಬಿತ ಬದುಕು
೫. ಏಕವ್ಯಕ್ತಿ ನಿರ್ಮಿತ ಬದುಕು
೬. ಏಕಸ್ವಾಮ್ಯ ಪಡೆದ ಬದುಕು
೭. ಅಸಾಂಸ್ಕೃತಿಕ – ಅಪರಂಪರಾ ಬದುಕು
೮. ಪುನರ್‌ವಸತೀಕರಣ : ಮಾಶ್ಚಿಮಾತ್ಯೀಕರಣ

ವ್ಯಕ್ತಿಯಿಂದ ವ್ಯಕ್ತಿಗಾಗಿ ವ್ಯಕ್ತಿಗೋಸ್ಕರ ಇರುವ ಬದುಕು ಎಂದು ನಿರ್ವಹಿಸಿಕೊಳ್ಳಬಹುದು.

ಇದರಿಂದಾಗಿ ನಾವು ಜಾನಪದದ ಮೂಲ – ನೆರೆಯ ಬದುಕನ್ನು ಕಳೆದುಕೊಳ್ಳುತ್ತೇವೆ. ಅದು ಹೇಗೆಂದರೆ:

*ನಮ್ಮ ಮನೆಯ ಬಾಗಿಲನ್ನು ಎಲ್ಲರಿಗೂ ತೆರೆದಂತಾಗುತ್ತದೆ. ಹೊರದೇಶದ ಮಾರುಕಟ್ಟೆ ನಮ್ಮ ಮನೆಯ ಬಾಗಿಲಿಗೆ ಬರುತ್ತದೆ. ನಮ್ಮ ಮಾರುಕಟ್ಟೆ ತಿಪ್ಪೆಯಾಗುತ್ತದೆ. ಕೆಲವೇ ವಸ್ತುಗಳು ಉತ್ಪತ್ತಿಯಾಗುತ್ತವೆ ಮತ್ತು ಮಾರಾಟವಾಗುತ್ತವೆ. ನಮ್ಮ ರುಚಿ-ಅಭಿರುಚಿಗಳು ಹೋಗಿ ಬೇರೆಯವರ ಅಭಿರುಚಿಯನ್ನು ನೆಕ್ಕುವ ಎಂಜಲುಗಳಾಗುತ್ತವೆ.

ನಮಗೆ ಏನು ಬೇಕು ಎಂಬುದನ್ನು ಹೊರಗಿನ ಉತ್ಪಾದಕ ನಿರ್ಣಯಿಸುತ್ತಾನೆ. ಇದರಿಂದ ಸ್ಥಳೀಯ ಉತ್ಪನ್ನಗಳು ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತವೆ. ಸ್ಥಳೀಯ ಊಟೋಪಚಾರಗಳು ಇಲ್ಲವಾಗುತ್ತವೆ. ಬ್ರಾಹ್ಮಣರ ಊಟ ವ್ಯವಸ್ಥೆಯನ್ನು ಅನುಸರಿಸಿ ಶೂದ್ರರ ಮದುವೆ, ತಿಥಿ - ಇತ್ಯಾದಿ ಸಮಾರಂಭಗಳು ಬಾತು, ಅನ್ನ, ಸಾಂಬಾರುಗಳಿಂದ ಆಕ್ರಮಿಸಲ್ಪಟ್ಟು ಮೂಲ ಊಟಗಳು ಹೋದಂತೆ ಗ್ಯಾಟ್ ಪ್ರಭಾವದಿಂದ ಕೆಂಟುಕಿ ಚಿಕನ್, ಫಾಸ್ಟ್ ಫುಡ್‌ಗಳು ಬಂದು ನಮ್ಮ ಕೋಳಿಸಾರು-ರಾಗಿಮುದ್ದೆ, ರಾಗಿರೊಟ್ಟಿ - ಹುಚ್ಚೆಳ್ ಚಟ್ನಿ, ಜೋಳದ ರೊಟ್ಟಿ, ಬದನೆಕಾಯಿ ಬಾಜಿ, ಪುಳಿಯೊಗರೆ, ಮಂಡ್ಯದ ಉಪ್ಸಾರು ಮುದ್ದೆ, ಪೊಂಗಲ್‌ಗಳೆಲ್ಲ ಹಳ್ಳಬೀಳುತ್ತವೆ.

* ಅದ್ವೈತೆಯ ಪ್ರಶ್ನೆ ಹೋಗುತ್ತದೆ. ಬಂಡವಾಳಿಗ ಬದುಕುತ್ತಾನೆ, ಬಡವ ಸಾಯುತ್ತಾನೆ. ಬಡವರನ್ನೂ ಮೇಲೆತ್ತುವ ಕಾರ್ಯಕ್ರಮಗಳು ಇಲ್ಲವಾಗುತ್ತದೆ. ಖಾಸಗೀ ಮಾಲೀಕರು ಪ್ರಬಲರಾಗಿ ಸರ್ಕಾರ ಅವರ ವಸ್ತುಗಳನ್ನು ಮಾರುವ ದಲ್ಲಾಳಿಯಾಗುತ್ತದೆ.

*ಎಲ್ಲ ಕಡೆ ಏಕಸಂಸ್ಕೃತಿ, ಏಕತ್ವ ಪ್ರಬಲವಾಗಿ ಬಹುಸಂಸ್ಕೃತಿಗಳ ಭಾಷೆ, ಕಲೆ, ತಂತ್ರಜ್ಞಾನ ಹಾಗೂ ಬದುಕು ಕ್ಷೀಣಿಸುತ್ತವೆ. ನಮ್ಮ ಸಂಸ್ಕೃತಿಯಾಧಾರಿತ ಮಾರುಕಟ್ಟೆ ಬಂದ್ ಆಗಿ ಮಾರುಕಟ್ಟೆ ಆಧಾರಿತ ಸಂಸ್ಕೃತಿ ಹುಟ್ಟುತ್ತದೆ. ನಮ್ಮ ನಂಬಿಕೆ, ನಡವಳಿಕೆ, ಆಚಾರ - ವಿಚಾರಗಳು ಮಾರುಕಟ್ಟೆ ಬೆಳೆಸುವ ಆಚರಣೆಗಳಾಗಬಹುದು.

ಜನಪದ ಕಲೆ-ಕಲಾವಿದರು ಇಲ್ಲವಾಗುತ್ತಾರೆ. ಇವರು ಉತ್ಪತ್ತಿದಾರನನ್ನು ಅವಲಂಬಿಸಿ ಹುಟ್ಟಿಬಂದವರು. ಈ ಉತ್ಪತ್ತಿಗಾರ ಮಾರಾಟಗಾರ ಆಗುವುದರಿಂದ ಅವರು ನಶಿಸಿಹೋಗುತ್ತಾರೆ. ಸಂಪತ್ತಿಗೆ ಜನ ಒಡೆಯರಾಗಿದ್ದುದು ತಪ್ಪಿ ವ್ಯಕ್ತಿಗಳು ಒಡೆಯ ರಾಗುತ್ತಾರೆ. ಬಹುಜನರ ಕೃಷಿ ಕೈಗಾರಿಕಾ ಬಂಡವಾಳದಾರನಲ್ಲಿ ಸೇರಿಹೋಗುತ್ತದೆ.

*ನಮ್ಮ ಮಾತು ನಿಂತು ಅನ್ಯರ ಮಾತು ಮುಖ್ಯವಾಗುತ್ತದೆ. ಪ್ರಜಾಪ್ರಭುತ್ವ ಬಾಯಿಮುಚ್ಚಿಕೊಂಡು ಅದರ ಒಡೆಯರು ಮಾತನಾಡುವಂತಾಗುತ್ತದೆ. ವಿವಿಧ ಬಗೆಯ ಟಿ.ವಿ.ಗಳು ಅವುಗಳ ಕಾರ್ಯಕ್ರಮಗಳು ಈಗ ಈ ಕೆಲಸಕ್ಕೆ ಶುರುಮಾಡಿರುವುದು ನಿಮ್ಮ ಗಮನಕ್ಕೆ ಬಂದಿರಬಹುದು. ಕೈಗಾರಿಕಾ ಉತ್ಪನ್ನಗಳ ಜಾಹೀರಾತುಗಳನ್ನು ನೋಡದೆ ನಮ್ಮ ಕ್ರಿಕೆಟ್ ಆಟವನ್ನು ನೋಡಲು ಸಾಧ್ಯವಿದೆಯೆ? ಊಹಿಸಿ.

ಓದುವ ಅಭ್ಯಾಸ ಹೋಗಿ ನೋಡುವ, ನೋಡಿ ಕಲಿಯುವ ಅಭ್ಯಾಸ ಬರುತ್ತದೆ. ಓದುವುದು ಹೆಚ್ಚು ಶ್ರಮ ಎನಿಸಿಕೊಳ್ಳುತ್ತದೆ. ಅಕ್ಷರಜ್ಞಾನಕ್ಕೆ ಹೊಡೆತ ಬೀಳುತ್ತದೆ. ನಮ್ಮ ಸಾಕ್ಷರತಾ ಕಾರ್ಯಕ್ರಮ ನಿಷ್ಪ್ರಯೋಜಕವಾಗುತ್ತದೆ.

ನೆಲದ ರಾಜಕೀಯ ಹೋಗಿ ವ್ಯಾಪಾರ ರಾಜಕೀಯ ಬರುತ್ತದೆ. ಹಿಂದೆ ಈಸ್ಟ್ ಇಂಡಿಯಾ ಕಂಪನಿ ಕಟ್ಟಿಕೊಂಡು ಬಂದು ಬ್ರಿಟಿಷರು ಭಾರತದಲ್ಲಿ ಮಾಡಿದ ರಾಜಕೀಯದ



ರೀತಿಯ ವಿವಿಧ ಕಂಪನಿಗಳ ರಾಜಕೀಯ ಶುರುವಾಗುತ್ತದೆ. ನಮ್ಮ ರಾಜಕಾರಣಿಗಳು ಅವರಿಗೆ ತಳವಾರರಾಗಬೇಕಾಗಿ ಬರುತ್ತದೆ. ಬ್ರಿಟಿಷರು ನೇರವಾಗಿ ರಾಜಕೀಯ ಮಾಡುತ್ತಿದ್ದರು. ಅವರು ತಪ್ಪು ಮಾಡಿದರೆ ಹಿಡಿಯಬಹುದಿತ್ತು. ಬಹುರಾಷ್ಟ್ರೀಯ ಕಂಪನಿ ರಾಜಕೀಯ ಎದುರಿಗೆ ಇರುವುದಿಲ್ಲ. ಅವರು ತಪ್ಪು ಮಾಡಿದರೂ ಹಿಡಿಯಲು ಕಷ್ಟ. ಅವರು ಸೃಷ್ಟಿಮಾಡುವ ಶತ್ರುಗಳನ್ನು ಪತ್ತೆ ಹಚ್ಚುವುದು ಕಷ್ಟ.

*ನೇರ ಯುದ್ಧ ಹೋಗಿ, ಮಾರುಕಟ್ಟೆ ಯುದ್ಧ, ಪಾರ್ಥೇನಿಯಂ ಥರದ ಸಸ್ಯಯುದ್ಧ, ಕೆಂಟುಕಿ ಚಿಕನ್ ಥರದ ಆಹಾರಯುದ್ಧ, ಟಿ.ವಿ. ಮೂಲಕ ಸೆಟಲೈಟ್ ಯುದ್ಧಗಳು ಸದಾ ನಮ್ಮ ಜೊತೆಗೆ ನಡೆಯುತ್ತವೆ.

* ಸ್ಥಳೀಯ ಮೂಲ ಉತ್ಪನ್ನಗಳಾದ ಸಸ್ಯ, ಬೀಜ, ಔಷಧಿ - ಇವೆಲ್ಲ ಹೋಗಿ ಹೊರಗಿನವರ ಬೀಜಗಳು ನಮ್ಮ ಹೊಲದ ಮೇಲೆ ಊರುತ್ತವೆ. ಈ ಬೀಜಯುದ್ಧ ಎಲ್ಲಿಯವರೆಗೆ ನಡೆಯುತ್ತದೆ ಎಂದರೆ ಒಂದು ಕಾಲಕ್ಕೆ ನಮ್ಮಲ್ಲಿ ಇದ್ದ ತಳಿಗಳನ್ನು ಹುಡುಕಬೇಕಾಗುತ್ತದೆ. ನಂತರ ಇವುಗಳನ್ನು ಪಾಶ್ಚಾತ್ಯ ದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಸಸ್ಯಗಳ ಬೀಜದ ಜೊತೆಗೆ ನಮ್ಮ ಸ್ಥಳೀಯ ಮನುಷ್ಯ ಬೀಜಗಳು ಕೂಡ ನಮ್ಮ ಗಮನಕ್ಕೆ ಬರದ ಹಾಗೆ ನಶಿಸುತ್ತಾ ಹೋಗಬಹುದು:

* ನಮ್ಮ ಸೃಜನಾತ್ಮಕ ಸಾಮರ್ಥ್ಯ ಹಿಂಗಿ ಹೋಗಿ ಕೇವಲ ಬಳಕೆದಾರರಾಗುತ್ತೇವೆ. ನಾವು ಉತ್ಪಾದಕರಾಗುವುದಿಲ್ಲವಾದ ಕಾರಣ ನಮ್ಮ ಉತ್ಪಾದನಾ ಸಾಮರ್ಥ್ಯ ಕುಸಿಯುತ್ತದೆ. ನಮ್ಮ ಸ್ವನಿರ್ಧಾರ ಹಾಗೂ ಸ್ವಾವಲಂಬನೆ ಕನಸಿನ ಮಾತಾಗುತ್ತವೆ. ನಮ್ಮ ಉತ್ಪತ್ತಿಯ ಹಲವು ಅಂಶಗಳ ಮೇಲೆ ಹೊರಗಿನವರು ಏಕಸ್ವಾಮ್ಯ ಹಕ್ಕು (ಪೇಟೆಂಟ್) ಪಡೆದರೆ ನಮ್ಮ ಉತ್ಪನ್ನಗಳ ಮೇಲಿನ ಹಕ್ಕು ಹೋಗುತ್ತದೆ. ದೇಶದ ಹಿತ ಎಂಬುದು ಪೇಟೆಂಟ್‌ದಾರನ ಹಿತರಕ್ಷಣೆಯಾಗುತ್ತದೆ.

* ಜಾನಪದ ಸಮನ್ವಿತವಾದ ನಮ್ಮ ಸಂಬಂಧಾತ್ಮಕ ಸಂಸ್ಕೃತಿ ಹೋಗಿ ಸರಕು ಸಂಸ್ಕೃತಿ ಹುಟ್ಟುತ್ತದೆ. ಇದರಿಂದ ಮನುಷ್ಯನೂ ಹಲವು ಸರಕುಗಳಲ್ಲಿ ಒಂದಾಗುತ್ತಾನೆ. ನಮ್ಮ ಭೌಗೋಳಿಕ - ಚಾರಿತ್ರಿಕ ಸೃಷ್ಟಿಗಳು, ಮಾದರಿಗಳು ಇಲ್ಲವಾಗುತ್ತವೆ.

*ಆದಿವಾಸಿ, ಅಲೆಮಾರಿ ಜನ ಬದುಕು ಮ್ಯೂಸಿಯಂನಲ್ಲಿಟ್ಟಂತೆ ಆಗುತ್ತದೆ. ನಮ್ಮ ಜನರ ಜನಪದ ತಂತ್ರಜ್ಞಾನ ಮತ್ತು ಆಹಾರಗಳು ನಶಿಸುತ್ತಾ ಬಂದಂತೆ ಹೆಚ್ಚಚ್ಚು ಜನ ಬಡವರ ಬಡವರಾಗುತ್ತಾರೆ.

## ಭವಿಷ್ಯದ ಜಾನಪದ ಏನಾಗಿರುತ್ತದೆ?

ಈಗ ದೊರೆಯುತ್ತಿರುವ ಜಾನಪದ ಬಹುತೇಕ ಕೃಷಿ ಸಂಸ್ಕೃತಿಯದು. ಅದು ಉತ್ಪತ್ತಿದಾರನ ವಿವಿಧ ಚಟುವಟಿಕೆಗಳ ಅಭಿವ್ಯಕ್ತಿಯಾಗಿದೆ. ವಿದ್ಯಾರ್ಥಿಗಳ ಮಧ್ಯೆ ಹಾಗೂ

ರಾಜಕಾರಣಿಗಳನ್ನು ಕುರಿತ ಜಾನಪದ ಪ್ರಜಾಪ್ರಭುತ್ವ ಮನೋಧರ್ಮವನ್ನು ಹೊರಹಾಕುತ್ತಿದೆ. ಗ್ಯಾಟ್ ಬಂದಾಗ, ಗ್ಯಾಟ್ ಮೂಲಕ ವಸ್ತುಗಳ ಪೇಟೆಂಟ್ ಪಡೆದವನು ಒಡೆಯ ಉತ್ಪತ್ತಿದಾರ ಆಗುತ್ತಾನೆ. ಅವನ ಬದುಕು ಎಂದಿಗೂ ಜಾನಪದೀಯ ಆಗಲಾರದು. ಈಗಿರುವ ಜಾನಪದ ರೂಪಾಂತರಗೊಂಡು ಪೇಟಂಟ್‌ದಾರನ ಸರಕುಗಳನ್ನು ಮಾರಾಟ ಮಾಡುವ ಜಾಹೀರಾತು ಜಾನಪದವಾಗಬಹುದು.

ಈಗಿರುವ ಜಾನಪದ ತಾತ್ವಿಕ ಜನಪದಗಳ (ideological folks) ಉತ್ಪತ್ತಿಯಾಗಿದೆ. ಗ್ಯಾಟ್ ಮೂಲಕ ಬರುವುದು ಮಧ್ಯವರ್ತಿ ಅಥವ ಎಡಬಿಡಂಗಿ ಜಾನಪದವಾಗಿ ಪರಿಣಮಿಸುತ್ತದೆ. ಇದು ಕೈಗಾರಿಕಾ ವಸ್ತುಗಳ ಪ್ರದರ್ಶನ - ಪ್ರಚಾರ ಹಾಗೂ ಮಾರಾಟ ಮಾಡಲು ತೊಡಗುತ್ತದೆ. ಅಂದರೆ ಜಾನಪದ ಕಟ್ಟುವ ಕ್ರಿಯೆಯಾಗದೆ ಬಳಕೆಯ ಸಾಧನವಾಗುತ್ತದೆ. ಜಾನಪದದೊಳಗೆ ಈಗ ಇರುವ ಉತ್ಪತ್ತ್ಯಾತ್ಮಕ ಗುಣಗಳು (motifs) ಕಳೆದುಹೋಗುತ್ತವೆ.



# ಮುಸ್ಲಿಂ ಜಾನಪದ

ಡಾ. ರಹಮತ್ ತರೀಕೆರೆ

ರಾಯಚೂರು ಸೀಮೆಯ ಮುದಗಲ್ಲಿನಲ್ಲಿ ನಡೆಯುವ ಮೊಹರಂ ಆಚರಣೆಗಳು ತುಂಬ ಪ್ರಸಿದ್ಧವಾದವು. ಈ ಆಚರಣೆಗಳಲ್ಲೆಲ್ಲ ನಾಟಕೀಯವಾದುದೆಂದರೆ ಅಣ್ಣತಮ್ಮಂದಿರಾದ ಹಸನ-ಹುಸನರ ಮುಖಾಮುಖಿ. 'ಮುಖಾಮುಖಿ' ಎಂದರೆ, ಹಸನ್ ಹುಸೇನ್ ಎಂದು ಕರೆಯಲಾಗುವ ಎರಡು ಬೆಳ್ಳಿಯ ಪಂಜಾಗಳನ್ನು, ಬಣ್ಣಬಣ್ಣದ ಬಟ್ಟೆ ಮತ್ತು ಹೂವುಗಳಿಂದ ಅಲಂಕರಿಸಿ 'ದೇವರು' ಮಾಡಿಕೊಂಡು ಬಂದು, ಎದುರು ಬದುರು ನಿಲ್ಲಿಸುವುದು. ಒಂದೇ ಒಂದು ಕ್ಷಣದ ಮುಖಾಬಿಲೆಯ ಈ ದೃಶ್ಯವನ್ನು ನೋಡಲು, ಈ ಸೀಮೆಯ ಒಂದು ಲಕ್ಷದಷ್ಟು ಜನ ಮುದಗಲ್ಲಿನ ಕೋಟೆಬಾಗಿಲಿನಲ್ಲಿ ಶ್ರದ್ಧೆಯಿಂದ ನಿಂತು ಕಾಯುತ್ತಾರೆ ಜಾತಿ-ಮತದ ಲೆಕ್ಕದಲ್ಲಿ ಹೇಳುವುದಾದರೆ, ಈ 'ಜನ' - ಬೇಡರು, ದಲಿತರು, ಕುರುಬರು, ಲಿಂಗಾಯತರು ಹಾಗೂ ಕೆಲಮಟ್ಟಿಗೆ ಮುಸ್ಲಿಮರು 'ಯಾಕೆ ಈ ಮುಖಾಬಿಲೆ' ಎಂದು ಕೇಳಿದರೆ, ಜನ ಸ್ವಾರಸ್ಯಕರವಾದ ಒಂದು ಕತೆ ಹೇಳುತ್ತಾರೆ: ಅರಬಸ್ಥಾನದಿಂದ ತಿರುಗಾಡಿಕೊಂಡು ಬಂದ ಹಸನ-ಹುಸೇನರು ಮುದಗಲ್ಲಿಗೆ ತಲುಪಿದರಂತೆ, ಊರಿನ ಚೆಂದ ನೋಡುತ್ತ ತಮ್ಮ ಹುಸೇನ ಊರೊಳಗೆ ಅಡ್ಡಾಡುತ್ತಿದ್ದ. ಕೋಟೆಯ ಚೆಂದ ನೋಡುತ್ತ ನೋಡುತ್ತ ಅಣ್ಣ ಊರ ಹೊರಗೆ ಹೋದ. ಅಷ್ಟರಲ್ಲಿ ಸಾಯಂಕಾಲವಾಗಿ ಕೋಟೆ ಬಾಗಿಲನ್ನು ಮುಚ್ಚಿಬಿಟ್ಟರು. ಇದರಿಂದ ತಮ್ಮ ಊರೊಳಗೂ ಅಣ್ಣ ಊರಹೊರಗೂ ನೆಲೆಸಬೇಕಾಯಿತು. ಅಗಲಿಹೋಗಿರುವ ಸೋದರರನ್ನು ವರುಷಕ್ಕೊಂದು ಸಲ ಹೀಗೆ ಮುಖಾಬಿಲೆ ಮಾಡಿಸಲಾಗುತ್ತದೆ.

'ಚರಿತ್ರೆ'ಯ ಪರಿಕಲ್ಪನೆಯನ್ನು ಈ ನಂಬಿಕೆಯ ಜಗತ್ತು ಸುಲಭವಾಗಿ ಮುರಿದು ಹಾಕುತ್ತಿದೆ. ಇಸ್ಲಾಮ್ ಧರ್ಮದ 'ಚರಿತ್ರೆ' ಹೇಳುವಂತೆ ಹಸನ ಹುಸನರು ಮಹಮದ್ ಪೈಗಂಬರನ ಮೊಮ್ಮಕ್ಕಳು. ಪೈಗಂಬರನ ನಂತರ ಆರಬ ರಾಜಕೀಯ-ಆಧ್ಯಾತ್ಮಿಕ ನಾಯಕತ್ವ (ಖಲೀಫತ್ವ)ವನ್ನು ಯಾರು ವಹಿಸಬೇಕು ಎನ್ನುವ ವಿಷಯದಲ್ಲಿ ವಿವಾದ ಎದ್ದವು. ಮೂಲತಃ ರಾಜಕೀಯ ಅಧಿಕಾರಕ್ಕಾಗಿ ಬುಡಕಟ್ಟುಗಳ ನಡುವೆ ಎದ್ದ ಈ ವಿವಾದಗಳು

ಪಿತೂರಿ, ಕೊಲೆ, ಕದನಗಳಾಗಿ ಮಾರ್ಪಟ್ಟವು. ಅರಬಸ್ಥಾನದಲ್ಲಿ ನಡೆದ ಇಂಥದೊಂದು ಪಿತೂರಿ ಮತ್ತು ಯುದ್ಧದಲ್ಲ ಹಸನ-ಹುಸನರು ಅಮಾನುಷವಾಗಿ ಕೊಲೆಯಾದರು. ಅವರ ಸಾವಿನ ನೆನಪಿನಲ್ಲಿ ಶಿಯಾಮುಸ್ಲಿಮರು ಶುರುಮಾಡಿದ ಶೋಕಾಚರಣೆಗಳೇ ಈಗಿನ ಮೊಹರಂ ಹಬ್ಬಕ್ಕೆ ಮೂಲವಾದವು. ಪರ್ಶಿಯಾ ಮೂಲದ ಆಳುವ ಪ್ರಭುಗಳು ಭಾರತಕ್ಕೆ ಬಂದಾಗ ಈ ಆಚರಣೆಗಳೂ ಹಿಂಬಾಲಿಸಿ ಬಂದವು.

ಏಳನೇ ಶತಮಾನದಲ್ಲಿ, ಇರಾಕಿನ ಯುಫ್ರಟಿಸ್ ನದೀ ತೀರದ ಕರ್ಬಲ ಎಂಬ ಹಳ್ಳಿಯ ಮೈದಾನದಲ್ಲಿ, ನಡೆದ ಈ ಕದನ ಕಥನವು, ಭಾರತದ ಬೇರೆ ಬೇರೆ ಪ್ರಾಂತ್ಯದ ಜನಸಮುದಾಯಗಳ ಕೈಗೆ ಸಿಕ್ಕು ತಳೆದಿರುವ ರೂಪಾಂತರಗಳು ಸೋಜಿಗ ಹುಟ್ಟಿಸುವಂಥವು. ಮುದಗಲ್ಲಿನ ರೂಪಾಂತರದಲ್ಲಿ ಹಸನ-ಹುಸನರು ಮುದಗಲ್ಲಿಗೆ ಬಂದಿದ್ದರು ಮತ್ತು ಮುದಗಲ್ಲಿನ ಮಕ್ಕಳಾಗಿ ಇಲ್ಲೇ ನೆಲೆಸಿದರು. ಇದು ಜನ ಸಮುದಾಯಗಳ ಕಥನ ಕಲ್ಪನೆಯ ಸಂಗತಿಯಲ್ಲ. ಗಾಢಶ್ರದ್ಧೆಯ ವಿಷಯ ಕೂಡ. ಬೇರೊಂದು ಧರ್ಮಕ್ಕೆ, ಜನಾಂಗಕ್ಕೆ ಸಂಸ್ಕೃತಿಗೆ ಹಾಗೂ ಕಾಲಕ್ಕೆ, ಸಂಬಂಧಿಸಿದ ಚರಿತ್ರೆಯನ್ನು, ತನ್ನ ಊರಿನ ಪುರಾಣವನ್ನಾಗಿ ರೂಪಾಂತರಿಸುವುದು ಮತ್ತು ನಂಬುವುದು ಸಮುದಾಯಗಳ ಗುಣವಾಗಿದೆ. ಹೀಗೆ ಸ್ಥಳೀಕರಿಸಿಕೊಳ್ಳದೆ ಅವು ಏನನ್ನೂ ತಮ್ಮದನ್ನಾಗಿಸಿ ಕೊಳ್ಳವು. ಈ ರೂಪಾಂತರಗಳು ಸಮುದಾಯಗಳ ಔದಾರ್ಯದ ಅಥವಾ ಏನು ತಿಂದರೂ ಜೀರ್ಣಿಸಿಕೊಳ್ಳುವ ಪಚನಶಕ್ತಿಯ ಕುರುಹಲ್ಲ. ಬದಲಾಗಿ ಚರಿತ್ರೆಯನ್ನು ಆಳುವ ವರ್ಗದ ರಾಜಕೀಯ ಸಂಘರ್ಷಗಳ ಆಚೆ ತೆಗೆದುಕೊಂಡು ಹೋಗಿ, ಯಾವತ್ತೂ ಮನುಷ್ಯರ ಸುಖದುಃಖಗಳ ಕಥನವನ್ನಾಗಿಸುವ ಸ್ವಭಾವಗಳು. ಸಮುದಾಯಗಳ ಆಲೋಚನಾಕ್ರಮವನ್ನು ಸೂಚಿಸುವ ಈ ರೂಪಾಂತರಗಳು ಸಾಂಸ್ಕೃತಿಕವಾಗಿ ಇನ್ನೂ ಅನೇಕ ರಹಸ್ಯಗಳನ್ನು ಸುಳಿದಿಡುತ್ತವೆ. ಕರ್ನಾಟಕದ ಜನಸಮುದಾಯಗಳು ಕರ್ಬಲಾ ಕದನವನ್ನು ಹಾಗೂ ಸೂಫಿಗಳನ್ನು ಕುರಿತು ಮತಾತೀತವಾಗಿ ಕಟ್ಟಿಕೊಂಡಿರುವ ಮಿತ್, ಕಥೆ, ಹಾಡು ಹಾಗೂ ನಂಬಿಕೆ-ಆಚರಣೆಗಳೇ ಇದಕ್ಕೆ ಸಾಕ್ಷಿ. ಎಲ್ಲೋ ಯಾರಿಗೂ ಎಂದೊ ನಡೆದ ಕರ್ಬಲಾ ಕದನದ ಘಟನೆಗಳು ಆಯಾ ಊರಿನ 'ಚರಿತ್ರೆ'ಯ ಭಾಗವಾಗುತ್ತವೆ; ಎಲ್ಲೆಲ್ಲಿಂದಲೋ ಬಂದು ನೆಲೆಸಿದ ಸೂಫಿಸಂತರು ಆಯಾ ಊರಿನ ದೈವಗಳಾಗುತ್ತಾರೆ. ಮುಸ್ಲಿಂ ಕುಟುಂಬಗಳೇ ಇಲ್ಲದ ಹಳ್ಳಿಗಳಲ್ಲೂ ಮೊಹರಂ ಹಾಗೂ ಉರುಸುಗಳು ಊರಹಬ್ಬಗಳಂತೆ ನಡೆಯುತ್ತವೆ ಎಂಬುದನ್ನು ಇಲ್ಲಿ ನೆನೆಯಬಹುದು. ಪ್ರಶ್ನೆಯೆಂದರೆ, ಜನಸಮುದಾಯಗಳು ಮತಾತೀತವಾಗಿ ಕಟ್ಟಿಕೊಂಡಿರುವ ಈ ವರ್ಣ ರಂಜಿತ ಜಗತ್ತನ್ನು 'ಮುಸ್ಲಿಂ ಜಾನಪದ'ವೆಂದು ಕರೆಯಬಹುದೆ?

ಇಸ್ಲಾಂ ಎಂಬ ಏಕದೇವಾರಾಧಕ ಧರ್ಮವನ್ನು ಏಳನೇ ಶತಮಾನದಲ್ಲಿ, ಮಹಮ್ಮದ್ ಎಂಬ ಪ್ರವಾದಿಯು ಸ್ಥಾಪಿಸಿದನು; ಈ ಧರ್ಮವನ್ನು ಅನುಸರಿಸುವವರು ಮುಸ್ಲಿಮರು. ಅರಬೀ ಭಾಷೆಯಲ್ಲಿರುವ ಕುರಾನು ಅವರ ಪವಿತ್ರ ಗ್ರಂಥ ಇತ್ಯಾದಿ ವಿವರಗಳನ್ನು ನಮಗೆ



ಶಾಲೆಯ ಪುಸ್ತಕಗಳು ಕಲಿಸಿಕೊಟ್ಟಿವೆ. ಇನ್ನೂ ಹೆಚ್ಚೆಂದರೆ, ಬೇರೆಬೇರೆ ನಾಡುಗಳನ್ನು ಗೆದ್ದು ಆಳಲು ಹೋದ ದೊರೆಗಳು, ಅವರ ಜತೆಗೆ ಹೋದ ಮಿಶನರಿಗಳು ಹಾಗೂ ಸಂತರು, ಈ ಧರ್ಮವನ್ನು ಹರಡಿದರು ಎಂದು ಅವು ತಿಳಿಸಿಕೊಟ್ಟಿವೆ. ಮತಾಂತರದ ಮೂಲಕ ಅನುಯಾಯಿಗಳನ್ನು ಪಡೆಯುವ ಯಾವುದೇ ಧರ್ಮ, ತನ್ನ ತತ್ವದ ಶಕ್ತಿ, ತನಗೆ ರಾಜಕಾರಣದಿಂದ ಸಿಗುವ ಬೆಂಬಲ ಹಾಗೂ ಜನರಿಂದ ಸಿಗುವ ಸ್ವಾಗತಗಳ ಮೂಲಕ ಹರಡುತ್ತಾ ಹೋಗುತ್ತದೆ. ಇಸ್ಲಾಂ, ಕ್ರೈಸ್ತ, ಬೌದ್ಧ ಧರ್ಮಗಳ ಚರಿತ್ರೆ ನೋಡಿದರೆ ಇದು ಸ್ಪಷ್ಟವಾಗುತ್ತದೆ. ವೀರಶೈವವೂ ಇದಕ್ಕೆ ಹೊರತಲ್ಲ. ಇದರಲ್ಲಿ ವಿಶೇಷ ಏನೂ ಇಲ್ಲ. ಕುತೂಹಲಕರವಾದುದು ಏನೆಂದರೆ, ಧರ್ಮವೊಂದು ತಾನು ಹುಟ್ಟಿದ ಭೌಗೋಳಿಕ ಸಾಮಾಜಿಕ - ರಾಜಕೀಯ ಸನ್ನಿ ವೇಶಗಳಿಂದ ದೂರಹೋಗಿ, ಬೇರೊಂದು ನಾಡಿನ ಸಮುದಾಯಗಳ ಮಡಿಲಲ್ಲಿ ಬಿದ್ದು, ಅವುಗಳ ಭಾಷೆ, ಧರ್ಮ, ಸಂಸ್ಕೃತಿ, ಧಾರ್ಮಿಕ-ಆರ್ಥಿಕ ಸಂದರ್ಭಗಳ ಒಳಗೆ ಬದುಕಬೇಕಾಗುವುದು; ಹಾಗೆ ಬದುಕುವಾಗ ಎದುರಿಸುವ ಸವಾಲು, ನಡೆಸುವ ಸಂಘರ್ಷ, ಮಾಡಿಕೊಳ್ಳುವ ರಾಜಿ, ಹಾಗೂ ಅಂತಿಮವಾಗಿ ರೂಪಾಂತರ ಪಡೆದುಕೊಳ್ಳುವುದು ಖಂಡಿತವಾಗಿಯೂ ಆಗಂತುಕ ಧರ್ಮ ತನ್ನ 'ಮೂಲ'ರೂಪವನ್ನು ಉಳಿಸಿಕೊಳ್ಳಲು ಹಾಗೂ ರೂಪಾಂತರಗೊಳ್ಳದೆ ಅದಕ್ಕೆ ಜೀವಿಸಲು ಸಾಧ್ಯವಾಗುವುದಿಲ್ಲ. ಸಹಜವಾಗಿಯೇ ಈ ಗತಿ ಇಸ್ಲಾಮಿಗೂ ಬಂದಿತು. ಇದೇ ಇಸ್ಲಾಮಿನ ಸ್ಥಳೀಕರಣ ಹಾಗೂ ಜಾನಪದೀಕರಣ. ತಮ್ಮ ಧರ್ಮವನ್ನು 'ಮೂಲ ರೂಪದಲ್ಲಿ, 'ಶುದ್ಧ'ರೀತಿಯಲ್ಲಿ ಇಡಬೇಕೆಂದು ಹಂಬಲಿಸುವ ಮೂಲಭೂತವಾದಿಗಳು ಇಲ್ಲವೆ ಶುದ್ಧೀಕರಣ ವಾದಿಗಳು, ಆಕ್ರೋಶದಿಂದ 'ಕಲಬೆರಕೆ' ಇಸ್ಲಾಂ, 'ಭ್ರಷ್ಟ' (currupt) ಇಸ್ಲಾಂ ಎಂದು ಕರೆಯುವುದು ಇದನ್ನೇ. ಸಮಸ್ಯೆ ಇಲ್ಲಿಂದ ಶುರುವಾಗುತ್ತದೆ. ಮತೀಯವಾಗಿ ಆಲೋಚಿಸುವ ಚರಿತ್ರೆಕಾರರೂ ಮತಾತೀತವಾಗಿ ಆಲೋಚಿಸಬೇಕಾದ ಸಂಸ್ಕೃತಿ ಚಿಂತಕರೂ ಎದುರುಬದುರು ಆಗಬೇಕಾಗಿರುವುದು ಕೂಡ ಇಲ್ಲಿಂದ. ಧರ್ಮಗಳು ಏಕರೂಪಿಯಾಗಿರುತ್ತವೆ ಎಂದು ಸಾಮಾನ್ಯವಾಗಿ ನಂಬಿಸಲಾಗಿದೆ. ಇಸ್ಲಾಮ್ ಪಡೆದಿರುವ ಮಲೇಶಿಯನ್ ರೂಪಾಂತರ, ಆಫ್ರಿಕನ್ ರೂಪಾಂತರ, ಭಾರತೀಯ ರೂಪಾಂತರಗಳು, ತಾನು ಹುಟ್ಟಿದ ಅರಬ್ ಸ್ಥಾನದಲ್ಲಿ ಇಸ್ಲಾಂ ಪಡೆದಿರುವ ರೂಪಕ್ಕಿಂತ ಭಿನ್ನವಾದವು. 'ಭಾರತೀಯ ರೂಪಾಂತರ' ಎನ್ನುವಾಗಲೂ ಅದು ಏಕಮಾದರಿಯದಲ್ಲ. ಸಿಂಧ್ ಅಥವಾ ಬಂಗಾಳಿ ಮುಸ್ಲಿಮರು, ತಮ್ಮ ಪ್ರದೇಶಗಳ ಇತರೆ ಸಮುದಾಯಗಳ ಜತೆಕೂಡಿ ರೂಪಿಸಿಕೊಂಡಿರುವ 'ಇಸ್ಲಾಮ್', ಕರ್ನಾಟಕದ ಅಥವಾ ಕೇರಳದ ಮುಸ್ಲಿಮರು ಕಟ್ಟಿಕೊಂಡಿರುವ ಇಸ್ಲಾಮಿಗಿಂತ ಭಿನ್ನವಾದುದು. ಈ ಭಿನ್ನತೆಗಳು ಇನ್ನೂ ಹಲವುಗಳಾಗಿ ಕಾಣುತ್ತಾ ಹೋಗುತ್ತವೆ. ಇವುಗಳಲ್ಲಿ ಮುದಗಲ್ಲಿನ ರೂಪವು ಒಂದು ಘಟಕವಾಗಿದೆ. ಈ ರೂಪಾಂತರಗಳನ್ನು ಅಂತಿಮವಾಗಿ ನಿರ್ದೇಶಿಸುವುದು 'ಧರ್ಮ'ವನ್ನು ನಂಬಿಯೂ ನಿರಂಕುಶಮತಿಯಾಗಿ ಬಾಳುವ ಸಮುದಾಯಗಳ ಶಕ್ತಿಯೇ ತಮ್ಮ ಸ್ಥಳೀಯ ಸಾಮಾಜಿಕ - ಆರ್ಥಿಕ - ರಾಜಕೀಯ ಸ್ಥಿತಿಗತಿಗಳಿಂದ ಪ್ರೇರಿತವಾಗಿ ಅವು ಪ್ರಕಟಿಸುವ ಮತಾತೀತವಾದ

ಸೃಜನಶೀಲತೆ. ಸಮುದಾಯಗಳು ಯಾವಾಗಲೂ ಚರಿತ್ರೆಯನ್ನು ಪುರಾಣೀಕರಿಸುತ್ತವೆ. ದೈವಗಳನ್ನು ಮಾನವೀಕರಿಸುತ್ತವೆ. ಬೇರೆಕಾಲದ ಕಥೆಯ ಸೆರಗನ್ನು ಎಳೆದು ಸಮಕಾಲೀನಗೊಳಿಸುತ್ತವೆ ಹಾಗೂ ಜಾಗತಿಕವಾದುದನ್ನು ಸ್ಥಳೀಕರಿಸುತ್ತವೆ. ಈ ಸ್ಥಳೀಕೃತ 'ಸಾಂಸ್ಕೃತಿಕ' ರೂಪಗಳಿಗೆ 'ಜಾಗತಿಕ' ಇಸ್ಲಾಮಿನ ಸಂಬಂಧವಿರುವುದಿಲ್ಲವೆ ಎಂದರೆ ಇರುತ್ತದೆ ಹಾಗೂ ಇರುವುದಿಲ್ಲ. ನೆಪಮಾತ್ರದ ಸಂಬಂಧ ಹಂದರದ ಮಟ್ಟಿಗೆ ಇರುತ್ತದೆ. ಆದರೆ ನೆಪದ ಹಂದರದ ಮೇಲೆ ಹಬ್ಬಿ ಹೂಹಣ್ಣು ಬಿಡುವುದು ಸ್ವತಂತ್ರವಾದ ಬಳ್ಳಿಯೇ. ಮುದಗಲ್ಲಿನ ಮೊಹರಂ ಹೀಗೆ ಬಿಟ್ಟ ಒಂದು 'ಸ್ವತಂತ್ರ' ಹೂ. 'ಮುದುಗಲ್ಲ ಸ್ವಾಮಿ' ದರಗಾಕ್ಕೆ ಯಾವರೀತಿ ಹರಕೆ ಮಾಡಿಕೊಳ್ಳಬೇಕೆಂದು ನಿರ್ದೇಶಿಸುವ ಅರಬ್ಬಿನ ಶಾಸನಗಳು ಯಾವುವು ಇಲ್ಲ. ಒಂದು ಗುಂಪು ಕೊಂಡ ಹಾಯುತ್ತಿರುತ್ತದೆ ಅಥವಾ ದೀಡ್ ನಮಸ್ಕಾರ ಹಾಕುತ್ತಿರುತ್ತದೆ. ಮತ್ತೊಂದು ಹೆಜ್ಜೆ ಮೇಳ ಕುಣಿಯುತ್ತಿರುತ್ತದೆ. ಇನ್ನೊಂದು ರಿವಾಯತಗಳನ್ನು ಹಾಡುತ್ತಿರುತ್ತದೆ; ಕೆಲವರು ಕೊಬ್ಬರಿ ಪಿಲಾಲನ್ನು ಹಿಡಿದು ಪಂಜಿನ ಸೇವೆ, ಮಾಡುತ್ತಿದ್ದರೆ, ಕೆಲವರು ಬೇಟೆಕೊಟ್ಟು 'ಕಂದೂರಿ' ನಡೆಸುತ್ತಿರುತ್ತಾರೆ. ತಮಗೆ ತಾವೇ ಸ್ವತಂತ್ರವಾದ, ಆದರೆ ಹಿಂದಿನಿಂದ ಬಂದ ರಿವಾಜುಗಳಿಗೆ ಬದ್ಧವಾದ ಅಪಾರ ಚಟುವಟಿಕೆಗಳ ಒಂದು ತಾಣವದು. ಸೂಫಿಸಂತರ ಉರುಸುಗಳಲ್ಲೂ ಹೀಗೇ ನಡೆಯುತ್ತಿರುತ್ತದೆ. ಇದನ್ನು 'ಮುಸ್ಲಿಂ ಜಾನಪದ' ಎಂದು ಕರೆದರೆ ಏನು ಹೇಳಿದಂತಾಗುತ್ತದೆ?

ಅರಬ್ ಇಸ್ಲಾಮಿನ ಮೂಲರೂಪವನ್ನು, ಎಲ್ಲ ಕಾಲ-ದೇಶ-ಸಂದರ್ಭಗಳಲ್ಲೂ ಕಾಣಬಯಸುವುದು, ಇಸ್ಲಾಮಿನ ಹೆಸರಿನಲ್ಲಿ ಹುಟ್ಟಿಕೊಂಡಿರುವ 'ಭ್ರಷ್ಟ' (ಜಾನಪದ) ರೂಪಗಳನ್ನು ನಾಶಮಾಡಬೇಕೆನ್ನುವುದು, ಅಸಾಧ್ಯ ಅಥವಾ ತಪ್ಪು ಚಿಂತನೆಯಾಗಿರಬಹುದು. ಇಂಥ ಚಿಂತನೆಗಳ ಚಾರಿತ್ರಿಕ ವ್ಯಂಗ್ಯವೆಂದರೆ, ಈಗ 'ಶಿಷ್ಟ' ಅಥವಾ 'ಪ್ರತಿಷ್ಠಿತ' ಧರ್ಮ ಎನಿಸಿರುವ ಇಸ್ಲಾಮ್, ಸ್ವತಃ ಹುಟ್ಟಿದ್ದೇ ಜನಪದಗಳ ಗರ್ಭದಲ್ಲಿ. ಅರಬ್ ಬುಡಕಟ್ಟುಗಳ ನಿರಂತರ ಸಂಘರ್ಷಗಳ ನಡುವೆ, ಅವುಗಳ ಚಹರೆಗಳನ್ನು ತೊಡೆದು ನಿರಾಕಾರವಾದಿ ಇಸ್ಲಾಂ ಹುಟ್ಟಿತು ನಿಜ. ಆದರೆ ಬುಡಕಟ್ಟು ಲಕ್ಷಣಗಳನ್ನು ಪೂರಾ ಬಿಟ್ಟುಕೊಡಲು ಅದಕ್ಕೆ ಆಗಲಿಲ್ಲ. ಬುಡಕಟ್ಟು ದೈವಗಳನ್ನಿಡುತ್ತಿದ್ದ ದೇವಾಲಯವಾಗಿದ್ದ ಕಾಬಾಕಟ್ಟಡಕ್ಕೆ, ಜೀವನದಲ್ಲಿ ಒಮ್ಮೆ ಯಾತ್ರೆ (ಹಜ್) ಮಾಡುವುದನ್ನು ಅದು ತನ್ನ ಮೂಲಭೂತ ತತ್ವವಾಗಿಸಿರುವುದು ಇದಕ್ಕೆ ಉದಾಹರಣೆ. ಇಸ್ಲಾಮಿಗೆ ತಾತ್ವಿಕವಾಗಿ ವಿರುದ್ಧವಾದ ಆಚರಣೆಗಳು, ಅರಬಸ್ಥಾನದಲ್ಲೇ ಮೂಡತೊಡಗಿದವು. ಹೀಗಿರುವಾಗ ದೂರದೇಶವೊಂದರಲ್ಲಿ ಬೆಳೆಯಬೇಕಾದ ಅದಕ್ಕೆ ಜನಪದೀಕರಣವಾಗಲಿ, ದೇಶೀ ಆಯಾಮಗಳಾಗಲಿ ಒದಗುವುದು ಕೇವಲ ಸಹಜವಾಗಿದೆ. ಪ್ರಶ್ನೆಯೆಂದರೆ, ಹೊಸದಾಗಿ ಒಂದು ಮತ ಅಥವಾ ಐಡಿಯಾಲಜಿ ಬಂದಾಗ, ಅದನ್ನು ಪಡೆವ ಜನ ಬದಲಾಗುತ್ತಾರೋ ಅಥವಾ ಆ ಮತ ಅಥವಾ ತತ್ವವನ್ನು ಜನವೇ ಬದಲಾಯಿಸಿ ಬಿಡುತ್ತಾರೋ ಎಂಬುದು. ಎರಡೂ ಸಾಧ್ಯತೆಗಳಲ್ಲಿ ಸತ್ಯವಿದೆ. ಆದರೆ ಮೂಲ ಭೂತವಾದಿಗಳು ಹಾಗೂ ಮತೀಯವಾದಿ ಚರಿತ್ರಕಾರರು ಮೊದಲ ಸತ್ಯವನ್ನೇ



ನಂಬುತ್ತಾರೆ. ಕೋಲಾಹಲವಿರುವುದು ಎರಡನೇ ಸಾಧ್ಯತೆಯೊಳಗಿನ ಕಟುಸತ್ಯದಲ್ಲಿ. ಎರಡನೆಯ ಸತ್ಯವನ್ನು ನಂಬುವುದು ಎಂದರೆ, ಜನತೆಯ ಮೂಲಕ ಚರಿತ್ರೆಯನ್ನು ನೋಡುವುದು, ಅವರ ಸೃಜನಶೀಲತೆಯನ್ನು ಗೌರವಿಸುವುದು, ಚಲನಶೀಲತೆಯನ್ನು ಒಪ್ಪುವುದು ಹಾಗೂ ಚಲನೆಯ ಹೊತ್ತಿನಲ್ಲಿ ಸಂಭವಿಸಿರುವ ಸಂಘರ್ಷಗಳನ್ನು ಗಮನಿಸುವ ಸೂಕ್ಷ್ಮತೆಯನ್ನು ಉಳಿಸಿಕೊಳ್ಳುವುದು. ಮತೀಯ ಪರಿಭಾಷೆಯಲ್ಲಿ ಜಾನಪದವನ್ನು ಹೆಸರಿಸತೊಡಗಿದರೆ, ಈ ಸೂಕ್ಷ್ಮತೆ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ.

ವಾಸ್ತವವಾಗಿ ಮತಧರ್ಮಗಳು ಎಲ್ಲಿರುತ್ತವೆ? ಇವುಗಳ ಒಂದು ಮುಖ (ಥಿಯರಿಯಾಗಿ) ಶಾಸ್ತ್ರಗಂಥಗಳಲ್ಲಿ, ಅವುಗಳನ್ನು ಹೇಳುವ ಶಾಸ್ತ್ರಕಾರರ ಪ್ರವಚನಗಳಲ್ಲಿ ಇರುತ್ತದೆ, ಇನ್ನೊಂದು ಮುಖ ಈ ಧರ್ಮವನ್ನು ನಿಜವಾಗಿಯೂ ತಮ್ಮ ದಿನನಿತ್ಯ ಬಾಳುವೆಯಲ್ಲಿ ಆಚರಿಸುತ್ತಿರುವ ಜನರಲ್ಲಿ ಇರುತ್ತದೆ. ಈ ಎರಡು ಮುಖಗಳ ನಡುವೆ ಸಾಮರಸ್ಯವಿದ್ದಾಗ ಸಮಸ್ಯೆಯಿಲ್ಲ. ಆದರೆ ಸಾಮಾನ್ಯವಾಗಿ ಇವುಗಳ ನಡುವೆ ಎಳೆದಾಟಗಳ ಬಿಗಿತ ಇರುತ್ತದೆ. ಇದು ಮೂಲಭೂತವಾದಿಗಳ ಮತ್ತು ಜನಸಮುದಾಯಗಳ ನಡುವಣ ಘರ್ಷಣೆ ಕೂಡ ಆಗಿರುತ್ತದೆ. ಈ ಘರ್ಷಣೆಯ ಒಳಗೆ ಜನ, ತಮ್ಮ ನಂಬಿಕೆ, ಸಂಕಷ್ಟ, ಹಂಬಲ, ಪೂರ್ವಗ್ರಹ, ಜೀವಂತಿಕೆಗಳನ್ನೆಲ್ಲ ಧಾರೆಯೆರೆದು ಜನಪದ ಪ್ರತಿರೂಪಗಳನ್ನು ಸೃಷ್ಟಿಸುತ್ತಾರೆ. ಧಾರ್ಮಿಕ ಥಿಯರಿಗಳು ಒಪ್ಪಲಿ ಬಿಡಲಿ, ಈ ರೂಪಗಳು ತಮ್ಮ ಪ್ರಾದೇಶಿಕ ಸಂಸ್ಕೃತಿಯೊಳಗಿಂದ ಮೈತಳೆದು ಬರುತ್ತವೆ. ಅಪಾರವಾದ ಈ ರೂಪಗಳು ವಾಸ್ತವದಲ್ಲಿ ಒಂದು ಧರ್ಮವನ್ನು ಸಮೃದ್ಧಗೊಳಿಸುವಂತಿರುತ್ತವೆ. ಆಫ್ರಿಕ ಭಾರತದಂಥ ಬಹುಭಾಷಿಕ ಬಹುಧಾರ್ಮಿಕ, ಬಹುಸಾಂಸ್ಕೃತಿಕ ಭೂಮಿಗಳಲ್ಲಿ ಇಸ್ಲಾಮಿಗೆ ಜಾನಪದ ಆಯಾಮಗಳು ಹೆಚ್ಚುಲಭಿಸಿದವು. ಈ ಆಯಾಮಗಳ ವೈವಿಧ್ಯವು ತಾತ್ವಿಕವಾಗಿ ಬಹುಕೇಂದ್ರಿತ ಕೂಡ ಆಗಿಬಿಡುತ್ತದೆ. ಸನಾತನವಾದ ಭಯಪಡುವುದು ಇದಕ್ಕಾಗಿ. ಹೀಗಾಗಿ ಅದು ಈ 'ಜನಪದ' ರೂಪಗಳನ್ನು ತನ್ನವು ಎಂಬ ಮಮಕಾರದ ಹಕ್ಕಿನಲ್ಲಿ ಬಾಚಿಕೊಳ್ಳುವುದಿಲ್ಲ. ಹಾದರದ ಕೂಸುಗಳಂತೆ ತಿರಸ್ಕಾರದಿಂದ ನೋಡುತ್ತದೆ.

'ಹಿಂದೂ' 'ಮುಸ್ಲಿಂ' ಮುಂತಾದ ಧಾರ್ಮಿಕ ಪರಿಭಾಷೆಯಲ್ಲಿ ಸಮುದಾಯಗಳ ಸೃಷ್ಟಿಯಾದ ಜನಪದ ರೂಪಗಳನ್ನು ಗುರುತಿಸುವುದರ ಮುಖ್ಯ ಸಮಸ್ಯೆ ಅದರ ಪರಿಭಾಷೆಯಲ್ಲೇ ಅಡಗಿದೆ. ಈ ಪರಿಭಾಷೆ ಮತೀಯವಾದುದು ಕೂಡ; ೧೮, ೧೯ನೇ ತಮಾನಗಳ ಚಾರಿತ್ರಿಕ ಇಕ್ಕಟ್ಟಿನಲ್ಲಿ ಮತೀಯತೆ ಪಡೆದ ಈ ರಾಜಕೀಯ ಪರಿಭಾಷೆಯು, ಚರಿತ್ರೆಯನ್ನು ಅವಲಂಬಿಸಿರುವ ಎಲ್ಲ ಶಾಸ್ತ್ರಗಳಿಗೂ ಹಬ್ಬಿಬಿಟ್ಟಿತು. ಜನಸಮುದಾಯಗಳನ್ನು, ಅವರ ಭಾಷೆ ಸಂಸ್ಕೃತಿ ಕಲೆ ಎಲ್ಲವನ್ನು, ಹಿಂದು-ಮುಸ್ಲಿಂ ಎಂಬ ಕಣ್ಣಲ್ಲಿ ಕತ್ತರಿಸಿನೋಡಲು ಕಲಿಸಿತು. 'ಅವರು' ಮತ್ತು 'ನಾವು', ಹೊರಗಿನದು ಮತ್ತು ಒಳಗಿರುವ 'ನಮ್ಮದು' ಎಂಬ ದಾಯಾದಿ ನುಡಿಗಟ್ಟಲ್ಲಿ ತರ್ಕಮಾಡುವ ಈ ಪರಿಭಾಷೆಯನ್ನು, ಸಂಸ್ಕೃತಿ ಚಿಂತಕರು

ಅಪಾಯದ ಅರಿವಿಲ್ಲದೆ ಸ್ವೀಕರಿಸಿಬಿಟ್ಟರು. ಶಂಬಾ ಅವರಂಥ ನಿರ್ಮತೀಯ ಚಿಂತಕರೂ ಬಳಸುವಷ್ಟು ಇದರ ವ್ಯಾಪಕತೆಯಿತ್ತು. ಈ ಪರಿಭಾಷೆಯನ್ನು ಎಚ್ಚರವಿಲ್ಲದೆ ಬಳಸುವುದು ಎಂದರೆ ಇದನ್ನು ಹುಟ್ಟಿಸಿದ ಐಡಿಯಾಲಜಿಯ ಬಲೆಯಲ್ಲಿ ಬಿದ್ದಂತೆಯೇ.

ಧಾರ್ಮಿಕವಾಗಿ ವಿಶಿಷ್ಟವಾದುದು ಜಾನಪದದಲ್ಲಿ ಇರುವುದೇ ಇಲ್ಲವೆ? 'ಕರ್ನಾಟಕದ ಮುಸ್ಲಿಮರು, ಉರ್ದು (ದಖನಿ) ಭಾಷೆಯಲ್ಲಿ ಕಟ್ಟಿಕೊಂಡಿರುವ, ಅರಬ್ಬೀದೇಶದ ಪುರಾಣ-ಚರಿತ್ರೆಗಳ ವಸ್ತುವುಳ್ಳ ಕಥೆ, ಹಾಡುಗಳು, ಇಸ್ಲಾಮಿನ ಪುರಾಣಪುರುಷರಿಗೆ ಸಂಬಂಧಿಸಿದಂತೆ ಮಾಡುವ ಆಚರಣೆಗಳು 'ಮುಸ್ಲಿಂ ಜಾನಪದ' ಅಲ್ಲವೆ? ಅನಿಸಬಹುದು. ಆದರೆ ಇವು ಕೂಡ, ನೇರವಾಗಿ ಆಮದುಮಾಡಿಕೊಂಡ ರೂಪ ಮತ್ತು ಚಿಂತನೆಗಳಿಂದ, ತಮಗೆ ತಾವೇ ಪ್ರತ್ಯೇಕವಾಗಿ ರೂಪುಗೊಂಡವಲ್ಲ. ಈ ಸಾಹಿತ್ಯ - ಆಚರಣೆಗಳ ಭಾಷಿಕಮಾಧ್ಯಮವಾದ ಉರ್ದು ಕೂಡ ದೇಶೀಭಾಷೆಗಳ ಸಂಗಾಟದಿಂದ ಹುಟ್ಟಿದ ಕೂಸಾಗಿರುವುದರಿಂದ, ಅದು ಕೇವಲ ಧಾರ್ಮಿಕ ವಿಶಿಷ್ಟವಾಗಿರಲು ಸಾಧ್ಯವಿಲ್ಲ. ಕೊನೆಗೆ ಈ ಭಾಷೆ ಬಳಸುವ ಧಾರ್ಮಿಕ ಸಮುದಾಯ ಮತಾಂತರದ ಮೂಲಕ ಹೊಸಧರ್ಮ ಪಡೆದರೂ ದೇಶೀಯ ಸಂಸ್ಕೃತಿಯ ಒಳಗೆ ಇಟ್ಟುಕೊಂಡ ಬೇರುಗಳು ಕಡಿದುಕೊಂಡದ್ದಲ್ಲ. ಮುಸ್ಲಿಮರಿಗೆ ಧಾರ್ಮಿಕ ವಿಶಿಷ್ಟವಾದ ಭಾಷೆಯೂ ಇಲ್ಲದ ಕಡೆ ಈ ಸಮಸ್ಯೆ ಇನ್ನೂ ಸ್ವಾರಸ್ಯಕರವಾಗಿದೆ. ಮಾಪ್ಳಾಮುಸ್ಲಿಮರ 'ಪಾಟ್ಟು' ಎಂಬ ಹಾಡುಸಂಪ್ರದಾಯವನ್ನು ಗಮನಿಸಬೇಕು. ಅರಬ್ಬೀ ಇಸ್ಲಾಮಿನ ಪುರಾಣ - ಚರಿತ್ರೆಗಳು ತುಂಬಿಹೋಗಿರುವ 'ಪಾಟ್ಟು' ರೂಪ ಕೇರಳ ಸಂಸ್ಕೃತಿಯಿಂದ ಮೈವೆತ್ತಂಥದು. ದಖನಿಯ 'ಚಕ್ಕೀನಾಮೆ'ಗಳು ಕೂಡ ನಮ್ಮ 'ಬೀಸುವಹಾಡು'ಗಳ ಪ್ರೇರಣೆಯುಳ್ಳವು. ಏನು ಮಾಡಿದರೂ ಮುಸ್ಲಿಂತನವೆಂಬುದು ಪ್ರತ್ಯೇಕವಾಗಿ ಹುಟ್ಟಲಾರದ ಒಗೆತನವಿದು. ಹೀಗೆ ಸಾಮಾಜಿಕವಾಗಿ ಈ ಧಾರ್ಮಿಕ ಸಮುದಾಯಗಳು ಇರುವ ರೀತಿಗೂ ಇವುಗಳ ನಂಬಿಕೆ, ಆಚರಣೆ, ಮತ್ತು ಕಲೆ - ಸಾಹಿತ್ಯಗಳಿಗೂ ಗಾಢವಾದ ಒಳನಂಟುಗಳಿವೆ.

'ಜನಪದ ಸಮುದಾಯ' ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಮತೀಯ ಭಾವನೆಗಳಿಗೆ ಅತೀತವಾಗಿರುತ್ತದೆಯೇ? ಎಂಬ ಪ್ರಶ್ನೆಯನ್ನು ಎತ್ತಬೇಕು. ವಿಚಿತ್ರವಾದ ಜಾತಿ, ಮತಗಳ ನಿಷ್ಠೆಯನ್ನು ತಮ್ಮ ಸಾಮಾಜಿಕ ಬದುಕಲ್ಲಿ ಕಾಯ್ದುಕೊಳ್ಳುವ ಈ ಸಮುದಾಯಗಳು, ಆಧುನಿಕ ಅರ್ಥದಲ್ಲಿ 'ಸೆಕ್ಯುಲರ್' ಅಲ್ಲ ಹಾಗಿದ್ದರೂ ಧಾರ್ಮಿಕ - ಅನುಭಾವಿಕ ಆಚರಣೆಗಳ ಸಂದರ್ಭದಲ್ಲಿ ಅವು ಒಂದಾಗಿ ಬೆರೆಯುವ ಪರಿಯೆಂತು? ಮೊಹರಂನಲ್ಲಿಯಾಗಲಿ, ಸಂತರ ಉರುಸು ಅಥವಾ ಊರದೈವದ ಜಾತ್ರೆಗಳಲ್ಲಾಗಲಿ, ಬಹುಮಟ್ಟಿಗೆ ಎಲ್ಲಾ ಜಾತಿ ಮತಗಳ ಜನರು ಒಟ್ಟಿಗೆ ಸೇರುವುದು ನಿಜ. ಆದರೆ ಸೂಕ್ಷ್ಮವಾಗಿ ನೋಡಿದರೆ, ಈ ಸೇರಾಟದಲ್ಲಿ ಸ್ತ್ರೀಯರು, ಕೆಳಜಾತಿಯವರು ಹಾಗೂ ಆರ್ಥಿಕವಾಗಿ ಅಭದ್ರವಾಗಿರುವವರು, ಒಟ್ಟಿನಲ್ಲಿ ದೈಹಿಕಶ್ರಮವನ್ನು ಅವಲಂಬಿಸಿ ಬಾಳ್ವೆಮಾಡುವ ವರ್ಗದವರು, ಪ್ರಧಾನವಾಗಿರುವುದು ತಿಳಿಯುತ್ತದೆ. ಈ ವರ್ಗದ ಆರ್ಥಿಕ - ಸಾಮಾಜಿಕ



ಬಿಕ್ಕಟ್ಟುಗಳೇ ದೈವದ ನೆಪದಲ್ಲಿ ಸಮುದಾಯವನ್ನು ಮತಾತೀತವಾಗಿ ಕೂಡಿಸಿಬಿಟ್ಟಿದೆ ಅನಿಸುತ್ತದೆ. ಈ ಮತಾತೀತ ಸಮುದಾಯವು ಸೂಫಿಸಂತರ ಮತ್ತು ಮೊಹರಂ ಕಥೆಯ ನಾಯಕರ ಹೆಸರು ಇಟ್ಟುಕೊಳ್ಳುವುದನ್ನು ಅಥವಾ ಹರಕೆಹೊರುವ ಮತ್ತು ತೀರಿಸುವ ವಿಧಾನಗಳನ್ನು ಗಮನಿಸಬೇಕು. ಕರ್ಬಲಾ ಕದನದಲ್ಲಿ ಹುಲಿಯಂತೆ ಕಾದಿದ ವೀರರ ನೆನಪಿಗೆ ಬಹುಶಃ ಹುಲಿವೇಷ ಹಾಕುವ ಆಚರಣೆ ಬಂದಿರಬಹುದು. ಆದರೆ ಬಳ್ಳಾರಿ ಸೀಮೆಯಲ್ಲಿ ದಲಿತರು ಮತ್ತು ಬೇಡರು ತಮ್ಮ ಮಕ್ಕಳಿಗೆ ಕಾಯಿಲೆಯಾದಾಗ ಬೇಸಾದರೆ ಹುಲಿವೇಷ ಹಾಕಿಸುತ್ತೇನೆ' ಎಂದು ಹರಸಿಕೊಳ್ಳುತ್ತಾರೆ. ಹೀಗೆ ಹುಲಿಕುಣಿತವು ಬರಿಯ 'ಧಾರ್ಮಿಕ' ಅಥವಾ ಬರಿಯ 'ಕಲೆ' ಅಲ್ಲ. ಅದು ಒಂದು ಕುಟುಂಬ ತನ್ನ ಕಷ್ಟದ ದಿನಗಳಲ್ಲಿ ಮಾಡಿಕೊಂಡ ಸಂಕಲ್ಪ ತೀರಿಸುತ್ತಿರುವ ಸಂಗತಿ ಕೂಡ. ದುಡಿಯುವ ವರ್ಗ ತನ್ನ ಒತ್ತಡಗಳ ಕಾರಣದಿಂದಲೇ, ಮಾನಸಿಕ ಬಿಡುಗಡೆ ಪಡೆಯಲು, ಉಲ್ಲಾಸ ಪಡೆಯಲು, ಗಾಢಶ್ರದ್ಧೆಯನ್ನು ತೋರಲು ಏಕಕಾಲದಲ್ಲಿ ಕ್ರಿಯೇಟಿವ್ ಆಗುವ ಸಂದರ್ಭವಿದಾಗಿದೆ. ಯಾವುದನ್ನು ಜನಪದ ಸಾಹಿತ್ಯ, ಕಲೆ, ಆಚರಣೆ ಎನ್ನಲಾಗುತ್ತದೆಯೊ, ಆ ಇಡೀ ಲೋಕವನ್ನು ಜೀವಂತವಿಟ್ಟಿರುವುದೇ ಈ ವರ್ಗ ಮತ್ತು ಅದರ ಆರ್ಥಿಕ ಅದ ಸಾಮಾಜಿಕ ಪರಿಸ್ಥಿತಿಗಳು. ಹೀಗಾಗಿ ಈ 'ಜಾನಪದ'ವನ್ನು ಧಾರ್ಮಿಕ ಪರಿಭಾಷೆಯಲ್ಲಿ ಹೆಸರಿಟ್ಟು ಕರೆಯುವುದಕ್ಕೆ ಹಿಂಜರಿಕೆ ಹುಟ್ಟತೊಡಗುತ್ತದೆ.

ಕಳೆದ ಮೂರು ಶತಮಾನಗಳಿಂದ ಕನ್ನಡದಲ್ಲಿ ಹುಟ್ಟಿ ಬೆಳೆದುಕೊಂಡು ಬಂದಿರುವ ಮೌಖಿಕ ಸಾಹಿತ್ಯವನ್ನು ವಿಶ್ಲೇಷಿಸಿದರೆ, 'ಮುಸ್ಲಿಂ ಜಾನಪದ'ದ ಪರಿಕಲ್ಪನಾತ್ಮಕ ಸಮಸ್ಯೆಗಳು ಅರಿವಾಗುತ್ತವೆ. ಈ 'ಸಾಹಿತ್ಯ' ರಚಿಸಿದ ಜನಪದ ಕವಿಗಳು ಲಾವಣಿಕಾರರು, ತತ್ವಪದಕಾರರು, ರಿವಾಯತ್ ಪದಕಾರರು, ನಟರು ಗಾಯಕರು, ಎಲ್ಲವೂ ಆಗಿದ್ದರು; ಸ್ವತಃ ಯಾವುದೊ ಸೂಫಿಸಂತನ ಅಥವಾ ತಮ್ಮ ಊರದೈವದ ಭಕ್ತರಾಗಿದ್ದರು. ಇವರು 'ಸಾಮಾಜಿಕ' ಎನ್ನಬಹುದಾದ 'ಸೆಕ್ಯುಲರ್' ವಸ್ತುವನ್ನು ಕುರಿತು ಪದ ಕಟ್ಟಿಹಾಡಿದಾಗ 'ಮುಸ್ಲಿಂ' 'ಹಿಂದು' ಪ್ರಶ್ನೆ ಬರುವುದಿಲ್ಲ. ಕಲ್ಬುರ್ಗಿ ಅಂಬಾದಾಸನು ದೇವಿಯನ್ನು ಕುರಿತು ಕಲ್ಗಿ ಹಾಡಿದಾಗ, ಸಾವಳಗಿ ಮಹಮ್ಮದನು ರಿವಾಯತ ಪದಗಳನ್ನು ಕಟ್ಟಿಹಾಡಿದಾಗಲೂ ಇದರ ತೊಡಕು ಬಹಳ ಇಲ್ಲ. ಅವನ ಮತಕ್ಕೆ ಸಂಬಂಧಿಸಿದಂತೆ ಅವನ್ನು ಹಾಡಿದ್ದಾನೆ ಎಂದು ಸಮಜಾಯಿಶಿ ಕೊಡಬಹುದು. ವಾಸ್ತವ ಏನೆಂದರೆ, ನೂರಾರು ಸಂಖ್ಯೆಯಲ್ಲಿರುವ 'ಮುಸ್ಲಿಂ' ಕವಿಗಳು 'ಹಿಂದೂ' ದೇವದೇವಿಯರ ಅಂಕಿತವಿಟ್ಟುಕೊಂಡು, 'ಹಿಂದೂ' ಪುರಾಣದ ಕಥೆಗಳನ್ನು ಹಾಡಿಬಿಟ್ಟಿದ್ದಾರೆ; ಹಾಗೆಯೇ ಮತದಿಂದ 'ಹಿಂದೂ' ಎಂದು ಕರೆಯಲಾಗುವ ಕವಿಗಳು ಸೂಫಿಸಂತರ ಅಂಕಿತವಿಟ್ಟುಕೊಂಡು ಕರ್ಬಲ ಪದಗಳನ್ನು ಇಸ್ಲಾಮಿಕ್ ಪುರಾಣಗಳನ್ನುಳ್ಳ ಸವಾಲ್-ಜವಾಬ್ ಪದಗಳನ್ನು ಕಟ್ಟಿ, ಹಾಡಿದ್ದಾರೆ. ಹಾಡುವ ಕವಿ 'ಮುಸ್ಲಿಂ' ಎಂದರೆ ವಸ್ತು 'ಅನ್ಯ' ಧರ್ಮದ್ದು. ಹಾಡಿನ ವಸ್ತು 'ಇಸ್ಲಾಮಿಕ್' ಎಂದರೆ ಹಾಡುತ್ತಿರುವ ಕವಿ ಲೋಕದ ಕಣ್ಣಲ್ಲಿ 'ಹಿಂದೂ' ಅನಿಸಿಕೊಂಡವನು. ಇವರ ಹಾಡುಗಳನ್ನು,

ಉರುಸು-ಜಾತ್ರೆ ಹಬ್ಬಗಳಲ್ಲಿ ಕೇಳುವ ಸಮುದಾಯ ಕೂಡ ಕೇವಲ ಒಂದು ಮತಕ್ಕೆ ಸಂಬಂಧಿಸಿದ್ದಲ್ಲ. ಹಾಡುವ ಕವಿಯಾಗಲಿ, ಕೇಳುವ ಸಮುದಾಯವಾಗಲಿ, ಈ ಪರಂಪರೆಯನ್ನು ಮುಂದುವರೆಸಿಕೊಂಡು ಬರುವ ಶಿಷ್ಯರಾಗಲಿ, ಯಾರೂ ಇವನ್ನು ಒಂದು ಧರ್ಮಕ್ಕೆ ಸಂಬಂಧಿಸಿದ್ದೆಂದು ಭಾವಿಸಿಲ್ಲ. ಕಡಕೋಳಮಡಿವಾಳಪ್ಪನ ಶಿಷ್ಯನಾದ ಮೋಟ್ನಳ್ಳಿ ಹಸನಸಾಬನಿಗೂ, ಗೋವಿಂದಭಟ್ಟನಾದ ಶಿಷ್ಯನಾದ ಶರೀಫನಿಗೂ ಈ ಸಂಕಟ ಎದುರಾಗಲಿಲ್ಲ. ಹೀಗಿರುವಾಗ ಈ ಸಾಹಿತ್ಯವನ್ನು 'ಮುಸ್ಲಿಂ ಜಾನಪದ' ಎಂದು ಕರೆದುಬಿಟ್ಟರೆ ಸರಳೀಕರಿಸಿದಂತಾಗುತ್ತದೆ.

ಒಂದು ನಿರ್ದಿಷ್ಟ ಧರ್ಮಕ್ಕೆ ಸಂಬಂಧಿಸಿದ್ದನ್ನು ಮತ್ತೊಂದು ಧರ್ಮದವರು ಸ್ವೀಕರಿಸಿದಾಗ ಸಾಮಾನ್ಯವಾಗಿ ಅದನ್ನು 'ಸಾಮರಸ್ಯ' ಎಂದು ಬಣ್ಣಿಸಲಾಗುತ್ತದೆ. ಈ ದೃಷ್ಟಿಕೋನವು ತುಂಬ ಜನಪ್ರಿಯವಾಗಿದೆ. ಈ ಹೊತ್ತು 'ಹಿಂದೂ-ಮುಸ್ಲಿಂ' ಘರ್ಷಣೆಗಳು ಹೆಚ್ಚಿರುವುದರಿಂದ, 'ಹಿಂದೂ-ಮುಸ್ಲಿಂ' ಎಂಬ ಸಾಮರಸ್ಯಕ್ಕೆ ಸಾಕಷ್ಟು ಬೇಡಿಕೆ ಕೂಡ ಇದೆ. ಮೂಲತಃ ಎರಡು ಧಾರ್ಮಿಕ ಸಂಗತಿಗಳು ಬೇರೆಬೇರೆ ಎಂದು ತಿಳಿಯುವುದು ಮತ್ತು ಅವು ಬೆರೆತಾಗ ವಿಸ್ಮಯ ಪಡುವುದು ಸಾಮರಸ್ಯ ದೃಷ್ಟಿಕೋನದ ಗುಣವಾಗಿದೆ. 'ಮುಸ್ಲಿಂ ಜಾನಪದ'ವೆಂಬ ಪರಿಕಲ್ಪನೆಯಲ್ಲೂ ಈ ಗುಣವಿದ್ದಂತಿದೆ. ಎರಡು ಸಂಗತಿಗಳನ್ನು ಬೇರೆ ಬೇರೆ ಎಂದು ತಿಳಿಯುವುದೇ ಅಸಂಬದ್ಧವಾಗಿರುವಾಗ, ಅವು ಕೂಡಿದ ಬಗ್ಗೆ ಪಡುವ ಸಂಭ್ರಮಕ್ಕೇನು ಬೆಲೆ? ತಪ್ಪುತಿಳಿವಳಿಕೆಯ ಬೇರಿನಲ್ಲಿ ಮೇಲೆ ಚಿಗುರಿದ ಸತ್ಯದ ಎಲೆಯಿದು. ಒಂದು ಸಂಗತಿಯನ್ನು 'ಅನ್ಯ'ವೆಂದು ಸ್ವೀಕರಿಸುವಾಗ ಸ್ವೀಕಾರದಲ್ಲಿ ಅಹಂಕಾರ, ಔದಾರ್ಯ ಮತ್ತು ಕೃತಕತೆ ಇರುತ್ತದೆ. ಆದರೆ 'ಅನ್ಯ'ವೆಂದರಿಯದೆ ಸಹಜವಾಗಿ ಸ್ವೀಕಾರಗೊಂಡ ಸಂಗತಿಯನ್ನು ಎರಡರ ಮಿಲನವೆಂದರೆ, ಅದು ಅಪಚಾರದ ವ್ಯಾಖ್ಯಾನ. ಮಧ್ಯಯುಗದ ರಾಜಕೀಯ ಸಂಘರ್ಷಗಳ ಹೊತ್ತಲ್ಲಿ ಆಳುವ ದೊರೆಗಳು ಮತ್ತೊಂದು ಮತದ ಸಮುದಾಯವನ್ನು ಸಂತುಷ್ಟಗೊಳಿಸಲು ಪ್ರೋತ್ಸಾಹ ಕೊಡುತ್ತಿದ್ದರು. ರಾಜಕೀಯ ತಂತ್ರಗಾರಿಕೆಯ ಭಾಗವಾಗಿದ್ದ ಈ ಪ್ರೋತ್ಸಾಹಗಳನ್ನು ಚರಿತ್ರಕಾರರು 'ಸಾಮರಸ್ಯ'ವೆಂದು ಕರೆದುಬಿಡುತ್ತಾರೆ. ಈ ದೃಷ್ಟಿಯಿಂದಲೇ ಸಮುದಾಯದೊಳಗಿನ ಸೃಷ್ಟಿಗಳನ್ನು ನೋಡುವುದು, ಅಪಾಯಕಾರಿ ಅಷ್ಟೇ ಅಲ್ಲ, ತನ್ನ ಮಾಹಿತಿಗಳಿಂದ ತನಗೊಂದು ದೃಷ್ಟಿಕೋನವನ್ನು ಹುಟ್ಟಿಸಿಕೊಳ್ಳಲಾಗದ ಬೌದ್ಧಿಕ ದಾರಿದ್ರ್ಯ ಕೂಡ.

ಒಂದು ಸಮುದಾಯ, ಒಬ್ಬ ಕಲಾವಿದ ಅಥವಾ ಅನುಭಾವಿ ತನ್ನ ಒಳಗಿನ ತುರ್ತಿನಿಂದ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ 'ಅನ್ಯ'ವೆಂದು ಕರೆಯಲಾಗುವ ಸಂಗತಿಯನ್ನು ಪಡೆದು ತನ್ನದಾಗಿಸಿಕೊಳ್ಳುವ ಪ್ರಕ್ರಿಯೆಯನ್ನು, 'ಸಾಮರಸ್ಯ'ವೆಂಬ ಮತೀಯ ರಾಜಕಾರಣದ ಪರಿಕಲ್ಪನೆ ಬಿಟ್ಟು, 'ಸಂಕರ'ವೆಂಬ ಸಾಂಸ್ಕೃತಿಕ ಪರಿಕಲ್ಪನೆಯ ಮೂಲಕ ನೋಡಿದರೆ, ಅದರ ಕೆಲವು ಸೂಕ್ಷ್ಮಗಳು ಸಿಕ್ಕಬಹುದು. ಹಲವು ಧಾರ್ಮಿಕ ಸಮುದಾಯಗಳು ಅಥವಾ ಚಿಂತನಾಕ್ರಮಗಳು, ಮುಖಾಮುಖಿಯಾದಾಗ ಇಲ್ಲವೆ ಒಟ್ಟಿಗೆ ಬಾಳಮಾಡಬೇಕಾದಾಗ,



ಅವು ಪರಸ್ಪರ ಬೆರೆಯುವ ಅಂಚುಗಳನ್ನು ಮೃದುಗೊಳಿಸಿಕೊಳ್ಳುತ್ತವೆ. ಪ್ರೇಮಕ್ಕೆ ಎರಡು ಜೀವಗಳು, ರತಿ ಕ್ರೀಡೆಗೆ ಎರಡು ಇಂದ್ರಿಯಗಳು ಸಿದ್ಧವಾಗುವಂತೆ ಪರಸ್ಪರ ಸಹಕಾರಿಯಾಗುತ್ತವೆ. ಅವುಗಳ ಮಿಲನದಲ್ಲಿ ಸೋಲು-ಗೆಲುವು, ಕಳಕೊಳ್ಳುವಿಕೆ-ಪಡೆಯುವಿಕೆ, ಘರ್ಷಿಸುವ-ಹೊಂದಿಕೊಳ್ಳುವ ಅಹಂಕಾರ-ವಿನಯಗಳ ಆಟ ಅವಕ್ಕೇ ಅರಿಯದಂತೆ ಜರುಗುತ್ತದೆ. ತನ್ನತನವನ್ನು ಬಿಟ್ಟುಕೊಡದೆ ಎದುರಿನಲ್ಲಿ ಬೆರೆಯುವ, ತನ್ನದನ್ನು ಬಿಟ್ಟುಕೊಟ್ಟು ಎದುರಿನಿಂದ ಪಡೆಯುವ ಈ ಸಂಕರದಾಟ ಒಳಗಿನ ತುಡಿತಗಳಿಂದಲೂ ಹೊರಗಿನ ಒತ್ತಡಗಳಿಂದಲೂ ನಡೆಯುತ್ತದೆ. ತನ್ನ ಬೇರನ್ನೇ ಕತ್ತರಿಸಿಕೊಂಡು ಇನ್ನೊಂದಕ್ಕೆ ಕಸಿಗೊಂಡ, ತನ್ನ ಚಹರೆಯನ್ನೇ ಮರೆತು ಹೊಸತನ್ನು ಪಡೆದುಕೊಂಡ ಕಡೆ ಸಂಕರವಿರುವುದಿಲ್ಲ. ಕೇವಲ ದೈನೇಸಿ ಅನುಕರಣೆಯಿರುತ್ತದೆ. ರತಿಕ್ರೀಡೆಯ ಸಂತಸವೂ ಇಲ್ಲದ ಈ ಕೂಡುವಿಕೆಯಿಂದ ಹೊಸ ಸೃಷ್ಟಿಗಳೂ ಸಂಭವಿಸುವುದಿಲ್ಲ. ದೈನ್ಯವಿಲ್ಲದ ಬಿಗುಮಾನವಿಲ್ಲದ ಹೊಸಸೃಷ್ಟಿಗೆ ಕಾರಣವಾಗಬಲ್ಲ ಸಂಕರವನ್ನು ಈ ದೇಶದ ಸಮುದಾಯಗಳು ನಡೆಸಿವೆ. ಅದರ ಫಲವೇ ಮುದಗಲ್ಲಿನ ಮೊಹರಂ, ಹೊನ್ನೂರಪ್ಪನ ಉರುಸು, ಶಿಶುನಾಳ-ಫಕ್ಕಿರೇಶರಂಥ ಅನುಭಾವಿಗಳು, ಹಲಸಂಗಿಯ ಖಾಜಾಭಾಯಿ ಇಂಗಳಗಿಹಸನರಂಥ ಶಾಹಿರರು ಇದನ್ನು ಸಾಮರಸ್ಯವೆಂದೊ ಮುಸ್ಲಿಂ ಜಾನಪದವೆಂದೊ ಕರೆದರೆ ನೂರಾರು ವರುಷಗಳ ಸಂಕರಪ್ರಯೋಗಗಳ ಸತ್ಯವನ್ನೇ ನಿರಾಕರಿಸಿದಂತಾಗುತ್ತದೆ.

ಸಂಕರ ಹಲವು ಪರಿಗಳಲ್ಲಿ ಜರುಗುತ್ತದೆ. ಸಮುದಾಯಗಳು ಭಾಷೆಗಳನ್ನು ಬೆರೆಸಿ ಹೊಸ ಭಾಷೆಗಳನ್ನು ಹುಟ್ಟಿಸುತ್ತವೆ. ಇಂಥ ಸಂಕರದ ಕೂಸಾದ ಉರ್ದು (ದಖನಿ)ಯನ್ನು ಹಾಗೂ ಕನ್ನಡವನ್ನು ಜನಪದಕವಿಗಳು ಒಟ್ಟಿಗೇ ಬಳಸಿ ರಚನೆ ಮಾಡಿದರು. ಅವರು ಫಾರ್ಸಿಪರಂಪರೆಯಿಂದ ತಂದ ಕಂಕಾಲಕ್ಕೆ ಕನ್ನಡದ ರಕ್ತ ಮಾಂಸಗಳನ್ನು ತುಂಬಿದರು. ಭಾಷಿಕ ಸಂಕರದ ಇನ್ನೊಂದು ಹಂತವೆಂದರೆ, ಪುರಾಣಗಳು ಬೆರೆಯಲಾರಂಭಿಸುವುದು. ಧರ್ಮವೂ ಅದರ ಕಟ್ಟುಪಾಡುಗಳೂ ಹಿಂದಕ್ಕೆ ಸರಿದು, ಯಾವತ್ತೂ ಮಾನವರ ದುಃಖ ದುಮ್ಮಾನಗಳು ಮುಖ್ಯವಾದಾಗ ಪುರಾಣಕಥೆಯೊಂದು, ದೇಶಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಗಡಿಗಳನ್ನು ದಾಟಿಕೊಂಡು, ತನ್ನನ್ನು ಸಂವೇದಿಸುವ ಸಮುದಾಯ ಮತ್ತು ತನ್ನಂತೇ ಇರುವ ಇನ್ನೊಂದು ಪುರಾಣದ ಜತೆ ಬೆರೆಯಲಾರಂಭಿಸುತ್ತದೆ. ಅಭಿಮನ್ಯುವಿನ ನೆನಪಿಲ್ಲದೆ, ಕರ್ಬಲಾದಲ್ಲಿ ಮಡಿದ ಎಳೆಯವೀರ ಕಾಸಿಮನ ಕಥನವನ್ನು ಕಟ್ಟಲು ಅದಕ್ಕೆ ಸಾಧ್ಯವೇ ಆಗುವುದಿಲ್ಲ; ರಾಮನನ್ನು ಮೌಲಾಲಿಗೂ ಸೀತೆಯನ್ನು ಫಾತಿಮಾಳಿಗೂ, ಹಸನ-ಹುಸನರನು, ಲವಕುಶರಿಗೂ ಹೋಲಿಸದ ಹಾಡಲು ಅದಕ್ಕೆ ಸಾಧ್ಯವಾಗುವುದಿಲ್ಲ ಭಾಷಿಕ ಮತ್ತು ಪುರಾಣಗಳ ಸಂಕರದ ಮುಂದಿನ ಹಂತ ಆಚರಣೆಗಳು, ಬೆರೆಯತೊಡಗುವುದು ಖಂಡಾಂತರಗಳ ಹಾದು ಬಂದು ಬೆರೆತುಬಿಡುವ ಈ ಭಾಷೆ, ಪುರಾಣ, ಆಚರಣೆಗಳನ್ನು ಸಮುದಾಯ ಬದುಕುವಾಗ ಅದರ ಸಂವೇದನೆ ಎಂಥದು? ಯಾಕೆ ಕರ್ಬಲಾಪದಗಳ ತುಂಬ ಬಲಿಷ್ಠ ವ್ಯವಸ್ಥೆಯ ವಿರುದ್ಧ ಹಟತೊಟ್ಟು ದುರ್ಬಲರು ಹೋರಾಡಿ ಮಡಿಯುವ

ಪ್ರಸಂಗಗಳಿವೆ? ತನ್ನ ಹೇಳಲಾಗದ ಯಾವ ಸಂಕಟಗಳಿಗೆ ಈ ಮಿತ್‌ಗಳು ಆಚರಣೆಗಳು ಬಾಯಿಯಾಗಿ ಬಿಟ್ಟಿವೆ? ಇವನ್ನೆಲ್ಲ ಮುಸ್ಲಿಂ ಜಾನಪದವೆಂಬ ಚೀಲಕ್ಕೆ ತುಂಬಿದರೆ, ಮೆಥಡಾಲಜಿಯ ಪ್ರಶ್ನೆಗಳನ್ನು ಮಾತ್ರವಲ್ಲ, ಸಾಂಸ್ಕೃತಿಕ ಪರಿವೇಷದಲ್ಲಿರುವ ಸಾಮಾಜಿಕ ಆರ್ಥಿಕವಾಸ್ತವದ ಸಮಕಾಲೀನ ಪ್ರಶ್ನೆಗಳನ್ನು ದಮನಿಸಿದಂತಾಗುವುದು.

ದಲಿತ, ಮುಸ್ಲಿಂ, ಕ್ರೈಸ್ತ - ಮುಂತಾದ ಹೆಸರಲ್ಲಿ ಜಾನಪದವನ್ನು ನೋಡುವ ಆವಶ್ಯಕತೆ ಯಾಕಾಗಿ ಹುಟ್ಟಿಕೊಂಡಿದೆ? ಒಂದೋ ಇದು ಕೇವಲ ಅಕೆಡೆಮಿಕ್ ಕುತೂಹಲದಿಂದ ಹುಟ್ಟಿರಬಹುದು. ಇಲ್ಲವೇ ಕೆಲವು ಸುಪ್ತ 'ರಾಜಕೀಯ' ಕಾರಣಗಳಿಂದ ಹುಟ್ಟಿರಬಹುದು. ಈ 'ರಾಜಕೀಯ' ಕಾರಣಗಳೆಂದರೆ,

(i) 'ನಿರ್ಲಕ್ಷಿತ' ಸಾಮಾಜಿಕ - ಧಾರ್ಮಿಕ ಸಮುದಾಯಗಳ ಚಹರೆಯನ್ನು Subaltern ದೃಷ್ಟಿಕೋನದಿಂದ ಹುಡುಕುವುದು. ಬೇರೆಬೇರೆ ಸಮುದಾಯಗಳ ಕೊಡುಗೆಗಳೇನೂ ಇಲ್ಲ ಎಂಬ ಧಾಟಿಯಲ್ಲಿ 'ಚರಿತ್ರೆ' ರೂಪುಗೊಂಡಾಗ, ಅದು ರಾಜಕೀಯವಾಗಿ ಡಾಮಿನೆಂಟ್ ಕೂಡ ಆದಾಗ, ನಮ್ಮ ಪಾಲೂ ಇದೆ ಎಂದು ಉತ್ತರಿಸುವ ಬೌದ್ಧಿಕ ಆವೇಶದ ದೃಷ್ಟಿಕೋನವಿದು. ಸಾಮಾನ್ಯವಾಗಿ ಸಮುದಾಯದ ಪ್ರತಿನಿಧಿ ಎಂದುಕೊಳ್ಳುವ ಕಲಿತವರ್ಗ ಈ ಉತ್ತರಿಸುವ ಹೊಣೆಯನ್ನು ಹೊರುತ್ತದೆ. ಆದರೆ ಇದು ತನ್ನ ವ್ಯಾಖ್ಯಾನದ ಅತಿಯಲ್ಲಿ ಪ್ರತ್ಯೇಕವಾದಿಯಾಗಿ ಬಿಡುವುದು.

(ii) ಎಲ್ಲವನ್ನು ಏಕರೂಪಿಯಾಗಿ ವ್ಯಾಖ್ಯಾನಿಸುವ ಜನಪ್ರಿಯ ದೃಷ್ಟಿಕೋನಕ್ಕೆ ಪ್ರತಿಯಾಗಿ, ಹಲವು ಪದರುಗಳ ಬಹುರೂಪವನ್ನು ನಿಲ್ಲಿಸಬೇಕು ಎಂಬ ಡೆಮಾಕ್ರಟಿಕ್ ಚಿಂತನೆ ಕೂಡ 'ಮುಸ್ಲಿಂ ಜಾನಪದ' ದಂಥ ಪರಿಕಲ್ಪನೆಗೆ ಪ್ರೇರಕವಾಗಿರಬಹುದು. ಇದು ಕೂಡ ತನ್ನ ಅತಿಯಲ್ಲಿ, ಹಲವು ಪದರುಗಳ ನಡುವಣ ಕೊಡುಕೊಳೆಗಳ ಸಂಕೀರ್ಣತೆಯತ್ತ ಮುಖದಿರುಹಿ, ಸಂಬಂಧವನ್ನು ಸರಳೀಕರಿಸುವುದು.

(iii) ಎಲ್ಲವನ್ನು ಮತೀಯ ಪರಿಭಾಷೆಯಲ್ಲಿ ಕತ್ತರಿಸಿ ಆಲೋಚಿಸುವ ಕೋಮು ಚಿಂತನೆಗಳಿಗೆ ಪ್ರತಿಯಾಗಿ, ''ವೈವಿಧ್ಯದಲ್ಲಿ ಏಕತೆ ಇದೆ'' ಎಂಬ ಸಾಮರಸ್ಯವಾದವನ್ನು ಮುಂದಿಡಲು ಇಂಥ ಪರಿಕಲ್ಪನೆ ಹುಟ್ಟಬಹುದು. ಇದು ತಕ್ಷಣಹೋಗಿ ಸರ್ಕಾರ ಪ್ರಸಾರ ಮಾಡುವ 'ಭಾವೈಕ್ಯ' 'ಸರ್ವಧರ್ಮ ಸಮನ್ವಯ'ದ ಘೋಷಣೆಗಳಿಗೆ ಉದಾಹರಣೆ ಒದಗಿಸುವ ಕೆಲಸಕ್ಕೆ ನಿಂತುಬಿಡುವುದು.

ನಮ್ಮ ಎದುರಿನ ಸವಾಲೆಂದರೆ, ಜಾತೀಯ, ಧರ್ಮೀಯ ಪರಿಭಾಷೆಯನ್ನು ಬಳಸಬೇಕೋ ಬೇಡವೋ ಎಂಬುದಲ್ಲ; ಹಾಗೆ ಬಳಸಿಯೂ ಮತೀಯವಾಗದೆ, ಒಟ್ಟು ಜನಸಮುದಾಯದ ಬದುಕಿನ ಲಯಗಳನ್ನು ಕುರಿತು ಮಾತಾಡುವುದು; ಯಾವ ಸಾಂಸ್ಕೃತಿಕ ಗುರುತುಗಳೂ ಉಳಿಯದಂತೆ ಕಬಳಿಕೆ ಮಾಡಬಲ್ಲ ಪ್ರಪಂಚೀಕರಣ ಎಂಬ ರಾಜಕಾರಣ



ಹಾಗೂ 'ನನ್ನ ಕೋಮಿನಲ್ಲದ ಇನ್ನೇನನ್ನೂ ಮಾನ್ಯಮಾಡೆನು' ಎಂಬ ಹಠಮಾರಿ ಕೋಮುವಾದಗಳ ಇರುಕಿನಲ್ಲಿ, ಸಮುದಾಯಗಳು ಎಲ್ಲಿ ಮಣಿಯುತ್ತಿವೆ ಹಾಗೂ ಎಲ್ಲಿ ಪ್ರತಿರೋಧಿಸುತ್ತಿವೆ ಎಂಬುದನ್ನು, ಅರಿಯುವುದು; ರಾಜಕೀಯ-ಆರ್ಥಿಕ ಒತ್ತಡಗಳಲ್ಲಿ ಸಮುದಾಯಗಳ ಜೀವನಕ್ರಮ ಹಾಗೂ ಚಿಂತನಾಕ್ರಮ ನಿರಂತರ ಬದಲಾಗುತ್ತಿರುತ್ತದೆ. ಈ ಅರಿವಿನ ಸಮ್ಮುಖದಲ್ಲಿ, ಅವುಗಳ ನಂಬಿಕೆ-ಆಚರಣೆಗಳ ಜಗತ್ತಿಗೆ ದಕ್ಕುತ್ತಿರುವ ಹೊಸ ಆಯಾಮಗಳನ್ನು ಪರಿಶೀಲಿಸುವುದು. ಇಷ್ಟು ಸಾಧ್ಯವಾದರೆ 'ದಲಿತ' 'ಮುಸ್ಲಿಂ' ಎಂಬ ಪರಿಭಾಷೆಗಳು ಸಾಂಸ್ಕೃತಿಕ ಅರ್ಥಧಾರಣೆ ಮಾಡುತ್ತವೆ. ಆಗ ಅರಬಸ್ಥಾನದಿಂದ ಬಂದರೂ ಮುದಗಲ್ಲಿನ ಹುಡುಗರಾಗಿ ಹೋಗುವ, ಮುದಗಲ್ಲಿನ ನೆಲದಲ್ಲಿ ಹೆಜ್ಜೆ ಊರಿಯೂ ಕರ್ಬಲ ಮೈದಾನದಲ್ಲಿ ಸುತ್ತಾಡಿ ಬರುವ ಹಸನಹುಸನರ ವಿಸ್ಮಯವನ್ನು ಅರಿಯಲು ತೊಡಕಾಗುವುದಿಲ್ಲ.

# ಕನ್ನಡ ಜನಪದ ಗೀತೆಗಳು

ಎಂ. ಭೈರೇಗೌಡ - ಕೆ. ಪಿ. ದೊಡ್ಡಿ

ಕನ್ನಡ ನಾಡು ವಿಸ್ತಾರವಾದ ಭೂ ಪ್ರದೇಶವನ್ನು ಹೊಂದಿದ್ದು, ನಾನಾ ಬಗೆಯ ವೈವಿಧ್ಯಗಳಿಂದ ಕೂಡಿದೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ಪ್ರದೇಶ, ಶಿವಮೊಗ್ಗೆಯನ್ನು ಆವರಿಸಿದ ಮಲೆನಾಡು, ಪೂರ್ವ ಹಾಗೂ ಪಶ್ಚಿಮ ಘಟ್ಟಗಳ ನಡುವಣ ಉತ್ತರ ಮತ್ತು ದಕ್ಷಿಣ ಕರ್ನಾಟಕಗಳು ಬಗೆ ಬಗೆಯ ಪದ್ಧತಿಗಳನ್ನು ಅನುಸರಿಸುವ ಜನಗುಂಪುಗಳನ್ನು ಒಳಗೊಂಡಿದೆ. ಈ ಎಲ್ಲ ಜನಜಾತಿಗಳಲ್ಲೂ ತಮ್ಮ ತಮ್ಮದೇ ಆದ ಜಾನಪದ ಸಾಹಿತ್ಯ ಸಂಪತ್ತು ಅಡಗಿದೆ. ಅಂತಹ ಜಾನಪದ ಸಾಹಿತ್ಯ ರಾಶಿಯಲ್ಲಿ ಜನಪದ ಗೀತೆಗಳದು ಸಿಂಹಪಾಲು ಎನ್ನಬಹುದು. ಈ ನಡುವೆ ಕೊಡವ, ತುಳು, ಕೊಂಕಣಿ ಭಾಷೆಗಳಲ್ಲಿನ ಜನಪದ ಗೀತೆಗಳೂ ಕೂಡ ಕರ್ನಾಟಕದ ಆವರಣದೊಳಗೇ ಅರಳಿರುವುದನ್ನು ಗಮನಿಸಬೇಕು.

'ಜನವಾಣಿ ಬೇರು; ಕವಿ ವಾಣಿ ಹೂವು'-ಇದು ಹಳೆಯ ಮಾತು. ವಾಸ್ತವವಾಗಿ ನೋಡಿದಾಗ ಜನಪದ ಸಾಹಿತ್ಯವೇ ಮೂಲಕಾವ್ಯ, ಉಳಿದುದೆಲ್ಲ ಅದರ ಸಂತಾನ. ಜನಪದ ಸಾಹಿತ್ಯವು ತಾನೇ ತಾನಾಗಿ ಅರಳಿದ ಹೂವು. ಪಂಡಿತರೆನಿಸಿದ್ದ ಅನೇಕ ಕವಿಗಳು ಜನಪದ ಸಾಹಿತ್ಯವನ್ನು 'ವರ್ಣಕಕ್ಕಿಲ್ಲ ಲಕ್ಷಣಂ', ಎಂದರು. ನೇಮಿಚಂದ್ರನಂತಹ ಕವಿಯು ತನ್ನ 'ಲೀಲಾವತಿ' ಕಾವ್ಯದಲ್ಲಿ '' ಓದುಗೇಳದಕ್ಕರಗಿವುಡರ್'' ಎಂದೂ, 'ಬೆಳ್ಳಕ್ಕರಿಗಳ್' ಎಂದೂ ಮೂದಲಿಸಿದ. ಮಧುರ ಕವಿಯು ಜನಪದವನ್ನು ಕುರಿತು 'ಗೊರವರ ಡುಂಡುಚಿ; ಬೀದಿ ವರೆಯ ಬೀರನ ಕತೆ'' ಎಂದು ಹೀಗಳೆದ. ನಿಜವಾಗಿ ಇವೆಲ್ಲ ತೂಕತಪ್ಪಿದ ಹೇಳಿಕೆಗಳೆಂದು ಯಾರಿಗಾದರೂ ಅನಿಸದಿರದು. ಆದ್ದರಿಂದಲೇ ಕನ್ನಡದ ಕಣ್ವ, ಆಚಾರ್ಯ ಬಿ.ಎಂ. ಶ್ರೀಯವರು 'ಜನರಿಂದಲೇ ಹುಟ್ಟಿ' ಜನರಲ್ಲಿಯೇ ಪಳಗಿ, ಜನರ ಪ್ರೇಮವನ್ನು ಸೂರೆಗೊಂಡ ಜನರ ಸಾಹಿತ್ಯವನ್ನು ಒಣಕವಿಗಳೂ, ಅಹಂಕಾರ ಮುಗ್ಧರಾದ ಪಂಡಿತರೂ ಅಲ್ಲಗಳೆಯಬಹುದೇ ಹೊರತು, ನಿಸರ್ಗ ಕವಿಗಳೂ, ರಸಜ್ಞರು ತಿರಸ್ಕರಿಸಲಾರರು'- ಎಂದು ಗರತಿಯ ಹಾಡಿನ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಕಾಲ ಸರಿದಿದೆ; ಹಾಗೆಯೇ ಜನರ, ಕವಿಗಳ, ವಿದ್ವಾಂಸರ ಧೋರಣೆ ಕೂಡ ಬದಲಾಗಿ ಎಲ್ಲವೂ ಇಲ್ಲಿಂದಲೇ ಹುಟ್ಟಿ,



ಪಂಡಿತರ ಆಲೋಚನೆಗಳಿಗೆ ಗ್ರಾಸವೊದಗಿಸಿವೆ ಎಂಬ ಸತ್ಯವನ್ನು ಅರಿತಿದ್ದಾರೆ. ಆದ್ದರಿಂದಲೇ ಜನಪದ ಸಾಹಿತ್ಯ ಸೋಲರಿಯದ ಸರದಾರನಂತೆ, ಅನಭಿಷಿಕ್ತ ಸಾಮ್ರಾಜ್ಞಿಯಂತೆ ತನ್ನ ಭೂಮಭಾಹುಗಳನ್ನು ಚಾಚಿ ವಿಶಾಲವೃಕ್ಷವಾಗಿ ಎಲ್ಲೆಡೆ ತನ್ನ ಕವಲುಗಳನ್ನು ಚಾಚುತ್ತಿರುವುದು. ಹಳೆಯದೆನ್ನುವುದೆಲ್ಲಾ ಹೊಸರೂಪವನ್ನು ಪಡೆಯುತ್ತಾ ಹೊಸ ದಿಕ್ಕುಗಳನ್ನು ತೋರಬಲ್ಲ ಕೈಮರವಾಗಿ, ತನ್ನತನವನ್ನು ಮೆರೆಯುತ್ತಿದೆ; ಮೆರೆಸುತ್ತಿದೆ.

ಪ್ರೊ। ದೇವೇಂದ್ರ ಸತ್ಯಾರ್ಥಿಯವರು 'ಭಾರತದ ಜನಪದಗೀತೆಗಳು, ನಮ್ಮ ದೇಶದ ಘನವಾದ ಸ್ವತ್ತು, ಭಾರತ ಸಾಂಸ್ಕೃತಿಕ ಪರಂಪರೆಯು ಇವುಗಳಲ್ಲಿ ಹುದುಗಿದೆ, ಭಾರತದ ಲಕ್ಷಾಂತರ ಜನರಿಗೆ ಬಾಗಿಲುಗಳನ್ನು ತರೆದಿಟ್ಟ ಕಾವ್ಯ ಮತ್ತು ಸಂಗೀತದ ಮಹಾ ದೇವಾಲಯಗಳಿವು. ಇವು ಜನತೆಯ ಹೃದಯದಿಂದ ಉಕ್ಕಿ ಬಂದ ನುಡಿಗಳಾದ್ದರಿಂದ ಅವುಗಳಲ್ಲಿ ಭಾರತದ ಹಳ್ಳಿಗಾಡಿನ ಸ್ವಚ್ಛಂದ ಜೀವನದ ನೋವು-ನಲಿವುಗಳನ್ನು ನಾವು ಅನುಭವಿಸುತ್ತೇವೆ'-ಎನ್ನುತ್ತಾರೆ. (ಡಾ.ಬಿ. ಎಸ್. ಗದ್ದಗಿಮಠ-ಕರ್ನಾಟಕ ಜನಪದ ಗೀತೆಗಳು, ಪು. ೩) ಕವಿವರ್ಯ, ಮಹರ್ಷಿ ರವೀಂದ್ರರು 'ಜನಪದ ಗೀತೆಗಳು ಜನತೆಯ ಮನಸ್ಸು ಮತ್ತು ಹೃದಯವನ್ನು ತಿಳಿಯಲು ನಮಗೆ ಸಹಕಾರಿಯಾಗಿವೆ' ಎಂದಿದ್ದಾರೆ. (ಡಾ. ಬಿ. ಎಸ್. ಗದ್ದಗಿಮಠ ಕರ್ನಾಟಕ ಜನಪದ ಗೀತೆಗಳು, ಪು ೪೮) ಶ್ರೀ ಕೆ.ಎಂ. ಮುನಿಷಿಯವರು 'ಪ್ರಾಗೈತಿಹಾಸಿಕ ಕಾಲದಿಂದಲೂ ಭಾರತವು ಅಪಾರವಾದ ಜನಪದ ಸಾಹಿತ್ಯ ಸಂಪತ್ತನ್ನು ಪಡೆದುಕೊಂಡಿದೆ; ಭಾಸನಿಂದ ಮೊದಲುಗೊಂಡು ಮುಂದಿನ ಅನೇಕ ಕವಿಗಳು ಇದರಿಂದ ಸಾಕಷ್ಟು ಸಾಮಗ್ರಿಯನ್ನು ಎರವಲು ಪಡೆದಿದ್ದಾರೆ' ಎನ್ನುತ್ತಾರೆ. (ಡಾ. ಬಿ. ಎಸ್. ಗದ್ದಗಿಮಠ-ಕರ್ನಾಟಕ ಜನಪದ ಗೀತೆಗಳು, ಪು.೪)

ಮೊದಲಿನ ಮಾನವ ಏಕಾಂಗಿಯಾಗಿದ್ದು, ಅಲೆಮಾರಿ ಜೀವನದಿಂದ ಬೇಸತ್ತು, ಒಂದೆಡೆ ನೆಲೆಸಿ ಪರಿಸರದ ವಸ್ತುಗಳನ್ನು ಕುರಿತು ಸನ್ನೆಯಿಂದ ಸಂಭಾಷಿಸುತ್ತಾ, ಬಗೆ ಬಗೆಯ ಪಶು-ಪಕ್ಷಿ-ಪ್ರಾಣಿಗಳ ಶಬ್ದವನ್ನು ಅನುಕರಿಸುತ್ತಾ ಬಗೆ ಬಗೆಯ ಶಬ್ದಗಳನ್ನು ಅಭ್ಯಾಸ ಮಾಡುತ್ತಾ, ನಾಲಿಗೆಯು ಶುದ್ಧವಾಗಿ ಮಾತು ಕಲಿತು, ಒಟ್ಟುಗೂಡಿ ಬದುಕುವಾಗ ಮನರಂಜನೆಯ ಅವಶ್ಯಕತೆಯನ್ನು ಮನಗಂಡಾಗ ಈ ಹಾಡು-ಕುಣಿತಗಳ ಉದಯ ವಾಗಿರಬಹುದು. ಅದೇ ಸಾಗಿಬಂದು ಇಂದಿನ ಈ ಸ್ವರೂಪ ಪಡೆದಿರಬಹುದೆಂಬುದು ಸಾಮಾನ್ಯ ತರ್ಕವಾಗಿದೆ. ಜನಪದ ಗೀತೆ ಇತರ ಶಾಬ್ದಿಕ ಜಾನಪದ ಪ್ರಕಾರಗಳ ಪ್ರಥಮ ಮತ್ತು ಪ್ರಮುಖ ಅಂಗ. ಹಾಗೆಯೇ ಜನಪದ ಸಾಹಿತ್ಯ ಸಂಗ್ರಹದ ಪ್ರಾರಂಭ ಕೂಡ ಜನಪದ ಗೀತೆಗಳಿಂದಲೇ. ೯ನೇ ಶತಮಾನದ 'ಕವಿರಾಜಮಾರ್ಗ'ಕಾರ ಕನ್ನಡನಾಡಿನ ಜನಪದದ ಬಗೆಗೆ ವಿವರಿಸುತ್ತಾ; ''ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್'' ಎಂದಿರುವಲ್ಲಿ ಕನ್ನಡ ಜನಪದ ಗೀತೆಗಳ ಪ್ರಾಚೀನತೆಯ ಸುಳಿವು ನೀಡಿದ್ದಾನೆ. ಜನಪದ ಗೀತೆ ಭಾವಗೀತೆಯ ಸಾಲಿನಲ್ಲಿ ನಿಲ್ಲುವಂತಹುದು. ಶತ ಶತಮಾನಗಳ

ಹಿಂದೆ ರಚಿತವಾದ ಈ ಗೀತೆ ತನ್ನ ಸತ್ವ-ಸ್ವರೂಪದಲ್ಲಿ ಭಾವಗೀತೆಗೆ ಮಿಗಿಲಾಗಿಯೇ ಉಳಿದು ಬೆಳೆದು ಬಂದಿದೆ.

ಜನಪದ ಗೀತೆಗಳಲ್ಲಿ ಕವಿ ಅಜ್ಞಾತನಾಗುತ್ತಾನೆ. 'ಜನಪದವೇ ಕರ್ತೃ ಎನಿಸುತ್ತಾದರೂ, ಅಜ್ಞಾತ ಕವಿಯ ರಚನೆಗಳೆಲ್ಲಾ ಜನಪದ ಗೀತೆಗಳಾಗಲು ಸಾಧ್ಯವಿಲ್ಲ. ಜನಪ್ರಿಯ ಗೀತೆಗಳು ಜನಪದ ಗೀತೆಗಳಂತೆಯೇ ಕಾಣಬಹುದು. ಉದಾಹರಣೆಗೆ ಗೋವರ್ ಸಂಗ್ರಹಿಸಿದ ಹಾಡುಗಳಲ್ಲಿ ದಾಸಸಾಹಿತ್ಯ, ತತ್ವಪದಗಳು, ಕೀರ್ತನೆಗಳು ಇವೆ. ಜನಪದದ ಛಾಯೆ ಅವುಗಳಲ್ಲಿ ಎದ್ದು ಕಾಣುತ್ತದೆ. ಜನಪದರಿಗೆ ತತ್ವಪದ, ಕೀರ್ತನೆಗಳು ಬರುತ್ತಿರಲಿಲ್ಲವೆಂದಲ್ಲ; ಎಷ್ಟೋ ಮಂಗಳ ಗೀತೆಗಳು ಜನಪದರಿಂದಲೇ ದೇಣಿಗೆಯಾಗಿ ಬಂದಿವೆ. ಸೃಷ್ಟಿಯ ಎಲ್ಲದರ ಅರಿವಿದ್ದರೂ ಮುಗ್ಧತೆ ಅವುಗಳ ಅರಿವನ್ನು ಮರೆಸಿತು. ಇಂದಿಗೂ ಕೂಡ ಜನಪದ ಗಾಯಕರು ಹಾಡುವುದು ಬೇರೆಯವರ ಸಂತೋಷಕ್ಕಾಗಿ ಅಲ್ಲ. ಅವರು ಹರುಷ, ಸರಸ, ವಿರಸ, ನೋವು, ನಲಿವು, ದುಃಖ ಮುಂತಾದ ಎಲ್ಲ ಭಾವನೆಗಳನ್ನೂ ತಮ್ಮ ಹಾಡಿನ ಮೂಲಕವೇ ಸ್ಫುರಿಸುತ್ತಾರೆ. ಇಂಥ ಸರಳ, ಸುಂದರ, ಸುಮಧುರ, ಮನೋಹರವಾದ ಕನ್ನಡ ಜನಪದಗೀತೆಗಳ ಸಂಗೀತ, ಕಾವ್ಯಾಂಶಗಳು ಎಲ್ಲ ವರ್ಗದ ಜನಮನವನ್ನು ತನ್ನೆಡೆಗೆ ಸೂಜಿಗಲ್ಲಿನಂತೆ ಸೆಳೆದುಕೊಳ್ಳುತ್ತದೆ. ಜನಪದ ಗಾಯಕರಿಗೆ ಶ್ರಮದ ಅರಿವಿಲ್ಲ. ಸೋಬಾನೆ ಚಿಕ್ಕಮ್ಮ ಮೂರು ರಾತ್ರಿ ಹಾಡಿದರೂ, ಒಂದು ಸೊಲ್ಲನ್ನೂ ಪುನರಾವರ್ತಿಸುತ್ತಿರಲಿಲ್ಲ. ಅಣಕಡಬೂರಿನ ಕಥನಕಾವ್ಯ ಗಾಯಕ ಕಾರಯ್ಯ ಒಂಬತ್ತು ದೀರ್ಘಕಾವ್ಯಗಳನ್ನು ಒಂಬತ್ತು ರಾತ್ರಿ ಸತತವಾಗಿ ಹಾಡಬಲ್ಲ ಅದ್ಭುತ ಗಾಯಕ. ಮಳವಳ್ಳಿ ರಾಚಯ್ಯ ಹಲವಾರು ದಿನಗಳವರೆಗೆ ಕಥನಕಾವ್ಯಗಳನ್ನು ಹಾಡಬಲ್ಲ ಸಮರ್ಥ. ಕೂತಗೊಂಡನ ಹಳ್ಳಿಯ ಚಿಕ್ಕೋಳಮ್ಮ ಇರುಳಿಗ ಕಲಾವಿದೆ. ಒಂದು ಬಾರಿ ಯಾರಾದರೂ ಹಾಡಿದ್ದನ್ನು ಕೇಳಿದಳೆಂದರೆ ಅದೇ ಕ್ಷಣದಲ್ಲಿ ಅದೇ ಧಾಟಿಯಲ್ಲಿ, ಅದೇ ತಾಳಗಳಲ್ಲಿ ಹಾಡಬಲ್ಲ ಜನಪದ ಕೋಗಿಲೆ. ಇಂತಹ ಸಾವಿರಾರು ಜನಪದ ಗೀತಗಾಯಕರು ನಾಡಿನಾದ್ಯಂತ ತುಂಬಿದ್ದಾರೆ. ಅವರುಗಳನ್ನು ಮತ್ತಷ್ಟು ಶೋಧಿಸುವ ಕಾರ್ಯ ಆಗಬೇಕಿದೆ. ಆದರೂ ಆಗಿರುವ ಸಂಗ್ರಹವನ್ನು ಬಾಗ್ಸ್ ವರ್ಗೀಕರಣ ಸೂತ್ರವನ್ನು ಅನುಸರಿಸಿ ಕನ್ನಡ ಜನಪದ ಗೀತೆಗಳನ್ನು ಹೀಗೆ ವಿಂಗಡಿಸಿಕೊಳ್ಳಬಹುದು.

ಹಾಡುಗಳು: ಭಾವಪ್ರಧಾನವಾದ ಪ್ರೇಮಗೀತೆಗಳು, ದ್ವೇಷ, ಸಡಗರ, ಸಂತಸ, ದುಃಖ, ಅಸಂತೋಷ, ಮೆಚ್ಚಿಗೆ, ಹೊಗಳಿಕೆ, ಅತಿಶಯ, ಪ್ರಶಂಸೆ, ತೆಗಳುವಿಕೆ, ತಿರಸ್ಕಾರ, ವಿನೋದ, ಹಾಸ್ಯ, ಲೇವಡಿ, ಜರಿಯುವಿಕೆ, ಅಣಕವಾಡುವ ಪದಗಳು ಈ ವಿಭಾಗದಲ್ಲಿರುತ್ತವೆ. ಬದುಕಿನ ನಿರ್ಣಾಯಕ ಘಟ್ಟಗಳಾದ ಹುಟ್ಟು, ಸಾವು, ಋತುಮತಿ, ಅಗಲಿಕೆ, ವಿರಹ - ವೇದನೆ, ಕಾಳಗದ ಕರೆ ಮುಂತಾದ ಸಂಪ್ರದಾಯ ಸಂಬಂಧಿ ಗೀತೆಗಳು ಹಾಗೂ ತೊಟ್ಟಿಲ ಪದ (ಜೋಗಳದ ಗೀತೆಗಳು), ಲಾಲಿಪದ ಮುಂತಾದ ಮಕ್ಕಳ ಪದಗಳು ಮತ್ತು ಹಲವಾರು ದೇವ ದೇವತೆಗಳನ್ನು ಕುರಿತು ಹಾಡುಗಳನ್ನು ಸಹ ಇಲ್ಲಿ ಕಾಣಬಹುದು.



ಗೀತೆಗಳದು ಮತ್ತೊಂದು ಭಾಗ: ನಾದವಿಲ್ಲದ ಗೀತೆಗಳು, ಕಥನ ಗೀತೆಗಳು, ಭಾವ 'ಗೀತೆಗಳು, ನೃತ್ಯ ಗೀತೆಗಳು, ಕ್ರೀಡಾಗೀತೆಗಳು, ರಂಗ ಗೀತೆಗಳು, ಹಬ್ಬ-ಹರಿದಿನಗಳ ಸಂಪ್ರದಾಯದ ಗೀತೆಗಳು, ಚಿತ್ರ-ಶಿಲ್ಪ, ವಾಸ್ತುಶಿಲ್ಪ ಸಂಬಂಧಿ ಗೀತೆಗಳು, ಆಹಾರ, ಪಾನೀಯ ಗೀತೆಗಳು, ನಂಬಿಕೆಗೆ ಸಂಬಂಧಿಸಿದ ಗೀತೆಗಳು, ಗಾದೆಯ ಗೀತೆಗಳು, ಒಗಟು ಗೀತೆಗಳು, ಈ ವಿಭಾಗದಲ್ಲಿ ಬರುತ್ತವೆ. ಹೀಗೆ ಹಲವಾರು ವಿಭಾಗಗಳನ್ನು ಹೊಂದಿರುವ ಕನ್ನಡ ಜನಪದ ಗೀತೆಗಳ ಒಂದೊಂದು ವಿಭಾಗದ ಒಂದೊಂದು ಗೀತೆಗಳೂ ಬಿಡಿ ಬಿಡಿ ಅಧ್ಯಯನವನ್ನೆ ಬಯಸುತ್ತವೆ.

ಕರ್ನಾಟಕ ಜಾನಪದ ಅಧ್ಯಯನ ಕಳೆದ ಶತಮಾನದಿಂದ ನಡೆಯುತ್ತಾ ಬಂದಿದ್ದರೂ ವ್ಯಾಪಕ ಸಂಗ್ರಹಕಾರ್ಯ ಗೀತ ಸಾಹಿತ್ಯಕ್ಕೆ ಸಂಬಂಧಿಸಿದ್ದೆಂಬುದು ನಿರ್ವಿವಾದ ಸಂಗತಿ. ಪಾಶ್ಚಾತ್ಯ ಹಾಗೂ ಕರ್ನಾಟಕದ ವಿದ್ವಾಂಸರ ಆಸಕ್ತಿಯನ್ನು ವಿಶೇಷವಾಗಿ ಆಕರ್ಷಿಸಿದ ಏಕಮಾತ್ರ ಜಾನಪದ ಪ್ರಕಾರ ಜನಪದಗೀತೆ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಇತ್ಯಾದಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದರೂ ಗೀತಪ್ರಕಾರವೇ ಇವರ ಕೊಯ್ಲಿಗೆ ಸಿಕ್ಕ ಮೊದಲ ಬೆಳೆ, ಕನ್ನಡದ ಅತ್ಯುತ್ತಮ ಜನಪದ ಗೀತೆಗಳನ್ನು ಮೊಟ್ಟ ಮೊದಲಿಗೆ ಸಂಗ್ರಹಿಸಿಕೊಟ್ಟ ಕೀರ್ತಿ ಹಲಸಂಗಿ ಗೆಳೆಯರದೆಂದು ಈ ಮೊದಲೇ ತಿಳಿದಾಗಿದೆ. 'ಗರತಿಹಾಡು' ಸಂಗ್ರಹಿಸಿಕೊಟ್ಟಮೇಲೆ ಅನೇಕ ಸಂಕಲನಗಳು ಆ ಭಾಗದಿಂದ ಬಂದಿವೆ. ಡಾ॥ ಬಿ.ಎಸ್. ಗದ್ದಗಿಮಠ ಅವರು ಉತ್ತರ ಕರ್ನಾಟಕದ ಜನಪದ ಗೀತೆಗಳನ್ನು ಅಧ್ಯಯನ ಮಾಡಿ ಮಹಾಪ್ರಬಂಧವನ್ನೇ ರಚಿಸಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ.ಆರ್. ಶ್ರೀ ಮುಂತಾದ ಆದ್ಯ ಸಂಗ್ರಾಹಕರು ಜನಪದ ಗೀತೆಗಳನ್ನೇ ಸಂಗ್ರಹಿಸಿದ್ದಾರೆ. ಮತಿಘಟ್ಟ ಕೃಷ್ಣಮೂರ್ತಿ ಹಾಗೂ ಕರಾಕೃ ಅವರು ದಕ್ಷಿಣ ಕರ್ನಾಟಕದ ಅನೇಕ ಭಾಗಗಳಲ್ಲಿ ಸಂಗ್ರಹಿಸಿ ಅಪಾರವಾದ ಜನಪದ ಗೀತ ಸಾಹಿತ್ಯವನ್ನು ರಾಶಿ ಹಾಕಿದ್ದಾರೆ. ಗೋವರ್ ಅವರ ' The folk songs of southern India'' ಕೃತಿಯಲ್ಲಿ ಕೊಡಗಿನ ವ್ಯಾಪಕ ಜನಪದ ಗೀತ ಸಾಹಿತ್ಯ ದಾಖಲಾಗಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳ ಸಾಹಿತ್ಯ ಸಂಗ್ರಹದಲ್ಲಿ ಗೀತೆಗಳಿಗೆ ಸಂಬಂಧಿಸಿದ ಕೆಲಸವೇ ವ್ಯಾಪಕವಾಗಿ ನಡೆದಿದೆ. ಗುಂಡ್ಮಿ ಚಂದ್ರಶೇಖರ ಐತಾಳರು, ಎನ್.ಆರ್.ನಾಯಕ್ ಅವರು ಈ ಭಾಗದಲ್ಲಿ ಅಪಾರ ಸಂಗ್ರಹ ಸಂಕಲನ ಕಾರ್ಯ ಮಾಡಿದ್ದಾರೆ. ಡಾ॥ ಹಾ.ಮಾ. ನಾಯಕರು ೧೯೭೭ರಲ್ಲಿ ಪ್ರಕಟಿಸಿದ ಕನ್ನಡ ಜಾನಪದ ಸಂಚಯದ ೫೦೦ರಷ್ಟು ಕೃತಿಗಳಲ್ಲಿ ಅರ್ಧಕ್ಕಿಂತ ಹೆಚ್ಚು ಕೃತಿಗಳು ಜನಪದ ಗೀತೆ, ಲಾವಣಿಗಳಿಗೆ ಸಂಬಂಧಿಸಿದವು ಎಂಬುದನ್ನು ಗಮನಿಸಿದಾಗ ಕನ್ನಡ ಜನಪದ ಗೀತೆಗಳ ಸ್ಥಾನ ಎಷ್ಟು ಗಮನಾರ್ಹ ಎಂಬುದು ಸ್ಪಷ್ಟವಾಗುತ್ತದೆ. ನಂತರ ಬಯಲು ಸೀಮೆಯ ಹಾಸನ, ಮೈಸೂರು, ಮಂಡ್ಯ ಹಾಗೂ ನಾಡಿನ ಇತರ ಭಾಗಗಳಲ್ಲಿ ಕರ್ನಾಟಕ ಜಾನಪದ

ರತ್ನ ಡಾ॥ ಜೀಶಂಪ, ಡಾ॥ ಎಸ್.ಕೆ. ಕರೀಂಖಾನ್, ಎಚ್.ಎಲ್.ನಾಗೇಗೌಡರಂತಹ ಮಹನೀಯರು ಕನ್ನಡ ಜಾನಪದ ಗೀತ ಕ್ಷೇತ್ರವನ್ನು ಮತ್ತಷ್ಟು ಹಿರಿದುಗೊಳಿಸಿದರು. ಒಟ್ಟಾರೆ ನವೋದಯ ಕಾಲದ ಜಾನಪದ ಅಧ್ಯಯನ ಎಂದರೆ ಜನಪದ ಗೀತೆಗಳ, ಅದರಲ್ಲೂ ಸಾಹಿತ್ಯಿಕ ಮೌಲ್ಯದ ಜನಪದ ಗೀತೆಗಳ ಸಂಗ್ರಹ ಹಾಗೂ ಪ್ರಕಟಣೆಯೇ ಆಗಿತ್ತು ಎಂಬುದನ್ನು ಗಮನಿಸಬಹುದು.

ಕನ್ನಡನಾಡಿನಲ್ಲಿ ಜನಪದ ಸಾಹಿತ್ಯ ಸಂಕಲನಕ್ಕೆ ತೊಡಗಿದವರಲ್ಲಿ ಹಲಸಂಗಿ ಗೆಳೆಯರ ಗುಂಪಿನ ಸಾಹಿತಿಗಳಾದ ಮಧುರಚನ್ನರೇ ಮೊದಲಿಗರನ್ನೆಬಹುದು. ನಂತರ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ.ಎಂ.ಶ್ರೀ. ಬೇಟಗೇರಿ ಕೃಷ್ಣಶರ್ಮ, ವರಕವಿ ಬೇಂದ್ರೆ, ಸಿಂಪಿಲಿಂಗಣ್ಣ, ಶಿವರಾಮಕಾರಂತರು, ಡಾ॥ ಬಿ.ಎಸ್.ಗದ್ದಗಿಮಠ ಮುಂತಾದ ಅನೇಕ ಮಹನೀಯರು ಶ್ರಮವಹಿಸಿ ಈ ಸಾಹಿತ್ಯವನ್ನು ರಾಶಿಹಾಕಿದರು.

ಜನಪದಗೀತೆಗಳ ಹುಟ್ಟನ್ನು ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಆದರೂ ಜನಪದ ಗೀತೆಗಳಿಗೆ ಒಂದು ರೂಪ ಬಂದದ್ದು ಕೃಷಿ ಸಂದರ್ಭದಲ್ಲಿ ಎಂದುಕೊಳ್ಳಬಹುದು. ಬೇಸರಿಕೆ ಕಳೆಯಲು ಬೀಸುವಾಗ, ಕುಟ್ಟುವಾಗ, ನಾಟಿ ಮಾಡುವಾಗ, ಕಳೆ ತೆಗೆಯುವಾಗ, ಹಂತಿ ಹೊಡೆಯುವಾಗ, ತೂರುವಾಗ, ತುಳಿಸುವಾಗ, ಕಣಗೆಲಸದ ಕಾಲದಲ್ಲಿ ಇತ್ಯಾದಿ, ಇತ್ಯಾದಿ, ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಅಗತ್ಯವಾದ ಕುಣಿತ, ಕೋಲಾಟದಂತಹ ಪ್ರದರ್ಶಕ ಕಲೆಗಳಲ್ಲಿಯೂ ಕೂಡ ಗೀತೆಗಳದು ಮುಖ್ಯವಾದ ಪಾತ್ರ. ವಿವಿಧ ವಾದ್ಯಗಳ ಮಟ್ಟು, ತಾಳ, ಮೇಳಗಳೆಲ್ಲ ಈ ಜನಪದ ಗೀತೆಗಳ ಆಧಾರದ ಮೇಲೆಯೇ ಬಂದವುಗಳು ಎಂದರೆ ತಪ್ಪಾಗಲಾರದು. ಮತಿಘಟ್ಟ ಕೃಷ್ಣಮೂರ್ತಿಯವರ ಹೇಳಿಕೆಯಂತೆ, ''ಜನಪದ ಗೀತೆಗಳು ಮುಖ್ಯವಾಗಿ ಕರ್ಮ ಗೀತೆಗಳು ಅಂದರೆ ಕೆಲಸ ಮಾಡುತ್ತಾ ಹೇಳುವ ಹಾಡುಗಳು.'' ಎಂಬ ವಿಚಾರ ಒಪ್ಪತಕ್ಕದ್ದೆ. ತೋಂಡಿಯಾಗಿ, ನಿರಂತರವಾಗಿ ಉಳಿಯುವ ಸಾಹಿತ್ಯವನ್ನುಳ್ಳ ಜನರ ಕಾವ್ಯ ಮತ್ತು ಸಂಗೀತಗಳೇ ಈ ಜನಪದ ಗೀತೆಗಳು. ಜನಪದ ಗೀತೆಗಳಲ್ಲಿ ಧರ್ಮ-ಅಧರ್ಮ, ಪಾಪ-ಪುಣ್ಯ, ಸ್ವರ್ಗ-ನರಕಗಳ ಕಲ್ಪನೆ, ಪುನರ್ಜನ್ಮದ ಬಲವಾದ ನಂಬಿಕೆಗಳು, ನೀತಿ, ವಿಡಂಬನೆ, ಆದರ್ಶ, ಲೈಂಗಿಕತೆ, ಪ್ರೇಮ-ಪ್ರೀತಿ ಇತ್ಯಾದಿ ಮಾನವ ಬದುಕಿನ ಎಲ್ಲವೂ ಅನಾವರಣಗೊಳ್ಳುತ್ತದೆ. ಸ್ವೈಜತೆ ಮುಖ್ಯವಾದ ಲಕ್ಷಣ, ನಾಟಕೀಯತೆಯ ಲವಲೇಶಾಂಶವೂ ಅಲ್ಲಿರುವುದಿಲ್ಲ.

ಜಗತ್ತಿನಾದ್ಯಂತ ಜನಪದ ಗೀತೆಗಳು ಮಾನವ ಚೇತನಗಳ ನಡುವಣ ಪರಸ್ಪರ ಪ್ರೇಮಕ್ಕೆ, ಸ್ನೇಹಕ್ಕೆ ಜೀವನಪೂರ್ತಿ ಹಂಬಲಿಸಿ ಹಣ್ಣಾಗುತ್ತಾ ನಡೆದ ತುಂಬು ಮನಸ್ಸುಗಳ ಸೃಷ್ಟಿಯಾಗಿವೆ. ವಾಸ್ತವವಾಗಿ ಜನಸಮುದಾಯದ ಒಟ್ಟು ಬದುಕನ್ನು ಒಳಗೊಂಡಂತೆ ತೀವ್ರ ಆಶಾವಾದದ, ಅಲ್ಲಿನ ಸೋಲುಗಳನ್ನೇ ಮೆಟ್ಟಿಲಾಗಿಸಿಕೊಂಡ ಕನಸುಗಳ, ಹಲವು ಹತ್ತು ದುರಂತಗಳ ನಡುವೆಯೂ ಬೇಕುಗಳ ಪಟ್ಟಿಯ ಕೊನೆಗಾಣದ ಬಯಕೆಗಳನ್ನು



ಸಂಕೇತಿಸುವ ವೈಶಿಷ್ಟ್ಯಪೂರ್ಣ ಯಶಸ್ವೀ ಪ್ರಯತ್ನಗಳನ್ನು ಈ ಜನಪದಗೀತೆಗಳಲ್ಲಿ ಎಡೆಬಿಡದೆ ಕಾಣುತ್ತೇವೆ. ಸಮುದಾಯವೊಂದರ ಆಶಯಗಳನ್ನು ಅಭಿವ್ಯಕ್ತಿಸುವ ಉದ್ದೇಶವನ್ನು ಹೊಂದಿರುವ ಜನಪದ ಗೀತೆಗಳ ಲಕ್ಷಣಗಳೆಂದರೆ: ವಾಕ್ಪರಂಪರೆ, ಅಜ್ಞಾತ ಕರ್ತೃತ್ವ, ಪ್ರತಿಭಾಸಂಪನ್ನವಾದ ಭಾವತೀವ್ರತೆ, ಸಂಗೀತದ ಸಾಹಚರ್ಯ, ಕ್ರಿಯಾತ್ಮಕತೆ, ಸಾಮೂಹಿಕ ಉದ್ದೇಶಗಳನ್ನು ನೆರವೇರಿಸುವುದು.

ಕಾರಂತರು ಹೇಳಿರುವಂತೆ ''ಸಂಗೀತ ಮತ್ತು ಸಾಹಿತ್ಯಗಳೆರಡನ್ನು ಕೂಡಿಯೇ ಹೊರಹೊಮ್ಮಿದ ಶರೀರ ಜನಪದಗೀತೆಗಳದ್ದು'' (ಡಾ॥ ಶಿವರಾಮ ಕಾರಂತರು, ಜನಪದ ಗೀತೆಗಳು, ಪುಟ. ೮) ಈ ಮಾತು ಜನಪದ ಗೀತೆಗಳ ಉಗಮದ ಕಡೆಗೆ ಬೊಟ್ಟು ಮಾಡಿ ತೋರುತ್ತದೆ. ಕನ್ನಡ ಜನಪದ ಗೀತೆಗಳನ್ನು ಕುರಿತಂತೆ-''ಅವುಗಳ ವಿಶ್ಲೇಷಣೆ, ವಿವರಣೆಗಳನ್ನು ಜನಪದ ಪರಿಸರದಿಂದ ಬೇರ್ಪಡಿಸಿ ಜನಪದ ಗೀತೆಗಳನ್ನು ಕುರಿತು ಮಾಡುವ ವಿವೇಚನೆ ಒಂದು ಬಳ್ಳಿಯಿಂದ ಬಿಡಿಸಿ ತಂದ ಹೂವು, ಕಡಲದಂಡೆಯಿಂದ ಎತ್ತಿ ತಂದ ಕಪ್ಪೆ ಚಿಪ್ಪುಗಳನ್ನು ಕುರಿತು ನೀಡುವ ವಿವರಣೆ ಆಗುತ್ತದೆಯಷ್ಟೆ''. (ಡಾ॥ ದೇವೇಂದ್ರಕುಮಾರ ಹಕಾರಿ-ಜಾನಪದ ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ. ಪು. ೯೩.) ಮೊದಲೇ ತಿಳಿಸಿದಂತೆ ಜನಪದ ಗೀತೆಗಳು ಅಥವಾ ಹಾಡುಗಳು ಏಕ ವ್ಯಕ್ತಿಯ ಸೃಷ್ಟಿಯಾಗಿರದೆ, ಸಾಮೂಹಿಕ ಸೃಷ್ಟಿಯಾಗಿವೆ. ಜನಪದ ಗುಂಪಗಳೇ ಜನಪದ ಗೀತೆಗಳ ಆಕರ. ಜನಪದ ಗೀತೆಗಳ ಸೃಷ್ಟಿಕರ್ತರೂ ಜನಪದರೆ. ''ಕಾವ್ಯಗಳ ಆಕರಗಳ ಅಧ್ಯಯನ, ವಿಶ್ಲೇಷಣೆ, ಅಧ್ಯಾಪನೆಯನ್ನು ಸಮಾಜದ ಗುಂಪು ಅಧ್ಯಯನದಿಂದ ಬೇರ್ಪಡಿಸಲಾಗುವುದಿಲ್ಲ.''-ಎಂಬ ಕ್ರಿಸ್ಟೋಫರ್ ಕಾಡ್‌ವೆಲ್‌ನ ಮಾತುಗಳು ಸಮಂಜಸವೇ ಆಗಿವೆ. (Christopher candwele-Illusion and Realityil 956) ಜನಪದರ ಬದುಕು ಗಡಸು ಮತ್ತು ಪೆಡಸಿನಿಂದ ಕೂಡಿದ್ದು, ರೊಚ್ಚಿನಲ್ಲಿ ಚಚ್ಚಿಬಿಡುವ, ಕಿಚ್ಚಿನಲ್ಲಿ ಕೊಚ್ಚಿಬಿಡುವ, ಆನಂದ-ಉನ್ಮಾದದಲ್ಲಿ ಹಾಡಿ, ಕುಣಿದು, ಕುಪ್ಪಳಿಸುವ ಯಾವುದನ್ನು ಬಚ್ಚಿಟ್ಟುಕೊಳ್ಳದ, ಅಶ್ಲೀಲದ ಸೋಂಕಿಲ್ಲದ, ತೆರೆದ ಮನಸ್ಸಿನ, ಹೆದರಿಕೆ-ಬೆದರಿಕೆಗಳಿಲ್ಲದ, ಶೌರ್ಯ-ಧೈರ್ಯದ ಸ್ವಭಾವ.

ಜನಪದ ಗೀತೆಗಳು, ಕಾವ್ಯಗಳು ಶಿಷ್ಟಪದದಂತೆ ಲಿಖಿತ ರೂಪದಲ್ಲಿಲ್ಲ, ಬದಲಾಗಿ ಜನರ ಹೃದಯದ ಸೆಲೆಯಿಂದಲೇ ಅವು ಹೊಮ್ಮಿ ಮೌಖಿಕ ರೂಪದಲ್ಲಿಯೇ ಜನರ ಬಾಯಿಂದ ಬಾಯಿಗೆ ಹರಿದು ಬಂದು ಸಣ್ಣ-ಪುಟ್ಟ ಪದಗಳ ಸ್ಥಾನಪಲ್ಲಟವುಂಟಾಗಿದೆಯೇ ಹೊರತಾಗಿ ಮೂಲಕ್ಕೆ ಧಕ್ಕೆಯುಂಟಾಗಿಲ್ಲ. ಅದೇ ಸೆಲೆ, ಅದೇ ನೆಲೆ, ಅದೇ ಅಭಿವ್ಯಕ್ತಿಯನ್ನು ಉಳಿಸಿಕೊಂಡು ಬಂದಿದೆ. ಈ ಜನಪದ ಗೀತೆಗಳ ಅಭಿವ್ಯಕ್ತಿಯನ್ನು ಕುರಿತಂತೆ ಕ್ಯಾನ್ಡ್‌ವೆಲ್‌ರ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು: " Poetry is characteristically song, and song is characteristically something which, because of its rhyme is sing in unison, is capable of being the expression of a collective emotion". (Christopher Candwell: Illusion and Reality.p-24. 1956)''ಕ್ಯಾನ್ಡ್‌ವೆಲ್‌ರ

ಪ್ರಕಾರ ಹಾಡು ಕಾವ್ಯದ ವಿಶಿಷ್ಟ ಲಕ್ಷಣ. ಹಾಡನ್ನು ಲಯ, ತಾಳಗಳ ವೈಶಿಷ್ಟ್ಯಗಳಿಂದಾಗಿ ಹಾಡುವವರ ಬಾಯಿಂದ ರಾಗಮಯವಾಗಿ ಕೇಳಿಬರುತ್ತದೆ. ಈ ಹಿನ್ನೆಲೆಯಲ್ಲಿ ಸಮೂಹವನ್ನು ತನ್ನೆಡೆಗೆ ಸೆಳೆವ ಶಕ್ತಿಯನ್ನು ಹೊಂದಿದ್ದು ಅದು ಸಾಮೂಹಿಕ ಭಾವಾಭಿವ್ಯಕ್ತಿಯನ್ನು ಹೊಮ್ಮಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದಾಗಿದೆ.

ಕನ್ನಡ ಜನಪದ ಗೀತೆಗಳ ಪ್ರಕಾರಗಳು, ಅಲ್ಲಿರುವ ಸೊಬಗು, ಲಾಲಿತ್ಯ, ಸೌಂದರ್ಯ, ಚಾತುರ್ಯ, ವಿಡಂಬನೆ, ಸಾಮಾಜಿಕ, ಕೌಟುಂಬಿಕ ಚಿತ್ರಣ ಇತ್ಯಾದಿಗಳನ್ನು ಉದಾಹರಣೆ ಸಹಿತ ವಿವರಿಸುವ, ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದೊಂದು ರೀತಿಯ ಹೆಜ್ಜೇನು ಗೂಡಿಗೆ ಸುಡುಬಿಸಿಲಿನಲ್ಲಿ ಏಕಾಂಗಿಯಾಗಿ ಲಗ್ಗೆ ಹಾಕಿದಂತೆಯೇ ಸರಿ. ಒಂದೊಂದು ಪ್ರಕಾರಕ್ಕೆ ಒಂದೊಂದು ಅಧ್ಯಯನವನ್ನೇ ಬಯಸುತ್ತವೆ. ಈ ಕನ್ನಡ ಜನಪದ ಗೀತೆಗಳು, ಸಮುದ್ರಕ್ಕೆ ಹೋಗಿ ನನ್ನಲ್ಲಿರುವ ಪಾತ್ರೆ ತುಂಬುವಷ್ಟು ಮಾತ್ರ ನೀರು ತೆಗೆದುಕೊಂಡು ಬಂದಂತೆ ಇಲ್ಲಿನ ವಿವರಗಳು ಕೇವಲ ಪ್ರಾಥಮಿಕವಾಗಿರುತ್ತವೆ.

### ಕನ್ನಡ ಜನಪದ ಗೀತೆಗಳ ಪ್ರಕಾರಗಳು

'ಗರತಿಯ ಹಾಡು', 'ಮಲ್ಲಿಗೆ ದಂಡೆ', 'ಹಳ್ಳಿಯ ಹಾಡುಗಳು', 'ನಾಡಪದಗಳು' ಇತ್ಯಾದಿ ಸಾಹಿತ್ಯಿಕ ಗೀತೆಗಳನ್ನೊಳಗೊಂಡ ಮಹತ್ವದ ಸಂಕಲನಗಳು ಆರಂಭದಲ್ಲಿ ಪ್ರಕಟಗೊಂಡುದರಿಂದಲೇ ಮುಂದಿನ ಹಲವಾರು ವರ್ಷಗಳ ಕಾಲ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುವವರು ಇದರ ಹಿಡಿತದಿಂದ ಪಾರಾಗಿಲ್ಲ. ಆದಕಾರಣ ಹೆಚ್ಚು ಜನಪದ ಗೀತೆಗಳು ಕನ್ನಡದಲ್ಲಿ ಸಂಗ್ರಹವಾಗಲು ಅನುಕೂಲವಾಯ್ತು. ಹೀಗೆ ಸಂಗ್ರಹವಾದ ಜನಪದ ಗೀತ ಸಾಹಿತ್ಯವನ್ನು ಹೆಂಗಸರ ಹಾಡುಗಳು, ಗಂಡಸರ ಹಾಡುಗಳು, ಮಕ್ಕಳ ಪದಗಳೆಂದು ಸ್ಥೂಲವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು.

ಬೀಸುವ ಪದಗಳು, ಕುಟ್ಟುವ ಪದಗಳು, ಲಾಲಿ ಪದಗಳು, ದೇವರ ಪದಗಳು, ತಿಂಗಳ ಮಾಮನ ಪದಗಳು, ಕೊಂತಿಯ ಹಾಡುಗಳು, ಹಚ್ಚೆಯ ಹಾಡುಗಳು, ಮದುವೆಯ ಹಾಡುಗಳು, ಒಸಗೆಯ ಹಾಡುಗಳು, ನಾಗಪಂಚಮಿ ಹಾಡುಗಳು, ಬಸವನ ಅಷ್ಟಮಿಯ ಹಾಡುಗಳು, ಸೀಗಿಹುಣ್ಣಿಮೆ ಹಾಡುಗಳು,ಗುಳ್ಳವ್ವನ ಹಾಡುಗಳು, ಅರಳೆಲೆ ಬಸವನ ಹಾಡುಗಳು, ತುಳುಪಾರ್ದ(ಡ್ದ)ನಗಳು, ಉತ್ತರ ಕನ್ನಡದ ಹಾಲಕ್ಕಿಗಳ ತಾರ್ಲೆ ಬಾರ್ಲೆಯಂತಹ ಮಳೆರಾಯನನ್ನು ಕುರಿತ ಹಾಡು ಇವೆಲ್ಲವನ್ನು ಹೆಂಗಸರ ಹಾಡುಗಳ ಗುಂಪಿನಲ್ಲಿ ಹೆಸರಿಸಬಹುದು. ಕೋಲಾಟದ ಪದಗಳು, ಭಾಗವಂತಿಕೆ ಮೇಳ, ಅಂಟಿಕ-ಪಂಟಿಕೆ, ಮಾನೌಮಿ ಪದಗಳು, ಕಂಬಿಯ ಪದಗಳು, ಮೋಹರಂ ಪದಗಳು, ಸುಗ್ಗಿ, ಹಂತಿಯ ಹಾಡುಗಳು ಇತ್ಯಾದಿ ಗಂಡಸರ ಪದಗಳು, ಶಿಶು ಪ್ರಾಸಗಳನ್ನು ಮಕ್ಕಳ ಪದಗಳ ಗುಂಪಿಗೆ ಸೇರಿಸಬಹುದು.



### ಹೆಂಗಸರ ಪದಗಳು

ಹೆಂಗಸರ ಹಾಡುಗಳಲ್ಲಿ ಬೀಸೋ ಕಲ್ಲಿನ ಪದಗಳು ಅಗ್ರಸ್ಥಾನ ಪಡೆದಿವೆಯೆನ್ನಬಹುದು. ಮೊದಲು ಭೂತಾಯಿಯನ್ನು ನೆನೆಯುವ:

"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ।  
ಎಳ್ಳು ಜೀರೀಗೆ ಬೆಳೆವಂತಾ। ಭೂಮಿತಾಯ್ನ  
ಎದ್ದೊಂದರಗಳಿಗೆ ನೆನುದೇನೂ॥

ಎಂಬ ಭೂ ಸ್ತುತಿಗೀತೆಯಿಂದ ಪ್ರಾರಂಭಿಸುತ್ತಾಳೆ ಜನಪದ ಗಾಯಕಿ, ಸುಂಯ್‌ಂಯ್ ಎಂದು ತಿರುಗುವ ಬೀಸುವ ಕಲ್ಲಿನ ಲಯಕ್ಕೆ ಸರಿಯಾಗಿ ಹೊಂದಿಸಿಕೊಂಡು:

"ಕಲ್ಲಮ್ಮ ಮಾತಾಯಿ ಮೆಲ್ಲಮ ರಾಜುಣುವ।  
ಜಲ್ಲಾ ಜಲ್ಲಾನೆ ಉದುರಮ್ಮ। ನಮ್ಮನೆಯ  
ಬೆಲ್ಲದಾರುತಿಯ ಬೆಳುಗೇನೂ॥"

"ತಾಯಿ ಸರಸೋತಿ ಮೆಲ್ಲವ್ವ ರಾಜುಣುವ।  
ಜಕ್ಕ ಜಕ್ಕನೆ ಉದುರವ್ವ। ನಾನಿನಗೆ  
ತೆಂಗಿನೆಳಗಾಯಿ ಹೊಡುದೇನೂ॥"

ಈ ತ್ರಿಪದಿಗಳಲ್ಲಿ ಕನ್ನಡದ ಗರತಿ ಬೇಗ ಬೀಸುವ ಕೆಲಸ ಮುಗಿದು ಬೇರೆ ಕೆಲಸಗಳಿಗೆ ಅವಕಾಶವಾಗಲಿ ಎಂದು ಕಲ್ಲಮ್ಮನನ್ನು ಪ್ರಾರ್ಥಿಸುತ್ತಾಳೆ. ಇಲ್ಲಿಂದಲೇ ಗರತಿಯ ಸಾಹಿತ್ಯ ಉದಯವಾಗಿರಬಹುದೆನ್ನಿಸುತ್ತದೆ. ತನ್ನ ಕಾಯಕದ ಜೊತೆಗೆ ತಾನು ಬಳಸುವ ಕಲ್ಲು ಕಲ್ಲಮ್ಮ ತಾಯಿಯಾಗುತ್ತಾಳೆ. ಭಗವತಿಯಾಗುತ್ತಾಳೆ. ಆ ಭಗವತಿ ತೃಪ್ತಳಾದರೆ ಎಲ್ಲವೂ ಸುಗುಮವಾಗಿರುತ್ತದೆ ಎಂಬುದು ಇಲ್ಲಿನ ಆಶಯ. ತೆಂಗಿನೆಳಗಾಯಿ, ತುಪ್ಪದಾರುತಿಗಳ ಲಂಚದ ಆಸೆಯನ್ನು ಆ ಕಲ್ಲಮ್ಮ ತಾಯಿಗೆ ತೋರಿಸುತ್ತ ತನ್ನ ಕೆಲಸ ಬೇಗ ಮುಗಿಯಲಿ ಎಂದು ಬೇಡುತ್ತಾಳೆ ಹೆಣ್ಣುಮಗಳು.

ಕುಟ್ಟುವ ಪದಗಳದು ಇನ್ನೊಂದು ಬಗೆ. ನಾರಿಯರಿಬ್ಬರು ಕುಟ್ಟುವಾಗ ಒನಕೆಯನ್ನು ಹಿಡಿದು ಅದರ ಗತ್ತಿಗೆ ತಕ್ಕಂತೆ ತಮ್ಮ ಉಸಿರಿನ ಏರಿಳಿತಕ್ಕೆ ತಕ್ಕಹಾಗೆ ಹಾಡನ್ನು ಅಳವಡಿಸಿಕೊಳ್ಳುತ್ತಾರೆ. ದಕ್ಷಿಣ ಕನ್ನಡದ ಮೇರರ ಹೆಣ್ಣುಮಕ್ಕಳ ಬಾಯಿಂದ ಬರುವ ಈ ಕುಟ್ಟುವ ಪದದ ಕೆಲವು ಸಾಲುಗಳನ್ನು ಉದಾಹರಿಸಬಹುದು:

ನೆಲ್ಲಕ್ಕಿ ಕುಟ್ಟೊರೆಲ್ಲಾ ಕಲ್ಲೂರುಚಿ ಬಡಿರಯ್ಯ  
ಬಲ್ಲಿಗರ ಮಗಳು ಬಯಕೀಯಾ। ಕಲ್ಲಕೇರಿಲೂ  
ಕಂಚಿನ ಬಾಗಲು ಬಿಡುರಯ್ಯ॥

ಭತ್ತ ಕುಟ್ಟುವಾಗ ಅಕ್ಕಿ ತಳ್ಳುವಾಗ ಗರತಿಯನ್ನು ಹಾಳುಮಾಡುವ ಎಲೆ ಅಡಿಕೆಗಳನ್ನು ನಿಂದಿಸುತ್ತಾರೆ:

ಆಳ್‌ಂಗಡಿ ಕಾಯ್ ಸೊಪ್ಪು। ಧೂಳಂಗಡಿ ಸುಣ್ಣಾವು
ರಾಯರಂಗಡಿಯ ಬಿಳಿ ಎಲೆ। ಬಿಟ್ಟೀಯ ಹುಳು
ಹಾಳು ಮಾಡಿದವು ಗರುತೀಯಾ।

ಇಂಥ ಹಾಡುಗಳು ನಮ್ಮೆದೆಯಲ್ಲಿ ತುಂಬಿ, ನಾಲಿಗೆಯ ಮೇಲೆ ನಲಿದಾಡುತ್ತವೆ. ಅವುಗಳನ್ನು ಎಷ್ಟು ಹಾಡಿದರೂ ಕೃಷ್ಣಸ್ವಾಮಿಯನ್ನು ನೆನೆಯದಿದ್ದರೆ ಯಾವ ಫಲವೂ ಇಲ್ಲ ಎಂಬ ದೈವೀ ಕಲ್ಪನೆಯ ಹಾಡುಗಳಿಗೆ ಬರವಿಲ್ಲ.

ದುಟ್ಟಂಗಳಾಡೂ ಎಷ್ಟೇ ಹಾಡಿದರೇನೂ।
ಕ್ರಿಷ್ಣ ಸೋಮಿಗಳೂ ನೆನಯದೋ। ಆಡೂನೂ
ಎಷ್ಟೇ ಹಾಡಿದರೂ ಫಲುವಿಲ್ಲಾ ॥

ಭತ್ತ ಕುಟ್ಟುವಾಗ ಒಗಟಿನ ಹಾಡುಗಳನ್ನೂ ಹಾಡುತ್ತಾರೆ.

ಬಡುವ ಕಟ್ಟಿದ ಮನೆ ಬಲ್ಲಿಗೊಕ್ಕುಲಾಗಿ।
ಆಡಿ ಅಡುಕೆ ಹಾಳೆಗಳು ಮ್ಯಾಲೆ। ಐತೂವೆ
ನೀ ಬಲ್ಲಿರೇಳೂ ಅರುತಾವೂ ॥

ನಿನ್ನ ಕನ್ನಡುದಾಡು ಅನ್ನೆರಡೇನೇ ಬಲ್ಲೆ।
ಕನ್ನಡ ಶಿವುನಾ ಪದನಾವೂ। ಚಿಕ್ಕೂವೆ
ಅಕ್ಕಿ ಅರುತಾವೇ ಅರುತುಂಟಾ ॥

ಇಲ್ಲಿನ ಹಾಡುಗಳು ಪ್ರಶ್ನೋತ್ತರ ರೂಪದಲ್ಲಿರುತ್ತವೆ. ಒಬ್ಬಾಕೆ ಪ್ರಶ್ನೆ ಕೇಳಿದರೆ ಮತ್ತೊಬ್ಬಾಕೆ ಅವುಗಳನ್ನು ಒಡೆಸುತ್ತಾಳೆ. ಇಲ್ಲಿ ಬೆಳೆದ ಭತ್ತವೇ ಬಡುವ ಕಟ್ಟಿದ ಮನೆ. ಅದನ್ನು ಕುಟ್ಟಿ ಸಿಪ್ಪೆ ತೆಗೆದು ಅನ್ನಮಾಡಿ ಉಣ್ಣುವುದನ್ನು ಬಿಡಿಸುವಂತೆ ಹಾಕಿದ ಒಬ್ಬಳ ಪ್ರಶ್ನೆಯನ್ನು ಮತ್ತೊಬ್ಬಳು: ಈ ಕನ್ನಡದ ಒಗಟನ್ನು ಒಡೆಸುವುದು ಕಷ್ಟವೇನಲ್ಲ. ಅದು ಅಕ್ಕಿ ಎಂಬ ಅರ್ಥ ಉಂಟು ಎಂಬುದನ್ನು ಅರುತುಂಟು ಎಂದು ಬಳಸಿದ್ದಾಳೆ. ಈ ಭತ್ತ ಕುಟ್ಟುವಾಗಿನ ಹಾಡುಗಳು ಮುಗಿಯದ ಹಾಡುಗಳು. ಅವುಗಳನ್ನು ಎಷ್ಟು ಹಾಡಿದರೂ, ಇನ್ನಷ್ಟು ಹಾಡಬಲ್ಲೆವು ಎನ್ನುತ್ತಾರೆ.

ಹತ್ತು ಸಾವಿರ ಹಾಡು ಎತ್ತಿಮ್ಯಾಲೆ ಕಳುಗೀದಿ
ಮತ್ತೂ ಸಾವುರನಾ ಕಲುಸೇನೂ। ಲತ್ತೀಗೆ
ನಿನಗೂ ಸಾವುರನಾ ಕಲುಸೇನೂ ॥

ಕನ್ನಡ ಜನಪದ ಗೀತೆಗಳಲ್ಲಿ ಅಕ್ಕಿ ತಳ್ಳುವ ಮತ್ತು ಭತ್ತ ಕುಟ್ಟುವಾಗ ಹಾಡುವ ಹಾಡುಗಳು ಯಥೇಚ್ಛವಾಗಿ ದೊರೆಯುತ್ತದೆ. ಅವುಗಳ ಸಂಗ್ರಹ ಮತ್ತು ಸಂಕಲನಗಳು ಹೊರಬರಬೇಕಾಗಿದೆ. ಗುಂಡ್ಮಿ ಚಂದ್ರಶೇಖರ ಐತಾಳರ ''ಕೈಲೀಯ ಕರೆದ ನೊರೆಹಾಲು'', ''ಮದ್ದುಂಟೆ ಜನನ ಮರಣಕ್ಕೆ'' ಸಂಗ್ರಹ ಕೃತಿಗಳಲ್ಲಿ ದಕ್ಷಿಣ ಕನ್ನಡ ಒಂದೆ ಜಿಲ್ಲೆಯಲ್ಲಿ ಕನ್ನಡ ಮಾತನಾಡುವವರಲ್ಲಿ ಇರುವ ಈ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.



ಇದರಿಂದ ಅರಿವಾಗುತ್ತದೆ ಜನಪದ ಗೀತೆಗಳ ಸಂಗ್ರಹಕಾರ್ಯ ಎಷ್ಟರಮಟ್ಟಿಗೆ ಆಗಬೇಕಿದೆ ಎಂದು.

### ಲಾಲಿ ಪದಗಳು

ಕನ್ನಡ ಜನಪದ ಗೀತೆಗಳಲ್ಲಿ ಉನ್ನತ ಕಾವ್ಯಗುಣಗಳಿಂದ ರಂಜಿಸುವ ತ್ರಿಪದಿಗಳು ಈ ಲಾಲಿ ಪದಗಳು ತಾಯಿ ತನ್ನಕಂದನನ್ನು ತೂಗಿ ಮಲಗಿಸುವಾಗ ಹಾಡುವ ದೂರಿಪದಗಳು- ದೂರಿ ದೂರಿ ದುಕ್ಕಾಲಮ್ಮ ಎಂಬುದಾಗಲಿ, ಆಡಿ ಬಾ ನನ ಕಂದ ಅಂಗಾಲ ತೊಳುದೇನು। ತೆಂಗಿನ ಕಾಯಿ ತಿಳಿನೀರ ತಕ್ಕೊಂಡು ಬಂಗಾರ ಮೋರೆ ತೊಳುದೇನು ಎಂಬಲ್ಲಿ ಅಂಟು ಅಂಟಾದ ತೆಂಗಿನ ಕಾಯಿಯ ಎಳನೀರಿನಿಂದ ಬಂಗಾರದ ಮೋರೆಯನ್ನು ತೊಳೆವಲ್ಲಿ ಆ ತಾಯಿ ಕಟ್ಟಿದ ಶಬ್ದಚಿತ್ರ ಎಷ್ಟು ಸುಂದರವಾಗಿದೆ.

ನನ್ನಮ್ಮನಂತೋರು ಹನ್ನೆರಡು ಮಕ್ಕಳು
ಬನ್ನಿಯ ಮರದ ನೆರಳಲ್ಲಿ। ಆಡುವಾಗ
ಸನ್ಯಾಸಿ ಜಪವ ಮರೆತಾನು ॥

ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ ಬನ್ನಿಯ ಮರದ ಕೆಳಗೆ ಆಟವಾಡುವ ಹಸುಳೆಯ ಬಾಲಲೀಲೆಗಳನ್ನು ಕಂಡು ತನ್ನ ಜಪವನ್ನೇ ಮರೆತು ಆ ಹಸುಗಂದನೊಡನೆ ಆಟ ಆಡಲು ಪ್ರಾರಂಭಿಸಿದ ಎಂಬುದನ್ನು ಜನಪದ ಗಾಯಕಿ ಅದೆಷ್ಟು ಮನೋಜ್ಞವಾಗಿ ಬಿಂಬಿಸಿದ್ದಾಳೆ! ಎಂತಹ ವ್ಯುತ್ಪತ್ತಿ, ಪ್ರತಿಭೆ ಇಲ್ಲಿ ಪಡಿಮೂಡಿದೆ ಎನಿಸದಿರದು.

ಕೂಸಿದ್ದ ಮನೆಗೆ ಬೀಸಣಿಗೆ ಯಾತಕ್ಕೆ
ಕೂಸು ಕಂದಯ್ಯ ಒಳ ಹೊರಗೆ। ಆಡಿದರೆ
ಬೀಸಣಿಗೆ ಗಾಳಿ ಸುಳಿದಾವು ॥

ಕೂಸು ಇದ್ದರೆ ತಂಗಾಳಿ ಬೀಸಿದಂತೆ, ಬೀಸಣಿಗೆಯ ಅಗತ್ಯವೇ ಬರುವುದಿಲ್ಲ. ಮಗು ಒಳ ಹೊರಗೆ ಓಡಿಯಾಡುತ್ತಿದ್ದರೆ ಬೀಸಣಿಗೆಯ ಗಾಳಿಗಿಂತಲೂ ತಂಪಾದ ಗಾಳಿ ಸುಳಿದಾಡಿಂತಾಗುತ್ತದೆ ಎಂಬ ಅರ್ಥವನ್ನು ಸ್ಫುರಿಸುತ್ತದೆ ಮೇಲಿನ ಗೀತೆ. ಇದೇ ಕನ್ನಡ ಜನಪದ ಗೀತೆಗಳ ನುಡಿ ಚಮತ್ಕಾರ.

### ದೇವರ ಪದಗಳು

ಕನ್ನಡ ಜನಪದ ಗೀತೆಗಳಲ್ಲಿ ಅದರಲ್ಲೂ ಹೆಂಗಸರ ಪದಗಳಲ್ಲಿ ದೇವರನ್ನು ಕುರಿತ ಗೀತೆಗಳು ವಿಪುಲವಾಗಿ ದೊರೆಯುತ್ತವೆ. ದೇವರ ಪದಗಳಲ್ಲಿ ಮಾರಮ್ಮನನ್ನು ಕುರಿತಂತೆ ಹಾಡುವ ಪದಗಳ ಸಂಖ್ಯೆ ಅಧಿಕವಾಗಿರುತ್ತವೆ. ಎಲ್ಲ ಗ್ರಾಮದೇವತೆಗಳನ್ನು ಕುರಿತ ಹಾಡುಗಳು ಒಂದೇ ತೆರನಾಗಿದ್ದು; ಆಯಾ ಗ್ರಾಮದ ದೇವತೆಗಳ ಹೆಸರನ್ನು ಸೇರಿಸಿಕೊಂಡು ಹಾಡುವುದುಂಟು. ಬಾಣಂತಿ ಮಾರಮ್ಮ, ಕಬ್ಬಾಳಮ್ಮ, ಹುಲೂರಮ್ಮ, ಆದಿಶಕ್ತಿ, ಜಲದಗೇರಮ್ಮ, ಯಳ್ಳಮ್ಮ, ಬರೆಯಮ್ಮ, ಪ್ಲೇಗಮ್ಮ, ಕಾಲರದಮ್ಮ,

ದಡಾರದಮ್ಮ ಮುಂತಾದ ಮಾರಿದೇವತೆಗಳನ್ನು ಕುರಿತಂತೆ ಹಾಡುತ್ತಾರೆ. ಅಲ್ಲಿ ನಿಂದಾ ಸ್ತುತಿಗಳು ಸಾಕಷ್ಟಿರುತ್ತವೆ. ಆಸಾದಿ ಮಾರಮ್ಮನನ್ನು ಬಯ್ಯುತ್ತಾನೆ. ಬೈಗುಳದ ಮೂಲಕವೇ ಅರ್ಚನೆ ಮಾಡುತ್ತಾನೆ. ಆಕೆ ಬೈದರೇನೇ ಮಾತು ಕೇಳುವುದು ಎನ್ನುವಲ್ಲಿ ಮಾನವರಿಗಿಂತ ದೇವರು ಹೆಚ್ಚೇನಲ್ಲ ಎಂಬ ಬಂಡಾಯದ ಕೂಗು ಕೇಳುತ್ತದೆ. ಬಾಣಂತಿ ಮಾರಮ್ಮನನ್ನು ಕುರಿತು ಹೆಣ್ಣುಮಗಳೊಬ್ಬಳು ಹೇಳುತ್ತಾಳೆ, ಮೊಂಡುಕ್ಯೂತವ್ವೆ ಗುಡಿವೊಳ್ಗ ಬಾಣ್ತವ್ವ। ಮುಂದ್ ಬರೋ ವಾತ ಮುದಿ ಎಂದು ॥ ಎನ್ನುವಲ್ಲಿ ಬಲಿಯ ಅರ್ಪಣೆಗೆ ತಂದಿರುವ ಗಂಡು ಮೇಕೆ (ವಾತ=ಓತ) ಮುದಿ. ಅದು ನನಗೆ ಬೇಡ, ಎಳೆಮರಿಯನ್ನು ತಂದರೆ ಗುಡಿಯಿಂದ ಹೊರಬರುತ್ತೇನೆ, ನಿಮ್ಮ ಬಲಿಯನ್ನು ಒಪ್ಪಿಕೊಳ್ಳುತ್ತೇನೆ ಎಂದು ಹಟ ಮಾಡುವಲ್ಲಿ ದೇವರನ್ನು ಜನಪದರು ನೋಡುವ ದೃಷ್ಟಿ, ಅಲ್ಲಿ ಕಟ್ಟಿರುವ ಜನಪದ ಗೀತೆಯ ಸೌಂದರ್ಯದ ಅರಿವಾಗದಿರದು. ಉತ್ಸವ, ಜಾತ್ರೆ, ಹಬ್ಬ ಹರಿದಿನಗಳಲ್ಲಿ ಹೆಂಗಸರ ಮುಮ್ಮೇಳ ಹಿಮ್ಮೇಳಗಳಲ್ಲಿ ಹಾಡುವ ಗೀತೆಗಳು, ದೇವರನ್ನು ಕುರಿತು, ಆತನ/ಆಕೆಯ ಲೀಲೆಗಳನ್ನು ಕುರಿತು, ವಿನೋದಗಳನ್ನು ಕುರಿತು, ಪೂಜೆ, ತೇರು, ಗುಡಿ ಗೋಪುರಗಳನ್ನು ಕುರಿತ ಬಣ್ಣನೆಗಳು ಒಂದೇ ಎರಡೇ ! ಈ ಹಾಡುಗಳಲ್ಲಿ ದೇವರೇ ಕೇಂದ್ರಬಿಂದುವಾದರೂ ಸಾಮಾನ್ಯ ಜೀವಭಾವ ಆರೋಪಿಸಿ ತಮ್ಮ ನಡುವಿನ ಒಂದು ದಿವ್ಯಶಕ್ತಿಯಾಗಿ ಕಲ್ಪಿಸಿಕೊಳ್ಳುತ್ತಾರೆ. ಅವಳ ಒಂದೊಂದು ಒಡವೆಗಳನ್ನು ಕುರಿತು ಹಾಡುತ್ತಾರೆ.

> ಪಿಲ್ಲಿಯ ಕಾಲೋಳೆ ಚೆಲ್ಲಿದ ನೆರಿಗ್ಯೋಳೆ
> ಕಲ್ಲಮ್ಯಾಲೆ ಕಾಲ ತೊಳೆಯೋಳೆ। ಬಾಣತಮ್ಮಾ
> ನಿನ್ನ ಪಿಲ್ಲಿ ಸಾವಿರುಕೆ ಬೆಲೆಯಾದೋ ॥

ಇದೇ ಬಾಣತವ್ವ ಕೂತಗೊಂಡನಹಳ್ಳಿಯಲ್ಲಿ ನೆಲೆಗೊಂಡದ್ದು ಯಾಕೆ ಎಂಬುದನ್ನು ಹೇಳುತ್ತಾಳೆ ಜನಪದ ಗಾಯಕಿ:

> ಕಾಡಿನ ಅಂದಾಕೆ ಕಾಡಿನ ಚೆಂದಾಕೆ
> ಕಾಡುಮಲ್ಲಿಗೆಯ ಗಮಲಾಕೆ। ಬಾಣತಮ್ಮಾ
> ಕಾಡೊಳ್ಳೆದೆಂದು ನೆಲೆಗೂಂಡ್ಲು ॥

ಸೀತೆ, ಶ್ರೀರಾಮ, ಆಂಜನೇಯ, ಸುಗ್ರೀವ, ವಾಲಿ, ರಾವಣ-ಕುಂಭಕರ್ಣ, ಕುಂತಿ, ಧರ್ಮ, ಅರ್ಜುನ, ಕೃಷ್ಣ, ಸುಭದ್ರೆ ಎಲ್ಲರನ್ನೂ ಜನಪದರು ಬಲ್ಲರು. ಹೀಗೆ ಕೇಳಿದ ಅವರ ಕಥೆಗಳನ್ನು ವ್ಯಾಸ ವಾಲ್ಮೀಕಿಯಂಥ ಶಿಷ್ಟಕವಿಗಳು ತಮ್ಮ ಬುದ್ಧಿವಂತಿಕೆಯ ಮೆರುಗನ್ನು ಅವಕ್ಕೆ ಕೊಟ್ಟು ಮಹಾಕಾವ್ಯಗಳ ಹುಟ್ಟಿಗೆ ಏಕೆ ಕಾರಣರಾಗಿರಬಾರದು? ಎಂಬ ಸಂದೇಹಗಳು ಮೂಡುತ್ತವೆ.

**ತಿಂಗಳ ಮಾಮನ ಪದಗಳು**

ಮಳೆ ಆಚರಣೆಗೆ ಸಂಬಂಧಿಸಿದ ಹಾಡುಗಳಿವು. ಬಯಲು ಸೀಮೆಯ ಮಂಡ್ಯ, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗೌರಿ ಹಬ್ಬಕ್ಕೆ ಮುಂಚೆ ಅಥವಾ ನಂತರ ೧೨ ಇಲ್ಲವೆ



೯ ದಿನಗಳವರೆಗೆ ಈ ಪೂಜೆಯನ್ನು ಆಚರಿಸುತ್ತಾರೆ. ಇವು ಆಚರಣೆಗೆ ಸಂಬಂಧಿಸಿದ ಹಾಡುಗಳು ಅದರ ಒಂದು ತ್ರಿಪದಿ:

> ತಿಂಗಾ ತಿಂಗಳಿಗೆ ತಿಂಗಳ ಮಾವನ ಪೂಜೆ
> ಸಿದ್ದಾರ ಪೂಜೆ ಶಿವಪೂಜೆ। ನಮ್ಮೂರ
> ಹನುಮಾನ ಪೂಜೆ ಅನುಗಾಲ।

ಈ ಹಾಡುಗಳನ್ನು ಕೋಲಾಟಗಳಲ್ಲಿಯೂ ಹಾಡುತ್ತಾರೆ. 'ಕೋಲು ಮಲ್ಲಿಗೆ ಕೋಲೆ। ಕೋಲು ಸಂಪಿಗೆ ಕೋಲೆ।' ಎಂಬ ಪಲ್ಲವಿಯನ್ನು ಸೇರಿಸಿಕೊಂಡು ಹಾಡುವುದುಂಟು. ಚಂದ್ರನನ್ನು ಮಳೆಯ ದೇವತೆಯೆಂದು ಪರಿಗಣಿಸಿಕೊಳ್ಳಲಾಗಿರುತ್ತದೆ. ಮಳೆರಾಯ ಸಾಲವನ್ನು ತರಲು ಹೋಗಿದ್ದಾನೆ; ಸಾಲ ತಂದು ಲೋಕಕ್ಕೆ ಮಳೆಯನ್ನು ಕೊಡಬೇಕು ಆದುದರಿಂದ ಅವನನ್ನು "ಬೈಯದಿರಿ" ಎಂಬ ವರ್ಣನೆಗಳು ಈ ಹಾಡುಗಳಲ್ಲಿ ಬರುತ್ತವೆ. ಶಿಶು ಪ್ರಾಸಗಳ ಅನೇಕ ಪದಗಳು ಈ ಹಾಡುಗಳಲ್ಲಿ ಅಡಗಿವೆ.

**ಕೊಂತಿಯ ಹಾಡುಗಳು**

ತಿಂಗಳ ಮಾಮನ ಪದಗಳಂತೆಯೇ ಕೊಂತಿ ಪೂಜೆಯ ಪದಗಳು ಕನ್ನಡ ಜನಪದ ಗೀತೆಗಳಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿವೆ. ಕುಂತ್ಯಮ್ಮ ಪಾಂಡವರ ಅಮ್ಮ. ಹಾಗೆಯೇ ಬೇಸಾಯಗಾರರ (ಒಕ್ಕಲು ಮಕ್ಕಳ ಹಿರಿಯಮ್ಮ) ಮೂಲತಾಯಿ. ಮಕ್ಕಳನ್ನು ಕಟ್ಟಿಕೊಂಡು ಕಾಡು ಸುತ್ತಿ, ಕಾಡಿನಲ್ಲಿ 'ಅವರೆ' ಬಿತ್ತಿ ಈ ಭೂಮಿಯ ಮೇಲೆ ಬಿಟ್ಟುಹೋದಳು.

> ಸತ್ಯವುಳ್ಳ ಧರ್ಮರು ಸತ್ತರು ಎನದೀರಿ
> ಸತ್ತರೆ ಲೋಕ ಉಳಿಯದು। ಧರ್ಮರು
> ಬಿತ್ತಿಹೋಗ್ಯವರೆ ಅವರೇಯ ॥

ಈ ಲೋಕಕ್ಕೆ ಅನ್ನಕೊಟ್ಟವರಾದ ಧರ್ಮರನ್ನು ಸತ್ತರೆಂದು ಹೇಳಬೇಡಿ; ಅವರು ಸತ್ತು ಹೋದರೆ ಈ ಲೋಕ ಉಳಿಯುವುದಿಲ್ಲ. ಎಲ್ಲೆಲ್ಲೂ ಹಾಹಾಕಾರವೇಳುತ್ತದೆ. ಅನ್ನದ ಕೂಗೆದ್ದು ಅಲ್ಲೋಲ ಕಲ್ಲೋಲವಾಗುತ್ತವೆಂಬ ಹಲವಾರು ಹಾಡುಗಳು ಇಲ್ಲಿ ಕಾಣಸಿಗುತ್ತವೆ. ಕಾರ್ತೀಕ ಮಾಸದಲ್ಲಿ ೧೫ ದಿನಗಳು ನಡೆಯುವ ಕೊಂತಿ ಪೂಜೆಯಲ್ಲಿ ಹೆಚ್ಚಾಗಿ ಹೆಂಗಸರೇ ಭಾಗವಹಿಸುವುದರಿಂದ ಕೊಂತಿಯ ಪದಗಳನ್ನು ಹೆಂಗಸರ ಹಾಡುಗಳ ಗುಂಪಿಗೆ ಸೇರಿಸಬಹುದು.

**ಹಚ್ಚೆಯ ಪದಗಳು**

ಕನ್ನಡ ಜನಪದ ಗೀತೆಗಳಲ್ಲಿ ಹಚ್ಚೆಯ ಪದಗಳು ಒಂದು ಪ್ರತ್ಯೇಕ ವರ್ಗವಾಗಿ ನಿಲ್ಲುತ್ತವೆ. ಕೊರಮ ಜನಾಂಗಕ್ಕೆ ಸೇರಿದ ಕೊರವಂಜಿ ಈ ಅಂಗಶೃಂಗಾರದ ಹಾಡುಗಳನ್ನು ಸೊಗಸಾಗಿ ಹಾಡುತ್ತ ಹಚ್ಚೆಯ ಸೂಜಿಯಿಂದ ಚುಚ್ಚುವಾಗ ಆಗುವ ನೋವನ್ನು ಮರೆಸುತ್ತಾಳೆ.

ಹಚ್ಚೆ ಹುಯ್ಸಿದಮ್ಮ ಹಾಡು ಕಲಿಸಿದಮ್ಮ
ಹಸುಮಕ್ಕಳಿಗೆ ಹಾಲ ಎರುದಮ್ಮ-ಹುತಾಳಿ
ಕುಶಲದ ಸತ್ರರಿಗೆ ನೆರಳಾದೆ
ಅಚ್ಚೆ ಹುಯ್ಸಿದಮ್ಮನ ಎಲ್ಲೆಲ್ಲಿ ನೆನೆದೇವು
ಕಲ್ಲುಬಾವಿ ತಾವ ಕೈತೊಳದೂ। ಕೈಕಾಲು ಮಕ ತೊಳದು
ನನ್ನ ಹುಚ್ಚೆ ಹುಯ್ಸಿದಮ್ಮನ ಸುಖಬಾಳು ॥

ಹೀಗೆ ಕೊರವಂಜಿ ಹೇಳುವ ಹಚ್ಚೆಯ ಹಾಡುಗಳು ವೈವಿಧ್ಯಮಯವಾಗಿದ್ದು, ಹಾಡುವ ಧಾಟಿಯೂ ಸಾಮಾನ್ಯ ಗರತಿಯ ಹಾಡುಗಳಿಗಿಂತ ಭಿನ್ನವಾಗಿರುತ್ತವೆ. ಅನೇಕ ಬಿಡಿ ಹಾಡುಗಳನ್ನು ಕಥನ ಗೀತೆಗಳನ್ನು ಇವರು ಹಾಡುತ್ತಾರೆ.

**ಸೋಬಾನೆ ಪದಗಳು**

ಹೆಂಗಸರ ಹಾಡುಗಳಲ್ಲಿ ಮದುವೆ ಸಂಪ್ರದಾಯದ ಹಾಡುಗಳಿಗೆ ಪ್ರತ್ಯೇಕ ಸ್ಥಾನವಿದೆ. ಹಿಂದೆ ನಾಗಸ್ವರ-ಡೋಲು ಇತ್ಯಾದಿ ಮಂಗಳವಾದ್ಯಕ್ಕೆ ಬದಲಾಗಿ ಸೋಬಾನೆ ಪದಗಳಲ್ಲೇ ಮದುವೆ ಮುಗಿಯುತ್ತಿದ್ದುದರ ಬಗೆಗೆ ಹೇಳುತ್ತಾರೆ ಜನಪದರು. ಹೆಚ್ಚಾಗಿ ಹೆಂಗಸರೇ ಹಾಡುವುದು ರೂಢಿ. ಅಪರೂಪಕ್ಕೆ ಸೋಬಾನೆ ರಾಮಯ್ಯನಂತಹವರು ಹಾಡುತ್ತಾರೆ. ಆದರೆ ವಿವಾಹ ಸಂದರ್ಭದಲ್ಲಿ ಹಾಡುವವರು ಮಾತ್ರ ಹೆಂಗಸರೆ. ಹೆಣ್ಣು ನೋಡಲು ಹೊರಟಾಗಿನಿಂದ ಪ್ರಾರಂಭವಾಗಿ, ಶೋಬನದವರೆಗೂ ಹಾಡುತ್ತಾರೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ಶಾಸ್ತ್ರ ಸಂಪ್ರದಾಯಗಳಿಗೆ ಸಂಬಂಧಿಸಿದ ಗೀತೆಗಳನ್ನು ಹಾಡುವುದುಂಟು. ಪ್ರಾದೇಶಿಕವಾಗಿ ಬದಲಾದಂತೆ ಕಂಡರೂ ಹಾಡುಗಳೆಲ್ಲ ಒಂದೇ ತೆರನಾಗಿರುತ್ತವೆ. ದಕ್ಷಿಣ ಕನ್ನಡದ ಮೇರರಲ್ಲಿ ಹೆಣ್ಣು-ಗಂಡಿಗೆ ಬಳು ಮೀಸುವಾಗ (ಶಾಸ್ತ್ರದ ನೀರು ಎರೆವಾಗ) ಹಾಡುವ ಹಾಡುಗಳ ಕೆಲವು ಸಾಲುಗಳು:

ಎಂದೇಳುದಂಗಾಣ ಇಂದೇನೆ ಕಸುರೆದ್ದೂ
ಊರಿಗೂ ಬುಧುವಂತನ ಸೊಸಿ ಮಿಂದೂ। ಬಳು ನೀರು
ಲರಿದಾವೆ ಜಾಜೀ ವನುಕೆಲ್ಲಾ। ಸೋಬಾನ್ನ ॥

ಹಾಗೆಯೇ ಬಯಲು ಸೀಮೆಯ ಹಾಡುಗಳ ಉದಾ:

ಪಚ್ಚೆ ತೆನೆ ಹಾಕಿ ಗಮಗಮ ಕಾದ ನೀರು
ಎರುದಾರೋ ಮಾನ್ಯವರ ಮಗಳೀಗೆ। ಆ ನೀರು
ತೆಂಗಿನ ಮರುಕೆ ಹರುದಾವೊ। ಆ ನೀರು
ತೆಂಗುವಾಲಾಡಿ ಬೆಳುದಾವೊ ॥ ಸೋಬಾನವೆ ॥

ಹೆಂಗಸರ ಪದಗಳು ಹೀಗೆ ವಿವಿಧ ಬಗೆಯಾಗಿ ಹರಡಿ ಒಂದೊಂದು ಉಪಮೆ ರೂಪಕಗಳಾಗಿ ಮೆರೆಯುತ್ತವೆ. ನೀತಿ ಹೇಳುತ್ತವೆ. ತಮಗಾದ ನೋವು, ಅಪಮಾನಗಳಿಗೆ ಧಿಕ್ಕರಿಸುವ ಪದಗಳು, ಬಂಡಾಯದ ಪದಗಳು, ಧರ್ಮವನ್ನು ಸಾರುವ ಪದಗಳು ಎಲ್ಲ



ಬಗೆಯ ಹಾಡುಗಳನ್ನು ಕನ್ನಡ ಜನಪದ ಗೀತಲೋಕದಲ್ಲಿ ಕಾಣಬಹುದು. ಬದುಕಿನ ಸಾರ ಸರ್ವಸ್ವವೂ ಹೆಂಗಸರ ಹಾಡುಗಳಲ್ಲಿ ಕಾಣಸಿಗುತ್ತವೆ. ಹಲವಾರು ಬಿಡಿ ಕತೆಗಳನ್ನು ಹೇಳುವ ಅನೇಕ ಕಥನ ಗೀತೆಗಳನ್ನು ಹೆಣ್ಣುಮಕ್ಕಳ ಬಾಯಿಂದಲೇ ಕೇಳಬೇಕು.

**ಗಂಡಸರ ಪದಗಳು**

ಕನ್ನಡ ಜನಪದ ಗೀತೆಗಳಲ್ಲಿ ಗಂಡಸರ ಪದಗಳಿಗೆ ಕೊರೆತೆಯಿಲ್ಲ. ಯಾಲಪದ, ಸಂಕ್ರುಸ್ವಾಮಿ ಪದ, ತಬ್ಬಲುಡುಗನ ಹಾಡು, ಸುಗ್ಗಿಯ ಹಾಡುಗಳು, ಹಂತಿ ಕಟ್ಟುವಾಗ, ಹೊಲ ಉಳುವಾಗ, ಎಲ್ಲ ಸಂದರ್ಭಗಳಲ್ಲೂ ಹಾಡುತ್ತಾರೆ. ಗಂಡಸರ ಕೋಲಾಟದ ಪದಗಳು ಬಹಳ ವಿಶಿಷ್ಟವಾಗಿರುತ್ತವೆ.

ಬಳ್ಕೂವ ನಡುವಿಗು ಕೊಳ್ಳಿನ ಗವಡಿಟ್ಟು
ಬಳುಕುತ್ತ ಬಟ್ಟೆ ಹಿಡಿದಾರು ಕೋಲೆ।
ಕೋಲು ಕೋಲೆನ್ನಾ। ಹೂವಿನ ಕೋಲು ಕೋಲೆನ್ನ ॥

ಹೀಗೆ ಎರಡೆರೆಡೆ ಸಾಲು ಮುಗಿದ ಮೇಲೆ ಮೂರನೇ ಸಾಲನ್ನು ಪ್ರತೀ ಚರಣದಲ್ಲೂ ಹಾಡುತ್ತಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಕೋಲಾಟದ ಪದವಾದರೆ; ಬಯಲು ಸೀಮೆಯಲ್ಲಿ ಹಾಡುವ ಕೋಲಾಟದ ಪದಗಳು:

ಮೂಡಲ್ ಕುಣಗಲು ಕೆರೆ ನೋಡೋಕೊಂದ್ಯೆಭೋಗ
ಮೂಡಿ ಬಂದಾನೆ ಚಂದಿರಮಾ। ತಾನಂದನೋ।
ಮೂಡಿ ಬರ್ತಾನೆ ಚಂದಿರಮಾ ॥ ಪಲ್ಲವಿ ॥

ಕೋಲುಗಳ ಕಣಿ ಕಣಿಯ ಸಂಗೀತದ ಜೊತೆಗೆ ಕುಣಿತದ ಗತ್ತೂ ಸೇರಿ ಶ್ರವ್ಯ-ದೃಶ್ಯ ಕಾವ್ಯವಾಗಿ ಮನರಂಜಿಸುತ್ತವೆ ಈ ಕೋಲಾಟದ ಹಾಡುಗಳು. ಹಾಗೆಯೇ "ಗುಡುಗು ಗುಡುಗೀತು। ನಡುಬಾಣ ಮಿಂಚೀತು। ಮದ್ದೂರಿಂದಾಚೆ ಮಳೆ ಬಂತು" ಇತ್ಯಾದಿ ಯಾಲಪದಗಳ ಸೌಂದರ್ಯವೇ ಬೇರೆ. ತ್ರಿಪದಿಗಳ ರೂಪದಲ್ಲಿರುವ ಪ್ರತೀ ಪದ್ಯ ಮುಗಿದ ಕೂಡಲೇ ಜೊತೆಗಾರರೂ ಅಲಲೇ ಕಲಲೇ ಎಂದು ಹಿಮ್ಮೇಳ ಕೂಡಿಸುತ್ತಾರೆ. ಬೇಟೆಯ ಸಂದರ್ಭದಲ್ಲಿ ಹಾಡುವ ಗಂಡಸರ ಹಾಡುಗಳೂ ಬಹುಜನ ಮೆಚ್ಚಿಗೆಯನ್ನು ಪಡೆದಿವೆ. ಮಾರಮ್ಮನನ್ನು ಕುರಿತ ಆ ಸಾದಿಯ ಪದದ ಗಮ್ಮತ್ತೇ ಬೇರೆ. ಬರೀ ಗಂಡಸರೇ ಇರುವಾಗ ಹಾಡುವ ಅಶ್ಲೀಲ ಹಾಡುಗಳಿಗೆ ಕನ್ನಡ ಜನಪದ ಗೀತೆಗಳಲ್ಲಿ ಬರವಿಲ್ಲ. ಇನ್ನು ಲಾವಣಿ, ಕಥನಕಾವ್ಯ, ಮಹಾಕಾವ್ಯ, ಖಂಡಕಾವ್ಯಗಳನ್ನು ನಿರಂತರವಾಗಿ ಹಲವಾರು ರಾತ್ರಿಗಳು ಹಾಡುವ ಕಲಾವಿದರು, ಗುಡ್ಡರು, ನೀಲಗಾರರು ಮುಂತಾದ ವೃತ್ತಿ ಕಲಾವಿದರು ಕನ್ನಡ ನಾಡಿನಾದ್ಯಂತ ಲೆಕ್ಕವಿಲ್ಲದಷ್ಟು ಮಂದಿ, ಒಬ್ಬೊಬ್ಬರದೂ ಒಂದೊಂದು ವಿಶಿಷ್ಟತೆಯೇ.

**ಶಿಶುಪ್ರಾಸಗಳು ಅಥವಾ ಮಕ್ಕಳ ಪದಗಳು**

ಕನ್ನಡ ಜನಪದ ಗೀತೆಗಳಲ್ಲಿ ಶಿಶುಪ್ರಾಸಗಳನ್ನು ಬಿಟ್ಟರೆ ಉಳಿದಂತೆ ಅಷ್ಟಾಗಿ ಮಕ್ಕಳ ಗೀತೆಗಳ ಸಂಗ್ರಹಕಾರ್ಯ ಆಗಿಲ್ಲ. ಮಕ್ಕಳು ಆಟವಾಡುವಾಗ ತಮ್ಮ ಬಾಲ ಭಾಷೆಯಲ್ಲಿ ಹಾಡುವ ಹಲವಾರು ಶಿಶುಪ್ರಾಸಗಳನ್ನು ಕನ್ನಡದಲ್ಲಿವೆ. ಶಿಶುಪ್ರಾಸಗಳಿಗೆ ಕೆಲವು ಉದಾಹರಣೆಗಳು:

ಕಾಗೆ ಕಾಗೆ ಕಾಕವ್ವ
ಯರ್‍ಯಾರ್‍ಬತ್ತಾರವ್ವ।
ಮಾವ ಬತ್ತನವ್ವ।
ಮಾವಗೇನೂಟ?
ರಾಗಿ ಕಲ್ಲಿನ ಗೂಟ।
ಕಪ್ಪೆ ಚಿಪ್ಪನಿ ತುಪ್ಪ ಮಡಿಗಿವ್ನಿ।
ಕುಡ್ಕೊಳಪ್ಪಯ್ಯ।
ಗುಡ್ಡನ ತಾವು ಹಾಸಿಗೆ ಹಾಸಿವ್ನಿ।
ಬಿದ್ಕೊಳಪ್ಪಯ್ಯ।

ಹೆಣ್ಣು ಮಕ್ಕಳನ್ನು ಗಂಡು ಮಕ್ಕಳು ಛೇಡಿಸುವ ಒಂದು ಗೀತೆ:

ಸಾಖಿ ಸಾಖಿ ಸಂಬಾರ। ಸಾಖಿ ಗಂಡ ಕುಂಬಾರ।
ಸಾಕು ನನ್ನ ಅಪ್ಪ। ಸಾಖಿ ಕೆನ್ನೆ ದಪ್ಪ।

ಮಳೆರಾಯಯನ್ನು ಕುರಿತಂತೆ ಹುಯ್ಯೊ ಹುಯ್ಯೊ ಮಳೆರಾಯ ಹೂವಿನ ತೋಟಕೆ ನೀರಿಲ್ಲ ಇತ್ಯಾದಿಗಳು ಕನ್ನಡ ಜನಪದ ಗೀತೆಗಲ್ಲಿನ ಶಿಶುಪ್ರಾಸಗಳು.

**ಕನ್ನಡ ಜನಪದ ಕಥನಗೀತೆಗಳು**

ಜನಪದ ಕಥನ ಗೀತೆಯೊಂದರ ಅಧ್ಯಯನದಿಂದ ಜನಪದ ಸಂಸ್ಕೃತಿಯೊಂದನ್ನು ಗುರುತಿಸಬಹುದು. ಕಥನಗೀತೆಗಳು ಮನರಂಜನೆಗಾಗಿ ಉಗಮವಾದುದಲ್ಲ; ಯಾವುದೋ ಒಂದು ತಲೆಮಾರಿನಲ್ಲಿ ವಾಸ್ತವವಾಗಿ ಘಟಿಸಿದ ಸಂಗತಿಗಳೇ ಜನಪದರ ಸ್ಮರಣೆಯ ಭಾಗವಾಗಿ ಗೀತೆಗಳ ರೂಪದಲ್ಲಿ ಮೈತಳೆದಿವೆ. 'ಬದುಕಿನ ಕ್ರೂರ ಸತ್ಯಗಳನ್ನು ಆಧರಿಸಿ ಹುಟ್ಟಿಕೊಂಡ ಇಂಥ ರಚನೆಗಳು ಜನಪದ ಕಥೆಗಳಂತೆ ಸುಖಾಂತವಾಗಿರದೆ ಸಹಜವಾಗಿಯೇ ದುರಂತ ಮುಕ್ತಾಯ ಹೊಂದಿರುತ್ತವೆ'' (ಡಾ॥ ಶ್ರೀಕಂಠ ಕೂಡಿಗೆ-ಕನ್ನಡ ಜನಪದ ಕಾವ್ಯಗಳು, ಕರ್ನಾಟಕ ಜಾನಪದ, ಪು. ೧೬೮.ಕ.ಜಾ.ಯ.ಅ. ೧೯೮೯.) ಉತ್ತರದೇವಿ, ಈರೋಬಿ, ನಾಗವ್ವ, ಹಿರಿದಮ್ಮವ್ವ, ಕೆರೆಗೆ ಹಾರ, ಚಿಕ್ಕಿನುಂಗ್ರಕ್ಕೆ ನಾರಿ ಮನಸೋತಳು, ಬರದ ಹಾಡು, ಸಿರಿಕವಲಿ, ನೀಲಗಂಗಾನ ಹಾಡು, ನಿನ ಮಕಾವ ಸಿಗಲಿಲ್ಲ, ಸಂಗವ ಮಾಡ್ಯಾಳ ನಿಮ ತಂಗಿ, ಜಾಗಾಲೆ, ಹೊನ್ನಲದೇವಿ, ಗುಣಸಗಾರಿ, ಧರಣೆಯಮ್ಮ ಹೀಗೆ ಸ್ತ್ರೀ ನಾಯಕಿ ಅದರಲ್ಲೂ ದುರಂತ ನಾಯಕಿಯರ ಚಿತ್ರಗಳನ್ನು ಹಿಡಿದಿಡುವ ಕಥನ



ಗೀತೆಗಳಲ್ಲಿ ಇವುಗಳದ್ದು ವಿಶಿಷ್ಟ ಸ್ಥಾನ. ಇಲ್ಲಿ ಸ್ತ್ರೀ ನಾಯಕಿಯರು ಸಮಾಜದಲ್ಲಿ ಎಂದೋ ಬಾಳಿ ಬದುಕಿ, ತಮ್ಮದಲ್ಲದ ತಪ್ಪಿಗೆ ಪ್ರಾಣತ್ಯಾಗ ಮಾಡಿಕೊಂಡವರು. ಸಮಾಜದ ಇತರರ ಕಷ್ಟಕ್ಕೆ ತಮ್ಮನ್ನು ಅರ್ಪಿಸಿಕೊಂಡವರಾಗಿರುತ್ತಾರೆ. ಬೆಂಗಳೂರು ಕೋಟೆಗೆ ಆಹುತಿಯಾದ ಕೆಂಪೇಗೌಡನ ಸೊಸೆ ಲಕ್ಷ್ಮಿಯ ಕಥನಗೀತೆ ಅದಕ್ಕೊಂದು ಜ್ವಲಂತ ಉದಾಹರಣೆ. ಕೆರೆಗೆ ಹಾರವಾದ ಭಾಗೀರತಿ, ಮದಗದ ಕೆಂಚವ್ವ, ಮಹಾಸತಿ ತಾಡಿನಾಗಮ್ಮ, ಈರೋಬಿ, ಧರಣೆಯಮ್ಮನ ಬಲಿದಾನ ಸ್ತ್ರೀಪ್ರಧಾನ ದುಃಖಾತ ಕಥನಗೀತೆಗಳಾದರೆ; ಮದಗದ ಕೆರೆ, ಧರ್ಮಪುರಿ, ಅಯ್ಯನಕೆರೆ ಇತ್ಯಾದಿಗಳು ಪುರುಷ ಪ್ರಧಾನ ದುಃಖಾತ ಕಥನ ಗೀತೆಗಳಾಗಿವೆ. ಇಂತಹ ವಸ್ತುವಿನ ಸಹಜತೆ ಮತ್ತು ಪರಿಣಾಮಕಾರಿ ಘಟನೆ, ಸನ್ನಿವೇಶಗಳಿಂದಾಗಿ ಶಾಶ್ವತವಾಗಿ ಕೇಳುಗರ ಮನಸ್ಸಿನಲ್ಲಿ ನಿಲ್ಲುತ್ತವೆ ಈ ಕಥನ ಗೀತೆಗಳು. ಕಥನ ಗೀತೆಗಳು ಭಾವಪ್ರಧಾನವಾಗಿದ್ದು, ಕನ್ನಡ ಜನಪದಗೀತ ಲೋಕದಲ್ಲಿ ಇಂತಹವು ನೂರಾರು.

ಮೇಲೆ ಹೆಸರಿಸಿದ ಕಥನ ಗೀತೆಗಳು ದುಃಖಾಂತದವುಗಳಾದರೆ; ಕೊಣವೇಗೌಡ, ಕರಡಿಗೆ ಹೋಗಿ ತೆಕ್ಕಿಬಡಿದಾಬಸರ ಆದಾಂಗ, ಹಾಕಿದಾಳ ಸೋಗ, ನೂಲೊಲ್ಯಾಕ ಚೆನ್ನಿ ಬಸರಿದ್ದೇನ್ನೆ ಸರಿನ್ನೇನಿಡೂನ, ಕಿವುಡರು ಹಗರದ ಕೆರೆ ಮೀನು, ಮೀನಿನ ಬಯಕೆ, ಇಡ್ಲಿ ಮಾದಮ್ಮ, ಈಗಿನವರ ಸೋಗಿನ ಬಸರಾ, ದಾಸಯ್ಯನ ಧಾವಂತ, ಮುದಿಯಮ್ಮನ ಮುಲುಗಾಟ ಮುಂತಾದವು ಮನುಷ್ಯನ ಜಿಪುಣತನ, ಜಿಗುಟುತನ, ಆಲಸ್ಯ, ಸಣ್ಣತನ, ಹಾಸ್ಯ, ವಿನೋದ, ವಿಡಂಬನೆ ಇತ್ಯಾದಿ ಆಶಯಗಳನ್ನೊಳಗೊಂಡಿರುತ್ತವೆ.

ಗೋವಿನಹಾಡು ಸತ್ಯವತಿ ಲಾವಣಿ, ಗಿಡ್ಡನಗೌಡ, ಹರಿಶ್ಚಂದ್ರ, ಗಿರಿರಾಯ, ನಳರಾಯ ಅಣ್ಣತಮ್ಮರಪದ, ಇತ್ಯಾದಿಗಳು ನೀತಿ ಪ್ರಧಾನ್ಯತೆಯಿಂದ ಕೂಡಿದ ನೀತಿಯನ್ನು ಘೋಷಿಸಿದೆ. ನಿರ್ಲಿಪ್ತವಾಗಿ ಒಡಮೂಡುವಂತೆ ಬೆಳೆಯುವ ಕಥನಗೀತೆಗಳ ಸಾಲಿನಲ್ಲಿ ನಿಲ್ಲುತ್ತವೆ. ಪ್ರೀತಿ-ಪ್ರೇಮಗಳ ಉತ್ಕಟತೆ, ಭಾವತಲ್ಲೀನತೆ, ಧ್ವನಿಶಕ್ತಿ, ಸಾಮಾಜಿಕ ವೈರುಧ್ಯ ವೈಪರೀತ್ಯಗಳ ಸಮರ್ಥ ಅಭಿವ್ಯಕ್ತಿಯು- 'ನುಚ್ಚಾಯ್ತು ನೀರ ಹೊಳೆಯಾಗೆ', 'ಮಾರಕ್ಕ ದೇವಿಯ ಮದುವೆ', 'ಸೀರೆ ಇಂಥದು; ಸೀರೆ ಉಡುವಳಂಥವಳು', 'ಚಿತ್ರಮುಖದ ಹೆಣ್ಣೆ', 'ಅವ್ವಣಿ' ಇತ್ಯಾದಿ ಕಥನ ಗೀತೆಗಳಲ್ಲಿ ಬಿಂಬಿತವಾಗುತ್ತವೆ.

ಇಷ್ಟಾದ ಮೇಲೆ ಪೌರಾಣಿಕ ಕಥನಗೀತೆಗಳನ್ನು ಗಮನಿಸಲೇಬೇಕು. ಸೃಷ್ಟಿ ಪುರಾಣ, ದೇವತೆಗಳು, ಸ್ವರ್ಗ-ನರಕ, ಸಾಂಸ್ಕೃತಿಕ ವೀರರು ಇತ್ಯಾದಿ ಕಥನಗೀತೆಗಳ ನಾಯಕ-ನಾಯಕಿಯರು ದೇವಾನುದೇವತೆಗಳಾದರೂ ಸಾಮಾನ್ಯರ ಬದುಕಿನಿಂದ ದೂರ ನಿಂತವರಲ್ಲ. ಬೇರೆ ಬೇರೆ ಹೆಣ್ಣುಗಳೊಂದಿಗೆ ಬೆರೆವ ಸಾಮಾನ್ಯರೇ ಆಗಿರುತ್ತಾರೆ. ನೀತಿಬಾಹಿರ ಸಂಬಂಧ, ಈರ್ಷ್ಯೆ, ಪ್ರೀತಿ-ಪ್ರೇಮ ಮುಂತಾದ ಮಾನವ ಸಹಜ ಸ್ವಭಾವದವರೇ ಆಗಿರುತ್ತಾರೆ. ಕನ್ನಡದಲ್ಲಿ ಇಂಥ ಹಲವಾರು ಕಥನಗೀತೆಗಳು ದೊರೆಯುತ್ತವೆ. ಉದಾಹರಣೆಗೆ: ನಂಜುಂಡೇಶ್ವರ, ಕಬ್ಬಾಳಮ್ಮ, ಚಾಮುಂಡಿ, ಗಂಗೆ-ಗೌರಿ, ವರನಂದಿ,

ಚೆನ್ನಿಗ ಚೆಲುವಯ್ಯ, ಕೃಷ್ಣ-ಕೊರವಂಜಿ, ಅಂಬಿಗರ ಗಂಗ, ಸುಭದ್ರೆ-ಅಭಿಮನ್ಯು, ಅರ್ಜುನ ಜೋಗಿ, ಕೊಂತೆಮ್ಮ, ಕೃಷ್ಣಾರ್ಜುನರ ಕಾಳಗ, ಕಿರಾತಾರ್ಜುನರ ಕಾಳಗ, ಕೊಂತೆಮ್ಮ ದೇವತೆ, ಬಿಳಿಗಿರಿ ರಂಗ-ಕುಸುಮಬಾಲೆ, ವಸ್ತ್ರಾಪಹರಣ, ಕುಶಲಯ್ಯರ ಕಥೆ, ಸೀತಾಪಹರಣ, ರಾಮ-ರಾವಣರ ಯುದ್ಧ ಮುದ್ರೆಯುಂಗುರ, ಸುಗ್ರೀವ-ವಾಲಿ ಇತ್ಯಾದಿ ರಾಮಾಯಣ ಮಹಾಭಾರತದ ಕಥಾವಸ್ತುಗಳನ್ನು ಆಧರಿಸಿದ ಗೀತೆಗಳಿಂದ ಕಥನಗೀತೆಗಳ ವ್ಯಾಪ್ತಿ ಮತ್ತಷ್ಟು ಹಿರಿದಾಗಿದೆ.

ಧಾರ್ಮಿಕ ಮತ್ತು ಐತಿಹಾಸಿಕ ಕಥನಗೀತೆಗಳಿಗೆ ಕನ್ನಡದಲ್ಲಿ ಕೊರತೆಯಿಲ್ಲ. ರಾಜ ಮಹಾರಾಜರನ್ನು ಅಷ್ಟಾಗಿ ಹೊಗಳದಿದ್ದರೂ ನೂರಾರು ಜನ ಪಾಳೆಯಗಾರರನ್ನು ಈ ಕಥನಗೀತೆಗಳು ಹಾಡಿ ಹೊಗಳಿವೆ. ನಿರ್ದಿಷ್ಟ ವ್ಯಕ್ತಿ, ಘಟನೆ, ದೈವಗಳಿಗೆ ಸಂಬಂಧಿಸಿದ ಕಥನಗೀತೆಗಳಿವು. ಧಾರ್ಮಿಕ ಕಥನಗೀತೆಗಳಲ್ಲಿ ಪೌರಾಣಿಕ ಪ್ರಸಂಗಗಳು ಇಣುಕಿದರೂ,; ಐತಿಹಾಸಿಕ ಅಂಶಗಳು ಮಾತ್ರ ಎದ್ದು ಕಾಣುತ್ತವೆ. ಭಕ್ತ ಸಿರಿಯಾಳ, ಚೆನ್ನಿಗರಾಮ, ಕೋಳೂರು ಕೊಡಗೂಸು, ಬೇಡರಕನ್ನಯ್ಯ, ಶಂಕಿತೋಂಡಿಕತೆ, ಚನ್ನಬಸವಣ್ಣ, ಬಸವಣ್ಣ, ಅಕ್ಕ, ಮಲುಹಣ, ಪ್ರಭುದೇವ, ನಿಜಭಗುತಿ ನೀಲಮ್ಮ, ಕಬೀರ-ಕಮಾಲ ಇತ್ಯಾದಿಗಳು ಧಾರ್ಮಿಕ ಹಿನ್ನೆಲೆಯ ಕಥನ ಗೀತೆಗಳಾದರೆ; ಸರ್ಜಪ್ಪ ನಾಯಕ, ಮಾಗಡಿ ಕೆಂಪೇಗೌಡ, ಲಿಂಗರಾಜಮ್ಮ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ, ಹಲಗಲಿಯ ಬೇಡರು ಮುಂತಾದವುಗಳು ಐತಿಹಾಸಿಕ ಕಥನಗೀತೆಗಳ ಸಾಲಿನಲ್ಲಿ ನಿಲ್ಲುತ್ತವೆ. ಇಂತಹ ಸ್ವಾತಂತ್ರ್ಯವೀರರನ್ನು ಕುರಿತ ಇನ್ನೂ ಅನೇಕ ಕಥನಗೀತೆಗಳ ಸಂಗ್ರಹಕಾರ್ಯ ಜರೂರಾಗಿ ನಡೆಯಬೇಕಿದೆ.

### ಕನ್ನಡ ಜನಪದ ಖಂಡಕಾವ್ಯಗಳಲ್ಲಿ ಜನಪದ ಗೀತೆಗಳು

ಕಥನ ಗೀತೆಗಳ ಮುಂದಿನ ಬೆಳವಣಿಗೆಯೇ ಖಂಡಕಾವ್ಯ. ಇವು ಆಕಾರದಲ್ಲಿ ಕಥನ ಗೀತೆಗಳಿಗಿಂತ ಸ್ವಲ್ಪ ದೊಡ್ಡವು. ಮಹಾಕಾವ್ಯಕ್ಕಿಂತ ಚಿಕ್ಕವು. ಪಾಶ್ಚಾತ್ಯ 'Epic lay' ಅನ್ನು ಹೋಲುವಂಥವು. ಇವು ಸುದೀರ್ಘ ರಚನೆಗಳಾಗಿರುತ್ತವೆ. ಲಾವಣಿ-ಕಥನ ಗೀತೆಗಳಂತೆ ಎಲ್ಲೆಂದರಲ್ಲಿ ಹಾಡಲು ಬರುವುದಿಲ್ಲ. ಕಥೆ ಕ್ರಮಬದ್ಧವಾಗಿ ಆರಂಭಗೊಂಡು ವಿಸ್ತಾರವಾಗಿ ಬೆಳೆದು ನಿರ್ದಿಷ್ಟವಾದ ಒಂದು ಹಂತದಲ್ಲಿ ಉತ್ಕರ್ಷಾವಸ್ಥೆಯನ್ನು (Climax) ತಳೆದು ನಿಧಾನವಾಗಿ ಇಳುಗಡೆಯನ್ನು ಸಾಧಿಸುತ್ತಾ ಮುಕ್ತಾಯಗೊಳ್ಳುತ್ತದೆ. ಕಥಾರಂಭದಲ್ಲಿ ಕಾಣುವ ದುರಂತ ಕ್ರಮ ಕ್ರಮವಾಗಿ ಹಿಂದೆ ಸರಿಯುತ್ತಾ ಸುಖಾಂತ ಹೊಂದುವುದು ವಿಶೇಷ. ಹಲವಾರು ಕಥನಗೀತೆಗಳೇ ಜನಪದರ ಬಾಯಲ್ಲಿ ಖಂಡಕಾವ್ಯಗಳಾಗಿವೆ. ಗುಣಸಾಗರಿ, ಬಾಲನಾಗಮ್ಮ, ಕಾಳಿಂಗರಾಯ, ಕಾಡುಸಿದ್ಧಮ್ಮ, ನೀಲಕಂಠ ರೂಪವತಿ, ಬಸವಕುಮಾರ, ಗಂಗೆ-ಗೌರಿ, ಮಡಿವಾಳ ಮಾಚಿದೇವರು, ಕೆರೆ ಹೊನ್ನಮ್ಮ, ಭುವನಮ್ಮ, ಲಕ್ಷಾಪತಿ ರಾಜ, ಪುಣ್ಯವಂತೆ-ಗುಣವಂತೆ, ನಿಂಗಣ್ಣಗೌಡ ಮುಂತಾದವುಗಳನ್ನು



ಹೆಸರಿಸಬಹುದು. ಇಲ್ಲಿನ ಕಥಾನಾಯಕ/ನಾಯಕಿಯರು ದುಷ್ಟರು, ದುರ್ಜನರು ಇಲ್ಲವೆ ವಿಧಿಯ ಆಟದಿಂದ ನತದೃಷ್ಟರಾದವರು. ಈ ನಾಡಿನಲ್ಲಿ ಅಳಿದುಹೋದ ಎಷ್ಟೋ ಜನ ಪಾಳೆಯಗಾರರು ಸಾಮಂತರನ್ನು ಕುರಿತ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಖಂಡಕಾವ್ಯಗಳು ಜನ್ಮ ತಳೆದಿವೆ. ಪಿರಿಯಾಪಟ್ಟಣದ ಕಾಳಗ, ಮಾಗಡಿ ಕೆಂಪೇಗೌಡ, ಸರ್ಜಪ್ಪನಾಯಕ, ಮದಕರಿನಾಯಕ, ಸಂಗೊಳ್ಳಿ ರಾಯಣ್ಣ ಮುಂತಾದವುಗಳನ್ನು ಹೆಸರಿಸಬಹುದು. ಇಲ್ಲಿನ ವ್ಯಕ್ತಿಗಳು ಸಾಮಾನ್ಯರ ಬದುಕಿಗೆ ಹತ್ತಿರವಿದ್ದು, ತಮ್ಮ ಉನ್ನತ ಆದರ್ಶಗಳಿಂದ ಜನಮನಸ್ಸನ್ನು ಗೆದ್ದಿದ್ದಾರೆ. ಕನ್ನಡ ಜನಪದ ಕವಿಗಳು ಇವರನ್ನು ಕುರಿತು ರಚಿಸಿರುವ ಕಾವ್ಯಗಳು ಇಂಥವರನ್ನು ಅಮರಗೊಳಿಸಿವೆ. ವೀರ, ತ್ಯಾಗ, ಬಲಿದಾನಗಳು ಇಲ್ಲಿ ಪ್ರಧಾನವಾಗಿರುತ್ತವೆ. ಸಾಮಾನ್ಯವಾಗಿ ಖಂಡಕಾವ್ಯಗಳನ್ನು ವೃತ್ತಿ ಗಾಯಕರೇ ಹೆಚ್ಚಾಗಿ ಹಾಡುವುದು ರೂಢಿ. ಇಲ್ಲಿ ತಮ್ಮ ವಾದ್ಯ ಸಂಗೀತದೊಟ್ಟಿಗೆ ಬಿಡಿ ಬಿಡಿ ಗೀತೆಗಳ ಮಾಧುರ್ಯವನ್ನು ಬೆಸೆದು ಕಥೆ ಹೇಳುವ ತಂತ್ರಗಳನ್ನು ಅಳವಡಿಸಿಕೊಂಡಿದ್ದಾರೆ.

### ಕನ್ನಡ ಮಹಾಕಾವ್ಯಗಳಲ್ಲಿ ಜನಪದ ಗೀತೆಗಳು

ಲಾವಣಿ, ಕಥನಗೀತೆ, ಖಂಡಕಾವ್ಯಗಳಲ್ಲಿ ಹಿಡಿದಿಡಲು ಸಾಧ್ಯವಾಗದ ಪಾತ್ರಪೋಷಣೆ, ವಿಸ್ತಾರತೆ, ಸಾಂಸ್ಕೃತಿಕ ನಿರೂಪಣೆ ಇತ್ಯಾದಿಗಳು ಮಹಾಕಾವ್ಯಗಳಲ್ಲಿ ನಿರೂಪಿತವಾಗುತ್ತವೆ. ಕನ್ನಡ ಜನಪದ ಲೋಕದ ಶ್ರೀಮಂತಿಕೆಯನ್ನು ಎತ್ತಿಹಿಡಿಯುವ ಧಾರ್ಮಿಕ ಪರಂಪರೆಗೆ ಸೇರಿದವುಗಳು ಈ ಮಹಾಕಾವ್ಯಗಳು. ಅವುಗಳಲ್ಲಿ ಮುಖ್ಯವಾದವು ಗಳೆಂದರೆ: ೧. ಮಲೇ ಮಾದೇಶ್ವರ, ೨. ಮಂಟೇಸ್ವಾಮಿ ಅಥವಾ ಧರೆಗೆ ದೊಡ್ಡವರು, ೩. ಜುಂಜಪ್ಪನ ಕಥೆ, ೪. ಎಲ್ಲಮ್ಮನ ಕಥೆ, ೫. ಮೈಲಾರಲಿಂಗನ ಕಥೆ. ೬. ಮೈದಾಳರಾಮನ ಕಥೆ ಇತ್ಯಾದಿಗಳು. ಸಾಮಾನ್ಯವಾಗಿ ಇವುಗಳನ್ನು ದೇವರ ಗುಡ್ಡ, ಗಣೆಯವರು, ಚೌಡಿಕೆಯವರು, ಗೊರವರು, ನೀಲಗಾರರೆಂಬ ವೃತ್ತಿಗಾಯಕರು ಹಾಡುತ್ತಾರೆ. ನಿರ್ದಿಷ್ಟ ದೈವ ಅಥವಾ ಪುಣ್ಯ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ ಇಲ್ಲಿನ ಕಥಾವಸ್ತು, ಐತಿಹಾಸಿಕ, ಕಾಲ್ಪನಿಕ, ಅತಿರಂಜಕ, ಅತಿಮಾನುಷ ಹಾಗೂ ಪೌರಾಣಿಕ ಸಂಗತಿಗಳು ಕೂಡಿಕೊಂಡು ಬರುತ್ತವೆ. ಆದರೂ ನಡೆದಿರಬಹುದಾದ ಕಥೆಯೇ ಎಂಬಂತೆ ಚಿತ್ರಿತವಾಗುತ್ತವೆ. ಮಂಟೇಸ್ವಾಮಿಯ ಕಾವ್ಯವು ವಿಸ್ತಾರವಾಗಿದ್ದು ಧರೆಗೆ ದೊಡ್ಡವರು, ಸಿದ್ಧಪ್ಪಾಜಿ, ರಾಚಪ್ಪಾಜಿ, ಚಿಕ್ಕಲ್ಲೂರು ಸಾಲುಗಳೆಂದು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿಕೊಂಡು ನೀಲಗಾರರೆಂಬ ವೃತ್ತಿಗಾಯಕರು ಹಾಡುತ್ತಾರೆ. ಹಾಗೆಯೇ ಉಪಲಬ್ಧವಿರುವ ಮಹಾಕಾವ್ಯಗಳ ವಿಸ್ತಾರದಲ್ಲಿ ದೊಡ್ಡದೆನಿಸಿರುವ ಮಲೇ ಮಾದೇಶ್ವರ ಕಾವ್ಯವನ್ನು ಮಾದೇಶ್ವರರ ಹುಟ್ಟು, ನಡೆಸಿದ ಪವಾಡಗಳು, ಸಂಕಮ್ಮ, ಬೇವಿನಹಟ್ಟಿ ಕಾಳಿ, ಶ್ರವಣ ಸಂಹಾರ ಇತ್ಯಾದಿ ಏಳು ಭಾಗಗಳನ್ನಾಗಿ ವಿಭಜಿಸಿಕೊಂಡು ಒಂದೊಂದು ಭಾಗವನ್ನೂ ಒಂದೊಂದು ರಾತ್ರಿ, ಅದಕ್ಕೂ ದೀರ್ಘವಾಗಿ ಹಾಡುತ್ತಾರೆ. ಕಾಡಗೊಲ್ಲರ ಜುಂಜಪ್ಪನ ಕಥೆ ಜನಪದ ಮಹಾಕಾವ್ಯಗಳಲ್ಲಿ ಶ್ರೇಷ್ಠವಾದದ್ದು. ಜುಂಜಪ್ಪ ಈ ಕಾವ್ಯದ ನಾಯಕ.

ಜುಂಜಪ್ಪನ ಮೂರು ತಲೆಮಾರುಗಳ ಕಥೆ ಇದರ ಪ್ರಧಾನವಸ್ತು. ಅಸದೃಶ ಶಕ್ತಿ ಸಾಮರ್ಥ್ಯ, ಅತಿಮಾನುಷ ಶಕ್ತಿಗಳ ನೆರವಿನಿಂದ ಅಲ್ಲಿ ಉಂಟಾಗುವ ಕುಲಸಂಘರ್ಷ, ದ್ವೇಷಾಸೂಯೆ, ಮಾಟ-ಮಂತ್ರಾದಿ ಪವಾಡಗಳು, ಆಚಾರ, ನಂಬಿಕೆ, ಕಲ್ಪನಾವೈಖರಿ ಇತ್ಯಾದಿಗಳಿಂದ ಈ ಕಾವ್ಯ ಗೊಲ್ಲ ಸಂಸ್ಕೃತಿಯ ಪ್ರತಿಬಂಬವಾಗಿದೆ ಎನ್ನಬಹುದು. ಎಲ್ಲ ಕಾವ್ಯಗಳನ್ನು ಹಾಡುವಾಗಲೂ ಏಕತಾರಿ, ತಂಬೂರಿ, ಕಂಸಾಳೆ, ದಮ್ಮಡಿ, ಕಂಜರ, ತಾಳ ಇತ್ಯಾದಿ ಚರ್ಮ, ಲೋಹವಾದ್ಯಗಳನ್ನು ಬಳಸುತ್ತಾರೆ. ಕಥೆಯನ್ನು ಹೆಣೆದುಕೊಂಡು ಹೋಗುವಾಗ ನಿಮಿಷ ನಿಮಿಷಕ್ಕೂ ಗೀತೆಗಳನ್ನು ಹಾಡುತ್ತಾರೆ. ಮಲೇ ಮಹದೇಶ್ವರ ಕಾವ್ಯದಲ್ಲಿ ಮಹದೇವನನ್ನು ಕೊಂಡಾಡುವ ಒಂದು ಗೀತೆಯ ಸಾಲುಗಳ ಲಾಲಿತ್ಯವನ್ನು ಗಮನಿಸುವ:

> ಮಾದೇವ್ನ ಕೊಂಡ ಬಾರಿ ಉದ್ದಂಡ
> ಅಡವಿಲಿ ಮಾದೇವ ನೆಲೆಗೊಂಡ। ತಾನಾಗ
> ಆಕಾಸ್ದ ಘಂಟೆ ಧಣಿರಂದೋ॥

ಎಂಬಲ್ಲಿ ಅಡವಿಯಲ್ಲಿ ನೆಲೆನಿಂತ ಮಹದೇವಶ್ವರನ ಪೂಜೆಗೆ ಆಕಾಶದಲ್ಲಿ ಘಂಟೆಗಳು ಢಣಢಣ ಎಂದು ಮೊಳಗಿದ ಶಬ್ದ ಚಿತ್ರವನ್ನು ಗೀತೆಯ ಮೂಲಕ ಜನಪದ ಕವಿ ಕಟ್ಟಿಕೊಡುತ್ತಾನೆ. ಹಾಗೆಯೇ ಎಲ್ಲ ಮಹಾ ಕಾವ್ಯಗಳಲ್ಲೂ ಗೀತ-ಸಂಗೀತವೇ ಪ್ರಾಧಾನ್ಯತೆಯನ್ನು ಪಡೆದಿರುತ್ತದೆ. ಕನ್ನಡ ಜನಪದ ಮಹಾಕಾವ್ಯಗಳು ಬರೀ ಮಾತಿನ ರೂಪದಲ್ಲಷ್ಟೇ ಇದ್ದರೆ ಇಷ್ಟೊಂದು ಖ್ಯಾತಿಯನ್ನು ಪಡೆಯುತ್ತಿರಲಿಲ್ಲ.

### ಶಿಷ್ಟ ಕವಿಗಳ ಮೇಲೆ ಜನಪದ ಗೀತೆಗಳ ಪ್ರಭಾವ

ಶಿಷ್ಟರೆನ್ನುವ ಎಲ್ಲ ಕವಿಗಳ ಕಾವ್ಯಗಳಲ್ಲೂ ಜನಪದದ ಪ್ರಭಾವ ದಟ್ಟವಾಗಿರುವುದು ಸಹಜವಾಗಿದೆ. ಎಲ್ಲರ ಕೈಯ್ಯೂ ಜನಪದದ ಜೋಳಿಗೆಯಲ್ಲಿಯೇ ಎಂಬ ಮಾತನ್ನು ತಳ್ಳಿಹಾಕುವಂತಿಲ್ಲ. ಹೀಗೆ ನೋಡಿದಾಗ ರಾಷ್ಟ್ರಕವಿ ಕುವೆಂಪು ಅವರ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳಲ್ಲಿ, ಎಚ್.ಎಲ್.ನಾಗೇಗೌಡರ ನನ್ನೂರು ದೊಡ್ಡಮನೆ ಕಾದಂಬರಿಗಳಲ್ಲಿ ಜನಪದದ ಛಾಯೆ ಪಡಿಮೂಡಿದೆ. ಸಾಂಸ್ಕೃತಿಕವಾಗಿ ಕೆ.ಎಸ್.ನ ಅವರ ಪ್ರೇಮಗೀತೆಗಳಲ್ಲಿ ಜನಪದ ಸಾಹಿತ್ಯದ ಸಾಂಸ್ಕೃತಿಕ ಕಂಪು ಅಡಗಿದೆ. ವರಕವಿ ಬೇಂದ್ರೆಯವರ ನೀ ಹೀಂಗ ನೋಡಬ್ಯಾಡ ನನ್ನ, ಇನ್ನು ಯಾಕಾ ಬರಲಿಲ್ಲ ಹುಬ್ಬಳಿಯಾಂವ ಇತ್ಯಾದಿ ಕೌಟುಂಬಿಕ ಚಿತ್ರಣದ ಹಲವಾರು ಗೀತೆಗಳಲ್ಲಿ ಜಾನಪದದ ಸೊಗಡನ್ನು ಕಾಣಬಹುದು. ಭಾಷೆಯ ಬಳಕೆಯನ್ನು ಜಿ.ಪಿ.ರಾಜರತ್ನಂ ಅವರ ರತ್ನನ ಪದಗಳಲ್ಲಿ ಕಂಡರೆ; ಕಂಬಾರರ ನಾಟಕಗಳಲ್ಲಿ ಹಲವಾರು ಗೀತೆಗಳು ಕಾಣಸಿಗುತ್ತವೆ. ಹೀಗೆ ಎಲ್ಲ ಶಿಷ್ಟರೆನ್ನುವ ಕವಿಗಳ ರಚನೆಗಳಲ್ಲೂ ಜನಪದ ಗೀತೆಗಳ ಮುದ್ರೆಯನ್ನು ಗುರುತಿಸಬಹುದಾಗಿದೆ. ಪಂಜೆ ಮಂಗೇಶರಾಯರು, ಮಂಜೇಶ್ವರ ಗೋವಿಂದ ಪೈ ಇವರುಗಳ ಕೊಡುಗೆ ಕನ್ನಡ ಜನಪದ ಗೀತೆಗಳ ಕ್ಷೇತ್ರಕ್ಕೆ ಅಪಾರವಾಗಿದೆ.



### ಕನ್ನಡ ಜನಪದ ಗೀತೆಗಳ ಕೆಲವು ಸಂಗ್ರಹ ಮತ್ತು ಸಂಗ್ರಹಕಾರರು

ಕನ್ನಡ ಜನಪದ ಗೀತೆಗಳನ್ನು ಕುರಿತಂತೆ ಲಭ್ಯವಿರುವ ಸಾಹಿತ್ಯರಾಶಿ ಮತ್ತು ಸಾಹಿತ್ಯ ಸಂಗ್ರಹ, ವಿಶ್ಲೇಷಣೆ ಮತ್ತು ವಿವೇಚನೆ ನಡೆಸಿದವರ ದೊಡ್ಡ ಪಟ್ಟಿಯೇ ಬೆಳೆಯುತ್ತದೆಯಾದರೂ ಆಗಬೇಕಾಗಿರುವುದು ಅಪಾರವಾಗಿದೆ. ಅಂತಹ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ: ಡಾ॥ ಬಿ.ಎಸ್. ಗದ್ದಿಗಿಮಠ ಅವರ ಕನ್ನಡ ಜನಪದ ಗೀತೆಗಳು ಕೃತಿಯಲ್ಲಿ ಸೀಗೆ ಹುಣ್ಣಿಮೆ, ಗುರ್ಚಿ, ನಾಗಪಂಚಮಿ, ಗುಳ್ಳವ್ವ, ಅರಳೆಲೆ ಬಸವ ಇತ್ಯಾದಿ ಅನೇಕ ಹಾಡುಗಳ ಸಂಗ್ರಹವಿದೆ. ಎಂ. ಸಿ. ವಸಂತಕುಮಾರ್ ಸಂಪಾದಿತ 'ಕೋಲಾಟದ ಪದಗಳು' ವಿಪುಲವಾದ ಕೋಲಾಟದ ಪದಗಳನ್ನು ಒದಗಿಸುತ್ತದೆ. ಶ್ರೀಕಂಠಕೂಡಿಗೆ ಅವರು ಸಂಪಾದಿಸಿರುವ ಅಂಟಿಕೆ-ಪಂಟಿಕೆ ಪದಗಳು ಮಹತ್ವವಾಗಿದೆ ಮತ್ತು ಅವರ 'ಹೊನ್ನ ಬಿತ್ತೇವು ಹೊಲಕೆಲ್ಲ' ಸಂಪಾದಿತ ಕೃತಿಯಲ್ಲಿ ಕಹೀಪದ, ಮಾರ್ನವಮಿ ಪದ, ಮೋಹರಂ ಹಾಡುಗಳು ಮುಂತಾದ ಪ್ರಕಾರಗಳಿವೆ. ಎಚ್.ಎಲ್. ನಾಗೇಗೌಡರ 'ಪದವವೆ ನಮ್ಮ ಎದೆಯಲ್ಲಿ', 'ಸೋಬಾನೆ ಚಿಕ್ಕಮ್ಮನ ಪದಗಳು' ಇತ್ಯಾದಿಗಳಲ್ಲಿ ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳ ಜನಪದ ಗೀತೆಗಳ ಸಂಗ್ರಹ ಭಂಡಾರವಿದೆ. ದೇ.ಜ.ಗೌ. ಕಾರಂತರು, ಹಾ.ಮಾ.ನಾಯಕ, ರಾಗೌ, ಪಿ.ಕೆ.ರಾಜಶೇಖರ, ಗುಂಡ್ಮಿ ಚಂದ್ರಶೇಖರ ಐತಾಳ, ಬಿ.ಎ. ವಿವೇಕ ರೈ, ಎನ್.ಆರ್. ನಾಯಕ ಮುಂತಾದವರ ಸಂಗ್ರಹ ಗಣನೀಯವಾಗಿದೆ.

ಕರ್ನಾಟಕ ಜಾನಪದ ರತ್ನ ಡಾ॥ ಜೀ.ಶ.ಂ ಪ. ಅವರ ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, (ಪಿಎಚ್.ಡಿ ಮಹಾಪ್ರಬಂಧ) ಗಂಡಸರ ಜನಪದ ಗೀತೆಗಳು, ಹೆಂಗಸರ ಜನಪದ ಗೀತೆಗಳು, ಕಂಸಾಳೆಯವರು, ಮಂಟೇಸ್ವಾಮಿ ಕಾವ್ಯ, ಕರ್ನಾಟಕ ವೃತ್ತಿಗಾಯಕ ಕಾವ್ಯಗಳು, ದೊಂಬಿದಾಸರ ಲಾವಣಿಗಳು, ಹೆಳವರ ಕಾವ್ಯಗಳು, ಅವರ ನೆನೆದೇವು, ಜನಪದ ಖಂಡಕಾವ್ಯಗಳು, ಎರಡು ಜನಪದ ಕಾವ್ಯಗಳು, ಜನಪದ ವೀರಕಾವ್ಯಗಳು, ಭಾಗವಂತಿಕೆ ಮೇಳೆ, ಗೆಜ್ಜೆ ಗಲಿರೆಂದವೊ (ಕೋಲಾಟದ ಪದಗಳು), ಮುತ್ತ ತುಂಬೇವು ಕಣಜಕೆ ಇವೆಲ್ಲಾ ಕನ್ನಡ ಜನಪದ ಗೀತೆಗಳಿಗೆ ಸಂಬಂಧಿಸಿದ ಕೃತಿಗಳೇ. ಡಾ॥ ಎಲ್.ಆರ್. ಹೆಗ್ಡೆಯವರ ಬೆಳ್ಳಿಯಮ್ಮನ ಹಾಡುಗಳು, ತಿಮ್ಮಕ್ಕನ ಪದಗಳು, ಪರಮೇಶ್ವರಿಯ ಪದಗಳು ಹೆಸರಿಸಲೇಬೇಕಾದ ಕನ್ನಡ ಜನಪದಗೀತೆ ಸಂಬಂಧಿ ಕೃತಿಗಳು. ಕ್ಯಾತನಹಳ್ಳಿ ರಾಮಣ್ಣ, ಕುಂಜಿಬೆಟ್ಟು ಸುಬ್ರಹ್ಮಣ್ಯ ಕೆದ್ಲಾಯ, ಕಾಳೇಗೌಡ ನಾಗವಾರ, ಟಿ.ಎಸ್. ರಾಜಪ್ಪ, ಡಿ.ಲಿಂಗಯ್ಯ, ಎ.ಎಸ್.ಹೂಗಾರ, ಅಂಬಳಿಕೆ ಹಿರಿಯಣ್ಣ, ಎಂ.ಎಸ್.ಲಠ್ಠೆ, ಎಸ್.ಎಸ್. ಹಿರೇಮಠ, ಹೊರೆಯಾಲ ದೊರೆಸ್ವಾಮಿ, ಸಿ.ಪಿ.ಕೆ., ಆರ್.ಎಸ್. ಪಂಚಮುಖಿ, ಕಾಪಸೆ ರೇವಪ್ಪ ಇತ್ಯಾದಿ ಹಿರಿ-ಕಿರಿಯ ಹಲವಾರು ಜನಪದ ವಿದ್ವಾಂಸರುಗಳು ಜನಪದ ಗೀತೆಗಳ ಸಂಗ್ರಹ, ಸಂಪಾದನೆ ಕಾರ್ಯವನ್ನು ಮಾಡಿ ಕನ್ನಡ ಜನಪದ ಗೀತ ಸಾಹಿತ್ಯರಾಶಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಇನ್ನೂ ಸಂಗ್ರಹವಾಗಬೇಕಾದ್ದು ಅಪಾರವಾಗಿದೆ.

# ಕರ್ನಾಟಕದ ಜನಪದ ಆಟಗಳು

ರಾಜೇಗೌಡ ಹೊಸಹಳ್ಳಿ

ಮಾನವ ಒಂದು ಪುರಾತನ ಜೈವಿಕ ಜೀವಿ. ಸಮಾಜದ ಬೆಳವಣಿಗೆಯಲ್ಲಿ ಸಂಘಜೀವಿ. ಮಿದುಳಿನ ಬಲದಿಂದ. ತನ್ನದೇ ಆದ ಸಂಸ್ಕೃತಿಯನ್ನು ಸಂವಹನಗೊಳಿಸುವ ಪ್ರಕ್ರಿಯೆ ಅವನಲ್ಲಿದೆ. ಈ ಕಾರಣಗಳಿಂದ ಜನಪದ ಆಟಗಳನ್ನು ತಿಳಿಯಲು ಅನೇಕ ಶಾಸ್ತ್ರಗಳನ್ನು ವಲಂಬಿಸಬೇಕು. ಕರ್ನಾಟಕದ ಮಾನವನು ನೋಡಲು ಹೇಗಿದ್ದನೆಂದು ಊಹಿಸುವುದು ಕಷ್ಟ. ಕಲ್ಲಿನ ಆಯುಧಗಳ ಸಾಮ್ಯತೆಯಿಂದ ಸಾಂಸ್ಕೃತಿಕ ವಿಶ್ಲೇಷಣೆಯಿಂದ ಅವನು ಆಫ್ರಿಕಾ ಸಂತತಿಯವನಿರಬೇಕೆಂದು ಊಹಿಸುವುದುಂಟು. ಕರಡಿಗುಡ್ಡ(ಹಾಸನ)ಕಡೂರು, ತಮ್ಮಿನ ಹಾಳ್, ಕಿಬ್ಬನಹಳ್ಳಿ ಮುಂತಾದಡೆಯ ಉತ್ಖನನವು ಇದನ್ನು ಸಮ್ಮತಿಸುತ್ತದೆ. ಇಂಥಾ ಇತಿಹಾಸ ಪೂರ್ವದಲ್ಲಿ ಆಟವು ಹೇಗಿದ್ದಿರಬಹುದು. ಗುಹಾಮಾನವ ತಾನು ಹೊಟ್ಟೆಪಾಡಿಗೆ ಪ್ರಾಣಿಪಕ್ಷಿಗಳನ್ನು ಬೇಟೆಮಾಡಿ ತಿನ್ನುತ್ತಿದ್ದಾಗ ಅದಕ್ಕಾಗಿ ಬಳಸಿದ ಆಯುಧಗಳನ್ನು ಅವರ ಮಕ್ಕಳು ಹಿಡಿದು ಆಡಿರಬೇಕು. ಪ್ರಾಣಿಪಕ್ಷಿಗಳ ಪರಿಸರದಲ್ಲಿರ ನಲಿದಾಡುತ್ತಿದ್ದಾಗ ಅನುಕರಣೆಯಾಗಿರುವುದುಂಟು. ಹೊಟ್ಟೆತುಂಬಿದ ಯಾವುದೇ ಜೀವಿಗೆ ಆಟವೊಂದು ದೇಹ ಮತ್ತು ಮನಸ್ಸುಗಳೆರಡನ್ನು ಸ್ವಚ್ಛವಾಗಿಡುವ ಕ್ರಿಯೆ.

ಮಾನವ ಪ್ರಾಣಿಯೊಂದನ್ನು ಕೊಂದು ತಂದು ತಿನ್ನಲು ಪ್ರಾರಂಭಿಸಿದಾಗ ಪ್ರಾಣಿಯ ಹೊಟ್ಟೆವೊಳಗಿದ್ದ Bladdes ಗಾಳಿ ತುಂಬಿದಾಗ ಚೆಂಡಾಗಿ ಮಕ್ಕಳಿಗೆ ಆಡಲು ಕೊಟ್ಟಿರಬೇಕು.[೧] ಗ್ರಾಮೀಣ ಸಮಾಜದಲ್ಲಿರುವ ಲಗ್ಗೆಯಾಟ, ಚೆಂಚಾಟ, ಲಗೋರಿ ಇಂಥವುಗಳು ನಾಗರಿಕ ಜಗತ್ತಿನ ಪುಟ್‌ಬಾಲ್, ವಾಲಿಬಾಲ್, ಕ್ರಿಕೆಟ್‌ಗಳಾಗಿ ಬೆಳೆದಿರುವಾಗ ಅನೇಕ ಸಾಂಸ್ಕೃತಿಕ ಸ್ತರಗಳನ್ನು ಬಿಡಿಸಿ ಹೇಳುತ್ತವೆ. ಆಟಗಳು ಇಂದು ನೆನ್ನೆವಲ್ಲ. ಪ್ರಾಚೀನ ಈಜಿಪ್ಟ್ ಭಾರತ ಚೀನಾಗಳ ಪ್ರಾಚೀನ ಇತಿಹಾಸಗಳು ಇದನ್ನೆಲ್ಲಾ ಸೃಷ್ಟಿಪಡಿಸುತ್ತವೆ. ಗವಿಮಾನವ ಅಂದು ಕ್ರೀಡೆಯಾಡಿದ್ದಾನೆ. ಜನ ಜೀವನ ಅಂದಿನ ಸಮಾಜದ ಪ್ರತಿಬಿಂಬವಾಗಿರುವುದರಿಂದ ಅವನ

*1 One of the carliest type of balls used in games was an air filled animal bladder. (The new encyclopedia of Britanica V: 11. 1992p112.)



ಮಕ್ಕಳು ಏಕಲವ್ಯನಂತೆ ನೋಡಿ ಆಡಿ ಕಲಿತಿದ್ದಾರೆ. ಜನಪದ ಕತೆಗಳಲ್ಲಿ ಮುತ್ತಿನಚೆಂಡು ರನ್ನದಲಗ್ಗೆ ಎಂಬ ಆಶಯಗಳು ಬರುತ್ತವೆ. ಜನಪದ ಕಡೆಯ ಹೆಣ್ಣು ರತ್ನೋಜಿ ಮಾತೃಸಮಾಜದ ಪ್ರತೀಕ. ಕೈಕೆಯ ಮನೋಭಾವದವಳು. ಪಿತೃಸಮಾಜವು ಹೆಣ್ಣನ್ನು ಅಂಕೆಯಲ್ಲಿಡಲು ತನ್ನ ತೆವಲಿಗೆ ಬಳಸಿಕೊಂಡಿರುವ ಪ್ರತಿಫಲವಾಗಿ ಶಿಷ್ಟ ರಾಮನು ಕಾಡಿಗೆ ಹೋಗಬೇಕಾಯಿತು. ಕುಮಾರ ರಾಮನು ತಲೆಯನ್ನೇ ಕಳೆದುಕೊಳ್ಳಬೇಕಾಯಿತು. ಕುಮಾರ ರಾಮನ ಚಿಕ್ಕಮ್ಮ ರತ್ನೋಜಿಯ ಎದೆಗೂಡಲ್ಲಿ ಅವನಾಡಿದ ಚೆಂಡು ಬಚ್ಚಿಟ್ಟು ಕೊಳ್ಳುತ್ತದೆ. ಇಂಥಾ ಆಶಯಗಳು ಬದುಕನ್ನೆ ನಿರ್ಣಾಯಕ ಗೊಳಿಸುವ ಆಟಿಕೆಗಳು. ಮನಃಶಾಸ್ತ್ರೀಯವಾಗಿ ಇಲ್ಲಿ ಚೆಂಡು ಸಮಾಜವನ್ನು ನಿಯೋಜಿಸುವ ವಿಧಾನಕ್ಕೊಳಪಡುತ್ತದೆ.

ಚೆಂಡು ಶಕ್ತಿಮೂಲ ಸಮಾಜದಲ್ಲಿ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಪ್ರಾಚೀನ ಸಮಾಜವನ್ನು ಪ್ರತಿನಿಧಿಸುತ್ತವೆಂಬುದನ್ನು ದಕ್ಷಿಣ ಕನ್ನಡದ ಪೊಳಲಿಯನ್ನು ಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಂಪ್ರತಿ ಐದುದಿನಗಳು ನಡೆಯುವ ಕಲ್ಚೆಂಡಾಟದಲ್ಲಿ ಗಮನಿಸಬಹುದು. ಹಿರಿಯಡ್ಕದ ಕಾಜಾಗಗತ್ತು ಮುಗ್ಗೇರ ಕೋಲದಲ್ಲಿ ಸಹಾ ಈ ಕಾಲ್ಚೆಂಡಾಟಗಳುಂಟು.[೨] ಜಮಾದಿ ಭೂತದ ಪಾಡ್ದನಗಳಲ್ಲಿ ಈ ಕ್ರೀಡೆಗಳ ಉಲ್ಲೇಖಗಳಿವೆ. ಹೀಗೆ ಚೆಂಡು ಮಾನವನ ಕೈಗೆ ಕಾಲಿಗೆ ಅನುಗುಣವಾಗಿ ಆಡುವಾಗ ಅನೇಕ ಆಚರಣೆಗಳಲ್ಲಿ ಅಂತರ್ಗತವಾಗಿದೆ. 'ನಾಗೋಲೆ' ಮಹೂರ್ತವಾದ ಮೂರನೆ ದಿನ ಮದುಮಕ್ಕಳಾಡುವ ಆಚರಣೆಯಾಟ. ಹಸೆಮಣೆಯ ಮೇಲೆ ಅರಿಸಿನದೆಣ್ಣೆಯನ್ನು ಪರಸ್ಪರ ಒತ್ತಬೇಕು, ಓಕಳಿಯಾಡಬೇಕು, 'ಹೂವಿನಚೆಂಡಾ'ಡಬೇಕು. ಇದೆಲ್ಲ ಮನೆಯ ಹೊರಗಡೆ ಹಟ್ಟಿಯಲ್ಲಿ ನಡೆಯುತ್ತದೆ. ಸಾಲಾವಳಿಯಾದವರು ಸಹಾ ಹರಯದೋರು ಹಿರಿಯೋರು ಕಿರಿಯೋರು ಎಲ್ಲಾ ಓಕಳಿ ಎರಚಾಡಿ, ನೀರು ಉಗ್ಗಾಡಿ ಮದುಮಕ್ಕಳಾಡಿದ ಎಸೆದ ಚೆಂಡುಗಳಲ್ಲಿ ಆಡುವ ಹೆಣ್ಣುಗಂಡೊಗಳಾಟ. ಮದುಮಕ್ಕಳು ಪರಸ್ಪರ ಅಂಗಾಂಗಳನ್ನು ದಿಟ್ಟಿಸುವುದು ಮುಟ್ಟುವುದರಲ್ಲಿ ಎಣ್ಣೆ ಮತ್ತು ಓಕಳಿಯೊಡನೆ ಚೆಂಡು ತಾದಾತ್ಮ್ಯ ಪಡೆದುಕೊಳ್ಳುತ್ತದೆ. ಯುಗಾದಿಯಲ್ಲಿ ತಪ್ಪದೆ, ಬೇರೆ ದಿನಗಳಲ್ಲಿ ವಿರಾಮದಾಟವಾಗಿ ಚೆಂಡಾಟವೊಂದು ಸ್ಥಾನ ಪಡೆದುಕೊಳ್ಳುತ್ತದೆ. ಈ ಆಟಕ್ಕೆ 'ಕುದುರೆ ಆಟ' ಎನ್ನುವುದುಂಟು. ಹಳೆಬಟ್ಟೆಗಳನ್ನು ಸುತ್ತಿ ದಬಳದಿಂದ ದಪ್ಪಹುರಿಯಿಂದ ಹೊಲೆದು ಹಿಡಿಯುವ ಗಾತ್ರಕ್ಕೆ ಚೆಂಡಾಗಿಸುತ್ತಾರೆ. ಎರಡು ಪಂಗಡಗಳಲ್ಲಿ ಆಟಗಾರರಿರುತ್ತಾರೆ. ಮಡಕೆ ಚೂರೊಂದರಲ್ಲಿ Tass ಹಾಕಲಾಗುತ್ತದೆ. ಆಡುವಾತ ಎಡಗೈಲಿ ಚೆಂಡುಹಿಡಿ[illegible] ಬಲಗೈಲಿ ಮೊಳದುದ್ದ ದೊಣ್ಣೆ ಹಿಡಿದು ಚೆಂಡನ್ನು Bat ಮಾಡುವಾಗ ಅವನ ಹಿಂಭಾಗದಲ್ಲಿ ದಪ್ಪಕಲ್ಲುಗಳ ಮೇಲೆ ಬೆರಳುಗಾತ್ರದ ಮಾರುದ್ದನೆ ಕಡ್ಡಿ ಇರುತ್ತದೆ. ಅದೇ ವಿಕೆಟ್ ಸ್ವರೂಪದಲ್ಲಿರುತ್ತದೆ. ಆಟಗಾರ ನಿಯಮದಂತೆ ಹಾಕಿದ ಗೆರೆವೊಳಗೆ ನಿಂತು ಚೆಂಡು ಹೊಡೆದರೆ ಎದುರಿನವರು

೨. ಜನಪದ ಆಟಗಳು ಪು.೬೨, (T.S ಕೃಷ್ಣಯ್ಯ)

field ಕಾಯುತ್ತಾರೆ. Catch ಹಿಡಿದರೆ ಆಟಗಾರ out ಆಗುತ್ತಾನೆ. ಇಲ್ಲದಿದ್ದರೆ ಚೆಂಡು ಬಿದ್ದಲ್ಲಿಂದ ಎದುರಾಳಿ ಎಸೆದು ವಿಕೆಟ್ ಬೀಳಿಸಿದರೆ ಅಥವಾ ಕಡ್ಡಿ ಅಡಿಯಲ್ಲಿ ಚೆಂಡು ನುಗ್ಗಿದರೂ out ಆಗಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಕುದುರೆ ಎರಡು ಕುದುರೆಯೊಂದು Runಗಳಾಗಿ ಎಣಿಸಿಕೊಳ್ಳುತ್ತಾರೆ. ಹೀಗೆಯೇ ಎರಡೂ ಪಂಗಡದವರು ಆಡಿ ಮುಗಿದ ಮೇಲೆ ಸೋತವರ ಮೇಲೆ ಗೆದ್ದವರು ಏರಿ ಕುದುರೆಸವಾರಿ ಮಾಡಿದಂತೆ ನಟಿಸಿ ಆಟ ಬಿಡುತ್ತಾರೆ. ಇದೊಂದು ಗ್ರಾಮೀಣ ಕ್ರಿಕೆಟ್*. ಕುದುರೆ ಚುರುಕಿನ ಸ್ಪರ್ಧಾತ್ಮಕ ಪ್ರಾಣಿ. ಸಾಕುಪ್ರಾಣಿಗಳ ಹಂತಕ್ಕೆ ಮಾನವ ಮುಟ್ಟಿದಾಗ ಇಂಥಾ ಸ್ವರೂಪದ ಆಟಗಳು ಉದಿಸಿ ಇಂದಿನ ಕ್ರಿಕೆಟ್‌ನಂತಹ ಆಟಗಳನ್ನು ಪ್ರತಿನಿಧಿಸುತ್ತವೆಂಬುದನ್ನು ಗಮನಿಸಬೇಕು.

ಗವಿ-ಮಾನವನು ಬೇಟೆಯ ಸಂಸ್ಕೃತಿಯೊಡನೆ ಕುಟುಂಬದ ಅವಶ್ಯಕತೆಯನ್ನು ಕಂಡುಕೊಂಡನು. ತಾನು ವಾಸಿಸುತ್ತಿದ್ದ ಗವಿ ಗುಡಿಯ ಕಲ್ಪನೆ ಪಡೆದು ತಾನು ಆರಾಧಿಸುವ ದೇವರಿಗೂ ನೆಲೆಯಾಯಿತು. ಹಕ್ಕಿಪಕ್ಷಿಗಳಿಗೆ ಪ್ರಾಣಿಜೀವಿಗಳಿಗೆ ಅವುಗಳೊಡನೆ ಬದುಕುತ್ತಿದ್ದ ಮಾನವನಿಗೆ ಈ ಗೂಡು ಆವಾಸಸ್ಥಾನವಾಗಿದ್ದು ವಿವಿಧ ಸಾಂಸ್ಕೃತಿಕ ಹಂತದಲ್ಲಿ ವೈವಿಧ್ಯತೆ ಹೊಂದಿರುವುದು ಸೃಷ್ಟಿ.[೩] ಈ ಗುಡಿ ಅಥವಾ ಗುಡಿಸಲು ಅವನ ಮೂಲ ಆಸರೆಯ ಪ್ರತೀಕ. ಅದು ತ್ರಿಕೋನಾಕೃತಿಯ ಸರಳ ರಚನೆ. ಈಗಲೂ ಋತುಮತಿ ಹೆಣ್ಣನ್ನು ಕೂರಿಸುವುದು ಇಂಥಾ ಸೊಪ್ಪಿನ ಗುಡಿಸಿನಲ್ಲಿ. ಈ ಸರಳ ರಚನೆಯಲ್ಲಿ ಬದುಕಿನ ಒಂದು ಸಂಸ್ಕೃತಿಯ ಮೂಲ ಅಡಗಿರುವುದು ಸ್ಪಷ್ಟ. ಮನುಷ್ಯ ಕುಳಿತಲ್ಲೆ ತನಗೂ ಪರಿಸರಕ್ಕೂ ತನಗೂ ತನ್ನ ಸಂಕೀರ್ಣಗೊಳ್ಳುತ್ತಿರುವ ಬದುಕಿಗೂ ತನಗೂ ತಾನು ಬೇಟೆಯಾಡುವ ಪ್ರಾಣಿಪಕ್ಷಿಗಳಿಗೂ ತನಗೂ ತಾನು ಸಾಕುವ ಸಾಕುಪ್ರಾಣಿಗಳಿಗೂ ಆಟಗಳ ಮುಖಾಂತರ ಅಂತರವನ್ನು ಕಲ್ಪಿಸಿಕೊಂಡ. ಇದು ನಾಗರೀಕತೆಯೊಂದು ಗ್ರೀಸ್‌ನಲ್ಲಿ ರೋಂನಲ್ಲಿ ಭಾರತದಲ್ಲಿ ಉಗಮಿಸುವ ಮೊದಲಿನ ಸ್ಥಿತಿಯದ್ದು. ಆಟದಲ್ಲಿರುವ ತ್ರಿಕೋಣ ಮನೆಗಳು ಅಂದಿನ ಮಾನವ ವಾಸಿಸುತ್ತಿದ್ದ ಗುಡಿಸಲು ಭೂಮಿ ಮೇಲೆ ಆಕಾಶ ಕವಿದಿರುವ ಸ್ವರೂಪದ ಗುಮ್ಮಟ ಗೋಲಾಕಾರದ ಮತ್ತು ಈಜಿಪ್ಟ್‌ನ ಪಿರಮಿಡ್ಡಿನಾಕಾರದ ಈಗಲೂ ದೇಶೀಯ ಸ್ವರೂಪದಲ್ಲಿರುವ ತ್ರಿಕೋಣಾ ಕೃತಿಯಲ್ಲಿರುವುದು ಆಟ ಮತ್ತು 'ವಾಸ್ತು'ವಿನ ಒಂದೇ ಕಲ್ಪನೆ ತೋರಿಸುತ್ತದೆ.

ಗ್ರೀಸಿನ ಅವನತಿಗೆ ಪರಿಹಾರವೇನೆಂದು ನಗರದ ಕಣಿದೇವತೆಯನ್ನು ಕೇಳಿದಾಗ ಆಟಗಳಿಂದ ಪುನರ್ಜೀವನ ಸಾಧ್ಯವೆಂದು ಹೇಳಿದ ಮಾತುಗಳಿವೆ.[೪] ಆಟಗಳು ಸಮಾಜದಲ್ಲಿ ಯಾವ ನಂಬಿಕೆಗಳಿಗೆ ಪಕ್ವವಾಗಿದ್ದವೆಂದು ಇಂಥಾ ಮಾತುಗಳು ಸ್ಪಷ್ಟಪಡಿಸುತ್ತವೆ.

---

೩. ವಿವರಕ್ಕೆ: ಹಾಲುಮತದರ್ಶನ: ಶಂಬಾ ಜೋಷಿ, ಪೂರ್ಣ, ಕನ್ನಡ ವಿ.ವಿ.ನಿ.ಹಂಪಿ.೧೯೯೭ ಈ

೪. ಕನ್ನಡ ವಿಶ್ವಕೋಶ ಸು. ೧ ಪು.೨೭೧.



'ಆನೆಕುರಿಆಟ' ಇದು ನಮ್ಮ ಗ್ರಾಮೀಣರ ಸರಳ ಸಂಕೀರ್ಣ ಚಾಣಾಕ್ಷತನದಾಟ. ಗ್ರಾಮಗಳ ಗುಡಿಮುಂದೆ ದನಕಾಯುವ ಬಳಿ ಕಲ್ಲು ಬಂಡೆಗಳ ಮೇಲೆ ಆಟಾಂಗಣಗಳುಂಟು. ವಿರಾಮದ ವೇಳೆಯಲ್ಲಿ ಮನೆ ಮುಂದೆ ಜಗಲಿಮೇಲೆ ಬರೆದುಕೊಂಡು ಆಟವನ್ನು ಹೆಣ್ಣುಗಂಡುಗಳ ಭೇದವಿಲ್ಲದೆ ಆಡುವುದುಂಟು. ಇದು ಇಬ್ಬರಾಡುವ ಆಟ. ಒಬ್ಬರಿಗೆ ಮೂರು ಆನೆ ಮತ್ತೊಬ್ಬರಿಗೆ ಇಪ್ಪತ್ತು ಕುರಿಗಳು. ಇವು ಆನೆಕುರಿಗಳ ಸಾಂಕೇತಿಕ ಕಲ್ಲುಗಳು, ಮನೆ ಮನೆಗಳಿಗೆ ದಾಟುವಾಗ ಹಾರುವುದು ನಡೆಯುವುದು ಸೋಲುವುದು ಗೆಲ್ಲುವುದು ಇರುತ್ತದೆ. ಮನುಷ್ಯ ಕಾಡಿನ ಬಳಕೆಗೆ ಮಾತ್ರ ಸೀಮಿತಗೊಳ್ಳದೆ ಪಶುಪಾಲನಾವೃತ್ತಿಯನ್ನು ಅವಲಂಬಿಸಿರುವುದು ಅವನ ಸಂಸ್ಕೃತಿಯಲ್ಲಿ ಎರಡನೇ ಹಂತ. ಆನೆ ಮಾನವನಿಗೆ ಬೇಟೆಯಲ್ಲಿ ಬಗ್ಗದ ದೊಡ್ಡ ಪ್ರಾಣಿ. ತನ್ನ ಪಾಲನಾ ಕುರಿಗಳನ್ನು ತುಳಿದು ಹಾಕಬಲ್ಲದು. ಅವುಗಳನ್ನು ರಕ್ಷಿಸಿಕೊಳ್ಳಲು ಶಕ್ತಿಗಿಂತ ಯುಕ್ತಿ ಮೇಲು. ಆನೆ ಕುರಿಗಳನ್ನು ತಿನ್ನುವುದಿಲ್ಲ ನಿಜ, ತುಳಿದು ಹಾಕುತ್ತದೆ. ಇದರಿಂದ ತಪ್ಪಿಸಿಕೊಳ್ಳುವ ಹುನ್ನಾರವನ್ನು ಕುಳಿತು ಆಲೋಚಿಸಿದ ಮಾದರಿಗಳವು. ಈ ಆಟದಂತೆ ಇನ್ನೂ ಸಂಕೀರ್ಣವಾದ ಹೆಚ್ಚುಮನೆಗಳಿರುವ ಆಟದ ಮಾದರಿಯೂ ಇದೆ. ಅದಕ್ಕೆ 'ಹುಲಿಕುರಿ ಆಟ' ಎನ್ನುವರು. ಹುಲಿ ಮತ್ತಷ್ಟು ಕ್ರೂರಿ. ಅದರಲ್ಲೂ ಮಾಂಸಾಹಾರಿ. ಆನೆ ಕೆಲವೊಮ್ಮೆ ಕುರಿಕಡೆಗೆ ಬಂದರೆ ಇದು ಆಹಾರಕ್ಕಾಗಿಯೇ ಹೊಂಚಿ ಬರುತ್ತದೆ. ಮನುಷ್ಯನ ಕಡೆ ತಿನ್ನಲೂ ಬರುವುದುಂಟು. ಇದಕ್ಕಾಗಿ ಸಂಕೀರ್ಣತೆಯಲ್ಲಿ ಆಟವನ್ನೂ ಆಲೋಚಿಸಿದ್ದಾನೆ. ಮೂಲ ಮಾನವನ ಆಲೋಚನೆಗಳು ಆಟಗಳ ಮೂಲಕ ಸಾಂಸ್ಕೃತಿಕ ಪಳಯುಳಿಕೆಗಳನ್ನು ಉಳಿಸಿಕೊಂಡು ಹರಿದು ಬರುತ್ತವೆಂಬುದನ್ನು ಇಂಥ ಸೂಕ್ಷ್ಮತೆಯಲ್ಲಿ ಕಾಣುತ್ತೇವೆ.

'ಚೌಕಾಬಾರ' ಇದು ಮಾನವನ ವಿಕಾಸದ ಹಾದಿಯಲ್ಲಿ ಮುಂದಿನ ಹಂತದ್ದು, ವಾಸ್ತುಶಿಲ್ಪದ ಪ್ರಕಾರ ಗವಿ ಗುಡಿ ಗುಡಿಸಲು ಪ್ರಥಮ ಹಂತವಾದರೆ ಶಿಲಾಯುಗವನ್ನು ಧಾಟಿ ತಾಮ್ರಯುಗ ಕಬ್ಬಿಣದ ಯುಗಕ್ಕೆ ಮಾನವ ಕಾಲಿಡುವಾಗ ಅನೇಕ ಮಾದರಿಯನ್ನು ಬದಲಿಸಿಕೊಂಡಿರುತ್ತಾನೆ. ತ್ರಿಕೋಣಾಕೃತಿಯ ವಾಸ್ತು ಚೌಕಾಕಾರ ತಾಳಬೇಕಾದರೆ ಅನೇಕ ಯುಗಗಳೇ ಕಳೆದಿರಬೇಕು. ಇಲ್ಲಿ ೫ ೫ ರಂತೆ ೨ ೫ ಮನೆಗಳುಳ್ಳ ಅಂಕಣದಲ್ಲಿ ಮಧ್ಯೆ ಇರುವುದು ಹಣ್ಣಿನ ಮನೆ. ಎರಡು ಮೂರು ಅಥವಾ ನಾಲ್ಕು ಜನಗಳು ಕುಳಿತು ಆಡುವ ಕಟ್ಟೆ ಮನೆಗಳಿರುತ್ತವೆ. ಆಡಲು ದಾಳಗಳಾಗಿ ನಾಲ್ಕು ಕವಡೆಗಳೋ ಅಥವಾ ಹುಣಸೆ ಬೇಳೆಗಳೋ ಆಗಬೇಕು. ನಡೆಸಲು ಒಬ್ಬರಿಗೆ ನಾಲ್ಕರಂತೆ ಸಣ್ಣಕಲ್ಲುಗಳು ಅಥವಾ ಕಾಳುಗಳು ಬೇಕು. ದಾಳಕ್ಕೆ ತಕ್ಕಂತೆ ಆಟ. ಒಂದು ಎರಡು ಮೂರು ನಾಲ್ಕು ಮತ್ತು ಎಂಟು ದಾಳಗಳಲ್ಲಿ ಬೀಳುತ್ತವೆ. ಕಾಯಿಕಡಿದರೆ ಕೊಲೆ, ಕಡಿಯದೆ ಹಣ್ಣಾಗುವುದು ಸ್ವಲ್ಪತಡ. ಕಡಿದರೆ ಎದುರಾಳಿಯನ್ನು ಹಿಂದಕ್ಕೆ ಹಾಕಿದಂತೆ. ಮೊದಲು ಹಣ್ಣಾದವನು ಗೆದ್ದಂತೆ. ಋಗ್‌ವೇದದಲ್ಲಿ 'ಅಕ್ಷ'ವೆಂಬ ಪಗಡೆಯಾಟದ ಮಾಹಿತಿಯಿದೆ. ಅಮನಿ ಶಾಸ್ತ್ರೀಜಿ. *ಪಿತೃಕುಟುಂಬದಲ್ಲಿ ಸ್ತ್ರೀಯಧನ. ನಾಗಸಂಪ್ರದಾಯದಲ್ಲಿ ಅದು ದಿವ್ಯ. ಧನವಾಗಿ ಗೆದ್ದನ್ನು ಅನುಭವಿಸುವ*

*ಆಗಿನ ಸಂಪ್ರದಾಯವಾಗಿದ್ದ ಕಾರಣ ದ್ಯೂತಸಭೆ ದ್ರೌಪದಿಯ ಬಗ್ಗೆ ಅಸಹಾಯವಾಗಿತ್ತು. ವಿವರಕ್ಕೆ: 'ಋಗ್ವೇದ ಸಾರ' 'ನಾಗ ಪ್ರತಿಮಾವಿಚಾರಣ ಪು. ೪೮೯ ರಿಂದ ೪೭೪.* ಮಹಾಭಾರತಕ್ಕೆ ಪಗಡೆಯೇ ಮೂಲಕಾರಣ. ಪಗಡೆಯಾಡಿ ಪಾಂಡವರು ಕೆಟ್ಟರು ಎಂಬುದೊಂದು ಗಾದೆ. ಚದುರಂಗ ಈಗಿನ ಚೆಸ್ ಇವು ಆಗಿನ ಕಾಲದ ಮತ್ತು ಈಗಿನ ಕಾಲದ ಎರಡು ಆಟಗಳು. ಎರಡೂ ಗ್ರಾಮೀಣ ಮಾದರಿಯಿಂದ ಕ್ಷತ್ರಿಯ ಪರಂಪರೆಗೆ ಹರಿದುಬಂದಂತವು. ಸಮಾಜದ ಬೆಳವಣಿಗೆಯಲ್ಲಿ ರಾಷ್ಟ್ರದ ಕಲ್ಪನೆಯಲ್ಲಿ ಅನೇಕ ಹೋರಾಟಗಳು ನಡೆದುಹೋಗಿವೆ. ಗಣ ಮತ್ತು ಬಂಧು ಸಮಾಜವು ಈಗಿನ ಸಮಾಜಕ್ಕೆ ಮೂಲಬೇರಾಗಿದೆ. ಸಮಾಜದಲ್ಲಿ ಇಂಥಾ ಆಟಗಳು ಬದುಕಿನ ವಿವಿಧ ಹಂತಗಳನ್ನು ಹೇಗೆ ಉಳಿಸಿಕೊಂಡಿವೆ, ಛಾಯಾ ಸ್ವರೂಪವಾಗಿವೆಂಬುದನ್ನು ತಿಳಿಯಬಹುದು.

ಚೌಕಾಬಾರ ಸಮಾಜದ ಬಾಹ್ಯಾಂಗದ ಬದಲಾವಣೆಯನ್ನು ಬಿಂಬಿಸಿದರೆ 'ಚನ್ನೆಮಣೆಯಾಟ' ಅಂತರಂಗದ ಗೃಹಕೃತ್ಯವನ್ನು ಬಿಚ್ಚಿತೋರಿಸುತ್ತದೆ. ಇದು ಒಂದು ಸಾಲಿನಲ್ಲಿ ಏಳು ಮನೆಯಂತೆ ಎರಡು ಸಾಲಿರುವ ಮಣೆ. ಆಟವಾದ ಮೇಲೆ ಪೆಟ್ಟಿಗೆಯಂತೆ ಮಡಿಸಿಡಬಹುದು. ಒಂದು ಮನೆಗೆ ೫ ಕಾಯಿಯಂತೆ ಎಪ್ಪತ್ತು ಬೀಜಗಳಿರುತ್ತವೆ. ಏಳರ ಸಂಖ್ಯೆಯನ್ನು ಗ್ರಾಮೀಣರು ಲೆಕ್ಕ ಹಾಕುವಾಗ ರಾಶಿ ಅಳೆಯುವಾಗ ಬಾಯಿಬಿಟ್ಟು ಹೇಳುವುದಿಲ್ಲ. ಆರು ಮತ್ತೊಂದು ಎಂಟು ಎಂದೆನ್ನುತ್ತಾರೆ. ಮೇಲು ವರ್ಗದವರ ಸಪ್ತಪದಿ ಮತ್ತು ಯಜ್ಞವಿಧಿಗಳು. ದ್ರಾವಿಡ ಸಂಸ್ಕೃತಿಗೆ ನಿಷಿದ್ದ. ಕರ್ಮಸಿದ್ಧಾಂತದ ಪ್ರಕಾರ ಒಂದು, ಏಳು ಮತ್ತು ಹನ್ನೊಂದು ಅನಿಷ್ಟ ಸಂಖ್ಯೆಗಳು. ಚೆನ್ನಮಣೆಯನ್ನು ಈ ಕಾರಣದಿಂದ' ಗ್ರಾಮೀಣ ಜನಾಂಗ ಅಷ್ಟಾಗಿ ಸ್ವೀಕರಿಸಿದಂತಿಲ್ಲ. ಸ್ವಲ್ಪ ಮುಂದುವರಿದ ಬ್ರಾಹ್ಮಣೀಕರಣಕ್ಕೊಳಗಾದ ಜನಾಂಗಗಳು ಈ ಮಣೆಯನ್ನು ವಧುವಿಗೆ ಬಳುವಳಿಯಾಗಿ ಕೊಡುವುದುಂಟು. ಹೆಣ್ಣು ಅದನ್ನು ದಾಟಬಾರದು ಎಂಬ ಪವಿತ್ರ ಭಾವನೆವುಂಟು. ಇದನ್ನು ಗಮನಿಸಿದರೆ ಗ್ರಾಮೀಣ ಆಟಗಳಲ್ಲೂ ಸಂಘರ್ಷಣೆ ನಡೆದಿರುವುದನ್ನು ಸಾಂಸ್ಕೃತಿಕ ಸ್ವೀಕಾರವಾಗಿರುವುದನ್ನು ವಿಭಜಿಸಿ ನೋಡಬಹುದು. ಚನ್ನೆಮಣೆಯಾಟದಲ್ಲಿ ಆಲಿವಾಣದ ಬೀಜ ಪ್ರಾಧಾನ್ಯ. ಚೌಕಾಬರದಲ್ಲಿ ಹುಣಸೆಬೀಜ ಪ್ರಾಧಾನ್ಯ. ಆಲಿವಾಣದ ಬೀಜಕ್ಕಿಂತ ಹುಣಸೆ ಬೀಜಕ್ಕೆ ಮಹತ್ವ ಹೆಚ್ಚು. ಹುಳಿಗೆ ಹುಣಸೆಬೇಕು. ಸತ್ತಾಗ ಹುಳಿಮುಟ್ಟಬೇಕು. ಅಭಿಮನ್ಯು ಸತ್ತಾಗ ಶ್ರೀಕೃಷ್ಣ ಅರ್ಜುನನಿಗೆ ಹುಳಿ ಮುಟ್ಟಿಸಿ ಮರುಜೀವ ಪಡೆಯದಂತೆ ನೋಡಿಕೊಂಡು. ಸತ್ತವರು ಹುಟ್ಟಿಬರುತ್ತಾರೆಂಬುದು ಶಿಷ್ಟಮೂಲದ ನಂಬಿಕೆ. ಉಪ ಸಂಸ್ಕೃತಿಗಳಲ್ಲಿ ಮರುಜನ್ಮವಿಲ್ಲ: ಬಳಗಕ್ಕೆ ಸತ್ತವರನ್ನು ಸೇರಿಸಿದರೆ ಈ ಲೋಕ ಮುಗಿದಂತೆ. ಬಯಲುನಾಡಿನಲ್ಲಿ ಹುಣಸೆ ಬದುಕಿನಲ್ಲಿ ದಿನಾ ಬೇಕಾಗುವ ಹಣ್ಣು. ಅದರ ಬೀಜ ಆಟಕ್ಕೆ ಒಂದು ಸಾಂಸ್ಕೃತಿಕ ಕೊಂಡಿ. Trmarindus Indica ಎಂಬುದು ಇದರ ಸಸ್ಯಶಾಸ್ತ್ರೀಯ ಹೆಸರು ಇದರ ಮೂಲ ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದ ದ್ರಾವಿಡಮೂಲದ ಬಯಲು ಸೀಮೆಯದ್ದು. ಆಲಿವಾಣಕ್ಕೆ ಮಲೆನಾಡಿನಲ್ಲಿ ಆಸರೆ ಹೆಚ್ಚು, ಸರ್ವವ್ಯಾಪಿಯಾಗಿ



ಬದುಕಿನಲ್ಲಿ ಆಗಮಿಸಿರುವ ದಾಖಲೆ ಇಲ್ಲ. ಆಮದಾಗಿ ಬಂದ ಕಾಫಿ ಗಿಡಕ್ಕೆ ತಾತ್ಕಾಲಿಕ ನೆರಳಿಗಾಗಿ ಬಳಸುವುದು ಹೆಚ್ಚು. (ಆಲಿವಾಣ-ಹಾಲುವಾಣ-ಪಾರುವಾಣ(Erythrina Indica)) ಹೀಗೆ ಆಟಗಳಲ್ಲಿ ಕೃಷಿಮೂಲ ಸಮಾಜವು ಬಳಸುವ ಪ್ರತಿಯೊಂದು ಅಂಶವೂ ಸ್ವಾರಸ್ಯಕರವಾದುದು. ಎಲ್ಲವೂ ಸಾಂಸ್ಕೃತಿಕ ಗಂಟುಗಳನ್ನು ಹೂಡಿಕೊಂಡಿರುವುಂತಹದು. ಚನ್ನೆಮಣೆಯನ್ನು ಒಬ್ಬರೇ ಹೆಚ್ಚಾಗಿ ಹೆಣ್ಣು ಆಡುವುದುಂಟು ಸೀತೆ ಅಶೋಕವನದಲ್ಲಿ ಹೀಗೆ ಆಡಿದ್ದಳಂತೆ. ಅದಕ್ಕೆ ಸೀತೆಯಾಟ ಎನ್ನುವುದುಂಟು. ಇದೂ ಕೂಡ ಆಟವನ್ನು ವೈದಿಕೆ ಮೂಲಕ್ಕೆ ಕೊಂಡೊಯ್ಯುತ್ತದೆ.

ಯಾವುದೇ ಮಗು ತಾನು ಬೆಳೆಯುವ ಸಮಾಜದಲ್ಲಿ ಏಕಾಂಗಿಯಾಗಿರಲು ಇಷ್ಟಪಡುವುದಿಲ್ಲ. ಏಕಾಂಗಿಯಾಗಿದ್ದರೂ ಮುದುರಿಕೂರುವುದಿಲ್ಲ. ಇದು ಆರೋಗ್ಯದ ಲಕ್ಷಣಕೂಡ. ಸಮಾಜದ ಬೆಳವಣಿಗೆಯಲ್ಲಿ ಸಾಮೂಹಿಕ ಜೀವನಕ್ಕೆ ಹಾತೊರೆಯುವ ವಿಧಾನವಿದು. ಮಗು ಮಾತು ಕಲಿತಾಗ ಪ್ರಾಸಕ್ಕೆ ಹಾತೊರೆಯುತ್ತವೆ. ಪ್ರಾಸ ಬಂದಾಗ ಗೀತೆ ರಚಿಸುತ್ತದೆ. ಆಗ ಮಕ್ಕಳು ಒಟ್ಟಾಗುತ್ತವೆ. ಆಟವಾಡುತ್ತವೆ. ಇಂಥಾ ಒಂದು ಆಟ ''ಅಪ್ಪಪ್ಪಂಟ ಆಲಿಮೊಗ್ಗು''. ಇದನ್ನು ಕೆಲವುಕಡೆ 'ಅಡ್ಡಂದಿಡ್ಡ' ಎನ್ನುವುದುಂಟು. ಇದರಲ್ಲಿ ಎರಡು ಭಾಗ. ಮೊದಲ ಭಾಗದಲ್ಲಿ ಮಕ್ಕಳು ಎರಡೂ ಹಿಡಿಗಳನ್ನು ಒಂದರ ಮೇಲೊಂದು ಇಟ್ಟು ಮೂಟೆಗಳನ್ನು ಒಂದರ ಮೇಲೊಂದು ಜೋಡಿಸುವಂತೆ ಜೋಡಿಸುತ್ತವೆ. ನಾಯಕ ಮಗು ಇದೆಂತಾ ಮೂಟೆ ಎಂದು ಒಂದೊಂದನ್ನು ಪ್ರಶ್ನಿಸುತ್ತದೆ. ಇದು ಕಡ್ಲೆಮೂಟೆ. ಇದು ಅಕ್ಕಿಮೂಟೆ ಹೀಗೇ ಉತ್ತರ ಸಿಗುತ್ತದೆ. ಬೆಣ್ಣೆಹಚ್ಚಲೋ ತುಪ್ಪಹಚ್ಚಲೋ ಎಂದರೆ ಬೆಣ್ಣೆ ಅಥವಾ ತುಪ್ಪ ಎಂದು ಉತ್ತರ ಬರುತ್ತದೆ. ಬಿಸಿನೀರು ಉಯ್ಯಲೋ ತಣ್ಣೀರು ಉಯ್ಯಲೋ? ಬಿಸಿನೀರು. ಹಳೆಕಂಬ್ಳಿ ಹೊಚ್ಚಲೋ ಹೊಸಕಂಬ್ಳಿ ಹೊಚ್ಚಲೋ? ಹೊಸಕಂಬ್ಳಿ. ಚೋಟಕೈಲಿ ಹೊಡಿಲೋ ಮೋಟಕೈಲಿ ಹೊಡಿಲೋ? ಚೋಟಕೈಲಿ. ಹುಸಿಯಾಗಿ ಹೊಡೆದಾಗ ಎಲ್ಲಾ ಕ್ಷೇತ್ರಗಳು ಬೆನ್ನಹಿಂದಕ್ಕೆ ಹೋಗುತ್ತವೆ. ಇದೇ ಮೊದಲ ಭಾಗವನ್ನು ಮತ್ತೊಂದು ರೀತಿಯಲ್ಲಿ ಆಡುವುದುಂಟು. ಎಲ್ಲಾ ಮಕ್ಕಳು ಅಂಗೈಗಳನ್ನು ನೆಲಕ್ಕೆ ಊರಿ ಕುಳಿತಾಗ ನಾಯಕ ಮಗ ಬೆರಳಲ್ಲಿ ಕೈಮೇಲಿಡುತ್ತಾ ಅಪ್ಪಪ್ಪಂಡ, ಆಲಿಮೊಗ್ಗು, ಊರೊಳಗಲಮ್ಮ ಕಲ್ಕಲ್ಲಮ್ಮ, ಕಾಲಿಗೆಗೆಜ್ಜೆ, ಮಾವಿನಮೊಗ್ಗು, ಮನಿಸ್ಕೆಂತು, ಎಂದು ಹೇಳಿ ನಿಲ್ಲಿಸಿದ ಕೈ ಮಗುಚಿಕೊಳ್ಳುತ್ತದೆ. ಹೀಗೆ ಎಲ್ಲಾ ಕೈಗಳು ಮಗುಚಿಕೊಂಡಾಗ ಕೈಗಳೆಲ್ಲಾ ಬೆನ್ನಹಿಂದಕ್ಕೆ ಅವಿತುಕೊಳ್ಳುತ್ತವೆ. ಇನ್ನು ಉತ್ತರಾರ್ಧದ ಆಟ ಪ್ರಾರಂಭವಾಗುತ್ತವೆ.

| | |
|---|---|
| ಕೈ ಕೈ ಎಲ್ಲೋದವು? | ಸಂತೆಗೋದವು |
| ಸಂತೇಲೇನ್ತಂದೆ? | ಬಾಳೆಹಣ್ಣುತಂದೆ |
| ಬಾಳೆಹಣ್ಣು ಏನುಮಾಡಿದೆ? | ತಿಂದು ತಿಂದು ಕದದ ಮೂಲೆಗೆ ಹಾಕಿದೆ |
| ಕದ ಏನುಕೊಡ್ತು? | ಚಕ್ಕೆ ಕೊಡ್ತು. |

| | |
|---|---|
| ಚಕ್ಕೆ ಏನು ಮಾಡಿದೆ? | ಒಡೆದು ಒಲಿಗೆ ಹಾಕಿದೆ. |
| ಒಲೆ ಏನು ಕೊಡ್ತು? | ಬೂದಿಕೊಡ್ತು |
| ಬೂದಿ ಏನು ಮಾಡಿದೆ? | ಹೊಲಕ್ಕೆ ಹಾಕಿದೆ. |
| ಹೊಲ ಏನು ಕೊಡ್ತು? | ಗರಿಕೆ ಕೊಡ್ತು. |
| ಗರಿಕೆ ಏನು ಮಾಡಿದೆ? | ಹಸುಗೆ ಹಾಕಿದೆ |
| ಹಸು ಏನು ಕೊಡ್ತು? | ಹಾಲು ಕೊಡ್ತು |
| ಹಾಲು ಏನು ಮಾಡಿದೆ? | ಆರ್ಭೂತಿಗೆ ಕೊಟ್ಟೆ |

ಕೈಬಂತು ಕೈಬಂತು ಎಂದು ಈಗ ಹೇಳುತ್ತ ಆಟ ಮುಗಿಸುತ್ತಾರೆ. ಈ ಆಟವನ್ನು ಉತ್ತರಕರ್ನಾಟಕದ ಕಡೆ 'ಹತ್ತಿಕಟಿಗಿ ಬತ್ತೀಕಟಗಿ' ಎಂದು ಗುರುತಿಸುವುದುಂಟು.[೫]

ಈ ಆಟ ಮೇಲ್ನೋಟಕ್ಕೆ ಬಹು ಸರಳ. ಅಂತರಂಗದಲ್ಲಿ ಸಾಂಸ್ಕೃತಿಕವಾಗಿ ಇಡೀ ವ್ಯವಸಾಯದ ಸಮಾಜವನ್ನು ಮಕ್ಕಳ ಮೂಲಕ ಕಲಿಕಾ ಪಾಠವಾಗಿ ಹರಿಸುತ್ತವೆ. ದೊಡ್ಡವರು ಮೂಲ ಸಮಾಜವನ್ನು ಅನುಕರಿಸುತ್ತಾ ಅನೇಕ ಹಂತಗಳನ್ನು ದಾಟುವಾಗ ಅವರೂ ಮಕ್ಕಳಾಗಿದ್ದವರು. ಇದರಲ್ಲಿ ಎಣಿಸುವ ಮಗ್ಗಿಯ ಕಲಿಕೆಯಿದೆ. ಬೆಳೆದ ಮೂಟೆಗಳನ್ನು ಒಟ್ಟುವ ಕ್ರಮವಿದೆ. ಸಂತೆಯಿದೆ ಪೇಟೆಯಿದೆ. ಮನೆಗೆ ಬಾಗಿಲು ಇಲ್ಲದೆ ಬದುಕಿದ್ದ ಸಮಾಜಕ್ಕೆ ಕದವು ಯಾತಕ್ಕೆ ಬೇಕು? ಅದನ್ನು ಬೂದಿ ಮಾಡಿ ಹೊಲಕ್ಕೆ ಹಾಕಿದರೆ ಹುಲ್ಲಾದರೂ ಬೆಳೆದೀತು ಎಂಬ 'ಒಪ್ಪಿಕೆ' ಪ್ರಶ್ನೆಯನ್ನು ಕೇಳುವುದಿದೆ. ಕಡೆಯಲ್ಲಿ ಹಾಲನ್ನು ಆರ್ಭೂತಿಗೆ ಕೊಟ್ಟೆ[೬] ಎನ್ನುವಲ್ಲಿ ಸಮಾಜದ ಬಗ್ಗೆ ಇರುವ ಕಳಕಳಿ ಇರುವಂತಿವೆ. ಈ ಆಟ ಸಂಪೂರ್ಣವಾಗಿ ಸಮಾಜವು ರೈತ ಸಮಾಜವಾಗಿ ಬೆಳೆದು ಬಂದ ಹಂತದ್ದು.

"ಕಣ್ಣಾಮುಚ್ಚೆ ಕಾಡೇಗೂಡೇ ಉದ್ದಿನಮೂಟೆ ಉರಳೇ ಹೋಯ್ತು ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ ನಿಮ್ಮಯ ಹಕ್ಕಿ ಅಡಿಗಿಸಿಕೊಳ್ಳಿರಿ". ಇದೊಂದು ಕರ್ನಾಟಕಾದ್ಯಂತ ಜನಪ್ರಿಯ ಆಟ. ಮಕ್ಕಳೊಡನೆ ಅಜ್ಜಿ ಕಣ್ಣುಮುಚ್ಚಲು ಪಾತ್ರ ವಹಿಸುವುದುಂಟು. ಎಲ್ಲ ಮಕ್ಕಳು ಅಡಗಿಕೊಳ್ಳುತ್ತವೆ. ಅಜ್ಜಿ ಹಾಡು ಹೇಳಿ ಕಣ್ಣುಬಿಟ್ಟರೆ ಆ ಮಗು ಅಡಗಿದ್ದವರನ್ನು ಹಿಡಿಯಬೇಕು. ಸಿಕ್ಕಿದವರು ಮುಂದಿನ ಆಟಕ್ಕೆ 'ಕಳ್ಳ'ನಾಗಬೇಕಾಗುತ್ತದೆ. ಸಿಗದೆ ಮೊದಲು ಅಜ್ಜಿಯನ್ನು ಮುಟ್ಟಿದವರೆಲ್ಲಾ ಗೆದ್ದಂತೆ. ಇದು ಮುಟ್ಟಿಸಿಕೊಳ್ಳದೆ ಪಾರಾಗುವ ಕ್ರಿಯೆ. ಅಸ್ಪೃಶ್ಯತಾ ಸ್ವರೂಪದಿಂದ ಪಾರಾಗುವ ಸ್ವರೂಪವೆಂದು ಹೇಳುವುದುಂಟು. ಮಾತ್ರ

---

೫. ಜನಪದ ಆಟಗಳು.ಪು.೧೦೧ (ಡಾ॥ ದೇವೇಂದ್ರಕುಮಾರಹಾಕರಿ)

೬. ಆಯಿ+ಭೂತಿ= To grow less, to dry+ ಬೂದಿ, existance ಎಂಬರ್ಥವಿದೆ. ಅಂದರೆ ಹಾಲನ್ನು ಹೊಟ್ಟೆಗಿಲ್ಲದವರಿಗೆ ಕೊಡಬೇಕೆನ್ನುವ ಧ್ವನಿ ಇರಬಹುದು. (Kittel Dictionary p.166&175, Assian edn. Society New Delhi, 1991)



ಸಮಾಜದ ಪ್ರತೀಕ ಅಜ್ಜಿ, ವರ್ಣಪದ್ಧತಿಯ ಹೇರಿಕೆಯಿಂದ ವಿಮುಕ್ತನಾಗ ಬಯಸುವುದು ಮಾನವ ಸ್ವಭಾವ. ಹೀಗೆ ಒಂದು ಆಟದಲ್ಲಿ ಅನೇಕ ಸ್ವರೂಪಗಳನ್ನು ತೆಗೆದಿಡಲು ಅವಕಾಶವಿದೆ. ಸಮಾಜವೇ ಒಂದು ಕ್ರೀಡಾಂಗಣ ಗ್ರಾಮದ ಮಕ್ಕಳಲ್ಲಿ ಆಟಗಳ ಕಣಜ ತುಂಬಿರುತ್ತದೆ. ಋತುಮಾನಕ್ಕೆ ತಕ್ಕಂತೆ ಗೋಲಿ, ಬುಗುರಿ, ಚಿಣ್ಣಿದಾಂಡು, ಗಾಳಿಪಟ ಗಳಂತವುಗಳೆಲ್ಲಾ ಹೊರಬರುತ್ತವೆ. ಆಲೋಚಿಸುವ ಜಾನಪದ ತಜ್ಞ ಇಂದಿನ ಆಟಗಳ ಮೂಲಕ ಆಗಿಹೋದ ಸಂಸ್ಕೃತಿಯನ್ನು ಹುಡುಕುತ್ತ ಸಾಗಲು ವಿಫುಲ ಅಪಕಾಶವಿದೆ.

ತಾಯಿಯ ಮೊಲೆವಾಲು ಕುಡಿವ ಮಗು ತಾನು ಆನಂದಪಡುವಾಗ ಹೆತ್ತವಳನ್ನು ಆನಂದಗೊಳಿಸುತ್ತದೆ. ಇದು ಆಟದ ಮೂಲ. ಮಗು ಅತ್ತಾಗ ತಾಯಿ ಚಂದಮಾಮನನ್ನು ತೋರಿಸುತ್ತಾಳೆ. ಆಕಾಶ ಚಂದಿರ ಸೂರ್ಯ ಇವು ಮೂಲ ಸಮಾಜವೊಂದರ ತಿಳಿವಳಿಕಾ ಸ್ವರೂಪಗಳು. ಜನಪದ ಕತೆಗಳಿಗೆ ಆಕಾಶ ಭೂಮಿ ತಂದೆ ತಾಯಂದಿರು. ಮದುಮಕ್ಕಳಿಗೆ ಮಹೂರ್ತವಾದ ಮೇಲೆ ಮೊದಲು ತೋರುವುದು ಸೂರ್ಯ ಚಂದಿರರನ್ನು. ಶ್ರೀರಾಮಚಂದ್ರ ಅಳು ನಿಲ್ಲಿಸಿದ್ದು ಕೈಯ ಕನ್ನಡಿಗೆ ಚಂದಿರ ಬಂದಮೇಲೆ. ಮಕ್ಕಳು ಬೆಳೆದಂತೆಲ್ಲಾ ಭಾಷೆ ಒಂದು ಮಾಧ್ಯಮವಾಗಿ ಶಾಬ್ದಿಕ ನಿಲುವು ಪಡೆಯುತ್ತದೆ. ಮಕ್ಕಳು ಆಟಗಳ ಮೇಲೆ ನಿಗಾ ವಹಿಸಿ ಛಾಸ್ತವಲೋಕಕ್ಕೆ ಬರುತ್ತವೆ. ಅವು ಗೀಜುವ ಚಿತ್ರಗಳು ವ್ಯಂಗ್ಯ ಚಿತ್ರಗಳಾಗುತ್ತವೆ. ಹೇಳುವ ಪದಗಳು 'ಶಿಶುಗೀತೆ'ಗಳಾಗುತ್ತವೆ. 'ತಿಂಗಳಮಾವನ ಪೂಜೆ' ಚಂದ್ರನು ಹೆಣ್ಣಿನ ಸಂಕೇತ. ಮಾತೃಸಮಾಜದ ಪ್ರತಿರೂಪ: ವಿಸ್ತಾರವಾದ ಚರ್ಚೆಗೆ ಶಂಬಾ ಜೋಷಿಯವರ ಋಗ್ವೇದದ ಸಾರ-ನಾಗಪ್ರತಿಮಾ ವಿಚಾರ ಪುಸ್ತಕ ನೋಡಿ (ಪ್ರಸಾರಾಂಗ ಮೈ.ವಿ.-೧೯೭೧) ಇಂಥಾ ವಾಸ್ತವ ಪ್ರಜ್ಞೆಯನ್ನು ಅಂತರ್ಗತಗೊಳಿಸಿರುವ ಆಚರಣೆ. ಇದು ಪ್ರಕೃತಿ ಪೂಜೆ. ಹಾಲುಚೆಲ್ಲಿದಂತಾ ಬೆಳದಿಂಗಳಿಗೆ ಇದಿರ್ಗಾಗಿ ರಂಗೋಲಿ ಚಿತ್ರದ ಅಂಗಳವಿರುತ್ತದೆ. ಹುಸಿ ಮದುಮಕ್ಕಳಿರುತ್ತಾರೆ. ಪೂಜೆಗಿಟ್ಟು ರೊಟ್ಟಿಯನ್ನು ಕದ್ದು ಓಡುವವರು ಓಡಿಸಿಕೊಂಡು ಹೋಗುವವರಿರುತ್ತಾರೆ. ಹಳೆಡಬ್ಬದ ಅಥವಾ ತಮಟೆಯೊಂದರ ಸದ್ದಿಗೆ ಕುಣಿವ ಕೋಡಂಗಿಗಳಿರುತ್ತಾರೆ. ಸಾಲಾವಳಿಯಾದ ಹೆಣ್ಣುಗಳಿಗೆ ಹುಸಿ ಸಂಭೋಗಕ್ಕಾಹ್ವಾನಿಸುವ ಕಟ್ಟುಲಿಂಗದಲ್ಲಿ ಮುಟ್ಟುವಿಕೆ ಇರುತ್ತದೆ. ಈ ಹುಸಿಸಂಕೇತಗಳು ಸಂಜ್ಞೆಗಳು ಮನೋವೈಜ್ಞಾನಿಕವಾಗಿ ಮಕ್ಕಳಿಗೆ ಹರೆಯದವರಿಗೆ ಲೈಂಗಿಕ ಪಾಠಹೇಳುತ್ತವೆ. ಕಾಮಕೇಳಿ ಗೌಪ್ಯ ವಿಧಾನವಾಗಿರುವ ಸಮಾಜದಲ್ಲಿ ಇಂಥಾ ತಿಳುವಳಿಕೆಗಳು ಆರೋಗ್ಯಕರ ವಾತಾವರಣ ಲಕ್ಷಣ ಕಲ್ಪಿಸುತ್ತವೆ.

ಈ ರೀತಿ ಸಾಮೂಹಿಕ ಆಚರಣೆಯಲ್ಲಿ ಆಟಗಳಾಗಿ ಪರಿವರ್ತಿತವಾಗುವ ಕ್ರಿಯೆ ಮನುಷ್ಯನನ್ನು ಸರ್ವವ್ಯಾಪಿಯಾಗಿ ಆವರಿಸುವ ವಿಧಾನ. 'ಕರಿ ಹಬ್ಬ' ಇಂಥವುಗಳಲ್ಲಿ ಒಂದು. ಹಾಸನದ ಸೀಗೆ ಎಂಬ ಗ್ರಾಮದಲ್ಲಿ ಕರಿ ಹರಿದು ಹೋದ ವಿಷಯಸಿಗುತ್ತದೆ. ಇಲ್ಲಿ ಕರಿ ಒಯ್ದು ಹಿರೇಗೌಜದ ಮಕ್ಕಳಿಬ್ಬರನ್ನು ಓಡಿಸಿಕೊಂಡು ಹೋದಾಗ ಇನ್ನೇನು

ಸಿಕ್ಕಿಬಿದ್ದರೆನ್ನುವಾಗ ತಮ್ಮ ತಲೆಗಳನ್ನು ಅವರೇ ಕಡಿದುಕೊಂಡು ಕರಿಸಮೇತ ತಮ್ಮೂರಿನ ಕೋಟೆವೊಳಗೆ ಎಸೆಯುತ್ತಾರೆ. ಅವರೊಡನೆ ತಾಯಿಯಾದವಳು ಸಹಗಮನಮಾಡುತ್ತಾಳೆ. ಇಡೀ ದಕ್ಷಿಣಭಾರತದಲ್ಲೆ ಮಕ್ಕಳೊಡನೆ ತಾಯಿಯಾದವಳು ಸಹಗಮನ ಮಾಡಿದ ದಾಖಲೆ ಇದು ಮಾತ್ರ.[೭] ಸೀಗೆದ ಜಾತ್ರೆಯಲ್ಲಿ ಹಾಡುವ ಪಗರಣದ ಅಶ್ಲೀಲ ಹಾಡುಗಳಲ್ಲಿ ಸಂಭೋಗದಾಟಕ್ಕೆ ಆಹ್ವಾನವಿದೆ. ಆಟಗಳು ಬದುಕಿನಲ್ಲಿ ಆವರಿಸಿಕೊಳ್ಳುವಾಗ ತುಂಟಾಟ ಮಾಡಿದ ಮಗುವಿಗೆ ಬೋಳಿಮಗನೆ ನಿನ್ನಪ್ಪನು ಎಂದು ಅಪ್ಪನಾದವನು ಬಯ್ಯುವುದುಂಟು. ಆಡುವಮಕ್ಕಳು ನಿನ್ನಕ್ಕನ... ನಿನ್ನಮ್ಮನ.. ಎಂದು ಬೈದಾಡುವುದುಂಟು. ಈ ಹಾದಿಬೀದಿಯ ಹುಸಿ ಸಂಕೇತಗಳು ಪ್ರಕೃತಿಯ ಶಿಶುಗಳನ್ನು ಬೋಳಿಯಾರು? ಬೊಡ್ಡಿಯಾರು? ಅಕ್ಕಯಾರು? ತಾಯಿಯಾರು? ಎಂಬ ಕೌಟುಂಬಿಕ ಅಂಶಗಳನ್ನು ಬಿಡಿಸಿಡುತ್ತವೆ. ಹೀಗಾಗಿ ಬೈಗುಳುಗಳು ಹುಸಿರೂಪವಾಗಿ ಆಟಗಳಲ್ಲಿ ಸೃಷ್ಟಿಗೊಳ್ಳುತ್ತವೆ. ಆಚರಣೆಗಳಲ್ಲೂ ಮೌಲಿತಗೊಳ್ಳುತ್ತವೆ. ''ಮಗು ಪ್ರಬುದ್ಧವಾಗುತ್ತ ಹೋದಂತೆಲ್ಲಾ ಆಟ ಮತ್ತು ಅನ್ವೇಷಣೆಗಳ ನಡುವೆ ಸ್ಪಷ್ಟತೆ ರೂಪಗೊಂಡು ಆಟಗಳು ರಿಚುಯಲ್ಡ್ ರೂಪದವಾಗುತ್ತವೆ''[೮] ಎನ್ನುವುದು ಇಂಥಾ ಸಂದರ್ಭಗಳಿಗನುಗುಣವಾಗಿ ಬೆಳೆಯುವ ಮಗು ಸಮಾಜದಲ್ಲಿ ಸಾಂಸ್ಕೃತಿಕ ಪರಿಸರದಲ್ಲಿ ಸ್ಪರ್ಧಾತ್ಮಕ ಮನೋಭಾವ ತಾಳಿ ಸಮಾನತೆಗಳಿಸುವ ಬಗೆಯಿದು.

ಮೂಲಮಾನವನ ಆಟದ ಸ್ವಭಾವವು ಗವಿಮಾನವನಲ್ಲಿ ಬೇಟೆಯಾಗಿ ಪರಿವರ್ತನೆಯಾಗಿ ಆಧುನಿಕ ಮಾನವನಲ್ಲಿ ಸ್ಪರ್ಧಾಸ್ವರೂಪ ಪಡೆದಿರುವುದನ್ನು ಅನೇಕ ಆಟಗಳಲ್ಲಿ ಕಾಣಬಹುದು. ಮಲ್ಲಯುದ್ಧ, ಭಾರ ಎಸೆಯುವುದು, ಗೂಳಿಕಾಳಗ[೯] ಇಂಥವುಗಳು. 'ಶಿಲಪ್ಪಧಿಕಾರಂ' ಕಾವ್ಯದಲ್ಲಿ ಗೂಳಿಕಾಳಗದಲ್ಲಿ ಗೆದ್ದ ಯುವಕನನ್ನು ಯುವತಿ ವರಿಸುತ್ತಿದ್ದ ವಿಷಯವಿದೆ. ಗೂಳಿ ಪ್ರಾಣಿಸಮಾಜದ ಪ್ರತೀಕ. ಗೆದ್ದವನು ಮಾನವನ ಸಂಕೇತ. ಗೆದ್ದವನನ್ನು ಕೂಡುವ ಹೆಣ್ಣು ಕುಟುಂಬದ ಸಂಕೇತ. 'ಅಂಬೋಡಿ'[೧೦] ಸಿರಿಜಾತ್ರೆಯ ಮರುದಿನ ನಡೆಯುವ ಆಟ ಮೂಲದ ಆಚರಣೆ. ಕೆಳವರ್ಗದ ಜನರು ಕಾಡ ಬಳಲಿನಿಂದ ಪರಸ್ಪರರಕ್ತ ಒಸರುವ ತನಕ ಹೊಡೆದಾಡಿಕೊಳ್ಳುವ ಆಟ. ಕ್ರಿ.ಪೂ. ೫ನೇ ಶತಮಾನದಲ್ಲಿ ಗ್ರೀಕರಾಜರು ಮೃತರಾದಾಗ ಅವರ ಸೇವಕರನ್ನು ಪ್ರಾಣಾಂತಿಕ ಆಟಗಳನ್ನಾಡಿ ಸಾಯುವಂತೆ ಪ್ರಚೋದಿಸುತ್ತಿದ್ದರು. ಇವುಗಳನ್ನು funeral games ಎನ್ನುತ್ತಿದ್ದರು.

---

೭. ಡಾ. ಬಸವರಾಜ ಕಲ್ಗುಡಿ: ಮಹಾಸತಿ ಒಂದು ಆಚರಣೆ ಕೃತಿ. (ಬೆಂ.ವಿ. ಪ್ರಕಟಣೆ) ಪು ೩೭೫ರಲ್ಲಿ ಪಿ. ನಿಂಗಪ್ಪ ಅವರ 'ಪಗರಣ' ಎಂಬ ಪುಸ್ತಕದಲ್ಲಿ ಆಚರಣೆ ಕುರಿತು.

೮. Hutt ೧೯೬೭ ,೨೧೨ ಉದ್ಧೃತ: ಕನ್ನಡ ಜಾನಪದ ಕೆಲವು ಮುಖಗಳು ಪು ೯೯.

೯. ರೀಟನರ ಆಟಗಿತ್ತು ಕ್ರೀಟ್ ದ್ರಾವಿಡರ ಮೂಲವೆಂಬ ಅಭಿಪ್ರಾಯವೂ ಉಂಟು. (ಜಾನಪದದ ವಿಶ್ವಕೋಶ ಸಂ.ಪು) ೧೧೮

೧೦. ಜನಪದ ಆಟಗಳು: ಪು ೬೯ (ಟಿ. ಎಸ್. ಕೃಷ್ಣಯ್ಯ)



ಮನುಷ್ಯರ ರಕ್ತ ಭೂಮಿಗೆ ಬಿದ್ದರೆ ಆತ್ಮಕ್ಕೆ ಶಾಂತಿ ಸಿಗುತ್ತದೆಂಬ ನಂಬಿಕೆಯಿದು. ನಮ್ಮ ಇತಿಹಾಸದಲ್ಲಿ ಕಾಣುವ ಗರುಡ ಲೆಂಕ ಇವರ ಬಾಳು ಇದ್ದುದು ಹೀಗೆ. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟದಂತೆ ಆಳುವವರು ಮಾಡಿದ ತಾರತಮ್ಯವಿದು. ಕೋಳಿ ಅಂಕ ಇಂಥಾ ಒಂದು ಮೋಜಿನ ಜೂಜಾಟ. ಕ್ರಿಸ್ತ ಪೂರ್ವದ ಅಥನ್ಸ್, ರಾಜನು ಸಹಾ ಕೋಳಿಕಾಳಗ ಏರ್ಪಡಿಸುತ್ತಿದ್ದನೆಂದು ತಿಳಿಯುತ್ತದೆ. ಇದಕ್ಕಾಗಿ ಹುಟ್ಟಿಕೊಂಡಿರುವ ಕೋಳಿ ಪಂಚಾಂಗಗಳು ಉಂಟು. ಹೆಣ್ಣಿನ ಮುಟ್ಟು ಭೂಮಿಗೆ ಬಿದ್ದರೆ ಫಲಸಮೃದ್ಧಿ ಎಂಬ ನಂಬಿಕೆ ತಾಂತ್ರಿಕ ಮೂಲದ್ದು. ಆಳುವವರು ದುಡಿಯುವವರ ರಕ್ತದೊಡಗಿನ ಆಟಗಳನ್ನು ತಾಂತ್ರಿಕ ವರ್ಗದ ಮೇಲೆ ಹೇರಿ ಮೋಜು ನೋಡಿದ್ದು ಅನಂತರದ ವಿಚಾರ. ಹೀಗೆ ಪಿತೃ ಸಮಾಜಕ್ಕೆ ಮಣಿದ ಮಾತೃ ಸಮಾಜವು ಆಚರಣೆಯಲ್ಲಿ ತನ್ನ ರೋಷವನ್ನೂ ಉಳಿಸಿಕೊಂಡಿರುವುದು ಸ್ಪಷ್ಟ. ಪಿಲಿಗೊಬ್ಬು[೧೧] ಇಂಥಾ ಆಚರಣೆಗಳಲ್ಲೊಂದು. ಶಕ್ತಿದೇವಿಯ ವಾಹನ ಹುಲಿದೇವತೆ ಮೈದುಂಬಿ ಹೆಣ್ಣೊಬ್ಬಳ ಮೇಲೆ ಬರುತ್ತಾಳೆ. ಅಟ್ಟಿಸಿಕೊಂಡು ಬರುತ್ತಾಳೆ. ಮುಟ್ಟಿಸಿಕೊಂಡಾತ ಭಯಮಿಶ್ರಿತ ವಾತವರಣದಲ್ಲಿದ್ದು ಸಾಯುತ್ತಾನೆಂಬ ನಂಬಿಕೆಯಿದೆ. 'ಸಿರ' ಕೂಡ ಇಂಥದೇ ರೂಪದ ಹೆಣ್ಣು[೧೨] ಅದಿಮ ಸಮಾಜದಲ್ಲಿ ಹೆಣ್ಣಿಗೆ ಪ್ರಥಮ ಸ್ಥಾನವಿತ್ತು. ಬೇಸಾಯವನ್ನು ಕಂಡು ಹಿಡಿದವಳು ಹೆಣ್ಣು. ಪೂಜೆಮಾಡಿದವಳು ಹೆಣ್ಣು. ಈಗಲೂ ಪುರುಷ ಪೂಜಾರಿ ಹೆಣ್ಣಿನ ವೇಷದಲ್ಲೆ ಪ್ರತಿನಿಧಿಸುತ್ತಾನೆ. ಅವಳ ಮುಟ್ಟಿಗೆ ಆಹ್ವಾನವಾಗಿ ಬಂದುಹೋಗುವ ಗಂಡು ತಂದು ಹಾಕುವ ಬೇಟೆ ಸ್ವರೂಪ. ಗಂಡಿನ ವೀರ್ಯವಾಗಲೀ ಹೆಣ್ಣಿನ ಮುಟ್ಟಾಗಲೀ ಫಲಾಭಿವೃದ್ಧಿಯ ಸಂಕೇತಗಳು ''According to Tantra the universe was created by sexlurge (Kama) it was born of the female (vamudbhava) and as the result of her union with the male. It is not difficult to see how this cosmology is but an elaboration of the belief underlying agricultral magic"[೧೩] ಹೀಗೆ ಹುಡುಕುತ್ತಾ ಹೋದರೆ ಆಚರಣೆಳೆಲ್ಲವೂ ಮಾತೃ ಸಮಾಜದ ಪಳಯುಳಿಕೆಗಳು ಎನಿಸದೆ ಇರದು. 'ಕಂಬಳ' ಒಂದು ಪ್ರದರ್ಶನದಾಟ. ಅದರ ಹಿಂದಿರುವುದು ಮಾತೃಸಮಾಜದ ಆಶಯಗಳು. ಕಂಬಳದ ಹಿಂದಿನ ದಿನ ಕೆಳವರ್ಗದವರು ರಾತ್ರಿಯಿಡೀ ಕುಣಿಯುವುದು ಹೆಣ್ಣುವೇಷ ಹಾಕಿದವನೊಡನೆ ಸಂಭೋಗ ಭಂಗಿ ಪ್ರದರ್ಶಿಸುವುದು, ಸಾರ್ವಜನಿಕರು ಸೇರುವ ಮುನ್ನ ಯಜಮಾನನ ಗದ್ದೆಯಲ್ಲಿ ಬೆವರನ್ನು ವೀರ್ಯದ ಸಂಕೇತವಾಗಿ ಸುರಿಸುವುದು, ಇವೆಲ್ಲಾ ವ್ಯವಸಾಯಕ್ಕೆ

---

೧೧. ಜನಪದ ಆಟಗಳು ಪು ೬೫ (ಕೃಷ್ಣಯ್ಯ)

೧೨. ದಕ್ಷಿಣ ಕನ್ನಡದ ಜನಪದ ಜಾತ್ರೆಯ/ಕಾವ್ಯದ ನಾಯಕಿ

೧೩. Lokayata p 336Ú Devi prasad Chattopadhyaya, peoles publishing house New Delhi 1981.

ಸಂಬಂಧಿಸಿದ ತಂತ್ರಮೂಲ ಸಮಾಜದ ತುಣುಕುಗಳು. ಇದನ್ನು ಕಂಬಳದಲ್ಲಿ 'ಪನಿಕಲ್ಲುನು'[೧೪] ಎನ್ನುವರು. ಇಲ್ಲಿ ಕಂಬಳ ನಡೆಸುವವರು ಇಂದೂ ಸಹಾ ಮಾತೃಪ್ರಧಾನ ಕುಟುಂಬದ ಲಕ್ಷಣ ಹೊಂದಿರುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಹೀಗೆ ಹುಡುಕುತ್ತಾ ಹೋದರೆ ಸರಳ ಆಟವಾದ 'ಕುಂಟೆಪಿಲ್ಲೆ'ಯಾಗಲೀ ಕೋಲಾಟವಾಗಲಿ ಕಂಸಾಳೆಯಾಗಲೀ ಆಟ ಯಕ್ಷಗಾನವಾಗಲೀ ಪುರಾಣದ ನಾಟಕವಾಗಲೀ ಎಲ್ಲವೂ ಆಚರಣಾ ಹಿನ್ನೆಲೆಯವು. ಬದುಕಿನ ಅಂಗಗಳಾದ ಹುಟ್ಟು ಸಾವು ಮದುವೆ ಮತ್ತು ಜಾತಿಭೇದಗಳನ್ನು ಸಹಾ ಪ್ರತಿನಿಧಿಸುವುದುಂಟು. ಮುಹೂರ್ತವಾದ ಮೇಲೆ 'ಗುಂಡು ತೂಗಿಸೋದು' ಒಂದು ಶಾಸ್ತ್ರ; ಆಟಿಕೆ ಖಾರ ತಿರವುವ ಗುಂಡುಕಲ್ಲು. ಗಂಡಹೆಂಡಿರ ಮಧ್ಯೆ ಗುಂಡುಕಲ್ಲು ಇಡುತ್ತಾರೆ. ತೊಟ್ಟಿಲಂತೆ ಮಗು ಅಳುವುದನ್ನು ನಿಲ್ಲಿಸುವಂತೆ ಮದುಮಕ್ಕಳ ಹುಸಿಯಾಗಿ ತೊಟ್ಟಿಲು ತೂಗಬೇಕು. ಮತ್ತೊಂದು ಆಟ ಕೋಟ, ಶಿವಳ್ಳಿಮೂಲದ ಬ್ರಾಹ್ಮಣರಲ್ಲಿರುವ 'ಮೀನುಹಿಡಿಯೋಆಟ' ಸ್ವಾರಸ್ಯಕರವಾಗಿದೆ. ಹೊಸನಗರ ತಾಲ್ಲೂಕು ಯಡೂರಿನ ಜೋಯಿಸರ ಕುಟುಂಬವೂ ಇದರಲ್ಲೊಂದು. ಅವರು ಆನೆಗುಂದಿ ಕಡೆಯಿಂದ ವಿಜಯನಗರ ಹಾಳಾದಾಗ ಶಿವಳ್ಳಿ ಕೋಟ ಕಡೆ ಬಂದರಂತೆ. ಅದಕ್ಕೆಂದು ಬರುವಾಗ ಸುಮಾರು ೩೨ ಜನ ಬ್ರಾಹ್ಮಣ ಗಂಡುಗಳು ಬರುತ್ತಾರೆ. ಇದಕ್ಕೆ ಕೋಟಾದ ಬಳಿಯಿರುವ ಶಾಸನಾಧಾರವನ್ನು ಕೊಡುತ್ತಾರೆ. ಬಂದವರು ಸ್ಥಳೀಯ ಮೊಗೇರ ಹೆಣ್ಣುಗಳನ್ನು ಮದುವೆಯಾಗುತ್ತಾರೆ. ವರ್ಣಪದ್ಧತಿಯ ಪ್ರಕಾರ ಕೆಳಜಾತಿಯ ಹೆಣ್ಣು ಬ್ರಾಹ್ಮಣರಿಗೆ ಸ್ವೀಕಾರಾರ್ಹಳು. ಅವರ ಸಂತತಿಯೇ ದಕ್ಷಿಣ ಕನ್ನಡದ ಮತ್ತು ಶಿವಮೊಗ್ಗ ಮಲೆನಾಡಿನಲ್ಲಿ ಪ್ರಚುರಪಡೆದವರು. ಅವರ ಮದುವೆಯದಿನ ಮೀನುಹಿಡಿಯುವ ಆಟವೆಂಬ ಶಾಸ್ತ್ರದಾಟ ಮಾಡಿಸುತ್ತಾರೆ. ತಂಬಿಗೆವೊಳಗೆ ಉಂಗುರ ಹುಡುಕುವ ರೀತಿಯಲ್ಲಿ ಈ ಆಟವಿರುತ್ತದೆ. ಹೆಣ್ಣುಗಳು ಮೊಗೇರ ಕುಲದವರಾದ್ದರಿಂದ ಬೆಸ್ತರ ಆಚರಣೆ ಇದರಲ್ಲಿರುವುದಾಗಿ ಗ್ರಂಥಕರ್ತರು ಸ್ಪಷ್ಟಪಡಿಸುತ್ತಾರೆ.[೧೫] ಇಂಥ ಆಟಗಳು ಸಂಸಾರಕ್ಕೆ ಕಾಲಿಡುವ ಗಂಡು ಹೆಣ್ಣುಗಳಿಗೆ ಮಾನಸಿಕವಾಗಿ ಲೈಂಗಿಕ ಸೂಕ್ಷ್ಮತೆಯನ್ನು ಅಣಿಗೊಳಿಸುತ್ತವೆ. ಯಾವುದೇ ಮೂಲ ಅಂಶಗಳು ಆಚರಣೆಯಲ್ಲಿ ಅಳಿಸಿ ಹೋಗಿರುವುದಿಲ್ಲವೆಂಬುದಕ್ಕೆ ಇದು ಸಾಕ್ಷಿ.

ಆಟವು ಕೇವಲ ಮಕ್ಕಳ ಮನೋರಂಜನೆಯಾಗಿ ನಿಲ್ಲುವುದಿಲ್ಲ. ಅದರೊಡನೆ ಸಮಾಜದ ಒಂದು ಪ್ರತಿಬಂಬವಿರುತ್ತದೆ. ಒಂದು ನಂಬಿಕೆ ಕಲ್ಪನೆ ಬೆಳವಣಿಗೆಯ ಹಂತವಿರುತ್ತದೆ. ಕೀಲು ಕುದುರೆಯಾಗಲೀ ಹುಲಿವೇಷವಾಗಲೀ ಬಿಲ್ಲಾಟವಾಗಲೀ

೧೪. ಕರ್ನಾಟಕ ಜನಪದ ಆಟಗಳು: (ಪು ೬೭. ಕೃಷ್ಣಯ್ಯ)
೧೫. ಯಡೂರು ಮಹಾಬಲ ಎಂಬುವರು ಅವರ ಕುಟುಂಬದ ಮೂಲದ ಬಗ್ಗೆ ಬರೆದಿರುವ ಪುಸ್ತಕ.



ಕಾಡ್ಯಾನಾಟವಾಗಲೀ ಮರಕೋತಾಯವಾಗಲೀ ಪ್ರಕೃತಿಗೆ ಅಂಟಕೊಂಡ ತುಣುಕುಗಳು, ಮೂಲ ಮಾನವನು ಪ್ರಕೃತಿಯ ಅವಿಭಾಜ್ಯ ಅಂಗ. ಹೀಗಾಗಿ ಪ್ರಕೃತಿಯನ್ನು ಮನುಷ್ಯನನ್ನು ಅವನಾಡುವ ಆಟಗಳನ್ನು ವಿಭಜಿಸಿ ನೋಡುತ್ತಲೇ ಅವಿಭಾಜ್ಯ ಅಧ್ಯಯನ ಮಾಡಬೇಕಾಗುತ್ತದೆ. ಹೀಗೆ ಸಂಸ್ಕೃತಿಯನ್ನು ಒಡೆದು ಮತ್ತೆ ಕಟ್ಟುವ ಪರಿಕಲ್ಪನೆ ಇಂದಿನ ಜನಪದ ಅಧ್ಯಯನದ ರೀತಿಯಾಗಿರುವುದರಿಂದ ಈ ಮಾರ್ಗದಲ್ಲಿ ಮುಂದಿನ ಅಧ್ಯಯನ ಸಾಗಬೇಕು.

# ಕರ್ನಾಟಕ ಜಾನಪದ: ಅಧ್ಯಯನದ ನೆಲೆಗಳು

ಡಾ. ಜಿ.ಆರ್. ತಿಪ್ಪೇಸ್ವಾಮಿ

ಜಗತ್ತಿನಾದ್ಯಂತ ಜಾನಪದ ಜೀವಂತವಾಗಿದೆ, ಸಮೃದ್ಧವಾಗಿದೆ ಎಂಬ ಮಾತುಗಳು ಬಹಳ ಹಿಂದಿನಿಂದಲೂ ಕೇಳಿಬರುತ್ತಿವೆ. ಆದರೆ ಅದೊಂದು ವೈವಿಧ್ಯಪೂರ್ಣವಾದ ವಿಷಯ ಎಂದು ತಿಳಿದುಬಂದದ್ದು ಮಾತ್ರ ಕಳೆದ ಶತಮಾನದಲ್ಲಿ, ಅದೂ ಪಾಶ್ಚಾತ್ಯ ವಿದ್ವಾಂಸರಿಂದ. ೧೮೧೬ಕ್ಕೆ ಮುಂಚೆಯೇ ಅವರಲ್ಲಿ ಜಾನಪದ ಸಂಶೋಧನಾ ಕೃಷಿ ಆರಂಭವಾಗಿತ್ತು. ಆಂಗ್ಲಭಾಷೆಯ ಮೂಲಕ ಅದರ ಪ್ರಭಾವ ಆಯಿತು. ಕನ್ನಡ ನವೋದಯ ಸಾಹಿತ್ಯಕ್ಕೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೇ ಕಾರಣವಾದಂತೆ, ಕನ್ನಡ ಜಾನಪದ ಅಧ್ಯಯನದ ನಾಂದಿಗೂ ಹೊರಗಿನವರ ಅಧ್ಯಯನವೇ ಮುಖ್ಯ ಕಾರಣವಾಯಿತು. ಜಾನಪದ ಸಂಗ್ರಹಣೆಗಾಗಿಯೇ ಪಾಶ್ಚಾತ್ಯರು ಬರಲಿಲ್ಲ. ಅವರು ಭಾರತಕ್ಕೆ ಕಾಲಟ್ಟಿದ್ದು ಬೇರೆ ಬೇರೆ ಉದ್ದೇಶಗಳಿಗಾಗಿ. ಜಾನ್‌ಲೇಡನ್ ಬ್ರಿಟಿಷ್ ಸೈನ್ಯದ ಜೊತೆ ಬಂದು ಟಿಪ್ಪುವಿಗೆ ಸಂಬಂಧಿಸಿದ ಲಾವಣಿಗಳನ್ನು ಸಂಗ್ರಹಮಾಡಿದನು. ಕನ್ನಡ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕೆ ಈತನದೇ ಮೊದಲ ಪ್ರಯತ್ನ ಎಂದು ಗುರ್ತಿಸಲಾಗಿದೆ. ಕ್ರೈಸ್ತಮತ ಪ್ರಚಾರಕ್ಕಾಗಿ ಬಂದ ಅಬ್ಬೆದುಬಾಯ್, ಮೋಗ್ಲಿಂಗ್, ಗೋವರ್, ಫ್ಲೀಟ್, ಕಿಟೆಲ್-ಮೊದಲಾದವರು ಕಥೆ, ಗಾದೆ, ದಾಸರಪದ, ಲಾವಣಿ ಇತ್ಯಾದಿಗಳನ್ನು ಬೆಳಕಿಗೆ ತರುವಲ್ಲಿ ಪ್ರಯತ್ನಿಸಿದರು. ಇದನ್ನೆಲ್ಲ ಗಮನಿಸಿದರೆ ಕನ್ನಡ ಜಾನಪದವನ್ನು ಕನ್ನಡೇತರರಿಗೆ ಮೊಟ್ಟಮೊದಲ ಬಾರಿಗೆ ಪರಿಚಯಮಾಡಿಕೊಟ್ಟ ಕೀರ್ತಿಗೆ ಪಾಶ್ಚಾತ್ಯ ವಿದ್ವಾಂಸರು ಮುಖ್ಯ ಕಾರಣರೆಂದು ತಿಳಿದು ಬರುತ್ತದೆ. ಹತ್ತೊಂಬತ್ತನೇ ಶತಮಾನದಲ್ಲಿ ಇವರ ಜಾನಪದ ಕೊಡುಗೆ ಅಪಾರವಾಗಿದ್ದರೂ ಕನ್ನಡದ ವಿದ್ವಾಂಸರು ಆ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅದರ ಫಲವಾಗಿ ಅಧ್ಯಯನದ ಗತಿ ಕ್ಷೀಣಿಸಿತು.

ಕನ್ನಡ ಜಾನಪದ ಸಂಗ್ರಹಣೆಯ ಬಗ್ಗೆ ವಿಶೇಷ ಒಲವು ಮೂಡಿದ್ದು ಮಾತ್ರ ಕನ್ನಡ ನವೋದಯ ಚಳುವಳಿಯ ಸಂದರ್ಭದಲ್ಲಿ. ಈ ಪಂಥದ ಬರಹಗಾರರು ಬದುಕನ್ನ-ಸಂಸ್ಕೃತಿಯನ್ನು ತುಂಬ ಆತ್ಮೀಯವಾಗಿ ಕಂಡರು, ಗೌರವಿಸಿದರು. ಜೊತೆಗೆ ಆ ಸಾಹಿತ್ಯದ ಸೊಗಸಿಗೆ, ತಾಜಾತನಕ್ಕೆ ಆಕರ್ಷಿತರಾದರು, ಮಾರುಹೋದರು. ಕೇವಲ ಸಾಹಿತ್ಯಿಕ



ಮಾನದಂಡಗಳಿಂದಲೇ ಜಾನಪದವನ್ನು ನೋಡತೊಡಗಿದರು. ಈ ಕಾರಣಕ್ಕಾಗಿಯೇ ಆಯ್ಕೆ ಎಂಬುದು ಇವರ ಸಂಗ್ರಹಗಳಲ್ಲಿ ಎದ್ದು ಕಾಣುವ ಗುಣಾಂಶವಾಯಿತು. ಈ ಮಾತಿಗೆ ಬೇಂದ್ರೆ, ಮಾಸ್ತಿ, ಕಾಪಸೆರೇವಪ್ಪ, ಪಿ. ಧೂಲಾಸಾಹೇಬ, ಬೆಟಗೇರಿ, ಮಧುರಚೆನ್ನ, ಲಿಂಗಪ್ಪ-ಮೊದಲಾದವರು ಉದಾಹರಣೆಯಾಗಿದ್ದಾರೆ. ಹೀಗಾಗಿ 'ಗರತಿಯಹಾಡು' 'ಮಲ್ಲಿಗೆದಂಡೆ', 'ಜೀವನ ಸಂಗೀತ' ಜನಪ್ರಿಯ ಸಂಕಲನಗಳೆನಿಸಿದುವು. ಕನ್ನಡ ಕವಿಗಳ ಮೇಲೂ ಇವುಗಳ ಪ್ರಭಾವವಾಯಿತು. ಗೀತೆಯ ಜೊತೆಗೆ ಜನಪದ ಸಾಹಿತ್ಯದ ಉಳಿದ ಅಂಶಗಳತ್ತ ಗಮನ ಹರಿಸಿದ 'ಪಟ್ಟೋಲೆ ಪಳಮೆ', 'ಹುಟ್ಟಿದಹಳ್ಳಿ ಹಳ್ಳಿಯಹಾಡು', 'ಕರ್ನಾಟಕ ಸಂಸ್ಕೃತಿ'-ಇಂಥ ಕೃತಿಗಳೂ ಮೌಲಿಕವೆನಿಸಿದವು. ೧೯೪೦ರ ವರೆಗೆ ಜನಪದಗಾದೆ, ಒಗಟು, ಕಥನಗಳನ್ನು ಸಂಗ್ರಹಿಸಿ ಅದೇ ಹೆಸರಿನ ಗ್ರಂಥಗಳಾವುವೂ ಬರಲಿಲ್ಲ. ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಸಂಕಲನಗಳಲ್ಲಿ ವೈಜ್ಞಾನಿಕ ದೃಷ್ಟಿ ಇಲ್ಲವಾದರೂ ಕನ್ನಡ ಜಾನಪದಕ್ಕೆ ಒಂದು ರೀತಿಯ ಸಮೃದ್ಧಿಯನ್ನು ತಂದುಕೊಟ್ಟವು.

ಸ್ವಾತಂತ್ರ್ಯಾನಂತರದಲ್ಲಿ ಕನ್ನಡ ಜಾನಪದ ಅಧ್ಯಯನದ ನಿಜವಾದ ಶಖೆ ಆರಂಭವಾಯಿತು. ಕಾಳಿಂಗರಾವ್, ಕರೀಂಖಾನ್, ಕೆ.ಆರ್. ಲಿಂಗಪ್ಪ, ಜನಪದ ಗೀತೆಗಳನ್ನು ಹಾಡುತ್ತ ಅವುಗಳಿಗೆ ಜನಪ್ರಿಯತೆಯನ್ನು ತಂದುಕೊಟ್ಟರು; ಸಂಗ್ರಹಣೆಗೆ ಪ್ರೇರಣೆಯನ್ನೂ ನೀಡಿದರು. ಮತಿಘಟ್ಟಕೃಷ್ಣಮೂರ್ತಿ, ಬಿ.ಎಸ್. ಗದ್ದಗೀಮಠ, ಕರಾಕೃ, ಜೀಶಂಪ-ಇವರೆಲ್ಲ ಈ ಕಾರಣದಿಂದ ಮುಖ್ಯರಾಗುತ್ತಾರೆ. ೧೯೬೦ರಿಂದೀಚೆಗೆ ಕನ್ನಡ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪವೇ ಬಂತು. ಹಾ.ಮಾ.ನಾಯಕ, ದೇಜಗೌ, ಎಚ್.ಎಲ್. ನಾಗೇಗೌಡ-ಮುಂತಾದವರು ಜಾನಪದ ಆದಷ್ಟು ಬೇಗ ಸಂಗ್ರಹವಾಗಬೇಕೆಂದು ಹೇಳಿದರು. ಈ ಒತ್ತಾಸೆಯ ಫಲವಾಗಿ ರಾಗೌ, ಜೀಶಂಪ, ಸಿ.ಪಿ.ಕೆ. ಸುಧಾಕರ ಮೊದಲಾದವರು ಅತ್ಯುತ್ತಮ ಸಂಗ್ರಗಳನ್ನು ಹೊರತಂದರು. ಈ ನಡುವೆ ಕರ್ನಾಟಕ ಜಾನಪದ ಅಧ್ಯಯನ ಮೈಸೂರು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧವಾಗಿ ಆರಂಭವಾಯಿತು. ಆನಂತರ ಬೆಂ.ವಿ.ವಿ, ಕ.ವಿ.ವಿ. ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಜಾನಪದ ಅಧ್ಯಯನಾಂಗ-ಭೋದನಾಂಗಗಳು ಆರಂಭವಾದವು. ಕನ್ನಡ ಸಾಹಿತ್ಯ ಪರಿಷತ್ತು; ಕರ್ನಾಟಕ ಜಾನಪದ ಟ್ರಸ್ಟ್, ಜಾನಪದ ಅಕಾಡೆಮಿ-ಇವು ಪುಸ್ತಕ ಪ್ರಕಟಣೆ, ಕಲಾಮೇಳ-ಈ ವಿಷಯದಲ್ಲಿ ತನ್ನದೇ ಆದ ಸಾಧನೆಗೆ ಪಾತ್ರವಾದುವು.

ಬರಗೂರು ರಾಮಚಂದ್ರಪ್ಪನವರ ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ ಉಪಸಂಸ್ಕೃತಿ ಯೋಜನೆಯಲ್ಲಿ ಹೊರಬಂದ ಹಲವಾರು ಪುಸ್ತಕಗಳು ಜಾನಪದ ಅಧ್ಯಯನಕ್ಕೆ ಹೊಸತಿರುವನ್ನು ನೀಡಿದವು. ಈ ಯೋಜನೆ ಹಿಂದುಳಿದ ಜಾತಿವರ್ಗಗಳನ್ನು ಹೊಸರೀತಿಯಲ್ಲಿ ಅಧ್ಯಯನ ಮಾಡುವಂತೆ ಪ್ರಚೋದಿಸಿತು. ಹಿಂದುಳಿದ ಜನಾಂಗದ ಬಹುಮುಖಗಳನ್ನು ಗ್ರಹಿಸುವ-ಸಾಂಸ್ಕೃತಿಕ ವಿವೇಚನೆ ಮಾಡುವ ಕೆಲಸವೊಂದು ಬಹು ಸೊಗಸಾಗಿ ಪ್ರಸ್ತುತ ಯೋಜನೆಯಲ್ಲಿ ಜರುಗಿತು. ಸಾಂಸ್ಥಿಕ ನೆಲೆಯಲ್ಲಿ ಬರಗೂರು

ಕೆಲಸಮಾಡಿದ್ದಲ್ಲದೆ ಜಾನಪದ ವಿದ್ವಾಂಸರು ಆಲೋಚಿಸಬೇಕಾದ ರೀತಿಯ, ಹೊಸ ಒಳನೋಟಗಳ ಲೇಖನಗಳನ್ನೂ ಬರೆದರು. 'ಬೆಂಗಳೂರು ನಗರ ಎಂಬ ಒಂದು ಹಳ್ಳಿ' ಲೇಖನ ಈ ಮಾತಿಗೆ ಉದಾಹರಣೆಯಾಗಿದೆ. ಇವತ್ತು ಬೆಂಗಳೂರು ಅನೇಕ ಹಳ್ಳಿಗಳನ್ನ ತನ್ನ ಒಡಲಲ್ಲಿ ತುಂಬಿಕೊಂಡಿದೆ. ಬಾಹ್ಯದಲ್ಲಿ ನಾಗರೀಕತೆ, ವಿಜ್ಞಾನ ಕಾಣಿಸಿದರೆ ಆಂತರ್ಯದಲ್ಲಿ ಹಳ್ಳಿಯ ಮನಸ್ಸು ಇದೆ. ಅಲ್ಲಿ ಜರುಗುವ ಕರಗ, ಕಡಲೇಕಾಯಿ ಪರಿಷತ್, ವೆಹಿಕಲ್ ಗಣಪತಿ ಪೂಜೆ-ಇವೆಲ್ಲ ಆ ಮಾತಿಗೆ ಸಾಕ್ಷಿಯಾಗಿವೆ.

ನಗರ ಜಾನಪದವನ್ನು ನೋಡಬೇಕಾದ ರೀತಿಯನ್ನ, ಸ್ವಂತ ಊರಿನ ಮುಖಾಂತರ (ನನ್ನೂರಿನ ಸಂವೇದನೆ) ಭಾರತೀಯತೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಬರಗೂರು ಕಲಿಸಿಕೊಟ್ಟರು. ಇಂಥ ವಿಚಾರಧಾರೆಗಳು ಕನ್ನಡ ಜಾನಪದ ಅಧ್ಯಯನದ ಮೇಲೆ ಪ್ರಭಾವ ಬೀರಿದವು. ಹಾಗೆ ನೋಡಿದರೆ ಕರ್ನಾಟಕದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಾಗ ಇಡೀ ಸಾಹಿತ್ಯ-ಸಾಂಸ್ಕೃತಿಕ ಲೋಕದ ಪುನರ್‌ಮೌಲ್ಯೀಕರಣವೇ ಜರುಗಿತು. ಬಂಡಾಯಕ್ಕೆ ಬರುವವರೆಗೆ ಜಾನಪದವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವ ವಾತಾವರಣ ಮೂಡಿಬಂದಿರಲಿಲ್ಲ. ಬಂಡಾಯ ಜಾನಪದ, ಲಿಖಿತ ಜಾನಪದ (ರಂಗಾರೆಡ್ಡಿ), ಪ್ರಣೀತ (ಜಿ.ಆರ್. ತಿಪ್ಪೇಸ್ವಾಮಿ)-ಮೊದಲಾದ ಕೃತಿಗಳು ಬಂಡಾಯ ಚಳುವಳಿಯ ಫಲವಾಗಿ ಹುಟ್ಟಿಕೊಂಡವು. ಆಕಾಶ ಜಾನಪದ, ಜಾತ್ರೆಗಳು, ಪ್ರಾಣಿಜಾನಪದ, ಸಸ್ಯಜಾನಪದ, ಶರೀರಜಾನಪದ, ಗ್ರಾಮದೇವತೆಗಳು ಹಾಗೂ ಹಳ್ಳಿಯ ಅಧ್ಯಯನಗಳು ನಡೆಯತೊಡಗಿದವು. ಪಿಎಚ್.ಡಿ ಗ್ರಂಥಗಳ ರಾಶಿ ರಾಶಿಯೇ ಬಂತು.

ಬಹಳ ಹಿಂದೆ ಪ್ರಭುಗಳ ಮೂಲಕ ದೇಶವನ್ನು ಆಳಿಯುತ್ತಿದ್ದರು. ಜನಗಳ-ಹಿನ್ನೆಲೆಯಲ್ಲಿ ಭಾರತವನ್ನು ನೋಡುವ ಪ್ರಯತ್ನ-ಇಂಥ ಚಿಂತನೆಗಳು ಶುರುವಾದವು. ಬೇಂದ್ರೆ, ಗೊರೂರು, ಮಾಸ್ತಿ, ದೇವುಡು, ಬೆಟಗೇರಿ ಮುಂತಾದವರು ಜಾನಪದವನ್ನು ಪ್ರವೇಶಿಸಿದ್ದರಿಂದ ಭಾರತವನ್ನು ಕಂಡುಕೊಳ್ಳುವ ಆಯಾಮವಾಗಿ ಜಾನಪದ ಹುಟ್ಟಿಕೊಂಡಿತು. ಊಗುಟ್ಟಿದರೆ ಮಾತ್ರ ಜಾನಪದ ಅಂದರೆ ಸಂಬಂಧಕ್ಕಾಗಿ ಜಾನಪದ, ಒಡನಾಟಕ್ಕಾಗಿ ಜಾನಪದ ಎಂಬ ಮನೋಧರ್ಮವನ್ನು ಕಂಡುಕೊಂಡರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮಹಾತ್ಮಗಾಂಧಿ . ಹಳ್ಳಿಗಳನ್ನು ಪುನರ್‌ನಿರ್ಮಾಣ ಮಾಡಬೇಕು, ಪುನರ್ ಸಂಘಟಿಸಬೇಕೆಂದು ಹೇಳುತ್ತಿದ್ದರು. ಹಳ್ಳಿಗಳಿಗೆ ಅಧಿಕಾರ ಸಿಗುವಂತಾಗಬೇಕೆಂಬ ಕೂಗು ಎದ್ದಿತು. ಯಾವಾಗ ಇಂಥ ಆರ್ಭಟಗಳು ಕಾಣಿಸಿಕೊಂಡವೋ ಆಗಲೆ ಹಳ್ಳಿಗಳ ಸಮೃದ್ಧಿಯನ್ನು ಸಂರಕ್ಷಿಸಬೇಕೆಂಬ ಮಾತು ಕೇಳಿಬಂತು. ಹಳ್ಳಿಗಳು ನಾಶವಾಗಿ ಬಿಡುತ್ತವೆಂಬ ಕೂಗಾಟವೆದ್ದಾಗ 'ಜಾನಪದ ನಾಶವಾಗುತ್ತದೆ, ಅದು ನಾಶವಾಗುವ ಮುನ್ನ ಉಳಿಸಬೇಕು' ಎಂಬ ಮಾತು ಎಚ್. ಎಲ್. ನಾಗೇಗೌಡರಿಂದ ಕೇಳಿಬಂತು. ಈ ಸಂದರ್ಭದಲ್ಲಿ ಗದ್ದಗೀಮಠ, ಎಂ. ಎಸ್. ಸುಂಕಾಪುರ



ಗೊ. ರು. ಚನ್ನಬಸಪ್ಪ, ಡಿ. ಲಿಂಗಯ್ಯ-ಇವರೆಲ್ಲ ಜನಪದ ಸಾಹಿತ್ಯ ಸಂಗ್ರಹಣೆಯ ಮೂಲಕ ಹಳ್ಳಿಯ ಸಂಸ್ಕೃತಿಯನ್ನು ಉಳಿಸಬೇಕೆಂದರು. ಆದರೆ ಯಾವುದು ಗ್ರಾಮೀಣ ಸಂಸ್ಕೃತಿ ಎಂದು ಹೇಳದ ಇವರೆಲ್ಲ ಮೂಲತಃ ಸಾಹಿತಿಗಳಾದ್ದರಿಂದ ಸಾಹಿತ್ಯಿಕ ಅಂಶಗಳತ್ತ ಹೆಚ್ಚು ಒತ್ತುಕೊಟ್ಟಿದ್ದಲ್ಲದೆ ತಾವು ಸಂಗ್ರಹಿಸಿದ ಜಾನಪದವನ್ನು ವೈಭವೀಕರಿಸಿ ನೋಡಿದರು. ಬರೀ ಅಕ್ಯುಮಿಲೇಟರ್ಸ್ ಆಗಿ ಉಳಿದರು. ಅಂದರೆ, ಸಂಗ್ರಹಣೆ ಮತ್ತು ಸಂಪಾದನೆಗೆ ಮೀಸಲಾದ ಚಿಂತಕರಾಗಿ ಉಳಿದುಬಿಟ್ಟರು. ಆನಂತರ ಜಾನಪದವನ್ನು ಶಾಸ್ತ್ರೀಯಶಿಸ್ತನ್ನಾಗಿ ಅಧ್ಯಯನ ಮಾಡುವ ವಾತಾವರಣ ಬೆಳೆಯಿತು. ಜಾನಪದವನ್ನು ಹೊರಗೆಡಹುವ ವಿದ್ವಾಂಸರು ಕಾಣಿಸಿಕೊಂಡರು. ಇವರು ಸಂಕುಚಿತ ಭಾವನೆಗಳನ್ನು ಬಿಟ್ಟು ಜಾನಪದ ವ್ಯಾಪಕವಾದುದು. ಆದ್ದರಿಂದ ಅದರ ನೆಲೆಯೂ ವ್ಯಾಪಕವಾದುದೆಂದು ಭಾವಿಸಿದರು. ಆದರೆ ದೇಶೀಯ ನೆಲೆಗೆ ಬದಲಾಗಿ ಕರ್ನಾಟಕ ಜಾನಪದವನ್ನು ಪಾಶ್ಚಾತ್ಯ ನೆಲೆಯಲ್ಲಿಯೇ ನೋಡತೊಡಗಿದರು. ಅದೇನೇ ಇರಲಿ, ಪಾಶ್ಚಾತ್ಯ ಜಾನಪದವನ್ನ, ಅದರ ಪರಿಕಲ್ಪನೆಗಳನ್ನ ಕನ್ನಡದಲ್ಲಿ ತುಂಬ ಅಚ್ಚುಕಟ್ಟಾಗಿ ಹೇಳತೊಡಗಿದರು. ದೇಜಗೌ, ಹಾ.ಮಾ. ನಾಯಕ, ಜೀಶಂಪ, ಸಿ.ಪಿ.ಕೆ, ರಾಗೌ, ಡಿ.ಕೆ. ರಾಜೇಂದ್ರ, ಸೋಮಶೇಖರ ಇಮ್ರಾಪೂರ, ಲಠ್ಠೆ, ಎಚ್.ಜೆ. ಲಕ್ಕಪ್ಪಗೌಡ, ಅಂಬಳಿಕೆ ಹಿರಿಯಣ್ಣ, ವೀರಣ್ಣದಂಡೆ ಬಸವರಾಜನೆಲ್ಲಿಸರ, ಚಕ್ಕೆರೆ ಶಿವಶಂಕರ್-ಮೊದಲಾದವರು ಈ ಗುಂಪಿಗೆ ಸೇರಿದವರು. ಜಾನಪದದ ಎಲ್ಲ ಮುಖಗಳ ಬಗ್ಗೆ ಆ ಮೂಲಾಗ್ರವಾಗಿ ಅಧ್ಯಯನ ಮಾಡಿದ ಬಹುದೊಡ್ಡ ಜಾನಪದ ವಿದ್ವಾಂಸರೆಂದರೆ ಡಾ.ಜೀಶಂಪ. ಮರಣೋತ್ತರ ಸಂದರ್ಭದಲ್ಲಿ ಜಾನಪದ ಅಕಾಡೆಮಿ ಅವರಿಗೆ 'ಕರ್ನಾಟಕ ಜಾನಪದ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳ ಬಗೆಗೆ ಕೆಲಸ ಮಾಡುವಾಗ ಪಾಶ್ಚಾತ್ಯರ ತತ್ವಸೂತ್ರಗಳನ್ನು ಮನನ ಮಾಡಿಕೊಂಡರು. ಆದರೆ ಅಂಥವುಗಳಿಗೂ ಸಹ ದೇಶೀಯ ನೆಲೆಯಲ್ಲಿ ಉದಾಹರಣೆಗಳನ್ನು ಹುಡುಕುವ ಕೆಲಸ ಮಾಡಿದರು. ಅವರ ವೃತ್ತಿಗಾಯಕರನ್ನು ಕುರಿತ ಅಧ್ಯಯನ ಇದಕ್ಕೊಂದು ಅದ್ಭುತ ಸಾಕ್ಷಿ ಎನ್ನಬಹುದು. ತದನಂತರದ ದಿನಗಳಲ್ಲಿ ಕೆಲವರು ಜಾನಪದವನ್ನು ಅನ್ವಯಿಕ ಜೀವನ ಶಿಸ್ತಾಗಿ ಕಂಡರು. ಇವರು Folk oriented thiners.ಅಂದರೆ ಜನಸಂಬಂಧೀ ಚಿಂತಕರು. ಜನಪರವಾಗಿ ಆಲೋಚಿಸುವವರು. ಇದಕ್ಕೆ ಮುನ್ನ ಸಾಹಿತ್ಯವನ್ನು ಸಂಗ್ರಹಿಸುತ್ತಿದ್ದರು. ಆ ಸಾಹಿತ್ಯವನ್ನು ಹೇಳಿದವರಿಗೆ ಅಂತಹ ಬೆಲೆ ನೀಡುತ್ತಿರಲಿಲ್ಲ. ಈ ಕೊರತೆಯನ್ನು ಗಮನಿಸಿದ ಈ ಜನಸಂಬಂಧೀ ಚಿಂತಕರು ಸಾಹಿತ್ಯವೂ ಮುಖ್ಯ. ಅದನ್ನು ಹೇಳಿದವನೂ ಮುಖ್ಯ ಎಂಬ ನಿರ್ಣಯಕ್ಕೆ ಬಂದರು. ಹಾಡುಗಾರನೂ ಮುಖ್ಯ ಹಾಡೂ ಮುಖ್ಯವಾಯಿತು. ಬುಡುಬುಡಿಕೆಯೂ ಮುಖ್ಯ, ಆತನ ಸಾಹಿತ್ಯವೂ ಮುಖ್ಯ ಎಂದಂತಾಯಿತು. ಕಲೆ ಮತ್ತು ಕಲಾವಿದ-ಈ ಎರಡರ ಅವಶ್ಯಕತೆಯೂ ಇದೆ ಎಂದು ಹೇಳುವುದರ ಮೂಲಕ 'ತಳರಚನೆಗೆ' ಒತ್ತುಕೊಟ್ಟರು. ಜನಸಾಮಾನ್ಯರ ಬೌದ್ಧಿಕತೆಗೆ ಶ್ರಮ ಸಂಸ್ಕೃತಿಗೆ ಬೆಲೆಕಟ್ಟುವ ಕೆಲಸ ಮಾಡಿದರು. ಈ ಮಾತಿಗೆ ಸಾಕ್ಷಿಯಾಗಿ

ವಿವೇಕ ರೈ, ಬರಗೂರು ರಾಮಚಂದ್ರಪ್ಪ, ಅರವಿಂದ ಮಾಲಗತ್ತಿ, ರಂಗಾರೆಡ್ಡಿ ಕೋಡಿರಾಂಪುರ, ಡಾ. ಜಿ.ಆರ್. ತಿಪ್ಪೇಸ್ವಾಮಿ, ಡಾ.ದುರ್ಗಾದಾಸ್, ಹಿ.ಚಿ. ಬೋರಲಿಂಗಯ್ಯ, ನಲ್ಲೂರು ಪ್ರಸಾದ್, ಪುರುಷೋತ್ತಮ ಬಿಳಿಮಲೆ, ಹಿ.ಶಿ. ರಾಮಚಂದ್ರಗೌಡ, ಚಿನ್ನಪ್ಪಗೌಡ- ಮೊದಲಾದವರ ಜಾನಪದ ಅಧ್ಯಯನಗಳು, ಚಿಂತನೆಗಳು ನಮ್ಮ ಮುಂದಿರುವುದನ್ನು ಗಮನಿಸಬಹುದು. ಜಾನಪದ ಎಂದೆಂದಿಗೂ ನಾಶವಾಗುವಂಥದ್ದಲ್ಲ, ಅದು ಸದಾ ಜೀವಂತಿಕೆಯಿಂದ ಕೂಡಿದುದು ಎಂಬ ವಾದವನ್ನ ಇವರು ಎತ್ತಿಹಿಡಿದರು. ಜಾನಪದ ಬದುಕಿನ ಜೊತೆಜೊತೆಯಲ್ಲಿಯೇ ಮುಂದುವರಿಯುತ್ತದೆಂದು ಅಭಿಪ್ರಾಯಪಟ್ಟರು.



# ಕರ್ನಾಟಕ ಜನಪದ ಮಹಾಕಾವ್ಯಗಳು

ಡಾ. ವಾಮನ ನಂದಾವರ

ಹಾಡುಗಾರರಲ್ಲಿ 'ಮಾನಸಿಕ ಪಠ್ಯ'ವಾಗಿ ಉಸಿರಾಡುತ್ತಿರುವ ಮತ್ತು ಆರಾಧನೆ ಹಾಗೂ ಮನೋರಂಜನೆಗಳ ಪ್ರದರ್ಶನ ಸಂದರ್ಭಗಳಲ್ಲಿ ಪ್ರಕಟಣೆಗೊಳ್ಳುತ್ತಿರುವ ಮಹಾಕಾವ್ಯಗಳು ಜಗತ್ತಿನಾದ್ಯಂತ ಸಿಗುತ್ತವೆ. ಭಾರತ, ಮಧ್ಯಏಷ್ಯಾ, ಚೈನಾ, ಆಫ್ರಿಕಾ, ಇಂಡೋನೇಶ್ಯಾ ಮೊದಲಾದ ದೇಶಗಳಲ್ಲಿ ಅವುಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ದೊರೆಯುವ ಇಂತಹ ಕಾವ್ಯಗಳನ್ನು oral Epies in India' ಗ್ರಂಥದಲ್ಲಿ ದಾಖಲಿಸುವ ಒಂದು ಪ್ರಯತ್ನವೂ ನಡೆದಿದೆ (ನೋಡಿ; Blackbrn, Claus, Fluekiger and wadly 1989) ಈ ವಿದ್ವಾಂಸರು ಇಂತಹ ೧೫ಕ್ಕೂ ಮಿಕ್ಕಿದ ಕಾವ್ಯಗಳನ್ನು ಪ್ರಶ್ನೆಮಾಲಿಕೆಗಳ ಮಾದರಿಯಲ್ಲಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿ ಅವುಗಳಲ್ಲಿ ೧೩ನ್ನು ಭಾರತದ ಭೂನಕ್ಷೆಯಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ (ನೋಡಿ: ಅದೇ ಪು. ೧೯,೩೪,೧೯೨, ೨೦೩,೨೦೮,೨೧೨, ೨೧೬, ೨೧೯,೨೨೪, ೨೨೮, ೨೩೨, ೨೪೦, ೨೪೪, ೨೫೧)

ಈ ಮಹಾಕಾವ್ಯಗಳು ಹೀಗಿವೆ:

೧. ಲೋರಿಕ್ ಚಂದಾ (Lorik Chanda) ಮಹಾಕಾವ್ಯ: ಮಧ್ಯಪ್ರದೇಶ ಉತ್ತರ ಪ್ರದೇಶ, ಬಿಹಾರಗಳಲ್ಲಿ
೨. ಅಲ್ಹಾ (Alha) ಮಹಾಕಾವ್ಯ: ಉತ್ತರ ಪ್ರದೇಶದ ಹಿಂದಿ ಭಾಷಾ ಪ್ರಧಾನವಾದ ಪ್ರದೇಶದಲ್ಲಿ
೩. ಅಣ್ಣನ್ಮಾರ್ (Annarma) ಮಹಾಕಾವ್ಯ: ತಮಿಳ್ನಾಡಿನ ಕೊಂಗು ಪ್ರದೇಶದಲ್ಲಿ
೪. ಬಿಲ್ಲಿನ ಹಾಡು (Bow song) ಮಹಾಕಾವ್ಯ: ತಮಿಳ್ನಾಡಿನ ತಿನ್ನವೆಲ್ಲಿ ಪ್ರದೇಶದಲ್ಲಿ
೫. ದೇವನಾರಾಯಣ (Devanarayana) ಮಹಾಕಾವ್ಯ: ರಾಜಸ್ಥಾನದಲ್ಲಿ
೬. ಢೋಲಮಾರು (Dholamaru) ಮಹಾಕಾವ್ಯ: ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳ ಪಶ್ಚಿಮ ಭಾಗಗಳಲ್ಲಿ
೭. ಗೂಗಾ (Guga) ಮಹಾಕಾವ್ಯ: ರಾಜಸ್ಥಾನ, ಪಂಜಾಬಿನ ಹರಿಯಾಣ, ಉತ್ತರ ಪ್ರದೇಶದ ಈಶಾನ್ಯ ಭಾಗಗಳಲ್ಲಿ

೮. ಜುಂಜಪ್ಪ (Junjappa) ಮಹಾಕಾವ್ಯ : ಕರ್ನಾಟಕದಲ್ಲಿ
೯. ಪಾಬೂಜಿ (Pabuji) ಮಹಾಕಾವ್ಯ: ರಾಜಸ್ಥಾನದಲ್ಲಿ
೧೦. ಪಲ್ನಾಡು (Palnudu) ಮಹಾಕಾವ್ಯ: ಆಂಧ್ರಪ್ರದೇಶದ ತೆಲುಗು ಭಾಷಾ ಪ್ರಧಾನವಾದ ಪ್ರದೇಶದಲ್ಲಿ
೧೧. ಎಲ್ಲಮ್ಮ (Ellamma) ಮಹಾಕಾವ್ಯ: ಉತ್ತರ ಕರ್ನಾಟಕದಲ್ಲಿ
೧೨. ತೆಯ್ಯಂ (Teyyam) ಮಹಾಕಾವ್ಯ: ಕೇರಳದಲ್ಲಿ
೧೩. ಪಾಡ್ದನ (Paddana) ಮಹಾಕಾವ್ಯ: ಕರಾವಳಿ ಕರ್ನಾಟಕದ ನಾಲ್ಕು ವರ್ಗಗಳಲ್ಲಿ

ಅವು ಇರುವ ಪ್ರದೇಶಗಳನ್ನು ಭೌಗೋಳಿಕವಾಗಿ ನಾಲ್ಕು ವರ್ಗಗಳಲ್ಲಿ ಗುರುತಿಸಲಾಗಿದೆ.

೧. ಸ್ಥಳೀಯ ವರ್ಗ (Local groups) : ೧೦ ರಿಂದ ೧೦೦ ಮೈಲು ವ್ಯಾಪ್ತಿ: ತಂಪಿಮಾರ್ (Tampimar) -ಬಿಲ್ಲಿನ ಹಾಡು, ಕೋಡ್ದಬ್ಬು ಪಾಡ್ದನ, ತೆಯ್ಯಂ ಇವು ಈ ವರ್ಗದಲ್ಲಿ ಬರುತ್ತದೆ. ಬಹುಶಃ ಸಿರಿ, ಕೋಟಿಚೆನ್ನಯ್ಯ ಮಹಾ ಕಾವ್ಯಗಳೂ ಈ ವರ್ಗದಲ್ಲಿ ಸೇರುತ್ತವೆ.
೨. ಉಪ-ಪ್ರದೇಶ ವರ್ಗ (Sub-regional group) : ೧೦೦ ರಿಂದ ೨೦೦ ಮೈಲು ವ್ಯಾಪ್ತಿ: ಅಣ್ಣನ್ಮಾರ್, ಪಲ್ನಾಡು, ಜುಂಜಪ್ಪ, ಕನ್ಯಕಾ ಈ ವರ್ಗದಲ್ಲಿ ಬರುತ್ತವೆ.
೩. ಪ್ರಾದೇಶಿಕ ವರ್ಗ: (Regional group) ೨೦೦ ರಿಂದ ೩೦೦ ಮೈಲು ವ್ಯಾಪ್ತಿ: ಪಾಬೂಜಿ, ದೇವನಾರಾಯಣ, ಎಲ್ಲಮ್ಮ, ತೋಲು ಬೊಮ್ಮಲಾಟ- ಈ ಗುಂಪಿನವುಗಳು.
೪. ಪ್ರಾದೇಶಿಕಾತೀತ ವರ್ಗ: (Supra-group Regional) ೩೦೦ ರಿಂದ ೪೦೦ ಮೈಲು ಮತ್ತು ಅದಕ್ಕಿಂತಲೂ ಅಧಿಕ ವ್ಯಾಪ್ತಿ: ಲಾರಿಕಿಕಾಂಡಾ, ಗೂಗಾ, ಢೋಲಾ, ಅಲ್ಹಾ ಇವು ಈ ವರ್ಗದವುಗಳು.

ಈ ಎಲ್ಲ ಮಹಾಕಾವ್ಯಗಳನ್ನು ಯೋಧ (martial) ತ್ಯಾಗ (Saeritifical) ಮತ್ತು ರಮ್ಯ ಅಥವಾ ಶೃಂಗಾರ (Romatic) ಕಾವ್ಯಗಳೆಂದು ಮೂರು ವಿಭಾಗಗಳಲ್ಲಿ ಗುರುತಿಸಲಾಗಿದೆ.

**ಯೋಧ ಕಾವ್ಯಗಳು:** ತಂಪಿಮಾರ್, ಅಣ್ಣನ್ಮಾರ್, ಪಲ್ನಾಡ್, ಪಾಬೂಜಿ ದೇವನಾರಾಯಣ, ಜುಂಜಪ್ಪ, ಅಲ್ಹಾ ಮತ್ತು ಕೋಡ್ದಬ್ಬು.

**ತ್ಯಾಗ ಕಾವ್ಯಗಳು:** ಕನ್ಯಕಾ, ಎಲ್ಲಮ್ಮ

**ಶೃಂಗಾರ ( ರಮ್ಯ ) ಕಾವ್ಯಗಳು:** ಮುತ್ತು ಪ್ಪಾಟನ್ (Muttuppattan) ಲಾರಿಕಿ ಕಾಂಡಾ, ಗೂಗಾ, ಢೋಲಾ, ತೋಲುಬೊಮ್ಮಲಾಟ



ಆಚರಣಾತ್ಮಕ (ಧಾರ್ಮಿಕ) ಮತ್ತು ರಾಜಸ್ಥಾನ ಎನ್ನುವ ಇನ್ನೆರಡು ಗುಂಪುಗಳಲ್ಲಿಯೂ ಈ ಮಹಾಕಾವ್ಯಗಳನ್ನು ವರ್ಗೀಕರಿಸಲಾಗಿದೆ.

೧. ಧಾರ್ಮಿಕ ಕಾವ್ಯಗಳು: ತಂಪಿಮಾರ್, ಮುತ್ತುಪ್ಪಾಟನ್, ಕೋದ್ದಬ್ಬು, ತೆಯ್ಯಮ್ ಅಣ್ಣನ್ಮಾರ್, ಪಲ್ನಾಡು, ಎಲ್ಲಮ್ಮ, ಪಾಬೂಜಿ, ದೇವನಾರಾಯಣ, ಕನ್ನಕಾ, ಜುಂಜಪ್ಪ, ಗೂಗಾ.

೨. ಮನೋರಂಜನಾ ಕಾವ್ಯಗಳು: ತೋಲು ಬೊಮ್ಮಲಾಟ, ಲಾರಿಕಿ-ಕಾಂಡಾ, ಢೋಲಾ ಮತ್ತು ಅಲ್ಹಾ.

ಭಾರತೀಯ ಜನಪದ ಮಹಾಕಾವ್ಯಗಳ ಈ ಅಧ್ಯಯನವು ಸಾಂಪ್ರದಾಯಿಕವಾಗಿ ಅಷ್ಟೊಂದು ಸಮರ್ಪಕವಲ್ಲ ಎನ್ನುವುದನ್ನು ಈ ವಿದ್ವಾಂಸರೇ ಒಪ್ಪಿಕೊಂಡಿರುವುದನ್ನು ಗಮನಿಸಬೇಕು. ಇದು ಅಷ್ಟೇ ಸತ್ಯವೂ ಕೂಡ. ಕಾರಣ ಈ ಅಧ್ಯಯನವು ಪಾರ್ಶ್ವಿಕ ದೃಷ್ಟಿ ಮತ್ತು ಅಸಮರ್ಪಕ ಹಾಗೂ ಸೀಮಿತ ಕ್ಷೇತ್ರ ಕಾರ್ಯಗಳ ಮಿತಿಗಳಿಂದ ಕೂಡಿರುವುದು. ಇದಕ್ಕೊಂದು ನಿದರ್ಶನವನ್ನು ಕೊಡುವುದಾದರೆ ಪೀಟರ್ ಜೆ. ಕ್ಲಾಸ್ ಅವರು ಕೋಡ್ದಬ್ಬು ಪಾಡ್ದನವನ್ನು ಮಾತ್ರ ಭಾರತೀಯ ಮಹಾಕಾವ್ಯಗಳ ಸಾಲಿನಲ್ಲಿ ಗುರುತಿಸಿರುವುದು. ದೀರ್ಘತೆ ಮತ್ತು ವಸ್ತುವಿನ ದೃಷ್ಟಿಯಿಂದ ಗಮನಿಸಿದರೆ ಕೋಡ್ದಬ್ಬು ಪಾಡ್ದನಕ್ಕಿಂತಲೂ ಬೇರೆ ಪಾಡ್ದನಗಳು ತುಳುವಿನಲ್ಲಿ ಇವೆ. ಬಹುಶ- ಕೋಟಿಚೆನ್ನಯ ಮತ್ತು ಸಿರಿ ಪಾಡ್ದನಗಳನ್ನು ಅಲ್ಲಿ ಅರು ದಾಖಲಿಸಬಹುದಿತ್ತು. ಅವರು ಅಧ್ಯಯನದಲ್ಲಿ ವರ್ಗೀಕರಿಸಿಕೊಂಡಂತೆ ಕೋಟಿಚೆನ್ನಯನನ್ನು ಯೋಧ ಕಾವ್ಯಗಳ ಹಾಗೂ ಧಾರ್ಮಿಕ ಕಾವ್ಯಗಳ ಗುಂಪುಗಳಲ್ಲಿ ಗುರುತಿಸಬಹುದಾಗಿದೆ.

ಜೊತೆಗೆ ಈ ಅಧ್ಯಯನ ಕಾರ್ಯವೂ ಅಪೂರ್ಣ ಎನ್ನಬೇಕು. ಹಾಗಾಗಿಯೇ ಮಹಾಕಾವ್ಯಗಳ ಕೆಲವು ವರ್ಗೀಕರಣ ವಿಭಾಗಗಳು ಇಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಕರ್ನಾಟಕದ ಕೆಲವು ಜನಪದ ಮಹಾಕಾವ್ಯಗಳು ಹಾಗೂ ತುಳುವಿನ ಸಿರಿ ಮೊದಲಾದ ಪಾಡ್ದನಗಳಿಗೆ ಬೇರೆಯೇ ವರ್ಗೀಕರಣ ವಿಭಾಗಗಳು ಬೇಕಾಗುತ್ತವೆ. ಉದಾಹರಣೆಗೆ ಚಾರಿತ್ರಿಕ ಕಾವ್ಯಗಳ ಕುರಿತು ಇವರು ಅಷ್ಟೇನೂ ಹೇಳುವುದಿಲ್ಲ.

### ಕರ್ನಾಟಕದ ಜನಪದ ಮಹಾಕಾವ್ಯಗಳು

ಕರ್ನಾಟಕದಲ್ಲಿ ವೃತ್ತಿಗಾಯಕರ ಅಥವಾ ಲಾವಣಿಕಾರರ ಬಹುದೊಡ್ಡ ಪರಂಪರೆಯೇ ಇದೆ. ಕಾಡುಗೊಲ್ಲರ ಸಂಪ್ರದಾಯದ ಜುಂಜಪ್ಪ ಕಾವ್ಯ ಕಂಸಾಳೆಯವರ ಅಥವಾ ಮಾದೇಶ್ವರ ಗುಡ್ಡರ ಮಲೆಯ ಮಾದೇಶ್ವರ ಕಾವ್ಯ, ನೀಲಗಾರರ ಅಥವಾ ಮಂಚೇದಯ್ಯಗಳ ಮಂಟೇಸ್ವಾಮಿ ಕಾವ್ಯ ಎಲ್ಲಮ್ಮ ಸಂಪ್ರದಾಯದ ಎಲ್ಲಮ್ಮ ಕಾವ್ಯ

ತುಳುನಾಡಿನ ಕೋಟಿಚೆನ್ನಯ ಪಾಡ್ದನ, ಸಿರಿಗಳ ಸಂದಿ ಇವುಗಳನ್ನು ಮುಖ್ಯವಾಗಿ ಗುರುತಿಸಲಾಗಿದೆ. ಈ ಕಾವ್ಯಗಳ ಕುರಿತು ಸಾಕಷ್ಟು ಅಧ್ಯಯನಗಳೂ ನಡೆದಿವೆ.

ಇವುಗಳಲ್ಲಿ ಒಂದು ರಾತ್ರಿ ಅಥವಾ ಹಲವು ರಾತ್ರಿ ಹಾಡುವ ಕಾವ್ಯಗಳಿವೆ. ಕಾಳಿಂಗರಾಯ, ಗುಣಸಾಗರಿ ಅಂತಹವು. ಬಂದ ಶ್ರೋತೃಗಳನ್ನು ಬೆಳಗ್ಗಿನ ಜಾವದವರೆಗೆ ಉಳಿಸಿಕೊಳ್ಳುವ ಕೆಲಸ ಕಥನಕಾವ್ಯಗಳನ್ನು ಹಾಡುವುದರ ಮೂಲಕ ಈಡೇರುತ್ತದೆ. ಪ್ರೊ.ಜೀ.ಶಂ. ಪರಮಶಿವಯ್ಯ (೧೯೭೧) ಕರ್ನಾಟಕದ ಜನಪದ ಕಾವ್ಯಗಳ ಅಧ್ಯಯನ ನಡೆಸಿ ಕೆಲವು ತೀರ್ಮಾನಗಳಿಗೆ ಬಂದಿರುತ್ತಾರೆ.

ಜುಂಜಪ್ಪ, ಮೊಂಟೇಸ್ವಾಮಿ ಕಥೆಗಳು ವೇಗವಾಗಿ ಸಾಗುವುದಿಲ್ಲ. ಇಲ್ಲಿ ವರ್ಣನೆಗಳು ಸಹಜವಾಗಿವೆ. ಮಹಾಕಾವ್ಯದ ಲಕ್ಷಣಗಳಲ್ಲಿ ಇದೂ ಒಂದು. ಜೀ.ಶಂ.ಪ. ಹೇಳುವಂತೆ ಮಹಾಕಾವ್ಯಗಳಲ್ಲಿ ಕಥಾನಾಯಕನಿರಬೇಕು. ವೀರಕಾವ್ಯವಾಗಿರಬೇಕು. ಧರ್ಮದ ಗುರಿಯಿರಬೇಕು. ರಾಷ್ಟ್ರೀಯ ಮೌಲ್ಯ ಪ್ರತಿಪಾದನೆಯಿರಬೇಕು. ಸಮಗ್ರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರಬೇಕು. ಪಾಶ್ಚಾತ್ಯ ಮಹಾಕಾವ್ಯಗಳ ವರ್ಗೀಕರಣದಲ್ಲಿ ಕಂಡುಬರುವ ರಮ್ಯ (Romantic)ಕಾವ್ಯಗಳು ಅಥವಾ ಪ್ರೇಮ ಕಾವ್ಯಗಳು ನಮ್ಮಲ್ಲಿ ಇಲ್ಲದಿರಲು ಕಾರಣವೇನು ಈ ಪ್ರಶ್ನೆಯನ್ನು ಜೀ.ಶಂ.ಪ ಒಂದೆಡೆ ಎತ್ತಿಕೊಂಡು ಚರ್ಚಿಸಿರುತ್ತಾರೆ. ಭಾರತೀಯ ಮಹಾಕಾವ್ಯಗಳೆಲ್ಲ ಸಾಮಾನ್ಯವಾಗಿ ಧಾರ್ಮಿಕ ಕಾವ್ಯಗಳು. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಈ ಕೊರತೆ ಯಾಕೆ ಎನ್ನುವುದನ್ನು ಕಂಡುಕೊಳ್ಳಬೇಕಾಗುತ್ತದೆ.

ಕರ್ನಾಟಕದ ಲಾವಣಿಕಾರರ ಅನೇಕ ಸಂಪ್ರದಾಯಗಳನ್ನು ಪರಿಶೀಲಿಸಿದಾಗ 'ಲಾವಣಿ' ಎಂಬ ಮಾತು ಕಥಾಸಾಹಿತ್ಯಕ್ಕೆ ವಿಶೇಷವಾಗಿ ಅನ್ವಯವಾಗುತ್ತ ಬಂದಿದೆ. ಅಡಕವಾದ ಔಚಿತ್ಯಪೂರ್ಣವಾದ ಈ ಹೆಸರಿನ ಕೆಳಗೆ ಹಾಡ್ಗತೆಗಳನ್ನೆಲ್ಲ ಗುರುತಿಸಿಕೊಂಡು ಅತ್ಯಂತ ವಿಸ್ತಾರವಾದ ಖಂಡಕಾವ್ಯದ ವ್ಯಾಪ್ತಿಯ ರಚನೆಗಳನ್ನು ಜನಪದ ಕಾವ್ಯಗಳೆಂದೇ ಕರೆಯಬಹುದು. (ನೋಡಿ: ಅದೇ.ಪು.೧೪). ಈ ಹಿನ್ನೆಲೆಯಲ್ಲಿ ಅವರು ಸಂಗ್ರಹಿಸಿ ಪ್ರಕಟಿಸಿರುವ ಕಾಡ ಸಿದ್ಧಮ್ಮ, ಬಸವಕುಮಾರ, ಲೋಹಿತ ಕುಮಾರ ಮೊದಲಾದ ಕರಪಾಲದ ಕಥೆಗಳು ಮಕ್ಕಳಾಟಿಕೆ ಮಾದಯ್ಯ ಮೊದಲಾದ ಕಂಸಾಳೆ ಕಥೆಗಳು, ಮಂಟೇಸ್ವಾಮಿಯ ಕಥೆಗಳು, ಗುಡ್ಡರ ಕಥೆಗಳು, ಜುಂಜಪ್ಪನ ಕಥೆಗಳು, ಹೆಂಗಸರ ಹಾಡ್ಗತೆಗಳು ಗಮನಾರ್ಹವಾದವು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಚದುರಿ ಹೋಗಿರುವ ಕನ್ನಡದ ಕಡುಗಲಿ ಕುಮಾರ ರಾಮನಿಗೆ ಸಂಬಂಧಿಸಿದ ಜನಪದ ಗೀತೆಗಳ ಸಂಗ್ರಹ ನಡೆಸಿ ಅಧ್ಯಯನ ರೂಪದಲ್ಲಿ ಶಾಸ್ತ್ರೀಯವಾಗಿ ಸಂಪಾದಿಸಿದರೆ ಕನ್ನಡದಲ್ಲೂ ಕಲೇವಾಲದಂತಹ ಕಾವ್ಯಕೃತಿ ಲಭ್ಯವಾದೀತು ಎಂಬ ವಿಚಾರವನ್ನು ಡಾ.ತೀ.ನಂ. ಶಂಕರನಾರಾಯಣ (೧೯೭೦,XVIII) ಒಂದೆಡೆ ಪ್ರಸ್ತಾಪಿಸಿರುವುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಬಹುಶಃ



ಸಂಗೊಳ್ಳಿರಾಯಣ್ಣ (ನೋಡಿ: ನಿಂಗಣ್ಣ ಸಣ್ಣಕ್ಕಿ, ೧೯೭೫, ಒಡೆಯರ್ ಡಿ. ಹೆಗ್ಗಡೆ, ೧೯೮೭), ಮದಗದ ಕೆಂಚವ್ವ (ನೋಡಿ: ಸುಶೀಲಾ ಸೊಂಡೂರು, ೧೯೮೧), ಬಿಲ್ಲಾಳ ರಾಯನ ಕಥೆ,ಏಳು ಮಂದಿ ರಾಯರು ಈರದಿಮ್ಮಿ ಕಥೆ (ನೋಡಿ: ಡಾ.ಬಿ.ಎಸ್. ಸ್ವಾಮಿ, ೧೯೮೩), ಕಾಡ್ಯನಾಟದ ಹಾಡುಗಳು (ನೋಡಿ: ನಾವಡದಂಪ ೧೯೯೩ ಕೆಂಚಮ್ಮ ದೇವತೆ (ನೋಡಿ: ಲಕ್ಷ್ಮಣಯ್ಯ, ೧೯೯೪) ಮೈಲಾರಲಿಂಗ (ನೋಡಿ: ಎಂ.ಎನ್. ವೆಂಕಟೇಶ್, ಮೊದಲಾದ ಕಾವ್ಯ (ಲಾವಣಿಗಳನ್ನು ಹೀಗೆಯೇ ಸಂಗ್ರಹಿಸಿ ಪ್ರಕಟಿಸಿದಾಗ ಅವೆಲ್ಲ ಜನಪದ ಮಹಾಕಾವ್ಯಗಳ ವ್ಯಾಪ್ತಿಗೆ ಬರುತ್ತವೆಯೇ ಎನ್ನುವ ನಿಟ್ಟಿನಲ್ಲಿ ಅಧ್ಯಯನಗಳು ನಡೆಯಬೇಕು.

ಪ್ರೊ.ಬಿ.ಎ. ವಿವೇಕ ರೈ (೧೯೮೫) ಅವರು ತುಳುಪಾಡ್ದನಗಳ ಕುರಿತು ಚರ್ಚಿಸುತ್ತ ಅನೇಕ ಪಾಡ್ದನಗಳು ಜನಪದ ಮಹಾಕಾವ್ಯಗಳ ಸಾಲಿಗೆ ಸೇರುವ ಲಕ್ಷಣಗಳನ್ನು ಪಡೆದುಕೊಂಡಿವೆ ಎಂದಿದ್ದಾರೆ. ಅವು ಕಥನ ಕವನಗಳ ವ್ಯಾಪ್ತಿಯನ್ನು ಮೀರಿ ಜನಪದ ಮಹಾಕಾವ್ಯಗಳಾಗುತ್ತವೆ (ಅದೇ ಪು.೨೮), ಒಂದೇ ಭೂತಕ್ಕೆ ಸಂಬಂಧಿಸಿದ ಬೇರೆ ಬೇರೆ ಪಾಡ್ದನಗಳನ್ನು ಮುಖ್ಯವಾಗಿ ಅದರ ಪ್ರಸರಣಕ್ಕೆ ಸಂಬಂಧಿಸಿದಂತೆ ಒಟ್ಟುಮಾಡಿ ಒಂದು ಲಾವಣಿಚಕ್ರ (Ballad Cycle) ನಿರ್ಮಿಸಬಹುದು. ಲಾವಣಿ ಚಕ್ರವನ್ನು ಜನಪದ ಮಹಾಕಾವ್ಯ ಎಂದು ಪರಿಗಣಿಸುವ ಇತ್ತೀಚೆಗಿನ ಜಾನಪದ ವಿದ್ವಾಂಸರ ಪ್ರವೃತ್ತಿಯನ್ನು ನಾನು ಪರಿಗಣಿಸಿದ್ದೇನೆ. ಉದಾ: ಪಂಜುರ್ಲಿ ಭೂತ, ಜುಮಾದಿ ಭೂತ ಮುಂತಾದುವುಗಳಿಗೆ ಸಂಬಂಧಿಸಿ ಮಹಾಕಾವ್ಯಗಳನ್ನು ಸಂಯೋಜಿಸಬಹುದು. ಒಂದೇ ಪಾಡ್ದನದ ಹಲವು ಪಾಠಗಳನ್ನು ಉಗಮ, ಸಾಹಸ, ಸಂಚಾರ ಮೊದಲಾದುವುಗಳಿಗೆ ಸಂಬಂಧಿಸಿದಂತೆ ಬಿಂದುಪಾಡ್ದನದ ಚಕ್ರವನ್ನು ಅಥವಾ ಮಹಾಕಾವ್ಯವನ್ನು ಪಡೆಯಬಹುದು. ದೀರ್ಘತೆಯ ದೃಷ್ಟಿಯಿಂದ ಕೋಟಿಚನ್ನಯ ಮತ್ತು ಸಿರಿಯ ಪಾಡ್ದನ ತುಳುನಾಡಿನ ಅವಳಿ ಜನಪದ ಮಹಾಕಾವ್ಯಗಳು ಎನ್ನಬಹುದು (ನೋಡಿ: ಅದೇ ಪು. ೩೩,೩೪).

ಪ್ರೊ.ರಾಮೇಗೌಡ (೧೯೭೪,೬೭೭) ಅವರ ಪ್ರಕಾರ ಜನಪದ ಗೀತ ಸಾಹಿತ್ಯದಲ್ಲಿ ಕಥಾತ್ಮಕ ಭಾಗವನ್ನು ಲಾವಣಿ, ಖಂಡಕಾವ್ಯ ಮತ್ತು ಮಹಾಕಾವ್ಯಗಳೆಂದು ವಿಭಜಿಸಿಕೊಳ್ಳಬಹುದು. ಇವು ತಮ್ಮ ರೂಪರಚನೆಯಲ್ಲಿ ಹಲವಾರು ಸಮಾನಗುಣಗಳನ್ನು ಹೊಂದಿರುತ್ತವೆ. ಇವುಗಳೆಲ್ಲದರಲ್ಲಿಯೂ ಕ್ರಿಯೆ, ಪಾತ್ರ, ಸಂವಿಧಾನ ಮತ್ತು ವಸ್ತುಗಳೆಂಬ ನಾಲ್ಕು ಸಾಮಾನ್ಯ ಅಂಶಗಳಿರುತ್ತವೆ. ಡಾ.ಬಿ. ದಾಮೋದರ ರಾವ್, (೧೯೯೫,೧೬೬) ತುಳುಪಾಡ್ದನಗಳು: ಮಹಾಕಾವ್ಯವಾಗಿ ಎನ್ನುವ ಪ್ರಬಂಧದಲ್ಲಿ ಮುಖ್ಯಪಾಡ್ದನಗಳನ್ನು ಪ್ರತ್ಯೇಕವಾಗಿ ಸ್ವಯಂ ಪರಿಪೂರ್ಣ ಕಾವ್ಯಗಳೆಂದು ಪರಿಗಣಿಸಿದಾಗಲೂ ಹರವು ಮತ್ತು ಅಳವಿನಲ್ಲಿ ಅವು ರಾಷ್ಟ್ರೀಯ ಮಹಾಕಾವ್ಯಗಳನ್ನು ಸರಿಗಟ್ಟಲಾರವು ಎಂಬ ಮಿತಿಯ ಬಗೆಗೆ ಸಾಕಷ್ಟು ಚರ್ಚಿಸಿರುತ್ತಾರೆ. ರಾಷ್ಟ್ರೀಯ ಚೌಕಟ್ಟಿಗೊಳಪಡುವ ಪುರಾಣಗಳು ತಮ್ಮ

ಮೂಲ ಲಕ್ಷಣವನ್ನು ಇಲ್ಲವಾಗಿಸಿಕೊಂಡು ಸಂಪೂರ್ಣವಾಗಿ ರೂಪಾಂತರ ಹೊಂದುವಂತೆ ಉಪಸಂಸ್ಕೃತಿಯ ಫಲವಾದ ತುಳು ಜನಪದ ಕಾವ್ಯಗಳ ಪುರಾಣಗಳು ಬದಲಾಗುವ ತಮ್ಮ ಮೂಲಲಕ್ಷಣವನ್ನು ಸಂಪೂರ್ಣವಾಗಿ ಇಲ್ಲವಾಗಿಸಿಕೊಳ್ಳುವುದಿಲ್ಲ. ಮಹಾಕಾವ್ಯಗಳು ಅತಿಮಾನುಷರ ಹುಟ್ಟು ಹಾಗೂ ಬೆಳವಣಿಗೆಗಳನ್ನು ಕೀರ್ತಿಸುವ ಗಾದೆಗಳು. ಇದು ಎಲ್ಲ ಪಾಡ್ದನಗಳೂ ಮಹಾಕಾವ್ಯದೊಂದಿಗೆ ಹಂಚಿಕೊಳ್ಳುವ ಸಮಾನ ಲಕ್ಷಣ (ಅದೇ ಪು. ೧೬೯). ಹೆಚ್ಚಿನ ವಿವರಣೆಗಳಿಗೆ ನೋಡಿ: ಮಹಾಕಾವ್ಯವಾಗಿ ಜನಪದ ಕಾವ್ಯ ಆಯಾಮಗಳು ದಾಮೋದರ ರಾವ್)

ಡಾ.ಬಿ.ಎಸ್.ಸ್ವಾಮಿ (೧೯೯೩), ಮಲೆಯಮಾದೇಶ್ವರ ಹಾಗೂ ಮಂಟೇಸ್ವಾಮಿ ಕಾವ್ಯಗಳ ತುಲನಾತ್ಮಕ ವಿವೇಚನೆ ನಡೆಸಿರುತ್ತಾರೆ.

ಡಾ.ಪಿ.ಕೆ. ರಾಜಶೇಖರ (೧೯೭೧)ಅವರು ಜನಪದ ಪುರಾಣ ಕಾವ್ಯ 'ಬೆಟ್ಟದ ಚಾಮುಂಡಿಯನ್ನು ಸಂಗ್ರಹಿಸಿ ಪ್ರಕಟಿಸಿರುತ್ತಾರೆ. ಜನಪದ ಮಹಾಕಾವ್ಯ ಮಲೆಯ ಮಾದೇಶ್ವರದ ಎರಡು ಮಹಾ ಸಂಪುಟಗಳನ್ನು ವ್ಯಾಪಕ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಫಲವಾಗಿ ಹೊರತಂದಿರುತ್ತಾರೆ. ಜನಪದ ವೀರ ಕಾವ್ಯ ಪಿರಿಯಾಪಟ್ಟಣದ ಕಾಳಗವನ್ನು ಸಂಪಾದಿಸಿ ಪ್ರಕಟಿಸಿರುತ್ತಾರೆ. ಡಾ. ವಾಮನ ನಂದಾವರ, (೧೯೯೮) ಅವರು ಸ್ಥಳೀಯ ತುಳು ಜನಪದ ಮಹಾಕಾವ್ಯಗಳು ನಿರೂಪಿಸುವ ಅವಳಿ ವೀರರ ಜೀವನಚಕ್ರ, ವೀರರ ಆರಾಧಪಠ್ಯ ಮತ್ತು ಸಂದರ್ಭ, ಜನಪದ ಮಹಾಕಾವ್ಯದಲ್ಲಿ ಪ್ರಕಟವಾಗಿರುವ ಪ್ರತಿಭಟನೆ ಮತ್ತು ಹೋರಾಟ ಮೊದಲಾದವುಗಳನ್ನು ಅಂತಾರಾಷ್ಟ್ರೀಯ ಜಾನಪದದ ಹಿನ್ನೆಲೆಯಲ್ಲಿ ತೌಲನಿಕವಾಗಿ ಅಧ್ಯಯನ ನಡೆಸಿರುತ್ತಾರೆ. (ಹೆಚ್ಚಿನ ವಿವರಗಳಿಗೆ ನೋಡಿ: ಅದೇ, ೧೯೯೫, ೧೬೯-೧೯೭) ಜನಪದ ಮಹಾಕಾವ್ಯದ ಪಠ್ಯ ಮತ್ತು ಪ್ರದರ್ಶನದ ದಾಖಲಾತಿ ಹಾಗೂ ಅಧ್ಯಯನದ ಆಧುನಿಕ ಒಲವುಗಳಲ್ಲಿ ವೈಜ್ಞಾನಿಕ ತಂತ್ರ ಸಾಧನಗಳ ಮೂಲಕ ಕ್ಷೇತ್ರಕಾರ್ಯಧಾರಿತ ಅಧ್ಯಯನಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಅನೇಕ ವಿದ್ವಾಂಸರ ಕೆಲಸಗಳನ್ನು ಇಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದು ಈ ಲೇಖನದ ಮಿತಿಯೂ ಹೌದು ಎಂಬುದನ್ನು ಒಪ್ಪಿಕೊಳ್ಳುತ್ತಿದ್ದೇನೆ.

**ಉಪಸಂಹಾರ:**

ಸೃಷ್ಟಿಯ ಮೂಲದ ಕಲ್ಪನೆ ಭೂಮಿ ಆಕಾಶಗಳ ಹುಟ್ಟಿನ ವರ್ಣನೆಗಳು ಆದಿಮಾನವನ ಉಗಮದ ವಿವರಣೆಗಳು ಜನಪದ ಮಹಾಕಾವ್ಯಗಳ ಪ್ರಾರಂಭದಲ್ಲಿ ಸಿಗುವ ಪುರಾಣಗಳು, ಫಿನ್ನಿಶ್ ಕಾವ್ಯವಾಗಬಹುದು ಕೋಟಿಚೆನ್ನಯ ಜನಪದ ಮಹಾಕಾವ್ಯ ಇರಬಹುದು ಇಲ್ಲೆಲ್ಲ ಸೃಷ್ಟಿಯ ಉಗಮಕ್ಕೆ ಹಕ್ಕಿಗಳ ಮೊಟ್ಟೆ ಕಾರಣವಾಗಿರುತ್ತದೆ. ಪ್ರಾಚೀನ ವಿಶ್ವಸೃಷ್ಟಿಯ ಆಲೋಚನೆಯು ಸಮುದ್ರ ಹಕ್ಕಿಯೊಂದರ



ಮೊಟ್ಟೆಯೊಡೆದು ಚೂರುಚೂರಾಗುವುದರ ಮೂಲಕ ಭೂಮಿಯ ಸ್ವರ್ಗದ ಮತ್ತು ದಿವ್ಯಜ್ಯೋತಿಗಳ ಸೃಷ್ಟಿಗೆ ಮೂಲವಾಗಿರುವುದನ್ನು ವಿವರಿಸುತ್ತದೆ. ಕೋಟಿಚೆನ್ನಯದಂತಹ ಕಾವ್ಯ ಕೇಂಜವ ಎನ್ನುವ ಹಕ್ಕಿಗಳ ಕಥೆಯಿಂದಲೇ ಆರಂಭವಾಗುತ್ತದೆ. ಅಲ್ಲಿ ಅಣ್ಣತಂಗಿ ಹಕ್ಕಿಗಳು ಬರತ್ತದೆ. ಅವು ಮುಂದೆ ಗಂಡಹೆಂಡಿರಾಗುವುದು, ಅವುಗಳ ಮೊಟ್ಟೆಯಿಂದ ವಿಶ್ವದ ಸೃಷ್ಟಿಯಾಗುವುದು, ಹೀಗೆ ಅಂಡದಿಂದ ಬ್ರಹ್ಮಾಂಡದ ಪರಿಕಲ್ಪನೆ ಜನಪದ ಮಹಾಕಾವ್ಯದ್ದು, ಫಿನ್ನಿರ್ ಜಾನಪದದಲ್ಲಿ ದೈತ್ಯಹಕ್ಕಿಯ (gigantic bird) ವರ್ಣನೆ ಹೇಗಿದೆಯೆಂದರೆ ಅದರ ರೆಕ್ಕೆಗಳು ಭೂಮಿ ಮತ್ತು ಆಕಾರಗಳನ್ನು ವ್ಯಾಪಿಸುವಷ್ಟು ಗಾತ್ರದವು (ನೋಡಿ: Felir J. Cinas 1985, gh. 146-153).

ಕೊರಗ ಜನಾಂಗದ ಮೂಲದಲ್ಲಿ ಮಾಂತ್ರಿಕ ಡೋಲಿನ ಕತೆಯಿದೆ. ಆಗ ಎಲ್ಲೂ ಏನೂ ಇರಲಿಲ್ಲ. ಎಲ್ಲೆಲ್ಲೂ ನೀರೇ ತುಂಬಿತ್ತು. ನೀರಿನಲ್ಲಿ ಬಿಂದು ಡೋಲು ತೇಲಿಬಂತು. ಅದರಲ್ಲಿ ಅಣ್ಣತಂಗಿ ಮೊದಲ ಮಾನವರು ರಕ್ಷಣೆ ಪಡೆದು ಈ ಸೃಷ್ಟಿಗೆ ಕಾರಣರಾಗುತ್ತಾರೆ. ಜಗತ್ತಿನ ಎಲ್ಲ ಜನಪದ ಮಹಾಕಾವ್ಯವಾಗಲಿ ಪುರಾಣಗಳಾಗಲಿ ವಿಶ್ವವಿನ್ಯಾಸ ತತ್ವಗಳಿಗೆ ಸಂಬಂಧಿಸಿವೆ. ಕಳೆದ ದಶಕದಲ್ಲಿ ಇಟಲಿ ಮತ್ತು ಫಿನ್ನಿಶ್ ವಿದ್ವಾಂಸರು ನಡೆಸಿದ ಧಾರ್ಮಿಕ ಮತ್ತು ಚಾರಿತ್ರಿಕ ಅಧ್ಯಯನ ವಿಶ್ವರಚಕ (Cosmo plostic)ಪರಿಕಲ್ಪನೆಯ ಮೇಲೆ ಹೊಸ ದೃಷ್ಟಿ ಹರಿಸಿದೆ. ಮಾಂತ್ರಿಕ ಡೋಲು (Samanastic Drum) ಎನ್ನುವ ಅರಿವಿನ ನಕಾಶೆ ಇಲ್ಲಿ ಮಹತ್ವ ಪಡೆಯುತ್ತದೆ. ಈ ಡೋಲು ಸೂರ್ಯ ಕೇಂದ್ರಿತ. ಇದರ ಆಕಾಶಗೋಳ ಕಗ್ಗತ್ತಲೆಯ ಉತ್ತರ ಧ್ರುವ ಆವರಿಸಲ್ಪಟ್ಟ ಹಂದಿ ಮತ್ತು ಬೇಟೆಗಾರನ ಅಕೃತಿಯನ್ನು ಹೊಂದಿದೆ. Rene Gothami (1987) monastic life on mount Athod A refliction on mythology and cosmatic ordu ಎನ್ನುವ ಗ್ರಂಥದಲ್ಲಿ ಇಂತಹ ಅನೇಕ ಸಂಗತಿಗಳು ಚರ್ಚೆಗೊಂಡಿವೆ.

ಭಾರತ ಅಥವಾ ಎಲ್ಲೇ ಆಗಲಿ ಜನಪದ ಮಹಾಕಾವ್ಯದ ವೀರತನ ಎನ್ನುವುದು ಮಾನವ ಮತ್ತು ಅತಿಮಾನವ ನೆಲೆಗಳನ್ನು ಸ್ಪರ್ಶಿಸುತ್ತದೆ. ಹಾಗೂ ಈ ನೆಲೆಗಳ ನಡುವೆ ಒಂದು ಏರಿಕೆಯ ಹಂತವಿರುತ್ತದೆ (Start Black Burn and others, 1989). Back Brenda (1982) ಅವರ ಪ್ರಕಾರ ಜನಪದ ಮಹಾಕಾವ್ಯದ ವೀರರು ಯಾವಾಗಲೂ ತಮ್ಮ ಮರಣಾನಂತರ ದೈವತ್ವಕ್ಕೇರುತ್ತಾರೆ. ಆ ಮೂಲಕ ಮಾನವ ಮತ್ತು ದೇವ ಎನ್ನುವ ನಡುವಿನ ಎಲ್ಲೆಯನ್ನು ಹಾದು ಹೋಗುತ್ತದೆ. ಮತ್ತಿತರ Stuart ವಿದ್ವಾಂಸರು ಕೊಡುವ ಅಭಿಪ್ರಾಯದಂತೆ ಇಲ್ಲಿ ಪ್ರಕಟವಾಗುವ ಕಲಿತನದ ರೀತಿಗೂ ಅದರ ಸಾಮಾಜಿಕ ಮತ್ತು ಪ್ರದರ್ಶನ ಸಂದರ್ಭಗಳಿಗೂ ಪರಸ್ಪರ ಸಂಬಂಧ ಕಂಡು ಬರುವುದರಿಂದ ಭಾರತೀಯ ಜನಪದ ಮಹಾಕಾವ್ಯಗಳ ವೈವಿಧ್ಯವು ಮಹತ್ವದ್ದಾಗಿದೆ. ಜನಪದ ಮಹಾಕಾವ್ಯಗಳಿಗೆ ಬಿಂದು ಚಾರಿತ್ರಿಕತೆಯೂ ಇದೆ. ತಮ್ಮ ಮಾನಸಿಕ ಪಠ್ಯಗಳಾಗಿ Mental Text ಕಲಾವಿದರು ತಲೆಮಾರುಗಳಿಂದ ಇವನ್ನು ಹೀಗೆ ಉಳಿಸಿಕೊಂಡು ಬಂದಿರುವುದಕ್ಕೂ ಮಹತ್ವವಿದೆ. ದಕ್ಷಿಣ

ಭಾರತದ ಜನಪದ ಕಾವ್ಯಗಳು ರೂಪಗೊಂಡ ಕಾಲಘಟ್ಟವನ್ನು ಪರಿಶೀಲಿಸಿದರೆ ಅವೆಲ್ಲ ಹೆಚ್ಚು ಕಡಿಮೆ ೧೫ನೆಯ ಮತ್ತು ೧೬ನೆಯ ಶತಮಾನಗಳ ವೀರಪುರುಷರ, ಪವಾಡಪುರುಷರ ಅಥವಾ ಅವತಾರ ಪುರುಷರ ಚರಿತ್ರೆಯಾಗಿರುವುದು ಕಂಡುಬರುತ್ತದೆ. ಮಲೆಯ ಮಾದೇಶ್ವರವಾಗಲಿ ಮಂಟೇಸ್ವಾಮಿಯಾಗಲಿ, ಕೋಟಿಯನ್ನಯವಾಗಲಿ ಅಥವಾ ತಮಿಳ್ನಾಡಿನ ಅಣ್ಣನ್ಮಾರ್ ಕಾವ್ಯವಾಗಲಿ ಇವೆಲ್ಲ ಒಂದು ಕಾಲದಲ್ಲಿ ಆಗಿರುವ ಸಾಮಾಜಿಕ ಬದಲಾವಣೆಯನ್ನು, ಸಂಘರ್ಷದ ಮೂಲಕ ಆಗಿರುವ ಪರಿವರ್ತನೆಯನ್ನು ಅಥವಾ ಅಂತಹ ಪ್ರಯತ್ನಗಳನ್ನು ನಿರೂಪಿಸುತ್ತವೆ. ಕೋಟಿಚೆನ್ನಯ, ಸಿರಿಮಹಾಕಾವ್ಯಗಳನ್ನೇ ಗಮನಿಸಿದರೂ ಅವು ಆಯಾ ಕಾಲಘಟ್ಟಗಳಲ್ಲಿ ನಡೆದ ಪ್ರತಿಭಟನೆ ಮತ್ತು ಹೋರಾಟಗಳ ಕಾವ್ಯಗಳಾಗಿವೆ. ಸಮಾಜದಲ್ಲಿನ ಮೇಲುವರ್ಗದ ಅಥವಾ ಶ್ರೇಣೀಕೃತ ವ್ಯವಸ್ಥೆಯ ವಿರುದ್ಧ ಕೋಟಿಚೆನ್ನಯರಂತಹ ಕೆಳವರ್ಗದ ವೀರರು ಬಂಡಾಯ ಎದ್ದರೆ, ಪುರುಷ ಸಮಾಜ ವ್ಯವಸ್ಥೆಯ ವಿರುದ್ಧ ಹೆಣ್ಣೊಬ್ಬಳ ಪ್ರತಿಭಟನೆ ಸಿರಿಯಲ್ಲಿದೆ. ಎಂದರೆ ಮೇಲುವರ್ಗದ ವಿರುದ್ಧ ಕೋಟಿಚೆನ್ನಯರು ಬಂಡಾಯವೆದ್ದುದು ಮತ್ತು ಶೂದ್ರಪ್ರಜ್ಞೆಯನ್ನು ಜಾಗೃತಗೊಳಿಸುವ ಒಂದು ಹೋರಾಟ ಅದು. ಸಿರಿ ಹಾಗಲ್ಲದೆ ತನ್ನ ಸಮಾಜದ ಒಳಗಡೆಯೇ ಇದ್ದು ಅಲ್ಲಿನ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುವ ಧೈರ್ಯಮಾಡಿದವಳು. ಮತ್ತೆ ಈ ಎಲ್ಲ ವೀರರು ವ್ಯವಸ್ಥೆಯಲ್ಲಿ ಇದ್ದುಕೊಂಡು ವಿರೋಧಿಸಲು ಆಗದಾಗ ಹತ್ತು ದೈವತ್ವಕ್ಕೇರುವ ಮೂಲಕ ಶಕ್ತಿಪಡೆದುಕೊಂಡವರು. ಕೋಟಿ ಚೆನ್ನಯದಂತಹ ಕಾವ್ಯಗಳ ಮೂಲ ಅಶಯವೇ ಪ್ರತಿಭಟನೆ ಮತ್ತು ಹೋರಾಟ.

ಅಭಿವೃದ್ಧಿಶೀಲ ದೇಶಗಳಲ್ಲಿ ಮೌಖಿಕಕಾವ್ಯಗಳ ಪ್ರಕಟಣೆ, ಅಧ್ಯಯನ ಕೆಲಸಗಳು ಸಾಕಷ್ಟು ವ್ಯವಸ್ಥಿವಾದ ಕ್ಷೇತ್ರಕಾರ್ಯ, ಸಂಶೋಧನೆಗಳನ್ನು ಅನುಸರಿಸಿ ಸಾಮಾಜಿಕ ಸಂದರ್ಭಗಳ ಪ್ರದರ್ಶನಾತ್ಮಕ ಹಿನ್ನೆಲೆಗಳಲ್ಲಿ ನಡೆಯುತ್ತಿವೆ. ಹೀಗೆ ಅಧ್ಯಯನಗಳನ್ನು ಕೈಗೊಳ್ಳುವಾಗ ಅದಕ್ಕೊಂದು ತಾತ್ವಿಕ ನೆಲೆಗಟ್ಟು ಇರುತ್ತದೆ. ಶಿಸ್ತು ಇರುತ್ತದೆ. ಕೇವಲ ಸಾಹಿತ್ಯಿಕವಾಗಿ ಸಂಗ್ರಹ ಕಾರ್ಯದಲ್ಲೇ ತೃಪ್ತಿಕಾಣದೆ ಖಚಿತ ಅಧ್ಯಯನ ಗ್ರಹಿಕೆಗಳ ನಿಲುವಿನ ವಿಶ್ಲೇಷಣೆ ಮತ್ತು ವೈಜ್ಞಾನಿಕತೆ ಇವುಗಳ ಕಡೆಗೆ ಒತ್ತು ಕೊಡುತ್ತಿರುವುದನ್ನು ಕಾಣಬಹುದು.

ವ್ಯವಸ್ಥೆಯ ಸಾಧ್ಯತೆಯ ಮೂಲಕ ಅಂತಹ ಒಂದು ಪರಂಪರೆಯನ್ನು ಜಾನಪದ ಅಧ್ಯಯನದಲ್ಲಿ ಹೊಸ ಒಲವುಗಳನ್ನು ಇರಿಸಿಕೊಂಡ ಉಡುಪಿಯ ಪ್ರಾದೇಶಿಕ ಜಾನಪದ ರಂಗ ಕಲೆಗಳಂತಹ ಸಂಶೋಧನ ಕೇಂದ್ರಗಳೂ, ಅಧ್ಯಯನ ಪೀಠಗಳೂ ಬೆಳೆಸುತ್ತಿರುವುದು ಮತ್ತು ಆ ಮೂಲಕ ತಮ್ಮ ಉತ್ಪನ್ನವಾಗಿ ಜಾನಪದ ವಿದ್ವಾಂಸರ ಸಿರಿಸಂಪದ ಬಳಗದ ಒಂದು ಮಾದರಿಯನ್ನು ನಿರೀಕ್ಷಿಸುತ್ತಿರುವುದು ಜಾನಪದ ಅಧ್ಯಯನ ಕ್ಷೇತ್ರದ ಆಶಾದಾಯಕ ಮುನ್ನೋಟವಾಗಿದೆ.



# ಕರ್ನಾಟಕ ಮತ್ತು ಆಂಧ್ರ ಜಾನಪದ

ಡಾ. ಜಿ.ಎಸ್. ಮೋಹನ್

ದ್ರಾವಿಡ ಭಾಷೆಗಳಲ್ಲಿ ಪ್ರಧಾನವಾದವು ತೆಲುಗು ಮತ್ತು ಕನ್ನಡ ಈ ಎರಡು ಭಾಷೆಗಳಿಗೂ ತಮ್ಮವೇ ಆದ ಲಿಪಿ, ಸಾಹಿತ್ಯಗಳಿವೆ. ಇವುಗಳು ಪರಸ್ಪರ ಪ್ರಭಾವಗಳನ್ನು ಒಳಗೊಂಡಿವೆ. ಸಂಸ್ಕೃತಿ, ಸಾಹಿತ್ಯಗಳ ಎರಡರಲ್ಲಿಯೂ ಕೊಡುಕೊಳ್ಳುವಿಕೆಗಳು ನಡೆದಿವೆ.

ಇಂದಿನ ಗೋಷ್ಠಿಯಲ್ಲಿ ನಾನು ತೆಲುಗು ಮತ್ತು ಕನ್ನಡ ಜನಪದಗಳಲ್ಲಿ ನಡೆದ ಅಧ್ಯಯನದೊಂದಿಗೆ, ಈ ಎರಡೂ ಜಾನಪದಗಳಲ್ಲಿರುವ ಸರೂಪತೆಯನ್ನು ಉಲ್ಲೇಖಿಸುತ್ತೇನೆ.

ತೆಲುಗು ಭಾಷೆಯಲ್ಲಿ ಅತ್ಯಂತ ಶ್ರೀಮಂತವಾದ ಜಾನಪದ ಪರಂಪರೆಯಿದೆ. ೧೧ನೆಯ ಶತಮಾನದ ನನ್ನೆಚೋಡ ಮಹಾಕವಿ ತನ್ನ ''ಕುಮಾರಸಂಭವಮು'' ಎಂಬ ಕೃತಿಯಲ್ಲಿ ಲಾಲಿಪದ್ಯಗಳು, ಆರತಿ ಹಾಡುಗಳು, ಕುಟ್ಟುವ-ಬೀಸುವ ಪದಗಳು, ಭಕ್ತಿಗೀತೆಗಳನ್ನು ಉಲ್ಲೇಖಿಸಿದ್ದಾನೆ. ಅಲ್ಲದೆ ತನ್ನ ಕಾಲದಲ್ಲಿ ಪ್ರಚಾರದಲ್ಲಿದ್ದಂತಹ ''ಗೌಡುಗೀತಮುಲು'' ಎಂಬ ಸಂಸ್ಕಾರ ವಿಧಿಗೆ ಸಂಬಂಧಪಟ್ಟ ಜನಪದಗೀತೆಗಳನ್ನು ಉಲ್ಲೇಖಿಸಿದ್ದಾನೆ. ೧೩ನೆಯ ಶತಮಾನದ ಪಾಲಕುರಿಕಿ ಸೋಮನಾಥನು ಶೈವಭಕ್ತರು ಹಾಡಿದ ಜನಪ್ರಿಯಗೀತೆಗಳ ಆಧಾರದ ಮೇಲೆ ತಾನು ''ಬಸವಪುರಾಣಮು'' ಎಂಬ ಗ್ರಂಥವನ್ನು ರಚಿಸಿರುವಾದಗಿ ಹೇಳಿಕೊಂಡಿದ್ದಾನೆ. ಇದು ತೆಲುಗಿನಿಂದ ಇತರ ಭಾಷೆಗಳಿಗೆ ಅನುವಾದಿಸಲ್ಪಟ್ಟ ಮೊಟ್ಟ ಮೊದಲನೆಯ ತೆಲುಗು ಕೃತಿ ಕನ್ನಡದಲ್ಲಿ ಭೀಮಕವಿ ಬಸವಪುರಾಣ ಗ್ರಂಥವನ್ನು ೧೩೬೯ರಲ್ಲಿ ರಚಿಸಿರುವನು. ಪಾಲ್ಕುರಿಕೆ ಸೋಮನಾಥನು ರಚಿಸಿದ ಇನ್ನೊಂದು ಕೃತಿ ಪಂಡಿತಾರಾಧ್ಯ ಚರಿತ್ರಮು. ಇದರಲ್ಲಿಯೂ ಅಂದಿನಕಾಲದ ಅನೇಕ ಜನಪದ ಗೀತೆಗಳು ಮತ್ತು ಹಲವಾರು ಬಗೆಯ ಜನಪದ ಕಲಾ ಪ್ರಕಾರಗಳೂ ಉಲ್ಲೇಖಿಸಲ್ಪಟ್ಟಿವೆ. ಪಂಡಿತಾರಾಧ್ಯ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ನೀಲ ಕಂಠಾಚಾರ್ಯನು 'ಆರಾಧ್ಯಚರಿತ್ರೆ'ಯನ್ನು ರಚಿಸಿದ್ದಾನೆ. ಹೀಗೆ ಹಲವಾರು ಪ್ರಾಚೀನ

ತೆಲುಗು ಕನ್ನಡ ಕಾವ್ಯಗಳಲ್ಲಿ ಜಾನಪದವು ಉಲ್ಲೇಖಿಸಲ್ಪಟ್ಟಿರುವುದನ್ನು ಗಮನಿಸಬಹುದಾಗಿದೆ.

ಆಂಧ್ರ, ಕರ್ನಾಟಕ ಜಾನಪದ ಜಗತ್ತು ವೈವಿಧ್ಯಪೂರ್ಣವೂ ವಿಸ್ತಾರವು ಆದುದು ಎಂಬ ತಿಳಿವಳಿಕೆ ನಮಗೆ ಮೂಡಿದ್ದು ಕಳೆದ ೧೯ನೆಯ ಶತಮಾನದಲ್ಲಿ. ಇದು ಕೂಡ ಸಾಧ್ಯವಾದದ್ದು ಪಾಶ್ಚಾತ್ಯ ವಿದ್ವಾಂಸರು ಈ ಪ್ರದೇಶಗಳ ಜಾನಪದ ಜಗತ್ತಿನ ಕಡೆಗೆ ಗಂಭೀರ ವಿಶ್ಲೇಷಣೆಯ ಹೊಸಬೆಳಕು ಬೀರಿದ ನಂತರವೇ. ಕಳೆದ ಶತಮಾನದ ಆರಂಭದಿಂದಲೂ ಅನೇಕ ಪಾಶ್ಚಾತ್ಯ ವಿದ್ವಾಂಸರು ಭಾರತಕ್ಕೆ ಬಂದು ಬೇರೆ ಬೇರೆ ಉದ್ದೇಶಗಳಿಗಾಗಿ ನಾನಾ ಬಗೆಯ ಸಂಶೋಧನಾ ಕಾರ್ಯ ಕೈಗೊಂಡಂತೆ ಜಾನಪದ ಸಂಗ್ರಹಣೆಗೂ ಕೈ ಹಾಕಿದರು. ತೆಲುಗಿನಲ್ಲಿ ಕರ್ನಲ್‌ಕೋಲಿನ್ ಮೆಕಂಜಿ (೧೭೫೪-೧೮೨೧), ಸಿ.ಪಿ. ಬ್ರೌನ್ (೧೭೯೮-೧೮೮೪), ಜೆ.ಎ. ಬೋಯಲ್ (೧೮೭೪) ಮತ್ತು ಕ್ಯಾಪ್ಟನ್ ಎಂ. ಡಬ್ಲ್ಯೂ, ಕಾರ್ ಮುಂತಾದ ಮಹನೀಯರನ್ನು ಹೆಸರಿಸಬಹುದು. ಕನ್ನಡದಲ್ಲಿ ಜಾನ್‌ಲೇಡನ್, ಅಬ್ಬೆದುಬಾಯ್, ಚಾರ್ಲ್ಸ್ ಇ. ಗೋವರ್, ಮೇರಿಫ್ರೀರೆ, ಫ್ಲೀಟ್ ಮತ್ತು ಕೆಟಲ್ ಪ್ರಮುಖರು. ಹೀಗೆ ಹತ್ತೊಂಬತ್ತನೆಯ ಶತಮಾನದಲ್ಲಿ ಜನಪದ ಸಾಹಿತ್ಯ ಸಂಗ್ರಹಕ್ಕೆ ಪಾಶ್ಚಾತ್ಯ ವಿದ್ವಾಂಸರು ಪ್ರೇರಣೆ ಒದಗಿಸಿದ್ದು ಒಂದು ಮಹತ್ವದ ಸಂಗತಿ. ಆಂಗ್ಲಪಂಡಿತರ ಪ್ರಭಾವದಿಂದ ಆಂಧ್ರ ಕರ್ನಾಟಕಗಳಲ್ಲಿ ಜನಪದ ಸಾಹಿತ್ಯ ಸೌರಭ ಹಬ್ಬಿ ಹರಡಿತು. ಈ ಎರಡು ರಾಜ್ಯಗಳಲ್ಲಿಯೂ ಜಾನಪದ ಅಧ್ಯಯನ ಆರಂಭವಾದುದು ಸಾಹಿತ್ಯಕ ದೃಷ್ಟಿಕೋನದಿಂದಲೇ ಎಂದು ಗಮನಿಸಬಹುದು. ಕನ್ನಡದಲ್ಲಿ ನಡಿಕೇರಿಯಂಡ ಚೆಣ್ಣಪ್ಪ, ಹಲಸಂಗಿಸೋದರರು, ಸಿಂಪಿಲಿಂಗಣ್ಣ, ಮಾಸ್ತಿ, ದೇವುಡು ನರಸಿಂಹಶಾಸ್ತ್ರಿ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ ಮುಂತಾದ ಮಹನೀಯರು ಸಂಗ್ರಹ ಕಾರ್ಯವನ್ನು ಮುಂದುವರೆಸಿದರೆ, ತೆಲುಗಿನಲ್ಲಿ ಪಂಚಾಗ್ನುಲ ಆದಿನಾರಾಯಣ ಶಾಸ್ತ್ರಿ, ಎ. ಉಮಾಕಾಂತ ವಿದ್ಯಾಶೇಖರ, ವೇಟೂರಿ ಪ್ರಭಾಕರ ಶಾಸ್ತ್ರಿ, ಮಲ್ಲಂಪಲ್ಲಿ ಸೋಮಶೇಖರಶರ್ಮ, ಡಾ. ಚೆಲುಕೂರಿ ನಾರಾಯಣರಾವ್ ಮುಂತಾದ ವಿದ್ವಾಂಸರು ಅನೇಕ ಜನಪದ ಸಾಹಿತಿಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದರು.

ತೆಲುಗು ಮತ್ತು ಕನ್ನಡ ಜ್ಞಾನಪದ ಅಧ್ಯಯನಗಳು ಅತಿನಿಧಾನವಾಗಿ ವಿಶ್ವ ವಿದ್ಯಾಲಯಗಳನ್ನು ಪ್ರವೇಶಿಸಿವೆ. ಈ ದಿಶೆಯಲ್ಲಿ ತೆಲುಗು ಜಾನಪದ ಸಾಹಿತ್ಯದಲ್ಲಿ ಮೊದಲನೆಯ ಪಿಹೆಚ್.ಡಿ ಮಹಾಪ್ರಬಂಧ ''ತೆಲುಗು ಜಾನಪದ ಗೇಯ ಸಾಹಿತ್ಯಮು'' ಇದು ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಡಾ. ಬಿರುದುರಾದ ರಾಮರಾಜು ಅವರಿಗೆ ೧೯೫೬ರಲ್ಲಿ ಪಿಹೆಚ್.ಡಿ ಪದವಿಯನ್ನು ದೊರಕಿಸಿಕೊಟ್ಟಿತು. ಅಂತೆಯೇ ಕನ್ನಡದಲ್ಲಿ ಮೊದಲನೆಯ ಪಿಹೆಚ್.ಡಿ. ಪ್ರಬಂಧ ಬಿ.ಎಸ್. ಗದ್ದಗಿಮಠ ಅವರ ''ಕನ್ನಡ ಜಾನಪದ ಗೀತೆಗಳು'' ಈ ಗ್ರಂಥವು ೧೯೬೩ರಲ್ಲಿ ಪ್ರಕಟವಾಗಿದೆ.



ಕರ್ನಾಟಕದಲ್ಲಿ ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಜನಪದ ಸಾಹಿತ್ಯ'ದ ಪತ್ರಿಕೆಯೊಂದನ್ನು ಕನ್ನಡ ಎಂ.ಎ. ತರಗತಿಗೆ ಐಚ್ಛಿಕ ವಿಷಯವಾಗಿ ಸೇರಿಸಿ ಕ್ರಮಕ್ರಮವಾಗಿ ಅದರ ಸ್ವರೂಪವನ್ನು ಬದಲಿಸಿ ''ಜಾನಪದ'' ಸಮಗ್ರ ಅಧ್ಯಯನಕ್ಕೆ ದಾರಿಮಾಡಿಕೊಟ್ಟಂತೆ ಆಂಧ್ರ ದೇಶದಲ್ಲಿಯೂ ೧೯೭೧ರಲ್ಲಿ ಉಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಮೊದಲಬಾರಿ ತೆಲುಗು ಎಂ.ಎ. ತರಗತಿಗೆ 'ಜನಪಸಾಹಿತ್ಯ'ದ ಪತ್ರಿಕೆಯನ್ನು ಐಚ್ಛಿಕ ವಿಷಯವಾಗಿ ಸೇರಿಸಿ ತೆಲುಗು ಜನಪದ ಸಮಗ್ರ ಅಧ್ಯಯನಕ್ಕೆ ದಾರಿಮಾಡಿಕೊಟ್ಟಿದೆ. ಈ ಎರಡು ರಾಜ್ಯಗಳಲ್ಲಿಯೂ ಎಲ್ಲ ವಿಶ್ವವಿದ್ಯಾಲಯಗಳು, ಆಯಾ ವಿಭಾಗಗಳು ಜಾನಪದವನ್ನು ಅಧ್ಯಯನ ಮಾಡುತ್ತಿರುವುದನ್ನು ಕಾಣಬಹುದು. ಮೈಸೂರು, ಕರ್ನಾಟಕ ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳು ಪ್ರತ್ಯೇಕವಾಗಿ ಜನಪದ ಸಾಹಿತ್ಯದಲ್ಲಿ ಎಂ.ಎ. ಶಿಕ್ಷಣವನ್ನು ಆರಂಬಿಸಿದಂತೆ, ಆಂಧ್ರದಲ್ಲಿ ಇನ್ನೂ ಆರಂಭಿಸದೇ ಇರುವುದು ಒಂದು ಶೋಚನೀಯವಾದ ಸಂಗತಿಯಾಗಿದೆ.

Richard M.Dorson ವರ್ಗೀಕರಿಸಿದಂತೆ ತೆಲುಗು ಮತ್ತು ಕನ್ನಡ ಜಾನಪದವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ ೧. ಮೌಖಿಕ ಜಾನಪದ ೨. ಸಾಂಘಿಕ ಜಾನಪದ ಆಚಾರ (Social folk Arts) ೩. ವಸ್ತು ಸಂಸ್ಕೃತಿ ೪. ಜನಪದ ಪ್ರದರ್ಶನಾತ್ಮಕ ಕಲೆಗಳು (Performing folk songs) ಈ ಜಾನಪದ ಪ್ರಕಾರಗಳಲ್ಲಿ ತೆಲುಗು ಮತ್ತು ಕನ್ನಡ ಜಾನಪದ ಅಧ್ಯಯನವು ನಡೆದಿರುವ ಬಗೆಯನ್ನು ಹೇಳಬಯಸುತ್ತೇನೆ. ತೆಲುಗು ಮತ್ತು ಕನ್ನಡ ಜಾನಪದಗಳಲ್ಲಿ ಹಲವಾರು ಸಾರೂಪ್ಯಗಳು ಕಂಡುಬರುತ್ತವೆ. ಅವುಗಳ ಪಕ್ಷಿನೋಟವನ್ನು ನೋಡೋಣ.

ಮೌಖಿಕ ಜಾನಪದದಲ್ಲಿ ಮುಖ್ಯವಾದ ಅಂಗಗಳು ಜನಪದ ಗೀತೆಗಳು ಮತ್ತು ಜನಪದ ಕಥನಗೀತೆಗಳು ತೆಲುಗು ಜನಪದಗೀತೆಗಳು ಪ್ರಧಾನವಾಗಿ ಕ್ರಿ.ಶ. ಚತುರಸ್ರ, ಮಿಶ್ರಗತಿಗಳಲ್ಲಿ ನಡೆದರೆ ಕನ್ನಡ ಜನಪದಗೀತೆಗಳು ತ್ರಿಪದಿಗಳಲ್ಲಿ ನಡೆಯುತ್ತವೆ. ಜನಪದ ಗೀತೆಗಳಲ್ಲಿ ಮಕ್ಕಳ ಹಾಡುಗಳಿಗೆ ವಿಶಿಷ್ಟಸ್ಥಾನವಿದೆ. ಕೆಲವು ತೆಲುಗು ಮತ್ತು ಕನ್ನಡ ಮಕ್ಕಳ ಹಾಡುಗಳನ್ನು ಗಮನಿಸಿ.

ತೆ. 'ಏನು ಗೊಚ್ಚೆಂದೇಮಗೂ-ಏವೂರೊಚ್ಚೆಂದೇನುಗೂ
ಮಾವೂರೊಚ್ಚೆಂದೇನುಗೂ-ಮಂಚಿನೀಳ್ಳು ತಾಗಿಂದೇನುಗೂ
ಉಪ್ಪಾಡೊಚ್ಚೆಂದೇನುಗೂ-ಉಪ್ಪನೀಳ್ಳು ತಾಗಿಂದೇನುಗೂ'

ಕ. 'ಆನಿಬಂತಾನೆ-ಯಾವೂರಾನೆ
ವಿಜಯನಗರದ ಆನೆ-ಇಲ್ಲಿಗೇಕೆ ಬಂತು
ಹಾದೀ ತಪ್ಪಿ ಬಂತೂ..............'

ಅಂತೆಯೇ ತೆಲುಗಿನಲ್ಲಿ ಪ್ರಚಾರದಲ್ಲಿರುವ

'ಸೇದೇ ಬಾಯಿ ಪೆಂಗನ್ನ ಬಾಯಿ
ಮಾತಾತ ತೊಗಿಜ್ಜಿವ ಮಂಚಿನೀಳ್ಳಬಾಯಿ'

ಎಂಬ ಹಾಡು ಕನ್ನಡದಲ್ಲಿ

ಸೇದುಂ ಬಾವಿ, ಪರಕಾರ ಬಾವಿ
ನಮ್ಮಪ್ಪ ಕಟ್ಟಿಸ್ಯಾನ ಮುತ್ತಿನ ಬಾವಿ' ಎಂದು

ಪ್ರಚಾರದಲ್ಲಿದೆ. ಮಕ್ಕಳ ಹಾಡುಗಳ ಬಗ್ಗೆ ತೆಲುಗಿನಲ್ಲಿ ಮೂರು ಪಿಹೆಚ್.ಡಿ., ಪ್ರಬಂಧಗಳು ಹೊರಬಂದಿವೆ. ಹಲವಾರು ಎಂ.ಫಿಲ್ ಪ್ರಬಂಧಗಳು ಸಹ ಹೊರಬಂದಿವೆ. ಅನೇಕ ವಿದ್ವಾಂಸರು ಮಕ್ಕಳ ಹಾಡುಗಳನ್ನು ಸ್ವತಂತ್ರವಾಗಿ ಶೇಖರಿಸಿರುವುದು ಉಂಟು.

ತೆಲಗು ಹಾಸ್ಯಗೀತೆಗಳಲ್ಲಿ ಒಂದಾದ 'ಒಕರೀಕಿ ಚೆಯಿನಿಚ್ಚೆ-ಒಕರೀಕಿ ಕಾಲುನಿಚ್ಚೆ' ಎಂಬ ಹಾಡು ಕನ್ನಡದಲ್ಲಿ 'ಒಬ್ಬನಿಗೆ ಕಾಲ್ಕೊಟ್ಟೆ-ಒಬ್ಬನಿಗೆ ಕೈಕೊಟ್ಟೆ' ಎಂದು ಪ್ರಚಾರದಲ್ಲಿದೆ.

'ಜೆಳ್ಳೊಳಳಹಾಯಿಾ ಹಾಯಮ್ಮ ಹಾಯಿಾ ಹೌಲಾಯಿಾ
ಅತ್ತಾರೆ ಅಳಲಮ್ಮ ಅಳುವ ಕೂಸಿರಲಮ್ಮಾ
ಕೆಟ್ಟಾರೆ ಕೆಡಲಿ ಮನೆಕೆಲಸಾ
ಮನೆ ಕೆಲಸಾ ಕೆಟ್ಟಾರೂ ಮಕ್ಕಳಿರಲಮ್ಮ ಮನೆ ತುಂಬಾ
ಚೆಳ್ಳೊಳಲಹಾಯಿಾ'.

'ಜೋ ಅಚ್ಯುತಾನಂದ ಜೋಜೋ ಮುಕುಂದಾ
ಲಾಲಿ ಪರಮಾನಂದ ರಾಮ ಗೋವಿಂದಾ ॥ಲಾಲೀ॥'

ಇಂತಹ ಲಾಲಿ ಹಾಡುಗಳು ತೆಲುಗಿನಲ್ಲಿಯೂ ಕಂಡುಬರುತ್ತವೆ ನೋಡಿ.

'ಏಡವಕು ಏಡವಕು ಎರ್ರಿನಾಂತಡ್ರೀ
ಏಡಿಸ್ತೇ ನೀಕಳ್ಳು ನೀಲಾಲುಗಾರು
ನೀಲಾಲು ಕಾರಿತೇ ನೇ ಚೂಡಲೇನು
ಪಾಲಯಿನ ಕಾರವೇ ಬಂಗಾರುಕಳ್ಳಾ' ॥ ಚಿಚ್ಚೊಳಲಹಾಯಿಾ ॥

'ಹಾಯಿ ಹಾಯಿ ರಾವೇ ಆಪದಲಕಾಯಿಾ
ಚೆನ್ನಿವಾಂಡ್ಲನು ರಾಯಿ ಶ್ರೀರಂಗ ಚೆಚ್ಚಳಲಹಾಯಿ ॥

ತೆಲುಗ ಕನ್ನಡ ಜನಪದಗೀತೆಗಳಲ್ಲಿ ಹೆಂಗಸರ ಹಾಡುಗಳಿಗೆ, ಅದರಲ್ಲಿಮೂ ಮದುವೆಯ ಹಾಡುಗಳಿಗೆ ಹೆಚ್ಚು ಪ್ರಾಧಾನ್ಯವು ಕಂಡುಬರುತ್ತ:ದೆ. ತೆಲುಗು ಕನ್ನಡಿಗರ ಆಚಾರ ವಿಚಾರಗಳು, ಸಂಪ್ರದಾಯಗಳು ಮದುವೆಯ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕದ ಗಡಿ ಪ್ರದೇಶಗಳಲ್ಲಿ ತೆಲುಗಿನವರ ಆಚಾರವಿಚಾರಗಳು, ಆಂಧ್ರದ ಗಡಿ ಪ್ರದಶಗಳಲ್ಲಿ ಕನ್ನಡಿಗರ ಆಚಾರ ವಿಚಾರಗಳು ಪ್ರಭಾವವನ್ನು ಬೀರುತ್ತವೆ. ತೆಲುಗಿನಲ್ಲಿ ಹೆಂಗಸರ ಹಾಡುಗಳ ಬಗ್ಗೆ ಮೂರು ಪಿಹೆಚ್.ಡಿ ಮಹಾಪ್ರಬಂಧಗಳು ಹೊರಬಂದಿವೆ.



ತೆಲುಗಿನಲ್ಲಿ ಮೈನೆರೆಯುವ ಹಾಡುಗಳಿವೆ. ಹೆಣ್ಣು ಬೆಳದು ಪ್ರಾಯಕ್ಕೆ ಬರುತ್ತಲೇ, ಋತುಮತಿಯಾದ ಸಂದರ್ಭದಲ್ಲಿ ಹೇಳುವುದನ್ನು ತೆಲುಗಿನಲ್ಲಿ 'ಸಮರ್ತ ಪಾಟಲು' ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿಯೂ ಇಂತಹ ಹಾಡುಗಳನ್ನು ಸೋಬಾನ ಹಾಡು ಅಥವಾ ಮೈನೆರದ ಹಾಡುಗಳೆಂದು ಕರೆಯುವುದುಂಟು. ಋತುಮತಿಯಾದ ಬಾಲೆಗೆ ಸಂಬಂಧಪಟ್ಟ ಶುಭಾಶುಭವಾರಗಳನ್ನು ತಿಳಿಸುವ ಒಂದು ತೆಲುಗಿನ ಮೈನೆರಿಯುವ ಹಾಡನ್ನು ಕೇಳಿ:

'ಅಲ್ಲೋನೇರೇಡಲ್ಲೋ ವೆಲದಿರುಕ್ಷ್ಮಿಣಿ ಸಮರ್ತ ವೇಡೂಕಲಾಯ
ಅಲ್ಲೋನೇರೇಡಲ್ಲೋ ಆದಿವಾರಮುನಾಡು ಅತಿರೋಗಿಮೌನು
ಅಲ್ಲೋನೇರೇಡಲ್ಲೋ ಸೋಮವಾರಮುನಾಡು ಶುಭತಿ ಪತಿವ್ರತ
ಅಲ್ಲೋನೇರೇಡಲ್ಲೋ ಮಂಗಳವಾರಮುನಾಡು ಮತಿಮಂತುರಾಲು
ಅಲ್ಲೋನೇರೇಡಲ್ಲೋ ಬುಧವಾರಮುನಾಡು ಬುದ್ಧಮತಿಮೌನು
ಅಲ್ಲೋನೇರೇಡಲ್ಲೋ ಬೇಸ್ತವಾರಮುನಾಡು ಪುತ್ರವತಿಯಾಗುದು
ಅಲ್ಲೋನೇರೇಡಲ್ಲೋ ಶುಕ್ರವಾರಮುನಾಡು ಶುಭತಿ ಸಂಪದ ಕಲಿಗಿ ಮುಂಡು'
ಅಲ್ಲೋನೇರೇಡಲ್ಲೋ ಶನಿವಾರಮುನಾಡು ಸತಿಪೇದರಾಲು'

ಕೇರಳ ರಾಜ್ಯದಲ್ಲಿಯೂ, ಮುಜಾಫಿರ್ ಪ್ರಾಂತ್ಯದ ಹಿಂದೂ ಮುಸ್ಲಿಂರಲ್ಲಿಯೂ ಶುಭಾಶುಭವಾರಗಳನ್ನು ನೋಡುವುದುಂಟು. ಕರ್ನಾಟಕದಲ್ಲಿಯು ಮುಖ್ಯವಾಗಿ ತುಳು ಜನರಲ್ಲಿ ಇಂತಹ ನಂಬಿಕೆಯಿದೆಯೆಂದು ತಿಳಿಯುತ್ತದೆ.

ತೆಲುಗು ಕನ್ನಡ ಜನಪದ ಗೀತೆಗಳಲ್ಲಿ ಹಲವಾರು ಬಗೆಯ ಗೀತೆಗಳಿವೆ. ಡಾ.ಆರ್.ವಿ.ಎಸ್. ಸುಂದರಂರವರು ಮೊದಲನೆಯ ಬಾರಿಗೆ ತೆಲುಗು ಕನ್ನಡ ಜನಪದಗೀತೆಗಳ ಬಗೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತೌಲನಿಕ ಅಧ್ಯಯನ ನಡೆಸಿ ೧೯೭೩ರಲ್ಲಿ ಪಿಹೆಚ್.ಡಿ ಪದವಿ ಪಡೆದಿದ್ದಾರೆ.

ತೆಲುಗು ಕನ್ನಡ ಕಥನ ಗೀತೆಗಳ ಬಗೆಯು ತೆಲುಗು ಕನ್ನಡಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ. ತೆಲುಗು ಕನ್ನಡಗಳಲ್ಲಿ ಕುಮಾರರಾಮುನಿ ಕಥೆ, ಕರಿರಾಯ ಬಂಟು ಲಾವಣಿಗಳು ಪ್ರಚಾರದಲ್ಲಿರುವುದನ್ನೂ ನೋಡುತ್ತೇವೆ. ಬಾಲನಾಗಮ್ಮ, ಸಾರಂಗಧರ ಚರಿತ್ರೆ ಮುಂತಾದ ಕಥನಗೀತೆಗಳು ಈ ಎರಡು ಸಾಹಿತ್ಯಗಳಲ್ಲಿಯೂ ಪ್ರಚಾರದಲ್ಲಿವೆ.

ಹೆಂಗಸರ ಕಥನಗೀತೆಗಳಲ್ಲಿ ರಾಮಾಯಣ, ಭಾರತ, ಭಾಗವತಗಳಿಗೆ ಸಂಬಂಧಪಟ್ಟ ಕಥನಗೀತೆಗಳು-ಲಕ್ಷ್ಮಣ ನಕ್ಕ ಹಾಡು, ದತ್ತಾತ್ರೇಯನ ಹುಟ್ಟು, ಕೃಷ್ಣನ ಹುಟ್ಟು, ಗೋಪಿಮ್ ಜಲಕ್ರೀಡೆ, ಸೀತಾವನವಾಸ, ಪುತ್ರಕಾಮೇಷ್ಠಿ, ಗಂಗಾಗೌರಿ ಜಗಳ ಮುಂತಾದವುಗಳು ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿರುವುದು ಕಂಡುಬರುತ್ತದೆ. ಅನಂತಪುರ ಜಿಲ್ಲೆಯಲ್ಲಿ

ಋಷಿ ಪಂಚಮೀ ವ್ರತ, ಭೀಮನ ಅಮಾವಾಸ್ಯ ಮುಂತಾದ ವ್ರತ ಕಥೆಗಳನ್ನೂ ಕನ್ನಡದಲ್ಲಿಯೇ ಹಾಡುವುದು ಒಂದು ವಿಶೇಷದ ಸಂಗತಿ. ತೆಲುಗಿನಲ್ಲಿ ಇವುಗಳಿಗೆ ವ್ರತಕಥೆಗಳಿಲ್ಲ.

ಕನ್ನಡ ವೃತ್ತಿಗಾಯಕರಲ್ಲಿ ಹಲವಾರು ಮಂದಿ ತೆಲುಗು ಮಾತೃಭಾಷೆಯಾಗಿ ಪಡೆದಿರುವುದು ಕಂಡುಬರುತ್ತದೆ. ಉದಾಹರಣೆಗೆ ಹೆಳವರು (ಪಿಚ್ಚುಕುಂಟ್ಲು), ತೆಲುಗು ಬಣಜಿಗರು (ಬಲಿಜಲು) ದಾಸರು (ದಾಸರ್ಲು) ಮುಂತಾದ ಗಾಯಕರು ಇಂದಿಗೂ ಮನೆಯಲ್ಲಿ ತೆಲುಗು ಭಾಷೆಯನ್ನು ಮಾತನಾಡುತ್ತಿದ್ದಾರೆ.

ಎಲ್ಲಮ್ಮ ಸಂಪ್ರದಾಯ, ಮೈಲಾರದೇವ ಸಂಪ್ರದಾಯಗಳು ಸಹ ಆಂಧ್ರ ಕರ್ನಾಟಕ ರಾಜ್ಯಗಳಲ್ಲಿ ವಿಶಿಷ್ಟ ಸಂಪ್ರದಾಯಗಳಾಗಿ ಕಂಡುಬರುತ್ತವೆ.

ಜನಪದ ಗದ್ಯಕಥನಗಳಲ್ಲಿ ಪುರಾಣ, ಐತಿಹ್ಯ, ಜನಪದ ಕಥೆ ಎಂಬ ಮೂರು ಪ್ರಕಾರಗಳಿವೆ. ಎಲ್ಲಮ್ಮ, ಗಂಗಮ್ಮ ಮುಂತಾದ ಗ್ರಾಮದೇವತೆಗಳಿಗೆ ಸಂಬಂಧಪಟ್ಟ ಗದ್ಯರೂಪಗಳು, ಗೀತರೂಪಗಳು ತೆಲುಗು ಮತ್ತು ಕನ್ನಡ ಜಾನಪದಗಳಲ್ಲಿವೆ.

ಜನಪದ ಕಥೆಗಳು ತೆಲುಗು ಜನಪದ ಸಾಹಿತ್ಯದಲ್ಲಿ ಹಲವಾರು ಇದ್ದರೂ ಇದರ ಸಂಗ್ರಹಕಾರ್ಯ ಅಷ್ಟು ನಡೆದಿಲ್ಲ. ತೆಲುಗು ಜನಪದ ಕಥಾಸಂಗ್ರಹಗಳು ಎರಡು ಮಾತ್ರ ಹೊರಬಂದಿವೆ. ಕನ್ನಡದಲ್ಲಿ ಹಲವಾರು ಸಂಕಲನಗಳು ಬಂದಿರುವುದು ಹೆಮ್ಮೆಯ ವಿಷಯ. ತೆಲುಗಿನಲ್ಲಿ ಪಿಹೆಚ್.ಡಿ ಮಹಾಪ್ರಬಂಧಗಳು ನಾಲ್ಕು ಬಂದಿವೆ. ನನಗೆ ತಿಳಿದ ಮಟ್ಟಿಗೆ ಕನ್ನಡ ಜಾನಪದ ಕಥೆಗಳ ಬಗ್ಗೆ ಡಾ. ಸಂಧ್ಯಾರೆಡ್ಡಿ ಕೆ.ಆರ್. ಅವರದು ಮೊದಲನೆಯ ಪಿಹೆಚ್.ಡಿ ಮಹಾಪ್ರಬಂಧ. ತೆಲುಗಿನಲ್ಲಿ ಹೆಚ್ಚು ಪ್ರಚಾರದಲ್ಲಿರುವ ತೆನಾಲಿ ರಾಮಕೃಷ್ಣನ ಕಥೆಗಳು ಮತ್ತು ಪರಮಾನಂದಯ್ಯ ಶಿಷ್ಯರ ಕಥೆಗಳು ಕನ್ನಡದಲ್ಲಿಯೂ ಅತ್ಯಂತ ಪ್ರಚಾರದಲ್ಲಿವೆ. ತೆಲುಗಿನಲ್ಲಿ ಕಂಡುಬರುವ ಕಥನ ಘಟಕಗಳಾದ (Motfr) ಬ್ರಹ್ಮರಾಕ್ಷಸರು, ಮಾಂತ್ರಿಕರು, ದೇವತೆಗಳು, ಮಲತಾಯಿಯಂತಹ ಪಾತ್ರಗಳು ಮತ್ತು ಮಂತ್ರದಂಡ, ಮಾಂತ್ರಿಕ ಶಕ್ತಿಯುಳ್ಳ ವಸ್ತುಗಳು ಕನ್ನಡದಲ್ಲಿಯೂ ಕಂಡುಬರುತ್ತವೆ.

ಜನಪದ ಸಾಹಿತ್ಯದಲ್ಲಿ ಅತ್ಯಂತ ವಿಶಿಷ್ಟವಾದ ಪ್ರಕಾರಗಳು ಗಾದೆಗಳು ಮತ್ತು ಒಗಟುಗಳು. ಈ ಎರಡು ಪ್ರಕಾರಗಳು ಭಾಷಾ ಸಾಹಿತ್ಯಗಳೆರಡಕ್ಕೂ ಸಂಬಂಧಪಟ್ಟಂತಹುವು. ಗಾದೆಗಳು, ಅನುಭವಗಳ ಸಂಗಮ. ತೆಲುಗಿನಲ್ಲಿ ಗಾದೆಯನ್ನು 'ಸಾಮೆತ' ಎನ್ನುತ್ತಾರೆ. ಕನ್ನಡದಲ್ಲಿ 'ಗಾದೆ ವೇದಕ್ಕೆ ಸಮಾನ'ವೆಂಬಂತೆಯೇ ತೆಲುಗಿನಲ್ಲಿ 'ಗಾದೆಯಿಲ್ಲದ ಮಾತು ಔತನವಿಲ್ಲದ ಮನೆ' ಎಂದು ಪ್ರಚಾರದಲ್ಲಿದೆ.

ಅಲ್ಪಾಕ್ಷರಗಳಲ್ಲಿ ಅನಲ್ಪಭಾವವನ್ನು, ಅನುಭವವನ್ನು ಚೊಟಿಯಾಗಿ ಹೇಳುವುದು ಗಾದೆಯ ಧರ್ಮ. ಇಂತಹ ಗಾದೆಗಳು ತೆಲುಗಿನಲ್ಲಿ ರಾಶಿಗಟ್ಟಲೆ ಇವೆ. ಡಾ.ಚಿಲುಕೂರಿ



ನಾರಾಯಣರಾವ್‌ರವರು ಒಂದು ಲಕ್ಷಕ್ಕೂ ಹೆಚ್ಚು ಗಾದೆಗಳನ್ನು ಸಂಗ್ರಹಿಸಿದ್ದಾರೆ. Captain M.W. Carr ಎಂಬ ಆಂಗ್ಲೇಯನು 'ಆಂಧ್ರಲೋಕೋಕ್ತಿ ಚಂದ್ರಿಕ' ಎಂಬ ಹೆಸರಿನಲ್ಲಿ ತೆಲುಗು ಗಾದೆಗಳ ಸಂಗ್ರಹವನ್ನು ೧೮೬೮ರಲ್ಲಿ ಪ್ರಕಟಿಸಿದ್ದಾನೆ. ಇದು ತೆಲುಗಿನಲ್ಲಿ ಮೊದಲನೆಯ ಗಾದೆಗಳ ಸಂಗ್ರಹವಾಗಿದೆ. ೧೯೧೨ರಲ್ಲಿ ಬಾಸೆಲ್ ಮಿಷನ್ ಪ್ರೆಸ್‌ನವರು ಕನ್ನಡ ಗಾದೆಗಳನ್ನು ಸಂಗ್ರಹಿಸಿ 'ಕರ್ನಾಟಕ ಲೋಕೋಕ್ತಿ ನಿಧನ' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಇದು ಕನ್ನಡ ಗಾದೆಗಳ ಪ್ರಥಮ ಸಂಕಲನ ಗ್ರಂಥವೆಂದು ತಿಳಿಯುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ.ಪಿ.ಎಸ್. ಗೋಪಾಲಕೃಷ್ಣರವರು ತೆಲುಗು ಕನ್ನಡ ಗಾದೆಗಳ ತೌಲನಿಕ ಅಧ್ಯಯನ ಮಾಡಿ ತೆಲುಗಿನಲ್ಲಿ ಪಿಹೆಚ್.ಡಿ. ಪಡೆದಿದ್ದಾರೆ. ನಾನು ೧೯೭೭ರಲ್ಲಿ ''ಕನ್ನಡ ತೆಲುಗು ಗಾದೆಗಳು-ಸಮಾನಾರ್ಥಕಗಳು'' ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಒಂದು ಗ್ರಂಥವನ್ನು ಪ್ರಕಟಿಸಿದ್ದೇನೆ. ಇದರ ತೆಲುಗು ಭಾಷಾಂತರವನ್ನು ಸಹ ನಾನು ಪ್ರಕಟಿಸಿದ್ದೇನೆ.

ಕೆಲವು ತೆಲುಗು ಮತ್ತು ಕನ್ನಡ ಗಾದೆಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ.

೧. ತೆ. ಉಂಟೇ ಉಗಾದಿ, ಲೇ ಪೋತೆ ಏಕಾಶಿ
ಕ. ಇದ್ದಾಗ ಹಿರಿಹಬ್ಬ, ಇಲ್ಲದಾಗ ತಿರಿಹಬ್ಬ

೨. ತೆ. ಸಾಯಬು ಗಡ್ಡಂ ಕಾಲಿ ಏಡುಸ್ತುಂಟೇ ಬೀಡೀ
ಅಂಟಿಂಚುಕುಂಟಾ ತಾಲು ಅನ್ನಡಟ
ಕ. ಗಡ್ಡ ಹತ್ತಿ ಉರಿಯುವಾಗ ಬೀಡಿ ಹಚ್ಚಿಕೊಳ್ಳಲು ಬಂದ.

೩. ತೆ. ಅತ್ತಪೆಟ್ನೀದು, ಅಡುಕ್ಕು ತಿನನೀದು
ಕ. ಅತ್ತೆ ಇಕ್ಕಂಗಿಲ್ಲ, ಬೇಡ್ಕೊಂಡು ತಿನ್ನಂಗಿಲ್ಲ

೪. ತೆ. ಅಂದಿತೇ ಜುಟ್ಟು, ಅಂದಕುಂಟೆ ಕಾಳ್ಳು
ಕ. ಎದ್ದಾಗ ಜುಟ್ಟು ಹಿಡಿ, ಬಿದ್ದಾಗ ಕಾಲುಹಿಡಿ

೫. ತೆ. ಅಯ್ಯೋ ದಾನಿಕೆ ಅರಕತ್ತು, ಕಾನಿದಾನಿಕೆ ಕುಮ್ಮಕ್ಕು
ಕ. ಆಗೋದುಕ್ಕೆ ಹರಕುತ್ತಾ, ಆಗದ್ದಕ್ಕೆ ಕುಮ್ಮಕ್ಕು

ನನ್ನ ಕ್ಷೇತ್ರಕಾರ್ಯದಲ್ಲಿ ಕೋಲಾರು ಜಿಲ್ಲೆಯಲ್ಲಿ ಹಲವಾರು ಅಶ್ಲೀಲ ಗಾದೆಗಳನು ಶೇಖರಿಸಿದ್ದೇನೆ. ಆಂಧ್ರದೇಶಕ್ಕಿಂತ ಇಲ್ಲಿಯೇ ಹಲವಾರು ಅಶ್ಲೀಲ ಗಾದೆಗಳು ಇವೆಯೆಂದು ತೋರುತ್ತದೆ. ತೆಲುಗಿನಲ್ಲಿ ಅಶ್ಲೀಲ ಗಾದೆಗಳು ಗ್ರಂಥಸ್ಥವಾಗಿಲ್ಲ. ಕೋಲಾರ ಜಿಲ್ಲೆಯ ಕನ್ನಡ ಮಾತನಾಡುವ ಜನರು ತಮ್ಮ ನಿತ್ಯ ವ್ಯವಹಾರದಲ್ಲಿ ತೆಲುಗು ಗಾದೆಗಳನ್ನು ಸಹ ಬಳಸುವುದನ್ನೂ ಕಾಣಬಹುದು.

ಆಂಧ್ರದೇಶದಲ್ಲಿ ಪ್ರಚಾರದಲ್ಲಿ ಇಲ್ಲದಿರುವ ಹಲವಾರು ತೆಲುಗುಗಾದೆಗಳು ಕೋಲಾರ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಉದಾಹರಣೆಗೆ "ಸೂಪುವ ಮಾವಿ, ಮೇಪುವ ಮಾವಿ"

ಹೊಸಗಾದೆಗಳು ಸಹ ಹುಟ್ಟಿಕೊಂಡಿರುವುದನ್ನು ಕಾಣಬಹುದು. ಉದಾ:ತೆ "ಓಟುಪುಟ್ಟೆ ಜನಾಲಕು ಚೇಟುತೆಚ್ಚಿಂದಿ"

ತೆಲುಗು ಕನ್ನಡಗಳಿಗೆ ಸಂಬಂಧ ಪಟ್ಟ ಹೊಸಗಾದೆಯನ್ನು ನೋಡಿ.

ಕೇ "ಊರಿಗೆ ಬಂದವಳು ನೀರಿಗೆ। ಬೋರಿಗೆ ಬಾರದೇ ಹೋಗ್ತಾಳಾ"।

ತೇ " ಊರುಕೊಚ್ಚಿಂದಿ ನೀಳ್ಳಕು। ಬೋರುಕು ರಾಕುಂಡಾ ಪೋತುಂದಾ?"

ಇಂತಹ ತೆಲುಗು ಮತ್ತು ಕನ್ನಡ ಗಾದೆಗಳನ್ನು ನೋಡಿದಾಗ ಇವು ಅನುವಾದಗಳೇನೋ ಎನ್ನುವಂತೆ ಸಂದೇಹವನ್ನೂ ಉಂಟುಮಾಡುತ್ತವೆ. ನಿಜವಾಗಿಯೂ ಇವು ಅನುವಾದಗಳಲ್ಲ. ಈ ಎರಡು ಭಾಷೆಗಳಿಗೂ ಮತ್ತು ಎರಡು ಸಂಸ್ಕೃತಿಗಳಿಗೂ ಇರುವ ಅನ್ಯೋನ್ಯ ಸಂಬಂಧವೇ ಇದಕ್ಕೆ ಕಾರಣ.

ಗಾದೆಗಳಂತೆಯೇ ಜನಪದ ಸಾಹಿತ್ಯದಲ್ಲಿ ಪ್ರಮುಖವಾಗಿರುವುವು ಒಗಟುಗಳು ತೆಲುಗಿನಲ್ಲಿ ಒಗಟುಗಳನ್ನು "ಪೊಡುಪುಕಥಲು." ಎನ್ನುತ್ತಾರೆ. ಅನಂತಪುರಂ ಜಿಲ್ಲೆಯಲ್ಲಿ ಇವುಗಳನ್ನು "ಎದುರು ಕಥಲು" ಎಂದು ಕರೆಯುತ್ತಾರೆ. ಇಲ್ಲಿನ ಕನ್ನಡದವರು ಇವುಗಳನ್ನು "ಎದುರು ಕತೆಗಳು" "ಒಡಕತೆಗಳು" ಎಂದು ಕರೆಯುವುದುಂಟು. ತುಳು ಒಗಟುಗಳನ್ನೂ 'ಎದುರುಕತೆ'ಎಂದು ಕೋಲಾರ ಜಿಲ್ಲೆಯಲ್ಲಿ ಕರೆಯುತ್ತಾರೆ. ತೆಲುಗಿನವರು "ಒಗಟ್ಲು" ಎಂದು, "ಒಡ್ಡುಕಥ" ಎಂದಿಗೂ ಕರೆಯುತ್ತಾರೆ.

ತೆಲುಗಿನಲ್ಲಿ ಒಗಟುಗಳ ಬಗ್ಗೆ ಒಂದು ಪಿಹೆಚ್.ಡಿ. ಮಹಾಪ್ರಬಂಧ ಹೊರಬಂದಿದೆ. ಎರಡು, ಮೂರು ಒಗಟಿನ ಸಂಕಲನ ಗ್ರಂಥಗಳು ಪ್ರಕಟವಾಗಿವೆ.ಕನ್ನಡದಲ್ಲಿ ಹಲವಾರು ಸಂಕಲನ ಗ್ರಂಥಗಳು ಹೊರಬಂದಿವೆ. ನನ್ನ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಶ್ರೀ ಎ.ಅಂಜಿನಪ್ಪ ಅವರು ತೆಲುಗು ಕನ್ನಡ ಒಗಟುಗಳ ಬಗೆಗೆ ಪಿಹೆಚ್.ಡಿ ಮಾಡುತ್ತಿದ್ದು, ಇನ್ನು ಒಂದೆರಡು ತಿಂಗಳುಗಳಲ್ಲಿ Submit ಮಾಡುವ ಹಂತದಲ್ಲಿದ್ದಾರೆ.

ಕೆಲವು ತೆಲುಗು ಮತ್ತು ಕನ್ನಡ ಒಗಟುಗಳನ್ನು ಹೆಸರಿಸುತ್ತೇನೆ.

೧. ತೆ. ತಂಡ್ರಿ ಗರಗರ
ತಲ್ಲಿ ಪೀಚು ಪೀಚು
ಬಿಡ್ಡಲು ರತ್ನಮಾಣಿಕ್ಯಾಲು
ಮನುಮಲು ಬೊಮ್ಮರಾಳ್ಳು

ಅಂತೆಯೇ ಕನ್ನಡದಲ್ಲಿ



ತಂದೆ ಗರಗರ
ತಾಯಿ ತರಕಲು
ಮಗಳು ಬೋಡಿ
ಮೊಮ್ಮಗಳು ಕಮ್ಮಗೆ

-ಇದಕ್ಕೆ ಸಮಾಧಾನ "ಹಲಸಿನ ಹಣ್ಣು"

೨. ತೆ. ಅಂಗೀಮೀದ ಪದಾರು ಅಂಗೀಲು
ಕ. ಅಂಗೀಮೇಲೆ ಹದ್ನಾರು ಅಂಗಿಗಳು

-ಸಮಾಧಾನ "ಈರುಳ್ಳಿ"

೩. ತೆ. ಕೊಂಡ ನಿಂಡಾ ಕೊಡಿವೆಂಡ್ಲು
ಕೆ. ಬೆಟ್ಟದ ತುಂಬಾ ಕುಡುಗೋಲುಗಳು

-ಸಮಾಧಾನ "ಹುಣಸೇಕಾಯಿ"

೪. ತ. ಅಂಬಾಲು ಅಂಬಾಲು ಮೀದ ಕುಂಬಾಲು (ಕಾಳ್ಳು, ಪಿರುದುಲು)
ಕುಂಬಾಲಮೀದ ಕುಡತಿಬಾನ (ಕಡುಪು)
ಕುಡಿತಿಬಾನಮೀದ ಈರ ಚೆಕ್ಕಲು (ರೊಮ್ಮು)
ದಾನಿಮೀದ ಇನುಮೀಗುಂಡು (ತಲ)
ದಾನಿಮೀದ ಎದುರುಪೊದ (ವೆಂಟ್ರುಕಲು)
ಎದುರು ಪೊದಲೋ ವೇಟಾಡೇ ರಾಜು
ರಾಜುಪೇರೇಮಿ?

-ಸಮಾಧಾನ: ತಲಲೋಪೇನು

(ಕದೇಹಳ್ಳಿಗ್ರಾಮ, ಗುಡಿಬಂಡ ತಾಲೂಕು, ಕೋಲಾರ ಜಿಲ್ಲೆ) ಅಂತೆಯೇ ಕನ್ನಡದಲ್ಲಿ.

ಡೊಂಕಾಬಿಂಕದ ಎರಡು ಆಲದಮರ (ಮೊಣಕಲು)
ಆಲದ ಮರದ ಮೇಲೆ ಕೂನುಗಡಿಗೆ (ಹೊಟ್ಟೆ)
ಕೂನುಗಡಿಗೆಯ ಮೇಲೆ ಕುತಾರಿ ಚೆಂಬು (ತಲೆ)
ಕುತಾರಿ ಚೆಂಬಿನ ಮೇಲೆ ಕರಿಕೇ ಪಾಚು (ಕೂದಲು)
ಕರಿಕೇ ಪಾಚಿನ ಮೇಲೆ ಕಣ ಮೇಸ್ತ್ರತ (ಹೇನು)

(ಮಲಮನೂರು, ಅನಂತಪುರ ಜಿಲ್ಲೆ)

ಈ ಮೇಲಿನ ತೆಲುಗು ಮತ್ತು ಕನ್ನಡ ಒಗಟುಗಳಲ್ಲಿ ತೆಲುಗಿಗೆ ಸಂಬಂಧಪಟ್ಟಿದ್ದನ್ನು ಕನ್ನಡ ದೇಶದಲ್ಲಿಯೂ, ಕನ್ನಡಕ್ಕೆ ಸಂಬಂಧಪಟ್ಟಿದ್ದು ತೆಲುಗುನಾಡಿನಲ್ಲಿಯೂ ಪ್ರಚಾರ ದಲ್ಲಿರುವುದು ಒಂದು ವೈಶಿಷ್ಟ್ಯವಾಗಿದೆ.

ತೆಲುಗು ಜಾನಪದವು ವೈಜ್ಞಾನಿಕವಾಗಿ ವೈವಿಧ್ಯಮಯ ವಿಭಾಗಗಳಿಂದ ಪರಿಪುಷ್ಟವಾಗಿದ್ದರೂ ಅದರ ಬಗ್ಗೆ ಅಧ್ಯಯನ ಸಾಕಷ್ಟು ನಡೆಯಲೇ ಇಲ್ಲ ಎಂಬುದು

ವಿಷಾದದ ಸಂಗತಿ. ತೆಲುಗು ಜನಪದ ನಂಬಿಕೆಗಳನ್ನು ಕುರಿತಂತೆ ನಾನು ಸಂಗ್ರಹಿಸಿ, ವಿಶ್ಲೇಷಿಸಿ, ಪ್ರಕಟಿಸಿದ "ಜಾನಪದುಲ ನಮ್ಮಕಾಲು" ಎಂಬ ಒಂದೇ ಒಂದು ಗ್ರಂಥ ಪ್ರಕಟವಾಗಿದೆ. ತೆಲುಗಿನ ನಂಬಿಕೆಗಳನ್ನು ಕುರಿತು ಒಂದು ಎಂ.ಫಿಲ್ ಡಿಗ್ರಿ ಹೊರಬಂದಿದೆ.

ನಂಬಿಕೆಗಳು ಜಾನಪದರ ಮನಸ್ತತ್ತ್ವಕ್ಕೆ ಸಂಬಂಧಪಟ್ಟಂತಹವು. ಎಂದರೆ ಇವು ಜಾನಪದರ ಮಾನಸಿಕ ಅನುಭವಗಳೆಂದು ಹೇಳಬಹುದು. ಅನಾಗರಿಕರು, ಅವಿದ್ಯಾವಂತರಲ್ಲಿಯೇ ಅಲ್ಲದೇ ನಾಗರಿಕರು, ವಿದ್ಯಾವಂತರಲ್ಲಿಯೂ ನಂಬಿಕೆಗಳು ಮನೆಮಾಡಿಕೊಂಡಿವೆ. ಮನಸ್ಸಿನಲ್ಲಿ ಕೊರೆಯುವ ಮಾನಸಿಕ ಸಂಕ್ಷೋಭಗಳೇ ಇಂತಹ ನಂಬಿಕೆಗಳಿಗೆ, ಮೂಢನಂಬಿಕೆಗಳಿಗೆ ಮೂಲಕಾರಣ. ಜನಪದ ನಂಬಿಕೆಗಳಲ್ಲಿ ಆಚಾರವಿಚಾರಗಳು, ಶಕುನಗಳಿಗೆ ಸಂಬಂಧಪಟ್ಟ ಹಲವಾರು ಅಂಶಗಳು ಕಂಡುಬರುತ್ತವೆ.

ಕೆಲವು ತೆಲುಗು ಮತ್ತು ಕನ್ನಡ ಜನಪದ ನಂಬಿಕೆಗಳು

೧. ಶುಭಕಾರ್ಯಕ್ಕೆಂದು ಹೊರಟಾಗ, ಯಾರಾದರೂ, "ಎಲ್ಲಿಗೆ?!" ಎಂದು ಕೇಳಬಾರದು. ಹಾಗೆ ಕೇಳಿದಾಗ ಒಂದು ಕ್ಷಣ ಕುಳಿತಿದ್ದು ಹೋಗುವುದು ಒಳ್ಳೆಯದು. ಇಲ್ಲವಾದರೆ ಹೋದ ಕೆಲಸ ಆಗುವುದಿಲ್ಲ.
೨. ಗರ್ಭಿಣಿ ಹೆಂಗಸು ಗ್ರಹಣ ನೋಡಬಾರದು.
೩. ನಾಗಪ್ರತಿಷ್ಠೆ ಮಾಡಿದರೆ ಮಕ್ಕಳಾಗುತ್ತವೆ.
೪. ತೆಂಗಿನಕಾಯನ್ನು ಒಡೆದ ಮೇಲೆ ಮತ್ತೆ ಕೂಡಿಸಬಾರದು.

ಓೀಗೇ ಬೆಕ್ಕು, ಹಲ್ಲಿಯ ಶಕುನಗಳು, ಹುಟ್ಟುಮಚ್ಚೆಗಳ ಶಕುನಗಳು, ದೇಹಾಂಗಗಳು ಅದರುವುದರಿಂದ ಬರಬಹುದಾದ ಶುಭಾಶುಭ ಶಕುನಗಳು, ಕನಸುಗಳಿಂದ ಬರುವ ಶಕುನಗಳು ಇತ್ಯಾದಿಗಳು ಹೆಚ್ಚು ಕಡಿಮೆ ಆಂಧ್ರ ಕರ್ನಾಟಕಗಳಲ್ಲಿ ಸಮಾನವಾಗಿ ಕಂಡುಬರುತ್ತವೆ.

ಸಾಂಘಿಕ ಜಾನಪದ ಆಚಾರಗಳಲ್ಲಿ ಧರ್ಮಕ್ಕೆ ಹೆಚ್ಚು ಪ್ರಾಧಾನ್ಯವಿದೆ. ಗ್ರಾಮ ದೇವತಾರಾಧನೆ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದ ಆಚಾರ. ಗ್ರಾಮದೇವತೆಗಳು ಸಾಧಾರಣವಾಗಿ ಒಂದು ಚಿಕ್ಕ ಕಲ್ಲಿನ ರೂಪದಲ್ಲಿ ಇರುವುದು ಕಂಡುಬರುತ್ತದೆ. ವಿಗ್ರಹರೂಪದಲ್ಲಿ ಗ್ರಾಮದೇವತೆಗಳಿದ್ದರೂ, ಅಂತಹ ಗ್ರಾಮದೇವತೆಗಳು ತೀರಾ ವಿರಳ. ಗ್ರಾಮದೇವತರ ಪೂಜಾ ವಿಧಾನಗಳಲ್ಲಿಯೂ ಪ್ರಾದೇಶಿಕ ಭೇದಗಳು ಕಂಡುಬರುತ್ತವೆ.

ಸಾಧಾರಣವಾಗಿ ಜಾನಪದರು ವಿಗ್ರಹಕ್ಕೆ ಬದಲಾಗಿ ಯಾವುದಾದರೂ ಒಂದು ಕಲ್ಲನ್ನು ದೇವತೆಯಾಗಿ ಭಾವಿಸಿ, ಆ ಕಲ್ಲನ್ನು ಪೂರ್ವ ಮುಖದಲ್ಲಿಟ್ಟು, ಸುತ್ತಲೂ



ಮೂರುಕಡೆ ಕಲ್ಲುಚಪ್ಪಡಿಗಳನ್ನು ನೆಟ್ಟು ಮೇಲೊಂದು ಚಪ್ಪಡಿಯನ್ನು ಮುಚ್ಚುತ್ತಾರೆ. ಇಂತಹ ಗುಡಿಗಳನ್ನು ಸಾಧಾರಣವಾಗಿ ಬೇವಿನ ಮರಗಳ ಕೆಳಗೆ ಕಟ್ಟುವುದುಂಟು. ಕೆಲವು ಗ್ರಾಮಗಳಲ್ಲಿ ದೊಡ್ಡ ಗುಡಿಗಳೂ ಮತ್ತು ಧ್ವಜ ಸ್ತಂಭಗಳೂ ಇರುತ್ತವೆ. ಈ ಗುಡಿಗಳಲ್ಲಿರುವ ದೇವತೆಗಳು ವಿಗ್ರಹ ರೂಪದಲ್ಲಿರುತ್ತವೆ. ಶಿಷ್ಟದೇವತೆಗಳಂತೆಯೇ ಇವುಗಳನ್ನು ವೇಷಭೂಷಣೆಗಳಿಂದ ಅಲಂಕರಿಸಿ ಕೆಂಪು, ಹಸಿರು ಮತ್ತು ಅರಿಶಿನ ಬಣ್ಣಗಳಿರುವ ಸೀರೆಗಳನ್ನು ಉಡಿಸುತ್ತಾರೆ. ಕರ್ನಾಟಕ, ಆಂಧ್ರ ರಾಜ್ಯಗಳಲ್ಲಿ ಮೇಲೆ ಹೇಳಿರುವ ಸಮಾನಾಂಶಗಳು ಕಂಡುಬರುತ್ತವೆ. ಗ್ರಾಮ ದೇವತಾರಾಧನೆಯಲ್ಲಿ ಬಲಿಕೊಡುವುದು, ದೇವತೆ ಭಕ್ತನ ಮೈಮೇಲೆ ಬರುವುದು ಈ ಎರಡು ರಾಜ್ಯಗಳಲ್ಲಿಯೂ ಕಂಡುಬರುತ್ತದೆ. ಗ್ರಾಮ ದೇವತಾರಾಧನೆ ಸಂದರ್ಭಗಳಲ್ಲಿ ಜಾತ್ರೆ, ಉತ್ಸವ, ಪರುಸೆ, ಹರಕೆ, ಹಾಡುಗಳು, ಕಥೆಗಳು, ಕಥನ ಗೀತೆಗಳು ಆಂಧ್ರ ಕರ್ನಾಟಕಗಳಲ್ಲಿ ಪ್ರಚಾರದಲ್ಲಿವೆ.

ಆಂಧ್ರದಲ್ಲಿ ಪೆದ್ದಮ್ಮ, ಚೌಡಮ್ಮ, ದುರ್ಗಮ್ಮ, ಮಾರಮ್ಮ, ಅಂಕಮ್ಮ, ಪೋಲೇರಮ್ಮ, ಮುತ್ಯಾಲಮ್ಮ, ಗಂಗಮ್ಮ, ಪೋಚಮ್ಮ, ಪೋತುರಾಜು, ಸುಂಕಾಲಮ್ಮ, ಮೈಸಮ್ಮ, ಈದಮ್ಮ, ಎಲ್ಲಮ್ಮ ಮುಂತಾದ ಗ್ರಾಮದೇವತೆಗಳೂ, ಕರ್ನಾಟಕದಲ್ಲಿ ಗಂಗಮ್ಮ, ಮಾರಮ್ಮ, ಎಲ್ಲಮ್ಮ, ದೊಡ್ಡಮ್ಮ, ಪೋತುರಾಜು, ರೇಣುಕಾಂಭ, ದ್ರೌಪದಿ ಮುಂತಾದ ಗ್ರಾಮದೇವತೆಗಳು ಪ್ರಾಚುರ್ಯದಲ್ಲಿದ್ದಾರೆ. ಎಲ್ಲಮ್ಮ, ಮಾರಮ್ಮ, ದೊಡ್ಡಮ್ಮ, ಗಂಗಮ್ಮ ಗ್ರಾಮದೇವತೆಗಳು ಆಂಧ್ರ ಕರ್ನಾಟಕಗಳಲ್ಲಿ ವಿಶೇಷವಾಗಿ ಆರಾಧಿಸಲ್ಪಡುವುದೂ, ಆರಾಧನಾಕಾಲದಲ್ಲಿ ಜಾತ್ರೆ, ಪರುಸೆ, ಉತ್ಸವ, ಮೆರವಣಿಗೆ, ಕರಗಗಳು ನಡೆಯುವುದರಲ್ಲಿ ಸರೂಪತೆ ಕಂಡುಬರುತ್ತದೆ. ತೆಲುಗಿನಲ್ಲಿ ಗ್ರಾಮದೇವತೆಗಳ ಬಗ್ಗೆ ಎರಡು ಪಿಹೆಚ್.ಡಿ ಮಹಾಪ್ರಬಂಧಗಳು ಹೊರಬಂದಿವೆ. ಕನ್ನಡದಲ್ಲಿಯೂ ಸಾಕಷ್ಟು ಕೆಲಸ ನಡೆದಿದೆ.

ಜನಪದ ವೈದ್ಯ ವಿಧಾನವೂ ತೆಲುಗು ಕನ್ನಡ ಜನಪದದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಜಾನಪದ ವೈದ್ಯವೇ 'ನಾಟೀವೈದ್ಯ'ವಾಗಿ ಆಂಧ್ರ ಕರ್ನಾಟಕಗಳಲ್ಲಿ ಪ್ರಚಾರದಲ್ಲಿದೆ. ಜಾನಪದ ವೈದ್ಯದಲ್ಲಿ ಪ್ರಧಾನವಾದದ್ದು ಪ್ರಕೃತಿ ಜನಪದ. ಇದರಲ್ಲಿ ಗಿಡದ ಮೂಲಿಕೆಗಳು, ಬೇರುಗಳು, ಖನಿಜಗಳು, ಪ್ರಾಣಿಗಳ ಅವಯವಗಳು ಉಪಯೋಗಿಸಲ್ಪಡುತ್ತವೆ. ಮಂತ್ರತಂತ್ರಗಳು ಸಹ ಜಾನಪದ ವೈದ್ಯ ವಿಧಾನದಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಹಾವು, ಚೇಳು, ಕಡಿತಗಳಿಗೆ ಮಂತ್ರ, ದೆವ್ವಗಳ ಬಾಧೆಗಳನ್ನು ತೊಲಗಿಸಲು ಮಂತ್ರಗಳು ಸಂತಾನಕ್ಕಾಗಿ ಯಂತ್ರಗಳು, ತಾಯಿತಗಳು, ದೃಷ್ಟಿದೋಷವನ್ನು ತೊಲಗಿಸಲು ಪರಕೆಯಿಂದ ನಿವಾಳಿಸುವುದು ಅಥವಾ ಅನ್ನವನ್ನು ಇಳೆತೆಗಿಯುವುದು, ಮುಂತಾದವುಗಳು ಆಂಧ್ರ ಕರ್ನಾಟಕಗಳಲ್ಲಿ ಸಮಾನವಾಗಿ ಕಂಡುಬರುತ್ತವೆ. ಆಂಧ್ರದಲ್ಲಿ ಜನಪದ ವೈದ್ಯ ಅಧ್ಯಯನ ಸಾಕಷ್ಟು ನಡೆದಿಲ್ಲ, ಆದರೂ ಒಂದೆರಡು ಗ್ರಂಥಗಳು

ಪ್ರಕಟವಾಗಿವೆ. ಕರ್ನಾಟಕದಲ್ಲಿ ಆಂಧ್ರಕ್ಕಿಂತಲೂ ಹೆಚ್ಚು ಕೆಲಸ ನಡೆದಿದೆ. ಇದರ ಬಗ್ಗೆ ಹಲವಾರು ಪ್ರಬಂಧಗಳು ಪ್ರಕಟವಾಗಿವೆ.

ಜನಪದ ಆಟಗಳ ಬಗ್ಗೆ ತೆಲುಗಿನಲ್ಲಿ ಕ್ರೀಡಾವಿನೋದಗಳಿಗೆ ಸಂಬಂಧಪಟ್ಟಂತೆ ಒಂದು ಪಿಹೆಚ್.ಡಿ, ಮಹಾಪ್ರಬಂಧ ಹೊರಬಂದಿದೆ. ಕರ್ನಾಟಕದಲ್ಲಿ ಜನಪದ ಆಟಗಳ ಬಗ್ಗೆ ಹೆಚ್ಚು ಕೆಲಸ ನಡೆದಿದೆ. ಹಲವಾರು ಪ್ರಬಂಧಗಳು ಪ್ರಕಟವಾಗಿವೆ. ಹಲವಾರು ಕ್ರೀಡೆಗಳು ಆಂಧ್ರ ಕರ್ನಾಟಕಗಳು ಸಮಾನವಾಗಿ ಕಂಡುಬರುತ್ತವೆ.

ಪ್ರದರ್ಶನಾತ್ಮಕ ಜನಪದ ಕಲೆಗಳಲ್ಲಿ ಮುಖ್ಯವಾದವುಗಳು ಜನಪದರೂಪಕ, ಜನಪದ ಸಂಗೀತ ಮತ್ತು ಜನಪದ ನೃತ್ಯ. ಜನಪದರೂಪಗಳಲ್ಲಿ ಪ್ರಧಾನವಾದವುಗಳು ಯಕ್ಷಗಾನ, ಬಯಲಾಟ, ಗೊಂಬೆಯಾಟ ಮುಂತಾದುವುಗಳು. ಆಂಧ್ರದಲ್ಲಿ ಯಕ್ಷಗಾನ ಕೇವಲ ಸಾಹಿತ್ಯಪ್ರಕಾರವಾಗಿ ಮಾತ್ರ ಉಳಿದುಕೊಂಡಿದೆ. ಆದರೆ ಇದು ಕನ್ನಡ ನಾಡಿನಲ್ಲಿ ಒಂದು ಪ್ರಸಿದ್ಧ ಜನಪದ ಕಲೆಯಾಗಿ ವೃತ್ತಿ ಕಲಾಕಾರರಿಂದ ಪ್ರಯೋಗಿಸಲ್ಪಡುತ್ತಿರುವುದು ಹೆಮ್ಮೆಯ ವಿಷಯ. ಡಾ. ಎಸ್ವೀ ಜೋಗಾರಾವ್ ಅವರು ಯಕ್ಷಗಾನಗಳ ಬಗ್ಗೆ ವಿಶೇಷವಾದ ಸಂಶೋಧನೆ ನಡೆಸಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಅಂತೆಯೇ, ಕೆ.ಎಂ. ಕೃಷ್ಣರಾವ್ ಅವರು ಶಿವರಾಮ ಕಾರಂತರು ಯಕ್ಷಗಾನಗಳ ಬಗ್ಗೆ ವಿಶೇಷವಾದ ಅಧ್ಯಯನ, ಪ್ರಯೋಗಗಳನ್ನು ನಡೆಸಿದ್ದಾರೆ.

ತೆಲುಗು ಯಕ್ಷಗಾನಗಳಲ್ಲಿರುವ ದರವುಲು, ಏಲಲು, ಸುವ್ವಾಲಲು, ಮಂಗಳ ಹಾರತುಲು ಮುಂತಾದ ದೇಶಿ ರಚನೆಗಳು ಕನ್ನಡದಲ್ಲೂ ಇವೆ. ರಾಮಾಯಣ, ಮಹಾಭಾರತ, ಭಾಗವತಗಳಿಗೆ ಸಂಬಂಧಪಟ್ಟ ಯಕ್ಷಗಾನಗಳು, ಜೈಮಿನಿ ಭಾರತದಲ್ಲಿರುವ ಕಥೆಗಳು, ಮೈರಾವಣ, ಹನುಮದ್ರಾಮ ಸಂಗ್ರಾಮ ಮುಂತಾದ ಕಥೆಗಳೂ ತೆಲುಗು, ಕನ್ನಡಗಳಲ್ಲಿಯೂ ಪ್ರಚಾರದಲ್ಲಿವೆ.

ತೆಲುಗು ಯಕ್ಷಗಾನವು ಕೋಲಾರ್ ಜಿಲ್ಲೆಯಲ್ಲಿರುವ ಮೂಡಲಪಾಯಕ್ಕೆ ಸರಿ ಹೋಲುವಂತಿದೆಯೆಂದು ಡಾ. ತಂಗಿಕಾಲ ವೆಂಕಟಸುಬ್ಬಾರಾವ್‌ರವರು ಅಭಿಪ್ರಾಯ ಪಟ್ಟರೆ, ಪಾಲ್ಕುರಿಕೆ ಸೋಮನಾಥನು ಹೆಸರಿಸಿದ 'ಕೇಳಿಕೆ' ಎಂಬ ತೆಲುಗು ಯಕ್ಷಗಾನವು ಇಂದಿಗೂ ಕೋಲಾರ್ ಜಿಲ್ಲೆಯಲ್ಲಿ ಪ್ರಾಚುರ್ಯದಲ್ಲಿರುವುದಾಗಿ ಡಾ.ಆರ್.ವಿ.ಎಸ್. ಸುಂದರಂ ತಿಳಿಸಿದ್ದಾರೆ.

ತೆಲುಗು ಬಯಲಾಟಗಳಿಗೆ ಪ್ರಸಿದ್ಧವಾದುದು ರಾಯಲಸೀಮೆ. ಅಪ್ಪಟವಾದ ಜನಪದ ನಾಟಕವೆಂದರೆ ಬಯಲಾಟ. ತೆಲುಗು ಬಯಲಾಟಗಳ ಮೇಲೆ ಕನ್ನಡ ಬಯಲಾಟಗಳ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಅನಂತಪುರ ಜಿಲ್ಲೆಯಲ್ಲಿ ಹಲವಾರು ಗ್ರಾಮಗಳಲ್ಲಿ ಮುಖ್ಯವಾಗಿ ದ್ವಿಭಾಷಾ ಪ್ರಾಂತ್ಯಗಳಲ್ಲಿ ತೆಲುಗಿನವರು ಕನ್ನಡ ಬಯಲಾಟಗಳನ್ನೇ ಪ್ರದರ್ಶಿಸುವುದು ಒಂದು ವಿಶೇಷ.



ಆಂಧ್ರ, ಕರ್ನಾಟಕ ರಾಜ್ಯಗಳಲ್ಲಿ ಜನಪದ ಕಲಾರೂಪಗಳು ಹಲವಾರು ಸಮಾನವಾಗಿ ಕಂಡುಬರುತ್ತವೆ. ಅವುಗಳಲ್ಲಿ ಕೋಲಾಟ, ಕರಗ, ಹುಲಿವೇಷ, ಗಂಗೆತ್ತಿನಾಟ, ಗೊರವನೃತ್ಯ, ಜೋಕುಮಾರ ಸಂಪ್ರದಾಯ, ಬುಡುಬುಡಿಕೆ, ಅಲಾವಿ ಕುಣಿತ, ಉರುಮೆವಾದ್ಯ, ಕೀಲುಕುದುರೆ, ಗೊರವಯ್ಯ ಮುಂತಾದುವುಗಳು ವಿಶಿಷ್ಟವಾದವು. ಡಾ. ಮಿಕ್ಕಿಲಿನೇನಿ ರಾಧಾಕೃಷ್ಣಮೂರ್ತಿಯವರು ತೆಲುಗು ಜನಪದ ಕಲಾಪರೂಪಗಳ ಬಗ್ಗೆ ವಿಶೇಷವಾದ ಸಂಶೋಧನೆ ನಡೆಸಿದ್ದಾರೆ. ಅಂತೆಯೇ ಗೊ.ರು. ಚನ್ನಬಸಪ್ಪ ಅವರ ಸಂಪಾದಕತ್ವದಲ್ಲಿ ಕನ್ನಡದಲ್ಲಿ ಕರ್ನಾಟಕದಲ್ಲಿ ಜನಪದ ಕಲೆಗಳು ಎಂಬ ಗ್ರಂಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನವರು ಪ್ರಕಟಿಸಿದ್ದಾರೆ. ತೆಲುಗಿನಲ್ಲಿ ಜನಪದ ಕಲೆಗಳ ಬಗ್ಗೆ ಪಿಎಚ್.ಡಿ., ಮಹಾ ಪ್ರಬಂಧಗಳು ಮೂರು ಹೊರಬಂದಿವೆ.

ಇನ್ನು ಜನಪದ ಸಂಗೀತ ಹಲವಾರು ತೆಲುಗು ಕನ್ನಡ ಜನಪದಗೀತೆಗಳ ಮಹಾ ಪ್ರಬಂಧಗಳಲ್ಲಿ ಜನಪದ ಗೀತೆಗಳಲ್ಲಿರುವ ಸಂಗೀತವನ್ನೂ ಸಂಶೋಧಕರು ತೋರಿಸಿ ಕೊಟ್ಟಿದ್ದಾರೆ. ಡಾ. ವಿಂಜಮೂರಿ ಸೀತಾದೇವಿಯವರು ತೆಲುಗು ಜನಪದ ಸಂಗೀತದ ಬಗೆಗೆ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಎಂ.ಲಿಟ್ ಪದವಿಯನ್ನು ಪಡೆದಿದ್ದಾರೆ. ಇದು ತೆಲುಗು ಜನಪದದಲ್ಲಿ ಮೊದಲನೆಯದಾದ ಎಂ.ಲಿಟ್, ಡಿಗ್ರೀಯಾಗಿರುತ್ತದೆ.

ಜನಪದ ಭಾಷೆಯ ಬಗೆಗೂ ತೆಲುಗು ಕನ್ನಡ ಭಾಷೆಗಳಲ್ಲಿ ಅಧ್ಯಯನಗಳು ನಡೆದಿವೆ. ಹಲವಾರು ಪ್ರಬಂಧಗಳು ಪ್ರಕಟವಾಗಿವೆ. ಕನ್ನಡದಲ್ಲಿ ಬಯ್ಗುಳಗಳ ಬಗ್ಗೆ ಕೆಲವು ಪುಸ್ತಕಗಳು ಪ್ರಕಟವಾಗಿವೆ. ತೆಲುಗಿನಲ್ಲಿ ಬಯ್ಗುಳಗಳ ಬಗೆಗೆ ನಾನೊಂದು ಕಿರುಪುಸ್ತಕವನ್ನೂ ಪ್ರಕಟಿಸಿದ್ದೇನೆ.

ವಸ್ತು ಸಂಸ್ಕೃತಿಯ ಬಗ್ಗೆ ಆಂಧ್ರ ಕರ್ನಾಟಕಗಳಲ್ಲಿ ಇನ್ನೂ ಅಧ್ಯಯನಗಳು ನಡೆಯಬೇಕಾಗಿವೆ.

ಇನ್ನು ಬುಡಕಟ್ಟುಗಳ ಅಧ್ಯಯನಗಳ ಬಗೆಗೆ. ತೆಲುಗಿನಲ್ಲಿ ಬುಡಕಟ್ಟುಗಳ ಅಧ್ಯಯನದ ಬಗ್ಗೆ ಸಾಕಷ್ಟು ಕೆಲಸ ನಡೆದಿಲ್ಲ. ತೆಲುಗು ಗಿರಿಜನ ಗೀತೆಗಳ ಬಗ್ಗೆ ಎರಡು, ಮೂರು ಪಿಎಚ್.ಡಿ, ಮಹಾಪ್ರಬಂಧಗಳು ಹೊರಬಂದಿವೆ. ಕನ್ನಡದಲ್ಲಿ ಬುಡಕಟ್ಟುಗಳ ಅಧ್ಯಯನದ ಬಗ್ಗೆ ಹೆಚ್ಚು ಕೆಲಸ ನಡೆದಿದೆ. ಈ ದಿಶೆಯಲ್ಲಿ ತೀ.ನಂ. ಶಂಕರನಾರಾಯಣ ಅವರ "ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು" ಒಂದು ಬುದಕಟ್ಟಿನ ಸಾಂಸ್ಕೃತಿಕ ಅಧ್ಯಯನ, ಪಿ.ಕೆ. ಖಂಡೋಬಾ ಅವರ "ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧ ಬುಡಕಟ್ಟುಗಳನ್ನು ಕುರಿತು ನಡೆಸುತ್ತಿರುವ ಅಧ್ಯಯನಗಳಲ್ಲಿ ಗಮನಾರ್ಹವಾದುವುಗಳು. ಅಂತೆಯೇ ಕಾಳೇಗೌಡ ನಾಗವಾರರವರ ಪಿಎಚ್.ಡಿ., ಪ್ರಬಂಧ 'ಕಾಡುಗೊಲ್ಲರ ಒಂದು ಪಟ್ಟಿಯ ಅಧ್ಯಯನ'.

ಇದೊಂದು ಪಕ್ಷಿನೋಟವಷ್ಟೇ. ಸಮಯಾಭಾವದಿಂದ ಹಲವಾರು ವಿಷಯಗಳನ್ನು ಕೈಬಿಟ್ಟಿದ್ದೇನೆ.

ಇನ್ನು ತೆಲುಗು ಜಾನಪದ ಕ್ಷೇತ್ರವನ್ನು ಕನ್ನಡ ಜನಪದ ಕ್ಷೇತ್ರಕ್ಕೆ ಹೋಲಿಸಿದರೆ ತುಂಬಾ ಹಿಂದೆ ಬಿದ್ದಿರುವುದು ವಿಷಾದಕರವಾದ ವಿಷಯ. ಕನ್ನಡ ರಾಜ್ಯದಲ್ಲಿ ಜಾನಪದ ವಿದ್ವಾಂಸರಿಗೆ ದೊರೆಯುವ ಪ್ರೋತ್ಸಾಹ ತೆಲುಗು ನಾಡಿನಲ್ಲಿ ಅತಿ ವಿರಳವಾಗಿದೆ. ಹೀಗಾಗಿ ಇನ್ನು ಹಲವಾರು ಜನಪದ ಪ್ರಕಾರಗಳ ಬಗೆಗೆ ಅಧ್ಯಯನಗಳು ನಡೆಯಬೇಕಾಗಿದೆ. ದ್ವಿಭಾಷಾ ಪ್ರಾಂತ್ಯಗಳ ತೆಲುಗು ಕನ್ನಡ ಜನಪದದ ಬಗ್ಗೆ ತೌಲನಿಕ ಅಧ್ಯಯನ ನಡೆಯಬೇಕಾದ ಅವಶ್ಯಕತೆಯಿದೆ. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ತೆಲುಗು ವಿಭಾಗದ ಪ್ರಾಧ್ಯಾಪಕರು ತೆಲುಗು ಕನ್ನಡ ಜನಪದದ ಬಗೆಗೆ ತೌಲನಿಕ ಅಧ್ಯಯನಗಳು ನಡೆಸುತ್ತಿರುವುದು ಗಮನಾರ್ಹವಾದ ವಿಷಯ.

ಕರ್ನಾಟಕದಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು ಜಾನಪದದ ಬಗ್ಗೆ ಆಸಕ್ತಿ ತೋರಿದ್ದಾರೆ. ಜಾನಪದ ಅಂಶಗಳನ್ನೂ ಸಂಗ್ರಹಿಸಲು, ಪ್ರಕಟಿಸಲು ಅಕಾಡೆಮಿಗಳು, ವಿಶ್ವವಿದ್ಯಾನಿಲಯಗಳು, ಕರ್ನಾಟಕ ಸರ್ಕಾರ ಮುಂದು ಬಂದಿವೆ. ಮೈಸೂರು, ಕರ್ನಾಟಕ, ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರತ್ಯೇಕವಾಗಿ ಜನಪದ ವಿಭಾಗಗಳಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತುಸಂಸ್ಕೃತಿ ವಿಭಾಗ; ಶ್ರೀ ಎಚ್.ಎಲ್. ನಾಗೇಗೌಡರವರ ಕರ್ನಾಟಕ ಜಾನಪದ ಟ್ರಸ್ಟ್ ಜಾನಪದದ ಬಗ್ಗೆ ವಿಶೇಷವಾದ ಪಾತ್ರವನ್ನು ವಹಿಸುತ್ತಿವೆ. ಇವುಗಳು ಜಾನಪದ ವಿಷಯಗಳನ್ನೂ ಸಂಗ್ರಹಿಸಿ ಭದ್ರಪಡಿಸುವುದೊಂದಿಗೆ ವೃತ್ತಿಗಾಯಕರನ್ನೂ, ಕಲಾಕಾರರನ್ನು, ಸಂಶೋಧಕರನ್ನು, ವಿದ್ವಾಂಸರನ್ನು ಪ್ರೋತ್ಸಾಹ ಕೊಡುತ್ತಾ ಪ್ರತಿವರ್ಷವೂ ಅವಾಹ್ನಗಳನ್ನೂ ಕೊಡುತ್ತಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 'ಜಾನಪದ ಗಂಗೊತ್ರಿ' ಎಂಬ ಪತ್ರಿಕೆಯನ್ನು ಕರ್ನಾಟಕ ಜನಪದ ಟ್ರಸ್ಟು 'ಜಾನಪದ ಜಗತ್ತು' ಎಂಬ ಪತ್ರಿಕೆ'ಯನ್ನು ಜಾನಪದಕ್ಕಾಗಿ ಮೀಸಲಿಟ್ಟಿವೆ. ಅಂತೆಯೇ ಹಲವಾರು ಜಾನಪದ ಗ್ರಂಥಗಳನ್ನು ಪ್ರಕಟಸಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಣ ಸಹಾಯ ಒದಗಿಸುತ್ತಿವೆ.

ಆಂಧ್ರದಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಜಾನಪದ ಕ್ಷೇತ್ರಕ್ಕೆ ಪ್ರೋತ್ಸಾಹ ಕೊಡದೇಯಿರುವುದು ಶೋಚನೀಯವಾದ ಸಂಗತಿ. ಆದರೂ ತೆಲುಗು ವಿಶ್ವವಿದ್ಯಾನಿಲಯ ಗ್ರಂಥ ಪ್ರಕಟನೆಗಳಿಗೆ ಹಣಸಹಾಯ ಮಾಡುವುದನ್ನು ನೆನೆಯಬೇಕು. ಕೆಲವು ವರ್ಷಗಳ ಹಿಂದೆ ತೆಲುಗು ವಿಶ್ವವಿದ್ಯಾನಿಲಯವು ವರಂಗಲ್‌ನಲ್ಲಿ 'ಜಾನಪದ ಮತ್ತು ಗಿರಿಜನ ವಿಜ್ಞಾನ' ವೆಂಬ ವಿಭಾಗವನ್ನು ಸ್ಥಾಪಿಸಿ ಕೈಗೊಳ್ಳುತ್ತಿರುವುದು ಸಂತೋಷದ ಸಂಗತಿ. 'ಆಂಧ್ರ ಪ್ರದೇಶ್ ಜಾನಪದ ಸಾಹಿತ್ಯ ಪರಿಷತ್ತು' ೧೯೭೨ರಲ್ಲಿ ಹೈದರಾಬಾದ್‌ನಲ್ಲಿ



ಸ್ಥಾಪಿಸಲ್ಪಟ್ಟಿತು. 'ಜಾನಪದ ವಿಜ್ಞಾನಭಾರತಿ ೧೯೮೦ರಲ್ಲಿ ಮೈಸೂರುನಲ್ಲಿ ಸ್ಥಾಪಿಸಲ್ಪಟ್ಟಿತ್ತು. 'ಜಾನಪದ ಸರಸ್ವತಿ' ಎಂಬ ಪತ್ರಿಕೆಯನ್ನು ಜಾನಪದ ಸಾಹಿತ್ಯ ಪರಿಷತ್ತಿನವರೂ, 'ಜಾನಪದಂ' ಎಂಬ ಪತ್ರಿಕೆಯನ್ನು ಜಾನಪದ ವಿಜ್ಞಾನಭಾರತಿಯವರು ಕೆಲವು ವರ್ಷಗಳು ಪ್ರಕಟಿಸಿದವು. ಆಂಧ್ರ ಸರ್ಕಾರದಿಂದ ಯಾವ ಆದರಣೆ, ಪ್ರೋತ್ಸಾಹವು ಸಿಗದೇ ಇರುವುದರಿಂದ ತಮ್ಮ ಕಾರ್ಯ ಕಲಾಪಗಳನ್ನು ಸ್ಥಗಿತಗೊಳಿಸಿವೆ. ಇತ್ತೀಚೆಗೆ ನಾನು, ಡಾ. ಆರ್.ವಿ.ಯಸ್. ಸುಂದರಂ ಕೆಲವರು ಮಿತ್ರರೊಂದಿಗೆ 'ಜಾನಪದ ಸಂಸ್ಕೃತಿ ಟ್ರಸ್ಟ್' ಅನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದೇವೆ. ಇದು ನೋಂದಾಯಿಸಲ್ಪಟ್ಟಿದೆ.

ಜಾನಪದಕ್ಕೆ ಸಂಬಂಧಿಸಿದಂತೆ ೧೯೭೩ರಲ್ಲಿ ಪ್ರಕಟವಾದ ಡಾ.ಹಾ.ಮಾ.ನಾಯಕರ ಗ್ರಂಥಸೂಚಿ ೫೦೦ಕ್ಕೂ ಹೆಚ್ಚು ಕನ್ನಡ ಜಾನಪದ ಕೃತಿಗಳನ್ನು ದಾಖಲು ಪಡೆಸಿದೆ. 'ತೆಲುಗು ಜಾನಪದ ವಿಜ್ಞಾನಸೂಚಿ' ಎಂಬ ಹೆಸರಿನಲ್ಲಿ ೧೯೮೧ರಲ್ಲಿ ನಾನು ಹಲವಾರು ತೆಲುಗುಜಾನಪದ ಕೃತಿಗಳನ್ನು ದಾಖಲು ಪಡೆಸಿದ್ದೇನೆ. ಡಾ. ಸುಂದರಂ ಅವರು 'ಆಂಧ್ರುಲ ಜಾನಪದುಲ ವಿಜ್ಞಾನಂ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಹಲವಾರು ತೆಲುಗು ಜಾನಪದ ಪ್ರಕಾರಗಳ ವಿವರಣೆ ಈ ಗ್ರಂಥದ ವೈಶಿಷ್ಟ್ಯ. ಇದು ಅವರಿಗೆ ಮೈಸೂರು ವಿಶ್ವ ವಿದ್ಯಾನಿಲಯದಿಂದ ಡಿ.ಲಿಟ್. ಪದವಿಯನ್ನು ತಂದುಕೊಟ್ಟಿದೆ.

ತೆಲುಗು ಜಾನಪದ ಕ್ಷೇತ್ರ ಇನ್ನೂ ಬೆಳೆಯಬೇಕಾಗಿದೆ. ನನಗೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಿದ ಕನ್ನಡ ಜಾನಪದ ಕ್ಷೇತ್ರಕ್ಕೆ ಚಿರಋಣಿಯಾಗಿದ್ದೇನೆ; ಮತ್ತು ಹೆಮ್ಮೆ ಪಡುತ್ತಿದ್ದೇನೆ.

## ಲೇಖಕರ ವಿಳಾಸ

೧. ಡಾ. ಡಿ. ಕೆ. ರಾಜೇಂದ್ರ - ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

೨. ಡಾ. ದೇವೇಂದ್ರಕುಮಾರ ಹಕಾರಿ - 'ಕರುಣಾಂಜಲಿ', ಶ್ರೀನಗರ, ಧಾರವಾಡ-೩

೩. ಡಾ. ಆರ್ಬೀಯಸ್ ಸುಂದರಂ - ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

೪. ಡಾ. ದೇಜಗೌ - ವಿಶ್ರಾಂತ ಕುಲಪತಿಗಳು-ಕಲಾನಿಲಯ
ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ
ಮೈಸೂರು-೧೨

೫. ಡಾ. ಹಿ. ಶಿ. ರಾಮಚಂದ್ರೇಗೌಡ - ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

೬. ಡಾ. ರಹಮತ್ ತರೀಕೆರೆ - ಕನ್ನಡ ವಿ. ವಿ., ಕಮಲಾಪುರ, ಹೊಸಪೇಟೆ
ಬಳ್ಳಾರಿ ಜಿಲ್ಲೆ

೭. ಎಂ. ಬೈರೇಗೌಡ ಕೆ. ಪಿ. ದೊಡ್ಡಿ - ೧೧೯, ೩ನೇ ತಿರುವು, ೮ನೇ ಮುಖ್ಯರಸ್ತೆ
ಆರ್.ಪಿ.ಸಿ. ಬಡಾವಣೆ, ವಿಜಯನಗರ
ಬೆಂಗಳೂರು-೪೦

೮. ರಾಜೇಗೌಡ ಹೊಸಹಳ್ಳಿ - ನಂ. ೨೮೭, ಒಂದನೇ 'ಎ' ಮುಖ್ಯರಸ್ತೆ
ಪಶ್ಚಿಮ ಕಾರ್ಡ್‌ರಸ್ತೆ, ಬೆಂಗಳೂರು-೮೬

೯. ಡಾ. ಜಿ. ಆರ್. ತಿಪ್ಪೇಸ್ವಾಮಿ - ನಂ. ೧೫೧೩, ೬ನೇ ಕ್ರಾಸ್
ವಿಜಯನಗರ ಬಡಾವಣೆ
ಬಂಗಾರಪೇಟೆ, ಕೋಲಾರ ಜಿಲ್ಲೆ

೧೦. ಡಾ. ವಾಮನ ನಂದಾವರ - 'ದೃಶ್ಯ', ೩/೬೫/೩೯
ಎನ್.ಎಚ್. ೧೭
ದೇರೆ ಬೈಲು, ಮಂಗಳೂರು-೫೭೫೦೦೬

೧೧. ಡಾ. ಜಿ. ಎಸ್. ಮೋಹನ್ - ಮುಖ್ಯಸ್ಥರು
ತೆಲುಗು ವಿಭಾಗ
ಜ್ಞಾನಭಾರತಿ
ಬೆಂಗಳೂರು ವಿ.ವಿ., ಬೆಂಗಳೂರು-೫೬

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
**Directorate of Kannada and Culture**
ಮತ್ತು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
**Karnataka Janapada and Yakshagana Academy**

# ಅಖಿಲ ಭಾರತ ಜಾನಪದ ಸಮಾವೇಶ
# All India Folklore Conference

**ಜೂನ್ 12 ಮತ್ತು 13, 1998.**
**June 12 and 13, 1998**

ಸ್ಥಳ : ಕರ್ನಾಟಕ ಕಲಾಮಂದಿರ,
ಮೈಸೂರು.

**Place : Karnataka Kalamandira**
**Mysore.**

## ಸರ್ವರಿಗೂ ಸುಸ್ವಾಗತ
## *All are cordially invited.*

ಡಾ|| ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ, ಬೆಂಗಳೂರು.

ವೈ.ಕೆ. ಮುದ್ದುಕೃಷ್ಣ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು.

**DR. H.J. LAKKAPPA GOWDA**
President
K.J. & Y. Academy

**Y.K. MUDDUKRISHNA**
Director
D.K.C

### ಸಹಕಾರ

1. ಸ್ಥಳೀಯ ಸ್ವಾಗತ ಸಮಿತಿ, ಮೈಸೂರು
2. ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.
3. ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು.
4. ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ
5. ಯುವಜನ ಸೇವಾ ಇಲಾಖೆ, ಬೆಂಗಳೂರು.
6. ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

12-6-1998 **ಉದ್ಘಾಟನಾ ಕಾರ್ಯಕ್ರಮ** ಬೆಳಿಗ್ಗೆ 10-30

| | | |
|---|---|---|
| ಉದ್ಘಾಟಕರು | : | ಸನ್ಮಾನ್ಯ ಶ್ರೀ ಜೆ.ಹೆಚ್.ಪಟೇಲ್<br>ಮುಖ್ಯಮಂತ್ರಿಗಳು |
| ಅಧ್ಯಕ್ಷತೆ | : | ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ<br>ಉಪಮುಖ್ಯಮಂತ್ರಿಗಳು |
| ಸ್ವಾಗತ | : | ಶ್ರೀ ವೈ.ಕೆ.ಮುದ್ದುಕೃಷ್ಣ<br>ನಿರ್ದೇಶಕರು<br>ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ |
| ಪ್ರಾಸ್ತಾವಿಕ ಮಾತು | : | ಡಾ॥ ಎಚ್.ಜೆ.ಲಕ್ಕಪ್ಪಗೌಡ<br>ಅಧ್ಯಕ್ಷರು,<br>ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, |
| ಆಶಯ ಭಾಷಣ | : | ಪ್ರೊ॥ ದೇ.ಜವರೇಗೌಡ<br>ವಿಶ್ರಾಂತ ಕುಲಪತಿಗಳು |
| ಕರ್ನಾಟಕ ಜಾನಪದ ರತ್ನ<br>ಪ್ರಶಸ್ತಿ ಪ್ರದಾನ | : | ಸನ್ಮಾನ್ಯ ಶ್ರೀ ಎಂ.ಪಿ.ಪ್ರಕಾಶ್<br>ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು<br>ಪಂಚಾಯತ್‌ರಾಜ್ |
| ಜಾನಪದ ಭಾರತಿ ಮತ್ತು<br>ಜಾನಪದ ಕರ್ನಾಟಕ<br>ಸ್ಮರಣ ಸಂಚಿಕೆಗಳ ಬಿಡುಗಡೆ | : | ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು. |
| ಸುವರ್ಣ ಜಾನಪದ ಸಂಪುಟಗಳ<br>ಬಿಡುಗಡೆ | : | ಡಾ॥ ಹಾ.ಮಾ.ನಾಯಕ<br>ವಿಶ್ರಾಂತ ಕುಲಪತಿಗಳು |
| ಕರ್ನಾಟಕ ಬುಡಕಟ್ಟುಗಳು<br>ಸಂಪುಟ ಬಿಡುಗಡೆ | : | ಡಾ॥ ಎಚ್.ಸಿ.ಮಹದೇವಪ್ಪ<br>ಆರೋಗ್ಯ ಸಚಿವರು |
| ಹತ್ತು ಜಾನಪದ ಪುಸ್ತಕಗಳ<br>ಬಿಡುಗಡೆ | : | ಡಾ॥ ಎಲ್.ಆರ್.ಹೆಗಡೆ<br>ಜಾನಪದ ವಿದ್ವಾಂಸರು. |
| ಸಾಕ್ಷ್ಯ ಚಿತ್ರಗಳ ಬಿಡುಗಡೆ | : | ಶ್ರೀ ಎಚ್.ಎಲ್.ನಾಗೇಗೌಡ<br>ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು. |
| ಮುಖ್ಯ ಅತಿಥಿಗಳು | : | ಶ್ರೀ ಆರಿಫ್ ಹುಸೇನ್<br>ಮೇಯರ್, ಮಹಾನಗರಪಾಲಿಕೆ, ಮೈಸೂರು.<br>ಶ್ರೀ ಸಿದ್ಧರಾಜು<br>ಲೋಕಸಭಾ ಸದಸ್ಯರು<br>ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ<br>ಶಾಸಕರು.<br>ಶ್ರೀ ಬಿ.ರಾಮು<br>ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು. |

ಜನಪದ ಕಲಾತಂಡಗಳ ಮೆರವಣಿಗೆ : ಬೆಳಿಗ್ಗೆ 8-30ಕ್ಕೆ ಪುರಭವನದಿಂದ ಕಲಾಮಂದಿರದವರೆಗೆ.

12-6-1998 ಮಧ್ಯಾಹ್ನ 2-00

# ವಿಚಾರ ಸಂಕಿರಣ

## ಗೋಷ್ಠಿ - 1

## ಕರ್ನಾಟಕ ಜಾನಪದ ಮತ್ತು ಸ್ವಾತಂತ್ರ್ಯ ಸಂಗ್ರಾಮ

**ಅಧ್ಯಕ್ಷತೆ : ಡಾ॥ ದೇವೇಂದ್ರ ಕುಮಾರ್ ಹಕಾರಿ**

| ಪ್ರಬಂಧಕಾರರು | | ವಿಷಯ |
|---|---|---|
| ಡಾ॥ ನಿಂಗಣ್ಣ ಸಣ್ಣಕ್ಕಿ | : | ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ |
| ಡಾ॥ ಎಂ.ಜಿ. ಈಶ್ವರಪ್ಪ | : | ಸ್ವಾತಂತ್ರ್ಯ ವೀರರು ಮತ್ತು ಜಾನಪದ |
| ಪ್ರೊ॥ ಡಿ. ಲಿಂಗಯ್ಯ | : | ಸ್ವಾತಂತ್ರ್ಯ ಸಂಗ್ರಾಮದ ಸ್ಥಳ ಐತಿಹ್ಯಗಳು |
| ಡಾ॥ ವನದುರ್ಗ ರಂಗರಾಜು | : | ಕರ್ನಾಟಕ ಜಾನಪದದಲ್ಲಿ ಗಾಂಧಿ |

12-6-1998 ಸಂಜೆ 4-00

## ಗೋಷ್ಠಿ - 2

## 21ನೇ ಶತಮಾನಕ್ಕೆ ಜಾನಪದ

**ಅಧ್ಯಕ್ಷತೆ : ಡಾ॥ ಹಂ.ಪ.ನಾಗರಾಜಯ್ಯ**

| ಪ್ರಬಂಧಕಾರರು | | ವಿಷಯ |
|---|---|---|
| ಡಾ॥ ಹಿ.ಶಿ.ರಾಮಚಂದ್ರೇಗೌಡ | : | ಆಧುನಿಕ ತಂತ್ರಜ್ಞಾನದ ಸಂದರ್ಭದಲ್ಲಿ ಭಾರತದ ಜಾನಪದ |
| ಡಾ॥ ಚಕ್ಕೆರೆ ಶಿವಶಂಕರ್ | : | ಜಾನಪದ ಸಂಶೋಧನೆಯ ನಾಳಿನ ಮಾರ್ಗ |
| ಶ್ರೀ ವ.ನಂ.ಶಿವರಾಮು | : | ಜಾನಪದ ಅಜ್ಞಾತ ನೆಲೆಗಳು |

13-6-1998 Session-3 Time 9-30 A.M.

## Folklore Studies in South India

**Chair Person : Dr. Javaharalal Handoo**

| Scholars | Subject |
|---|---|
| Dr. Raghavan Payyanad | : Folklore Studies in Kerala |
| Dr. Karlos | : Folklore Studies in Tamilnadu |
| Dr. Bittu Venkateswaralu | : Folklore Studies in Andrapradesh |
| Prof. A.V.Navada | : Folklore Studies in Karnataka |
| Dr. K.Chinnappa Gowda | : Folklore Studies in Tulu |

13-6-1998 11-30

## Folklore Studies in North India

**Chair Person : Dr. Surjith Singh**

| Scholars | Subject |
|---|---|
| Dr. Mishra Mahendra Kumar | : Folklore Studies in Oria |
| Dr. Komal Kotari | : Folklore Studies in Rajasthan |
| Dr. Thalthaje Vasantha Kumar | : Folklore Studies in Marati |
| Dr. Susheela Sharma | : Folklore Studies in Assami |
| Dr. Thushara Chattopadyaya | : Folklore Studies in Bengali |
| Dr. A.K.Mourya | : Folklore Studies in Hindi |
| Dr. Edward Narona | : Folklore Studies in Konkani |

13-6-1998 2-00 PM

## ಸಂವಾದ ಗೋಷ್ಠಿ

### ಜಾನಪದ ಮತ್ತು ಜಾಗತೀಕರಣ

ಅಧ್ಯಕ್ಷತೆ : ಡಾ|| ಸಿ.ವೀರಣ್ಣ

ವಿಷಯ ಮಂಡನೆ : ಡಾ|| ಅಂಬಳಿಕೆ ಹಿರಿಯಣ್ಣ

ಸಂವಾದದಲ್ಲಿ ಭಾಗವಹಿಸುವವರು

| | |
|---|---|
| ಪ್ರೊ|| ಹಿ.ಚಿ.ಬೋರಲಿಂಗಯ್ಯ | ಡಾ|| ಎನ್.ಆರ್.ನಾಯಕ್ |
| ಡಾ|| ಮಲ್ಲಿಕಾ ಘಂಟಿ | ಡಾ|| ರಹಮತ್ ತರೀಕೆರೆ |
| ಶ್ರೀಮತಿ ಗಾಯಿತ್ರಿ ನಾವಡ | ಡಾ|| ಕಾಳೇಗೌಡ ನಾಗವಾರ |
| ಡಾ|| ಶಾಂತಿನಾಯಕ್ | ಡಾ|| ಪಿ.ಕೆ.ಖಂಡೋಬಾ |
| ಡಾ|| ಆರ್.ವಿ.ಎಸ್.ಸುಂದರಂ | ಡಾ|| ರಂಗಾರೆಡ್ಡಿ ಕೋಡಿರಾಂಪುರ |

13-6-1998 ಸಂಜೆ 5-00

## ಸಮಾರೋಪ ಸಮಾರಂಭ

ಅಧ್ಯಕ್ಷತೆ ಹಾಗೂ ಜಾನಪದ ಕ್ಷೇತ್ರದ ಹಿರಿಯರಿಗೆ ಗೌರವಾರ್ಪಣೆ

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್

ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು

ಗೌರವವನ್ನು ಸ್ವೀಕರಿಸುವವರು

| | |
|---|---|
| ಡಾ|| ದೇ.ಜವರೇಗೌಡ | ಶ್ರೀ ಕೆರೆಮನೆ ಶಂಭು ಹೆಗಡೆ |
| ಡಾ|| ಹಾ.ಮಾ.ನಾಯಕ್ | ಡಾ|| ಎಸ್.ಕೆ.ಕರೀಂಖಾನ್ |
| ಶ್ರೀ ಪಿ.ಆರ್.ತಿಪ್ಪೇಸ್ವಾಮಿ | ಶ್ರೀ ಕೆ.ಆರ್.ಲಿಂಗಪ್ಪ |
| ಶ್ರೀ ಜಿ.ನಾರಾಯಣ | ಶ್ರೀ ಹಮ್ಮಿಗಿ ಮುದಿಮಲ್ಲಪ್ಪ |
| ಶ್ರೀ ಎಚ್.ಎಲ್.ನಾಗೇಗೌಡ | ಶ್ರೀ ದೊಡ್ಡ ಭರಮಪ್ಪ |
| ಶ್ರೀ ಮತಿಘಟ್ಟ ಕೃಷ್ಣಮೂರ್ತಿ | ಶ್ರೀಮತಿ ಫಕೀರವ್ವ ಗುಡಿಸಾಗರ |
| ಡಾ|| ಎಂ.ಚಿದಾನಂದ ಮೂರ್ತಿ | ಶ್ರೀ ಕೊಗ್ಗಕಾಮತ್ |
| ಡಾ|| ಎಲ್.ಆರ್.ಹೆಗಡೆ | ಶ್ರೀಮತಿ ಗೌರಮ್ಮ ಬೀಡನಹಳ್ಳಿ |
| ಶ್ರೀ ಮುದೇನೂರು ಸಂಗಣ್ಣ | ಶ್ರೀ ಸಿದ್ಧಪ್ಪ ಮೇಟಿ |
| ಡಾ|| ಎಂ.ಎಸ್.ಲಠ್ಠೆ | ಶ್ರೀ ಮುಖವೀಣೆ ಆಂಜನಪ್ಪ |
| ಪ್ರೊ|| ಕು.ಶಿ.ಹರಿದಾಸಭಟ್ | ಶ್ರೀಮತಿ ಸುಕ್ರಿ ಬೊಮ್ಮಗೌಡ |
| ಪ್ರೊ|| ಜ್ಯೋತಿ ಹೊಸೂರ | ಶ್ರೀ ಜಿ.ಮಹಾಂತೇಶ್ |
| | ಶ್ರೀ ಕ.ರಾ.ಕೃಷ್ಣಸ್ವಾಮಿ |

## ಸಮಾರೋಪ ಭಾಷಣ

ಡಾ|| ಎಂ.ಎಂ.ಕಲಬುರ್ಗಿ

ಕುಲಪತಿಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಮುಖ್ಯ ಅತಿಥಿಗಳು

| | |
|---|---|
| ಡಾ|| ಎ.ಕೆ.ಮೌರ್ಯ ಅಚ್ಬೆ<br>ಜಾನಪದ ವಿದ್ವಾಂಸರು<br>ನವದೆಹಲಿ | ಶ್ರೀ ಕೆ.ವೆಂಕಟೇಶ್<br>ಕಾಡಾ ಸಚಿವರು |
| ಶ್ರೀ ಅ.ರಾ.ಚಂದ್ರಹಾಸ ಗುಪ್ತ<br>ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಶ್ರೀ ಮಾರುತಿ ರಾವ್ ಪವಾರ್, ಶಾಸಕರು<br>ಶ್ರೀ ರಾಮದಾಸ್, ಶಾಸಕರು |
| ಶ್ರೀ ಎಸ್.ಆರ್.ವಿಜಯಶಂಕರ್<br>ಲೋಕಸಭಾ ಸದಸ್ಯರು | ಶ್ರೀ ವೈ.ಮಹೇಶ್, ವಿಧಾನಪರಿಷತ್ ಸದಸ್ಯರು<br>ಶ್ರೀ ಸಿ.ರಮೇಶ್, ವಿಧಾನಪರಿಷತ್ ಸದಸ್ಯರು |
| ಶ್ರೀ ಡಿ.ಟಿ.ಜಯಕುಮಾರ್<br>ತೋಟಗಾರಿಕೆ ಸಚಿವರು | ಶ್ರೀ ಜವರಾಯ ಶೆಟ್ಟಿ<br>ವಿಧಾನಪರಿಷತ್ ಸದಸ್ಯರು. |

## ಎರಡು ದಿನಗಳು ಪ್ರದರ್ಶಿಸುವ ಕಲೆಗಳು

1. ಹಜ್ಜೆಮೇಳ
2. ಕೃಷ್ಣಪಾರಿಜಾತ
3. ತೊಗಲು ಗೊಂಬೆಯಾಟ
4. ಗೀಗೀ
5. ಜಗ್ಗಲಿಗೆ
6. ವೀರಗಾಸೆ
7. ಭೂತೇರ ಕುಣಿತ
8. ಉಮ್ಮತ್ತಾಟ
9. ಬೊಳಕಾಟು:ಕೊಂಬಾಟ
10. ಹಾಲಕ್ಕಿ ಸುಗ್ಗಿಕುಣಿತ
11. ಯಕ್ಷಗಾನ
12. ಮರಗಾಲು ನೃತ್ಯ
13. ಪಂಡರಿ ಭಜನೆ
14. ಪಟಾಕುಣಿತ
15. ಕರಗ ನೃತ್ಯ
16. ಭೂತನೃತ್ಯ
17. ಪುರವಂತಿಕೆ
18. ಹಲಗೆ (ತಮಟೆ)
19. ಮುಖವೀಣೆ
20. ಚೌಡಿಕೆಮೇಳ
21. ಚಿಟ್‌ಮೇಳ
22. ಪಂಜಿನ ಕುಣಿತ
23. ವೀರಭದ್ರ ನೃತ್ಯ
24. ಸೋಮನ ಕುಣಿತ
25. ಡೊಳ್ಳು ಕುಣಿತ
26. ಗಾರುಡಿಗೊಂಬೆ
27. ಗೊರವರ ಕುಣಿತ
28. ಕಂಸಾಳೆ
29. ಕೀಲುಕುದುರೆ ನೃತ್ಯ
30. ಪೂಜಾಕುಣಿತ
31. ಕತ್ತಿವರಸೆ, ಪಂಜಿನ ವರಸೆ, ಪಟದ ವರಸೆ
32. ನಂದಿಧ್ವಜ ಕುಣಿತ
33. ಸುಗ್ಗಿ ಕುಣಿತ
34. ಜಾನಪದನೃತ್ಯ
35. ಕಂಸಾಳೆ
36. ಡೊಳ್ಳು
37. ಸೋಮನಕುಣಿತ
38. ಜಾನಪದ ಗೀತೆ
39. ಕೋಲಾಟ
40. ಕರಡಿ ಮಜಲು

ಇವಲ್ಲದೆ ರಾಜ್ಯದ ಹಾಗೂ ಹೊರರಾಜ್ಯಗಳ ಇನ್ನೂ ಇಪ್ಪತ್ತು ಕಲಾತಂಡಗಳು ಭಾಗವಹಿಸುತ್ತವೆ.

**ಗಾಯನ ಗೋಷ್ಠಿ : ಶ್ರೀ ವೈ.ಕೆ.ಮುದ್ದುಕೃಷ್ಣ ಅವರ ನೇತೃತ್ವದಲ್ಲಿ ಅಪ್ಪಗೆರೆ ತಿಮ್ಮರಾಜು ಮತ್ತು ತಂಡದವರಿಂದ**

## ವಿಶೇಷ ಆಹ್ವಾನಿತರುಗಳು

ಶ್ರೀ ಶಾಂತರಸ
ಶ್ರೀ ಗೊ.ರು.ಚನ್ನಬಸಪ್ಪ
ಡಾ|| ರಾಮೇಗೌಡ
ಡಾ|| ಸೋಮಶೇಖರ ಇಮ್ರಾಪುರ
ಡಾ|| ಕೆ.ಮರುಳ ಸಿದ್ದಪ್ಪ
ಶ್ರೀ ಸಿ.ಚಂದ್ರಶೇಖರ್
ಡಾ|| ಪಿ.ಕೆ.ರಾಜಶೇಖರ
ಡಾ|| ಕಿಕ್ಕೇರಿ ನಾರಾಯಣ
ಶ್ರೀ ಹೊರೆಯಾಲ ದೊರೆಸ್ವಾಮಿ
ಡಾ|| ನಂ.ತಪಸ್ವೀಕುಮಾರ್
ಡಾ|| ಎಂ.ಜಿ.ಬಿರಾದಾರ್
ಡಾ|| ಎಂ.ಬಿ.ನೇಗಿನಹಾಳ
ಶ್ರೀ ಹೆಚ್.ಎಲ್.ಕೇಶವಮೂರ್ತಿ
ಡಾ|| ಪ್ರಭಾಕರ ಜೋಶಿ
ಶ್ರೀ ಈಶ್ವರಚಂದ್ರ, ಚಿಂತಾಮಣಿ
ಡಾ|| ಕೆ.ಆರ್.ಸಂಧ್ಯಾರೆಡ್ಡಿ
ಡಾ|| ಚನ್ನಣ್ಣ ವಾಲೀಕಾರ
ಪ್ರೊ|| ಕ.ವೆಂ.ರಾಜಗೋಪಾಲ್
ಡಾ|| ಸಂಗಮೇಶ ಸವದತ್ತಿಮಠ
ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಪ್ರೊ|| ಲಕ್ಷ್ಮಣ ತೆಲಗಾವಿ
ಪ್ರೊ|| ಅಮೃತ ಸೋಮೇಶ್ವರ
ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ
ಡಾ|| ಕರೀಗೌಡ ಬೀಚನಹಳ್ಳಿ
ಡಾ|| ತೀ.ನಂ.ಶಂಕರನಾರಾಯಣ
ಶ್ರೀ ಜ.ಹೊ.ನಾರಾಯಣಸ್ವಾಮಿ
ಶ್ರೀ ಎನ್.ಹುಚ್ಚಪ್ಪ ಮಾಸ್ತರ
ಡಾ|| ಸಿ.ಪಿ.ಕೃಷ್ಣಕುಮಾರ್
ಡಾ|| ಕೃಷ್ಣಮೂರ್ತಿ ಹನೂರು
ಡಾ|| ಮಳಲಿ ವಸಂತಕುಮಾರ್
ಶ್ರೀ ಹ.ಕ.ರಾಜೇಗೌಡ
ಡಾ|| ಎಂ.ಎ.ಜಯಚಂದ್ರ
ಶ್ರೀ ವಿ.ಶ್ರೀನಿವಾಸ ಮೂರ್ತಿ
ಡಾ|| ಬಸವರಾಜ ಕಲ್ಗುಡಿ
ಶ್ರೀಮತಿ ಬಿ.ಟಿ. ಲಲಿತಾನಾಯಕ್
ಡಾ|| ಎಸ್.ವಿದ್ಯಾಶಂಕರ್
ಶ್ರೀ ಭರತಾದ್ರಿ
ಪ್ರೊ|| ಹೆಚ್.ಎ. ರಾಮಕೃಷ್ಣ
ಡಾ|| ಬಸವರಾಜ ಮಲಶೆಟ್ಟಿ
ಡಾ|| ಎ.ಮುರಿಗೆಪ್ಪ
ಡಾ|| ಬಿ.ಆರ್.ಹಿರೇಮಠ
ಶ್ರೀ ಕುಂ.ವೀರಭದ್ರಪ್ಪ
ಡಾ|| ಕೆ.ಆರ್.ದುರ್ಗಾದಾಸ್
ಶ್ರೀ ಕಾಗೋಡು ಅಣ್ಣಾಜಿ
ಡಾ|| ಚಂದ್ರು, ಕಾಳೇನಹಳ್ಳಿ
ಡಾ|| ಶ್ರೀಪಾದಶೆಟ್ಟಿ
ಡಾ|| ಜಿ.ಎಸ್.ಭಟ್ಟ
ಡಾ|| ಕಮಲಾ ಹೆಮ್ಮಿಗೆ
ಡಾ|| ಬಸವರಾಜ ಸಬರದ
ಶ್ರೀ ಎ.ಕೆ.ರಾಮೇಶ್ವರ
ಡಾ|| ಸೈಯದ್ ಜಮೀರುಲ್ಲಾ ಷರೀಫ್
ಶ್ರೀ ಗೋವಿಂದ ನಾರಾಯಣ ಮಹಾಲೆ
ಶ್ರೀ ಅಲ್ಲಮಪ್ರಭು ಬೆಟ್ಟದೂರು
ಡಾ|| ಮೀರಾಸಾಬಿಹಳ್ಳಿ ಶಿವಣ್ಣ
ಶ್ರೀ ಟಿ.ಎಸ್.ರಾಜಪ್ಪ
ಶ್ರೀಮತಿ ಎ.ಸಿ. ಲಲಿತ
ಡಾ|| ಮೈಲಹಳ್ಳಿ ರೇವಣ್ಣ
ಡಾ|| ಸೋಮಶೇಖರಗೌಡ
ಶ್ರೀ ಹೆಚ್.ಎಂ.ಪರಮೇಶ್
ಡಾ|| ಎಂ.ಎನ್.ವಿ.ಪಂಡಿತಾರಾಧ್ಯ
ಶ್ರೀ ಲಕ್ಕಯ್ಯ
ಡಾ|| ಹಾ.ತಿ.ಕೃಷ್ಣೇಗೌಡ
ಪ್ರೊ|| ಶಿವರಾಮು ಕಾಡನಕುಪ್ಪೆ
ಶ್ರೀ ಜನಾರ್ಧನ್
ಶ್ರೀ ತೈಲೂರು ವೆಂಕಟಕೃಷ್ಣ
ಡಾ|| ಸಿ.ಪಿ.ನಾಗರಾಜು
ಶ್ರೀ ಬೋರೇಗೌಡ ಚಿಕ್ಕಮರಳಿ
ಶ್ರೀ ಕುರುವ ಬಸವರಾಜು
ಶ್ರೀ ಗುಡಿಹಳ್ಳಿ ನಾಗರಾಜು
ಡಾ|| ಟಿ. ಗೋವಿಂದರಾಜು

ಪ್ರೊ॥ ಶಿವರಾಮಯ್ಯ
ಶ್ರೀ ಭಕ್ತರಹಳ್ಳಿ ಕಾಮರಾಜು
ಶ್ರೀ ರಾಜೇಗೌಡ ಹೊಸಹಳ್ಳಿ
ಶ್ರೀ ಎಂ. ಬೈರೇಗೌಡ
ಡಾ॥ ಸಿದ್ಧಲಿಂಗಯ್ಯ
ಡಾ॥ ಸಿ.ಕೆ.ಪರಶುರಾಮಯ್ಯ
ಶ್ರೀ ಶಾಮರಾಯ ಆಚಾರ್ಯ
ಶ್ರೀ ಎಂ.ಎಸ್.ನಂಜುಂಡರಾವ್
ಡಾ॥ ಸಿ.ಜಿ. ವೆಂಕಟಯ್ಯ
ಡಾ॥ ಎಸ್.ಎಸ್. ಹಿರೇಮಠ
ಶ್ರೀ ಕೆ.ವಿರೂಪಾಕ್ಷಗೌಡ
ಡಾ॥ ಶಾಲಿನಿ ರಘುನಾಥಭಟ್
ಡಾ॥ ವೀರಣ್ಣ ರಾಜೂರ
ಡಾ॥ ಹರೀಲಾಲ್ ಪವಾರ್
ಡಾ॥ ಮಂಜುನಾಥ ಬೇವಿನಕಟ್ಟಿ
ಡಾ॥ ಡಿ.ಆರ್.ಪಾಂಡುರಂಗ
ಡಾ॥ ಸ.ಚಿ.ರಮೇಶ್
ಡಾ॥ ಕೆ.ಎಂ.ಮೈತ್ರಿ
ಡಾ॥ ಗಂಗಾಧರ ದೈವಜ್ಞ
ಶ್ರೀಮತಿ ಗಾಯಿತ್ರಿ ನಾವಡ
ಶ್ರೀಮತಿ ವಿಶ್ವೇಶ್ವರಿ ಹಿರೇಮಠ
ಡಾ॥ ಕೆ.ವಾಮನ ನಂದಾವರ
ಶ್ರೀ ಎಸ್.ಎ.ಕೃಷ್ಣಯ್ಯ
ಶ್ರೀ ನರಸಿಂಹೇಗೌಡ ನಾರಣಾಪುರ
ಡಾ॥ ಯು.ಪಿ. ಉಪಾಧ್ಯಾಯ
ಡಾ॥ ಬಸವರಾಜ ನೆಲ್ಲಿಸರ
ಡಾ॥ ಕುಮಾರಚಲ್ಯ
ಶ್ರೀ ಕೆ.ಯುವರಾಜು
ಶ್ರೀ ಕ್ಯಾತನಹಳ್ಳಿ ರಾಮಣ್ಣ
ಶ್ರೀಮತಿ ವೈ.ಸಿ.ಭಾನುಮತಿ
ಡಾ॥ ಜಯಲಕ್ಷ್ಮಿ ಸೀತಾಪುರ
ಡಾ॥ ಪದ್ಮಾಶೇಖರ್
ಪ್ರೊ॥ ಜಿ.ಹೆಚ್.ನಾಯಕ್
ಡಾ॥ ಅರವಿಂದ ಮಾಲಗತ್ತಿ
ಡಾ॥ ನಗುವನಹಳ್ಳಿ ಪಿ. ರತ್ನ
ಶ್ರೀಮತಿ ಹೆಚ್.ಆರ್. ಚೇತನ

ಶ್ರೀ ಜಿ.ಎಸ್.ಭಟ್
ಶ್ರೀ ತ.ಚಿ.ಚೆಲುವೇಗೌಡ
ಶ್ರೀ ಸಿ.ಬಸವಲಿಂಗಯ್ಯ
ಡಾ॥ ಡಿ.ಎ.ಗಿರಿಜಮ್ಮ
ಪ್ರೊ॥ ಚಿ.ಜಯಪ್ರಕಾಶಗೌಡ
ಶ್ರೀ ಮರಿಯಯ್ಯ
ಶ್ರೀ ಜಿ.ಟಿ.ವೀರಪ್ಪ
ಶ್ರೀ ವಳಗೆರೆಹಳ್ಳಿ ಲೋಕೇಶ್
ಶ್ರೀ ಬೈರ್ನಳ್ಳಿ ಶಿವರಾಮು
ಡಾ॥ ಜಿ.ಎ.ಸುಬ್ಬುಲಕ್ಷ್ಮಿ
ಶ್ರೀ ಎನ್.ಚಂದ್ರಪ್ಪ
ಡಾ॥ ಎಂ.ಟಿ.ಧೂಪದ
ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಶ್ರೀ ಹೆಚ್.ಎಸ್.ಸಿದ್ಧಗಂಗಪ್ಪ
ಶ್ರೀಮತಿ ಶ್ಯಾಮಲಾ ಜಿ.ಭಾವೆ
ಶ್ರೀ ದೊಡ್ಡಹುಲ್ಲೂರು ರುಕ್ಕೋಜಿ
ಡಾ॥ ವಿಲಿಯಂ ಮಾಡ್ತಾ
ಡಾ॥ ಎಸ್.ಎಸ್.ಭದ್ರಾಪುರ
ಡಾ॥ ಕೇಶವನ್‌ಪ್ರಸಾದ್
ಶ್ರೀ ಚೆಲುವರಾಜು
ಡಾ॥ ವೆಂಕಟೇಶ ಇಂದ್ವಾಡಿ
ಡಾ॥ ಗುರುಪ್ರಸಾದ್
ಡಾ॥ ಎ.ಎಸ್.ಪ್ರಭಾಕರ
ಡಾ॥ ಶಿವರಾಮಶೆಟ್ಟಿ
ಡಾ॥ ಜಿ.ಎಸ್ ಮೋಹನ್
ಡಾ॥ ಟಿ.ವಿ.ಸುಬ್ಬರಾವ್
ಶ್ರೀಮತಿ ಸುಶೀಲಾ ಹೊನ್ನೇಗೌಡ
ಡಾ॥ ಅಶೋಕ ಆಳ್ವ
ಡಾ॥ ಅಭಯ ಕುಮಾರ್
ಶ್ರೀಮತಿ ಸುಶೀಲಾ ಉಪಾಧ್ಯಾಯ
ಡಾ॥ ಶ್ರೀಕಂಠ ಕೂಡಿಗೆ
ಶ್ರೀ ಬಿ.ಚಂದ್ರೇಗೌಡ
ಶ್ರೀ ನೊ.ಸಂ.ತಿಮ್ಮೇಗೌಡ
ಶ್ರೀ ಮಲ್ಲೇಶಗೌಡ
ಶ್ರೀ ಮೇಟಿಕೆರೆ ಹಿರಿಯಣ್ಣ
ಡಾ॥ ಸುಶೀಲಾ ನೆಲ್ಲಿಸರ

ಶ್ರೀಮತಿ ಜಯಮ್ಮ ಬೋವಿ
ಡಾ॥ ಬಿ.ಪಿ.ವೀರೇಂದ್ರ ಕುಮಾರ್
ಡಾ॥ ಸಿ.ಕೆ.ನಾವಲಗಿ
ಶ್ರೀ ದಸ್ತಗಿರಿ ಅಲ್ಲೀಬಾಯಿ
ಶ್ರೀ ಎಸ್.ಜಿ.ಸಿದ್ಧರಾಮಯ್ಯ
ಡಾ॥ ಚಿಕ್ಕಣ್ಣ ಎಣ್ಣೆಕಟ್ಟೆ
ಡಾ॥ ಕೆ.ಸ್.ಭಗವಾನ್
ಶ್ರೀ ದತ್ತಾತ್ರೇಯ ಅರಳೀಕಟ್ಟೆ
ಶ್ರೀ ಎಂ.ಎಸ್.ಗುಣಶೀಲನ್
ಶ್ರೀ ಎಂ.ಜಯಕುಮಾರ್
ಶ್ರೀ ಟಿ. ಕೆಂಪಹನುಮಯ್ಯ
ಶ್ರೀ ಲಕ್ಷ್ಮೀನಾರಾಯಣ ಆರೋರ
ಶ್ರೀ ಮಹಾದೇವಯ್ಯ
ಡಾ॥ ಎಲ್.ಜಿ.ಸುಮಿತ್ರ
ಡಾ॥ ನಾಗೇಶ್
ಡಾ॥ ವಿಘ್ನೇಶಭಟ್ ಎನ್.
ಡಾ॥ ಎಂ.ಎಸ್.ಶೇಖರ್
ಶ್ರೀ ಸ್ವಾಮಿಗೌಡ
ಶ್ರೀ ಕೆ.ಬಿ.ಮಂಜಪ್ಪ
ಡಾ॥ ಎಸ್.ಸಿ.ಪಾಟೀಲ್
ಶ್ರೀ ಬಾಲಕೃಷ್ಣ ಜಂಬಗಿ
ಡಾ॥ ಎಂ.ಎಸ್.ವಾಲಿ
ಡಾ॥ ಮಹೇಶ ಜಿ.ತಿಪ್ಪಶೆಟ್ಟಿ
ಡಾ॥ ಕರವೀರ ಪ್ರಭು ಕ್ಯಾಲಕೊಂಡ
ಡಾ॥ ಜಗನ್ನಾಥ್ ಹೆಬ್ಬಾಳೆ
ಶ್ರೀ ಎಂ.ಎನ್. ರಾಮಯ್ಯ

ಶ್ರೀ ಮೊಗಳ್ಳಿ ಗಣೇಶ್
ಡಾ॥ ಅಬ್ದುಲ್ ಹಮೀದ್ ಹಂದನಕೆರೆ
ಶ್ರೀ ರಾಜಪ್ಪ ದಳವಾಯಿ
ಡಾ॥ ಕೆ.ವಿ.ಚಂದ್ರಣ್ಣಗೌಡ
ಶ್ರೀ ಜೇನಹಳ್ಳಿ ಸಿದ್ಧಲಿಂಗಪ್ಪ
ಶ್ರೀ ಕಮಲೇಶ್
ಶ್ರೀ ಎನ್.ಜಿ.ಮಂಜುನಾಥನ್
ಶ್ರೀ ಚೌಡೇಗೌಡ ಬೀಡನಹಳ್ಳಿ
ಡಾ॥ ಶಾಂತಾದೇವಿ ಇಮ್ರಾಪುರ
ಶ್ರೀ ಬಿ.ಸಿದ್ಧಗಂಗಯ್ಯ ಕಂಬಾಳ್
Annamalli.E.
Guru Rao Bapat
Chellaperumal.A.
Devaki.L.
Lalita Handoo
Lal Sam Mohan
Mallikarjun.B.
Muthukumarswamy.M.D.
Nagaraj Paturi
Raugila Rajit Singh
Muthaiah.J.
Rama Chandran.N.
Shanmuga Sundaram.S.
Saraswathi Venugopal
Sanatambi.S.
Sen Soumen

## ಸ್ವಾಗತ ಸಮಿತಿ ಮೈಸೂರು

| | | |
|---|---|---|
| ಗೌರವಾಧ್ಯಕ್ಷರು | : | ಸನ್ಮಾನ್ಯ ಶ್ರೀ ಸಿದ್ದರಾಮಯ್ಯ<br>ಉಪಮುಖ್ಯಮಂತ್ರಿಗಳು |
| ಅಧ್ಯಕ್ಷರು | : | ಶ್ರೀ ಆರಿಫ್ ಹುಸೇನ್<br>ಮಹಾಪೌರರು ನಗರಪಾಲಿಕೆ ಮೈಸೂರು. |
| ಕಾರ್ಯಾಧ್ಯಕ್ಷರು | : | ಶ್ರೀ ಬಸವೇಗೌಡ<br>ಅಧ್ಯಕ್ಷರು,<br>ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು. |
| ಸಂಚಾಲಕರು | : | ಡಾ॥ ಪಿ.ಬೋರೇಗೌಡ<br>ಪತ್ರಾಂಕಿತ ಸಹಾಯಕರು,<br>ವಿಭಾಗಾಧಿಕಾರಿಗಳ ಕಛೇರಿ, ಮೈಸೂರು. |
| ಸಹ-ಸಂಚಾಲಕರು | : | ಶ್ರೀ ಡಿ.ನಂಜುಂಡೇಗೌಡ<br>ಉಪನಿರ್ದೇಶಕರು.<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು. |
| ಸದಸ್ಯ-ಸಂಚಾಲಕರು | : | ಡಾ॥ ಹಿ.ಶಿ.ರಾಮಚಂದ್ರೇಗೌಡ<br>ಕರ್ನಾಟಕ ಜಾನಪದ ಅಕಾಡೆಮಿ. |
| ಅಧ್ಯಕ್ಷರು-ಸಾರಿಗೆ ಉಪಸಮಿತಿ | : | ಶ್ರೀ ಆನಂದ್<br>ವಿಭಾಗೀಯ ಆಯುಕ್ತರು.<br>ಕ.ರಾ.ರ.ಸಂಸ್ಥೆ, ಮೈಸೂರು |
| ಅಧ್ಯಕ್ಷರು-ವಸತಿ ಉಪಸಮಿತಿ | : | ಶ್ರೀ ಅಜಯ್ ಸೇಠ್<br>ಜಿಲ್ಲಾಧಿಕಾರಿಗಳು, ಮೈಸೂರು. |
| ಅಧ್ಯಕ್ಷರು-ಆಹಾರ ಉಪಸಮಿತಿ | : | ಶ್ರೀ ಕನಿರಾಂ<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು<br>ಜಿಲ್ಲಾ ಪಂಚಾಯತ್, ಮೈಸೂರು. |
| ಅಧ್ಯಕ್ಷರು-ಪ್ರಚಾರ ಸಮಿತಿ | : | ಶ್ರೀ ಬಿ.ರಾಮು<br>ಮೈಸೂರು ಜಿಲ್ಲಾ ಪಂಚಾಯತ್ |
| ಅಧ್ಯಕ್ಷರು-ಪುಸ್ತಕ ಪ್ರದರ್ಶನ ಸಮಿತಿ | : | ಶ್ರೀ ನೆಲಮನೆ ದೇವೇಗೌಡ<br>ಅಧ್ಯಕ್ಷರು ಪುಸ್ತಕ ಪ್ರಾಧಿಕಾರ. |
| ಅಧ್ಯಕ್ಷರು-ಸಾಂಸ್ಕೃತಿಕ ಉಪಸಮಿತಿ | : | ಶ್ರೀ ಕೆಂಪಯ್ಯ<br>ಪೋಲೀಸ್ ಆಯುಕ್ತರು |

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
## ಬೆಂಗಳೂರು

| | | |
|---|---|---|
| ಅಧ್ಯಕ್ಷರು | : | ಡಾ॥ ಎಚ್.ಜೆ.ಲಕ್ಕಪ್ಪಗೌಡ |
| ಸದಸ್ಯರು | : | ಸರ್ವಶ್ರೀ<br>ಬಾನಂದೂರು ಕೆಂಪಯ್ಯ<br>ಡಾ॥ ನಿಂಗಣ್ಣ ಸಣ್ಣಕ್ಕಿ<br>ಪ್ರೊ॥ ನಲ್ಲೂರು ಪ್ರಸಾದ್<br>ಡಾ॥ ದೇವೇಂದ್ರಕುಮಾರ ಹಕಾರಿ<br>ಡಾ॥ ಪುರುಷೋತ್ತಮ ಬಿಳಿಮಲೆ<br>ಡಾ॥ ಡಿ.ಬಿ.ರಾಮಚಂದ್ರಾಚಾರ್<br>ವಿಜಯಕುಮಾರ್ ಜಿತೂರಿ<br>ಬೆಳಗಲ್ಲು ವೀರಣ್ಣ<br>ಕುಂಬಳೆ ಸುಂದರರಾವ್<br>ಡಾ॥ ಎಂ.ಜಿ. ಈಶ್ವರಪ್ಪ<br>ಬಸವಲಿಂಗಯ್ಯ ಹಿರೇಮಠ<br>ಡಾ॥ ಕು.ಶಿ.ಹರಿದಾಸಭಟ್<br>ವ.ನಂ.ಶಿವರಾಮು<br>ಬಳ್ಳಕೆರೆ ಹನುಮಂತಪ್ಪ<br>ಕೆರಮನೆ ಶಿವಾನಂದ ಹೆಗಡೆ<br>ಲಾಲವ್ವ ಲಮಾಣಿ<br>ಡಾ॥ ವೀರಣ್ಣ ದಂಡೆ<br>ಸಿದ್ದಣ್ಣ ಉತ್ನಾಳ್<br>ಡಾ॥ ಡಿ.ಬಿ.ನಾಯಕ್<br>ಡಾ॥ ಎನ್.ಆರ್.ನಾಯಕ್<br>ಎ.ಎಸ್.ರಾಮೇಗೌಡ<br>ಡಾ॥ ಶ್ರೀರಾಮ ಇಟ್ಟಣ್ಣನವರ್<br>ಡಾ॥ ಹಿ.ಶಿ.ರಾಮಚಂದ್ರಗೌಡ<br>ಡಾ॥ ಜಿ.ಆರ್.ತಿಪ್ಪೇಸ್ವಾಮಿ |
| ದ್ರವ್ಯಾಧಿಕಾರಿ | : | ಸೂರ್ಯಪ್ರಕಾಶ್ |
| ರಿಜಿಸ್ಟ್ರಾರ್ | : | ಸಿದ್ಧರಾಜು |

This is an Unique Conference, I should say with all humility, in the historty of Folkloristics of India, hitherto many national seminars had been aranged with limited purpose and with limited number of scholars of the field. India is a vast country with different regions, religiouns, cultures and languages. This conference has been designed and arranged so as to represent the main languages and folk cultures of the nation. This provides a plotform for the Folklorists and the Folk artists to speak out and exhibit their achievements, lapses, heritage and to discuss the various problems. They are facing in the field and also to find new ways and means about the research and reconstruction of the rich heritage of Folklore in India in the modern context.

About more than five hundred folk artists and more than two hundred and fifty folklorists from the different parts of India are Participating in this conference. I hope this venture will pave a new path not only in the field of folklore but towards national integration also.

## ಅಕಾಡೆಮಿ ಸದಸ್ಯರು



ಶ್ರೀ ಬಾನಂದೂರು ಕೆಂಪಯ್ಯ




ಡಾ॥ ನಿಂಗಣ್ಣ ಸಣ್ಣಕ್ಕಿ



ಪ್ರೊ. ನಲ್ಲೂರು ಪ್ರಸಾದ್



ಡಾ॥ ದೇವೇಂದ್ರ ಕುಮಾರ್ ಹಕಾರಿ



ಡಾ॥ ಪುರುಷೋತ್ತಮ ಬಿಳಿಮಲೆ



ಡಾ॥ ಡಿ. ಬಿ. ರಾಮಚಂದ್ರಾಚಾರ್




ಶ್ರೀ ವಿಜಯಕುಮಾರ್ ವಿ. ಜಿತೂರಿ



ಶ್ರೀ ಬೆಳಗಲ್ಲು ವೀರಣ್ಣ



ಶ್ರೀ ಕುಂಬ್ಳೆ ಸುಂದರರಾವ್




ಶ್ರೀ ಬಸವಲಿಂಗಯ್ಯ ಹಿರೇಮಠ




ಡಾ॥ ಎನ್. ಆರ್. ನಾಯಕ್



ಶ್ರೀ ಕು. ಶಿ. ಹರಿದಾಸ್ ಭಟ್



ಶ್ರೀ ವ. ನಂ. ಶಿವರಾಮು



ಶ್ರೀ ಬಳ್ಳೇಕೆರೆ ಹನುಮಂತಪ್ಪ



ಶ್ರೀಮತಿ ಲಾಲವ್ವ ಲಮಾಣಿ



ಪ್ರೊ. ಸಿದ್ಧಣ್ಣ ಬಸಪ್ಪ ಉತ್ನಾಳ



ಡಾ॥ ಹಿ. ಶಿ. ರಾಮಚಂದ್ರಗೌಡ



ಡಾ॥ ಜಿ. ಆರ್. ತಿಪ್ಪೇಸ್ವಾಮಿ



ಶ್ರೀ ಎ. ಎಸ್. ರಾಮೇಗೌಡ



ಡಾ॥ ಶ್ರೀರಾಮ ಇಟ್ಟಣ್ಣನವರ



ಶ್ರೀ ಡಿ. ಬಿ. ನಾಯಕ್



ಡಾ॥ ವೀರಣ್ಣದಂಡೆ



ಡಾ॥ ಎಂ. ಜಿ. ಈಶ್ವರಪ್ಪ



ಶ್ರೀ ಕೆರೆಮನೆ ಶಿವಾನಂದ ಹೆಗಡೆ



ಶ್ರೀ ಸೂರ್ಯ ಪ್ರಕಾಶ



ಶ್ರೀ ಸಿದ್ಧರಾಜು



ಶ್ರೀ ಎಚ್. ಪ್ರಕಾಶ್



ಶ್ರೀಮತಿ ಬಿ. ವಿ. ಸುಧಾ




ಶ್ರೀಮತಿ ಎಂ. ನಾಗರತ್ನ



ಶ್ರೀ ಶಿವಲಿಂಗಯ್ಯ



ಶ್ರೀ ನಾಗೇಂದ್ರ



ಜಾನಪದ ಲೋಕದ ಹೆಬ್ಬಾಗಿಲು



ಸೋಮನ ಕುಣಿತ



ಸುಗ್ಗಿ ಕುಣಿತ



ಲಂಬಾಣಿ ನೃತ್ಯ



ಕಂಸಾಳೆ



ಪೂಜಾ ಕುಣಿತ



ಪುರವಂತಿಕೆ



ಭೂತರಾಧನೆ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ತನ್ನ ಹದಿನೇಳನೆಯ ವರ್ಷವನ್ನು ದಾಟುತ್ತಿರುವ ಮತ್ತು ಜಾನಪದ ಚಟುವಟಿಕೆಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ಹಾಗೂ ಬಹುಮುಖವಾಗಿ ನಡೆಯುತ್ತಾ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗಮನ ಗೌರವಗಳನ್ನು ಸೆಳೆದುಕೊಳ್ಳುತ್ತಿರುವ ವಿಶಿಷ್ಟ ಸಂದರ್ಭದಲ್ಲಿ 'ಅಖಿಲ ಭಾರತ ಜಾನಪದ ಸಮಾವೇಶ' ವನ್ನು ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ನಡೆಸಲಾಗುತ್ತಿದೆ.

ಈ ಮಹತ್ವಾಕಾಂಕ್ಷೆಯ ಸಮಾವೇಶದ ಸಂದರ್ಭದಲ್ಲಿ ಕರ್ನಾಟಕ ಜಾನಪದ ಹಾಗೂ ಭಾರತೀಯ ಜಾನಪದದ ಬಹುಮುಖ್ಯ ಆಯಾಮಗಳನ್ನು ಪರಿಚಯಮಾಡಿಕೊಡುವ ಉದ್ದೇಶದಿಂದ 'ಜಾನಪದ ಭಾರತಿ' ಹೊರಬರುತ್ತಿದೆ. ಜಾನಪದ ವಿದ್ವಾಂಸರು ವಿಶಿಷ್ಟ ವಿಚಾರಗಳನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ, ನಾಡಿನ ಜಾನಪದಾಸಕ್ತರೆಲ್ಲರಿಗೆ ಇದು ಮೆಚ್ಚುಗೆ ಯಾಗಬಹುದೆಂಬ ಭಾವನೆ ನಮ್ಮದು.